# ವಿಶಿಷ್ಟಾದ್ವೈತಸಾರ

ಶ್ರೀಮನ್ಮಹಾರಾಜ ಚಿಕದೇವರಾಜ ಒಡೆಯರ್ ರಾಜರ್ಷಿಗಳ
"ಚಿಕದೇವರಾಜ ಬಿನ್ನಪಂ" ಎಂಬ
ದಿವ್ಯಗ್ರಂಥದ ಮೇಲಿನ
ಉಪನ್ಯಾಸಮಾಲೆ

ವಿದ್ವಾನ್ ಕಾರ್ಪಂಗಾಡು ವೆಂಕಟಾಚಾರ್ಯ ಸ್ವಾಮಿಗಳಿಂದ.

ವಿದ್ವಾನ್ ಅರೆಯರ್ ಶ್ರೀನಿವಾಸಯ್ಯಂಗಾರ್ಯರವರಿಂದ.
ಕನ್ನಡ ಭಾಷಾಂತರ.

ಮೈಸೂರು
ಕಾರೊನೇಷನ್ ಪ್ರೆಸ್ಸಿನಲ್ಲಿ ಜಿ. ಆರ್. ಜೋಸ್ಯರವರಿಂದ
ಮುದ್ರಿಸಲ್ಪಟ್ಟಿದೆ.

1953 ಬೆಲೆ 1-4-0

# ಮುನ್ನುಡಿ

ಈ ಉಪನ್ಯಾಸಮಾಲಿಕೆಯ ವಿಷಯವು ಉದಾತ್ತತತ್ವವನ್ನು ಒಳಗೊಂಡುದು. ತಮಿಳು ಭಾಷೆಯಲ್ಲಿ ಉಪನ್ಯಾಸಮಾಡಿದವರು ಸುಪ್ರಸಿದ್ಧ ಘನವಿದ್ವಾಂಸರಾದ ಶ್ರೀ. ಉ. ಕಾರ್ಪಂಗಾಡು ವೆಂಕಟಾಚಾರ್ಯಸ್ವಾಮಿಗಳು. ಕನ್ನಡ ಅನುವಾದಕರು ಪಂಡಿತಶ್ರೇಷ್ಠರಾದ ಅರೆಯರ್ ಶ್ರೀನಿವಾಸಯ್ಯಂಗಾರ್ಯಸ್ವಾಮಿಗಳು. ಉಪನ್ಯಾಸಮಾಲಿಕೆಯನ್ನು ಏರ್ಪಡಿಸಿದವರು ವಯೋವೃದ್ಧರೂ, ಜ್ಞಾನವೃದ್ಧರೂ, ತರುಣೋತ್ಸಾಹಿಗಳೂ, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಕರತಲಾಮಲಕವಾಗಿ ಮಾಡಿಕೊಂಡು ಆಸ್ತಿಕ ಶಿರೋಮಣಿಗಳಾಗಿದ್ದ ಶ್ರೀ. ಉ. ತಿರುನಾರಾಯಣಯ್ಯಂಗಾರ್ಯಸ್ವಾಮಿಗಳು. ಇಂಥ ಮಹನೀಯರುಗಳ ಸಂಪರ್ಕವುಳ್ಳ ಪುಸ್ತಕಕ್ಕೆ ನಮ್ಮಂಥವರು ಮುನ್ನುಡಿಯನ್ನು ಬರೆಯುವುದು ಸಾಹಸಕಾರ್ಯವೇ ಸರಿ. ಅಲ್ಲದೆ ಕಿರಿಯರ ಗ್ರಂಥಕ್ಕೆ ಹಿರಿಯರು ಮುನ್ನುಡಿಯನ್ನು ಬರೆಯುವ ಪದ್ಧತಿಗೂ ವಿರೋಧವಾದುದು. ಆದರೂ ಶ್ರೀ. ಉ. ತಿರುನಾರಾಯಣಯ್ಯಂಗಾರ್ಯಸ್ವಾಮಿಗಳ ಅಪೇಕ್ಷೆಯನ್ನು ನಿರಾಕರಿಸಲಾರದೇ ಅದೇ ಅವರ ಕಟ್ಟಪ್ಪಣೆಯೆಂದು ಭಾವಿಸಿ, ಇದನ್ನು ಬರೆಯಲಾಗಿದೆ.

ಮೈಸೂರು ರಾಜ್ಯವನ್ನು ವಿಸ್ತರಿಸಿ, ಪ್ರಜೆಗಳಿಗೆ ಪುಷ್ಟಿಯನ್ನೂ ತುಷ್ಟಿಯನ್ನೂ ಕೊಟ್ಟು, ಸಂತುಷ್ಟರನ್ನಾಗಿ ಮಾಡಿ ಅಷ್ಟರಲ್ಲೇ ತೃಪ್ತರಾಗದೆ, " ಪರಗತಿಯುಮಂ ಸಂಪಾದಿಸವೇಳ್ಪುದು " ಎಂಬ ಹಂಬಲಿಂದ, ಚಿಕದೇವ ಮಹಾರಾಜರು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಮಥನ ಮಾಡಿ, ಅದರ ತಿರುಳನ್ನು ಮೇಲುಗೋಟೆಯ ನಾರಾಯಣನ ಪಾದ ಕಮಲಗಳಿಗೆ " ಬಿನ್ನಪಮಾಡಿಕೊಳ್ಳುವ ನೆವದಲ್ಲಿ " ಮೂವತ್ತು ಬಿನ್ನಪಗಳಲ್ಲಿ " ಚಿಕ್ಕದೇವರಾಜ ಬಿನ್ನಪ " ವೆಂಬ ಗ್ರಂಥರೂಪವಾಗಿ ಪ್ರಚುರಪಡಿಸಿರುವುದು ಸರಿಯಷ್ಟೆ.

ಆಧುನಿಕ ಸಾಮಾನ್ಯ ಜನರಿಗೆ ಈ ಗ್ರಂಥದ ಭಾಗಗಳು ಸೂತ್ರರೂಪವಾಗಿ ಕಂಡು ಅರ್ಥವಾಗುವುದು ಕಷ್ಟವಾಗಿರಬಹುದು. ಈ ಪರಿ

ಸ್ಥಿತಿಗೆ ವೈದಿಕವಿದ್ಯಾಶ್ರದ್ಧೆಯು ಕಡಿಮೆಯಾಗುತ್ತ ಬರುತ್ತಿರುವುದು ಮುಖ್ಯ ಕಾರಣ. ಚಿಕದೇವ ಮಹಾರಾಜರ ಕಾಲದಲ್ಲಿ "ಎಲ್ಲರುಂ ಅರಿವಂತೆ ಕನ್ನಡಮಾತಿನೊಳಂ ಮೆಲ್ನುಡಿಗಳಿಂದೆ" ಬರೆದ ಗ್ರಂಥವು ಈಗಿನ ಕಾಲದಲ್ಲಿ ಕಠಿಣಗ್ರಂಥವಾಗಿ ತೋರುವ ಶೋಚನೀಯ ಸ್ಥಿತಿಯು ಒದಗಿತು. ಇದನ್ನು ಮನಗಂಡು ಸಾಮಾನ್ಯಜನರಿಗೂ ಸುಲಭವಾಗಿ ಅರ್ಥವಾಗುವಂತೆ ಮಾಡಬೇಕೆಂಬ ಉತ್ಕಟೇಚ್ಛೆಯಿಂದ ಶ್ರೀ. ಉ. ತಿರು ನಾರಾಯಣಯ್ಯಂಗಾರ್ಯ ಸ್ವಾಮಿಗಳು "ಬಿನ್ನಪ" ಗ್ರಂಥವನ್ನು ತಾತ್ಪರ್ಯ ಸಹಿತ ಪ್ರಕಟಣೆಮಾಡಿದುದರಲ್ಲಿ ತೃಪ್ತರಾಗದೆ ಅದರ ವ್ಯಾಖ್ಯಾನರೂಪ ವಾಗಿ ಕಳೆದು ಎರಡು ವರ್ಷಗಳಿಂದ ಸಪ್ತಾಹೋತ್ಸವವನ್ನು ಏರ್ಪಡಿಸಿ ದರು. ಮತ್ತು ಈ ನಂದನ ಸಂವತ್ಸರದಲ್ಲಿ ಮೇಲುಗೋಟೆಯಲ್ಲಿ ನಡೆದ ಏಳು ಉಪನ್ಯಾಸಗಳನ್ನು ಈಗ ಪುಸ್ತಕರೂಪವಾಗಿ ಪ್ರಕಟಣೆಮಾಡಿ, ಎಲ್ಲರ ಕೃತಜ್ಞತೆಗೂ ಪಾತ್ರರಾಗಿರುವರು. ಈ ಮಹತ್ಕಾರ್ಯಕ್ಕೆ ಆಳುವ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ರವರು ತಮ್ಮ ಪೂರ್ವಿಕರು ರಚಿಸಿದ ಗ್ರಂಥದಲ್ಲಿ ತಾವೂ ಅಭಿಮಾನವಿಟ್ಟು, ಈ ಉಪನ್ಯಾಸ ಮಾಲಿಕೆಗಳಿಗೆ ಪ್ರೋತ್ಸಾಹವನ್ನು ಕೊಟ್ಟಿರುವುದು ಅಭಿ ನಂದನೀಯವೂ ಸ್ತುತ್ಯರ್ಹವೂ ಆಗಿದೆ.

ಈ ಉಪನ್ಯಾಸಗಳಲ್ಲಿ 'ಬಿನ್ನಪ' ದ ಕ್ರಮವನ್ನೇ ಅನುಸರಿಸಲಾ ಗಿದೆ. ಇವು ವಿಶಿಷ್ಟಾದ್ವೈತ ಸಿದ್ಧಾಂತದ ಮುಖ್ಯ ತತ್ವಗಳನ್ನೆಲ್ಲಾ ಒಳ ಗೊಂಡಿವೆ. ಪಂಡಿತರಿಗೂ ಪಾಮರರಿಗೂ ರಂಜಕವಾಗಿರುವುದೆನ್ನುವುದ ರಲ್ಲಿ ಸಂಶಯವಿಲ್ಲ. ಈ ಗ್ರಂಥವು ಶ್ರೀರಾಮಾನುಜಮತೀಯರಿಗೆ ಪೂಜ್ಯ ವಾಗಿ ಉಪಯೋಗವಾಗಿರುವುದಲ್ಲದೆ, ಇತರ ಮತೀಯರಿಗೂ ವಿಶಿಷ್ಟಾ ದ್ವೈತ ಸಿದ್ಧಾಂತವನ್ನು ತಿಳಿದುಕೊಳ್ಳಲು ಸಹಕಾರಿಯಾಗಿರುವುದು.

ಕನ್ನಡಕ್ಕೆ ಅನುವಾದಮಾಡಿದ ಈ ಭಾಷಣಗಳನ್ನು ಶ್ರೀ. ಉ. ಶಾರ್ಙಗಾಡು ವೆಂಕಟಾಚಾರ್ಯ ಸ್ವಾಮಿಗಳು ಓದಿಸಿ ಕೇಳಿರುವರು. ತಮಿಳು ಭಾಷೆಯಲ್ಲಿ ಮಾಡಿದ ಭಾಷಣಕ್ಕೂ ಕನ್ನಡ ಅನುವಾದಕ್ಕೂ ವ್ಯತ್ಯಾಸವಿಲ್ಲದಂತೆ ಆದಷ್ಟು ಮಟ್ಟಿಗೆ ನೋಡಿಕೊಳ್ಳಲಾಗಿದೆ.

ಶ್ರೇಯಸ್ಕರವಾದ ಈ ಕಾರ್ಯದಲ್ಲಿ ನಮಗೂ ಅಲ್ಪಸ್ವಲ್ಪ ಸೇವೆಯನ್ನು ಸಲ್ಲಿಸುವ ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ಪೂಜ್ಯರಾದ ಶ್ರೀ. ಉ. ತಿರುನಾರಾಯಣಯ್ಯಂಗಾರ್ಯ ಸ್ವಾಮಿಗಳಿಗೆ ನಮ್ಮ ಧನ್ಯವಾದಗಳು.

ಮದ್ರಾಸ್, ತಿರುವಲ್ಲಿಕ್ಕೇಣಿ.
ಮಾರ್ಚಿ 2. 1953.

ಎಂ. ಎ. ನರಸಿಂಹಾಚಾರ್ಯ,
(ಅಯ್ಯಾಥೊರೆ.)
ಎಂ. ಆರ್. ಸಂಪತ್ಕುಮಾರರ್.





ಮೇಲುಕೋಟೆ ಶ್ರೀ ತಿರುನಾರಾಯಣಸ್ವಾಮಿ
ಏಕಾದಶಿ ಸೇವೆ.

# ಚಿಕ್ಕದೇವರಾಜಬಿನ್ನಪ ಸಪ್ತಾಹ

ಮೇಲುಕೋಟೆಯಲ್ಲಿ ೬-೭-೧೯೫೨ನೆಯ ಮಧ್ಯಾಹ್ನ ೪ ಘಂಟೆಗೆ ಸರಿಯಾಗಿ ಶ್ರೀ ಯದುಶೈಲವಲ್ಲಭನಾದ ಚೆಲುವರಾಯಸ್ವಾಮಿಯ ಎದುರಿನಲ್ಲಿ ತಳಿರು ತೋರಣಗಳಿಂದ ಅಲಂಕೃತವಾದ ಅಮ್ಮನವರ ಸನ್ನಿಧಿ ರಂಗಮಂಟಪದಲ್ಲಿ ಮದರಾಸಿನಿಂದ ದಯಮಾಡಿಸಿದ ಶ್ರೀ ನ್ಯಾಯ ವೇದಾನ್ತ ವಿದ್ವಾನ್ ಶಾರ್ಙ್ಗಾಡು ವೆಂಕಟಾಚಾರ್ಯಸ್ವಾಮಿಗಳು "ಚಿಕ್ಕದೇವರಾಜಬಿನ್ನಪ" ವನ್ನು ಕುರಿತು ತಮಿಳಿನಲ್ಲಿ ಉಪನ್ಯಾಸ ಮಾಲೆಯನ್ನು ಪ್ರಾರಂಭಮಾಡಿದರು. ಭಾಷಣಮಾಡುವುದಕ್ಕೆ ಮೊದಲು ಅನನ್ಯಜನಸುಲಭನಾದ ಶ್ರೀ ತಿರುನಾರಾಯಣಸ್ವಾಮಿಯನ್ನು ಭಾಷಣಕಾರರು ಸಂದರ್ಶಿಸಿದ ಬಳಿಕ ಚೆಲುವರಾಯಸ್ವಾಮಿಗೆ ಆರಾಧನೆ ಮಂಗಳಾರತಿಯಾಗಿ ದೇವರ ಹೂಮಾಲೆಯಿಂದ ಭಾಷಣಕಾರರನ್ನು ಅರ್ಚಕರು ಸ್ವಾಗತಿಸಿದರು. ಈ ರೀತಿ ಚೆಲುವರಾಯನಿಂದ, ಆಣತಿಪೆತ್ತು ಉಪನ್ಯಾಸಕರು ತಮ್ಮ ಸ್ಥಾನವನ್ನಲಂಕರಿಸಿದರು. ಮಹನೀಯರೂ, ಮಹಿಳೆಯರೂ, ಮಕ್ಕಳೂ ಸಹ ರಂಗಮಂಟಪದಲ್ಲಿ ಕಿಕ್ಕಿರಿದು ನೆರೆದಿದ್ದರು.

ಶ್ರೀ ಅರಕೆರೆ ಸಂಪತ್ಕುಮಾರಾಚಾರ್ಯರು "ಚಿಕ್ಕದೇವರಾಜ ಒಡೆಯರು ದುಷ್ಟಶಿಕ್ಷಣಮಾಡಿ ಶಿಷ್ಟಪರಿಪಾಲನೆಗೈಯ್ಯುತ್ತಿರುವಾಗ ರಾಜ ರಾಷ್ಟ್ರಕ್ಷೇಮಕ್ಕಾಗಿ ತಮ್ಮ ಕುಲದೈವವಾದ ಯದುಗಿರಿ ಚೆಲುವನಾರಾಯಣಸ್ವಾಮಿಗೆ ಈ ೩೦ ಬಿನ್ನಪಗಳನ್ನೂ, ವಿಶಿಷ್ಟಾದ್ವೈತ ತತ್ವವನ್ನು ಎಲ್ಲರೂ ತಿಳಿಯುವಂತೆ ಕನ್ನಡದಲ್ಲಿ ರಚಿಸಿ ಸಮರ್ಪಿಸಿದುದಾಗಿಯೂ, ತಮ್ಮ ವಂಶೀಯರಾದ ಒಬ್ಬ ದೊರೆಗಳಿಂದ ರಚಿತವಾದ ಈ ಕೃತಿಯ ಸಪ್ತಾಹವನ್ನು ಆಳುವ ಶ್ರೀಮನ್ಮಹಾರಾಜರು ಕಳೆದ ವರ್ಷ ಮೊದಲಬಾರಿಗೆ ಮೈಸೂರು ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ

ಶ್ರೀ ಜಗ್ಗು ವೆಂಕಟಾಚಾರ್ಯರು, ಸಾಹಿತ್ಯರತ್ನಂ, ಇವರ ವ್ಯಾಖ್ಯಾನದೊಡನೆ ನಡೆಯಿಸಿ, ಈ ಬಾರಿ ಎರಡನೆಯ ವರ್ಷವೂ ಈ ಸಪ್ತಾಹವನ್ನು ಈ ದಿವ್ಯ ದೇಶದಲ್ಲಿ ಮುಂದುವರಿಸಿ ಉಪಕಾರ ಮಾಡಿದ್ದಾರೆ" ಎಂದು ತಿಳಿಸಿ ಭಾಷಣಕಾರರನ್ನು ಉಪನ್ಯಾಸಮಾಡಲು ಕೋರಿದರು.

ಶ್ರೀ ವಿದ್ವಾನ್ ಜಗ್ಗು ಸುದರ್ಶನಾಚಾರ್ಯರು ತಮ್ಮ ಸಹಜಕಂಠದಲ್ಲಿ ಚಿಕ್ಕದೇವರಾಜಬಿನ್ನಪದ ಮೊದಲ ನಾಲ್ಕು ಬಿನ್ನಪಗಳನ್ನು ಸುಶ್ರಾವ್ಯವಾಗಿ ವಾಚನಮಾಡಿದರು. ಶ್ರೀಯುತ ಉಪನ್ಯಾಸಕರು ಮಾನಸಿಕವಾಗಿ ಇಷ್ಟದೇವತಾ ಸ್ತೋತ್ರಮಾಡಿ ಎಲ್ಲರಿಗೂ ಮನದಟ್ಟಾಗುವಂತೆ ಅನುಭವಪೂರಿತ ಸಹಜ ಸರಳಶೈಲಿಯಲ್ಲಿ ಭಾಷಣಮಾಡಿದರು. ಹೀಗೆ ಪ್ರತಿನಿತ್ಯವೂ ಆದ ಆ ಭಾಷಣಗಳ ಸಂಗ್ರಹವನ್ನು ಈ ಕೆಳಗೆ ಕೊಟ್ಟಿದೆ.

೬–೭–೧೯೫೭.                ಅರೈಯರ್.
ಸಂಗ್ರಾಹಕ. ಮೇಲುಕೋಟೆ.

# ಒಂದನೆಯ ದಿನದ ಉಪನ್ಯಾಸ

## ಮೊದಲ ನಾಲ್ಕು ಬಿನ್ನಪಗಳು.

ವಿಶಿಷ್ಟಾದ್ವೈತ ಸಿದ್ಧಾಂತಪ್ರಚಾರಕರಾದ ಶ್ರೀಮದ್ರಾಮಾನುಜಾಚಾರ್ಯರಿಗೆ ರಕ್ಷಣೆಯಿತ್ತ ದಿವ್ಯದೇಶ ಈ ತಿರುನಾರಾಯಣಪುರ. ಸರ್ವರಕ್ಷಕನಾದ ಸರ್ವೇಶ್ವರನೂ ರಾಮಾನುಜಾಚಾರ್ಯರ ರಕ್ಷಣೆಗೆ ಸಿಕ್ಕಿ ಮಗನಾದ—"ಶೆಲ್ವಪ್ಪಿಳ್ಳೈ"ಯಾದ ಶ್ರೀರಾಮನು ಪಕ್ವವಯಸ್ಸಿನಲ್ಲಿ ಪಿತೃವಾಕ್ಯಪರಿಪಾಲನೆ ಮಾಡಿದ. ರಾಮ ಕಾಡಿಗೆ ಹೋಗುವಾಗ ೨೫ ವರ್ಷ ವಯಸ್ಸಾಗಿತ್ತೆಂದು ಆಚಾರ್ಯರು ಅಭಿಪ್ರಾಯಪಡುತ್ತಾರೆ. ಹುಟ್ಟುವಾಗಲೇ ಶಂಖಚಕ್ರಾದಿ ದಿವ್ಯಾಭರಣಭೂಷಿತನಾದ ಶ್ರೀಕೃಷ್ಣನು ಕಂಸನ ಭಯದಿಂದಿದ್ದ ತಂದೆತಾಯಿಗಳ ಮಾತಿನಂತೆ ತನ್ನ ವಿಶ್ವರೂಪವನ್ನು ಉಪಸಂಹಾರ ಮಾಡುತ್ತಾನೆ. ಈ ರೀತಿ ಅವತಾರಕಾಲದಲ್ಲಿ ದೊಡ್ಡವರ ಮಾತು ನಡೆಸಿದ್ದು ಸಾಲದೆಂದು, ಅದೇ ಭಗವಂತನು ಈ

ಅರ್ಚಾವತಾರದಲ್ಲೂ ತಂದೆಗಳಾದ ರಾಮಾನುಜರ ಮಾತು ನಡೆಸಿದ್ದಾನೆ. ಅವರು ಡಿಲ್ಲಿಯಲ್ಲಿ ಕರೆದಾಗ ನಡೆದುಬಂದು ಮಗನಂತೆ ಅವರ ತೊಡೆಯಮೇಲೆ ಕೂರಲಿಲ್ಲವೆ? ರಾಮಾನುಜರ ಜತೆಯಲ್ಲಿ ಬಾಯಿ ಬಿಟ್ಟು ಮಾತನಾಡಿದ ಈ ಅರ್ಚಾವಿಗ್ರಹದ ಬಗ್ಗೆ ಏನೂ ಕೊರೆ ಎಣಿಸುವಂತೆಯೇ ಇಲ್ಲ! ಹೀಗೆ ರಾಮಾನುಜರ, ಸರ್ವೇಶ್ವರನ, ಮತ್ತು ಭಕ್ತಗೋಷ್ಠಿಯ ಈ ಸಾನ್ನಿಧ್ಯದಲ್ಲಿ ಅಜ್ಞನೂ, ಅಶಕ್ತನೂ ಆದ ನಾನು "ಚಿಕ್ಕದೇವರಾಜಬಿನ್ನಪ" ದ ವಿಷಯವಾಗಿ ಕೆಲ ಮಾತುಗಳನ್ನು ಆಡ ಬಯಸುವುದು ಮಹಾನ್‌ಗಳ ಆಧಾರಬಲದಿಂದಲೇ!

ಈ ಕರ್ಣಾಟಕ ದೇಶವನ್ನು ಬಹುಕಾಲದಿಂದ ಪರಿಪಾಲಿಸುತ್ತಿರುವ ರಾಜಪರಂಪರೆಯು ದೈವಭಕ್ತಿಯಿಂದ ಕೂಡಿಮದೆಂಬುದು ಪ್ರಸಿದ್ಧವಾಗಿಯೇ ಇದೆ. ಶ್ರೀ ಆರ್. ತಿರುನಾರಣೈಯ್ಯಂಗಾರ್ಯ ಸ್ವಾಮಿಗಳು ತಮಿಳಿನಲ್ಲಿ ಈ ಸಿರಿಗನ್ನಡ ಗ್ರಂಥವನ್ನು ಅನುವಾದ ಮಾಡಿದುದರಿಂದ ಕನ್ನಡ ತಿಳಿಯದ ನಾನೂ ತಿಳಿಯುವಂತಾಯಿತು. ರಾಮಾನುಜರ ಶ್ರೀಭಾಷ್ಯದ ಸಾರವೇ ಈ ಬಿನ್ನಹಗಳಲ್ಲಿ ವೈವೆತ್ತು ಮೂಡಿಬಂದಿರುವುದರಿಂದ ಇವುಗಳನ್ನು ಕುರಿತು ಮಾತನಾಡಲು ನನಗೆ ಧೈರ್ಯ ಬಂತು. ಕ್ಷತ್ರಿಯರಾದ ಕುಲಶೇಖರಾಳ್ವಾರಂತೆ ಚಿಕ್ಕದೇವರಾಜ ಒಡೆಯರೂ ರಾಜ್ಯಶ್ರೀಗಿಂತಲೂ ಆತ್ಮಕ್ಷೇಮವೇ ದೊಡ್ಡದೆಂದು ಬಗೆದರು. ಆತ್ಮಕ್ಷೇಮ ಸಾಧಿಸಲು ಭಗವತ್ ಕೈಂಕರ್ಯದ ಸಿರಿಯನ್ನು ಅಪ್ಪಿದ ರಾಜರ್ಷಿಗಳಿವರು. ಪಾಂಡ್ಯದೇಶದ ವಲ್ಲಭದೇವನಂತೆ ಈ ಚಿಕ್ಕದೇವರಾಜ ಒಡೆಯರೂ "ಪರದೇವತೆ" ಇಂಥದೆಂದು ನಿಷ್ಕರ್ಷೆಮಾಡಿ, ಅಂಥ ಈ ಚೆಲುವರಾಯನನ್ನೇ ಕುಲದೇವತೆಯನ್ನಾಗಿ ಆರಿಸಿಕೊಂಡರು. "ನಾಸ್ಯಾಽಬ್ರಹ್ಮವಿತ್ ಕುಲೇ ಭವತಿ" ಎಂಬಂತೆ ಯದು ಸಂತತಿಯ ಮೂಲ ಪುರುಷರಿಂದಲೂ "ಭಗವದ್‌ಭಕ್ತಿ" ಎಂಬುದು ಆ ಸಂತತಿಗೆ "ಕುಲಧನ" ವಾಗಿ ಬಂದಿದೆ. ಶ್ರೀಭಾಷ್ಯಾದಿ ಶಾಸ್ತ್ರಾರ್ಥದ ಸೂಕ್ಷ್ಮಪರಿಚಯವಿಲ್ಲದವರಿಗೆ ಈ ಬಿನ್ನಪಗಳು ಅರ್ಥವಾಗುವುದು ಕಷ್ಟ. ಆದರೂ ಶ್ರದ್ಧೆಯಿದ್ದವರು ಯಥೋಚಿತವಾಗಿ ಗ್ರಹಿಸಬಹುದು.

## ಬಿನ್ನಪ ೧

ಬ್ರಹ್ಮಜ್ಞಾನದಿಂದ ಮುಕ್ತಿ ಎಂಬುದನ್ನು ಎಲ್ಲ ಪಂಥದವರೂ ಒಪ್ಪುವರು. ವೇದವನ್ನು ಅಂಗೀಕರಿಸುವ ಎಲ್ಲ ಪಂಗಡಗಳವರೂ ಬ್ರಹ್ಮಜ್ಞಾನದಿಂದಲೇ ಆತ್ಮಕ್ಷೇಮವೆಂಬ ವಿಶಾಲಭಾವನೆಯನ್ನು ಹೊಂದಿದ್ದಾರೆ. ಈ ಬ್ರಹ್ಮಜ್ಞಾನವೇ ಮೊದಲ ಬಿನ್ನಪಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವುದು. ಪರಮಾತ್ಮನಿಗೆ ವಿಗ್ರಹ, ಗುಣಗಳು, ಉಂಟು. ಅವನ ರೂಪ ಐದು ಬಗೆಯಾಗಿರುತ್ತದೆ. ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚೆ ಎಂಬುವೇ ಅವು. "ನತೇ ರೂಪಂ ನಚಾಕಾರಃ ನಾಯುಧಾನಿ ನಚಾಸ್ಪದಂ" ಎಂಬ ಈ ವಾಕ್ಯದಿಂದ, ದೇವರಿಗೆ ರೂಪವಿಲ್ಲ, ಆಕಾರವಿಲ್ಲ, ಎಂದು ಮುಂತಾಗಿ ವಿರೋಧ ತೋರಿದರೂ ಮುಂದಿನ "ತಥಾಪಿ ಪುರುಷಾಕಾರೋ ಭಕ್ತಾನಾಂ ತ್ವಂಪ್ರಕಾಶಸೇ" ಎಂಬುದು ಈ ಅರ್ಥವನ್ನು ಸರಿಪಡಿಸಿಬಿಡುತ್ತದೆ. "ಅವು ತನಗಾಗಿ ಅಲ್ಲ; ಭಕ್ತರಿಗಾಗಿ" ಈ ಪರಾರ್ಥವಾದ ಭಗವಂತನ ರೂಪದ ವರ್ಣನೆ ಈ ಮೊದಲ ಬಿನ್ನಪದಲ್ಲಿ ಇದೆ.

ವೇದಗಳನ್ನು ಪ್ರಮಾಣವನ್ನಾಗಿ ಒಪ್ಪುವವರಲ್ಲಿ ಕೆಲವರು "ಪರಮಾತ್ಮನೇನೋ ಉಂಟು." ಆದರೆ ಅವನಿಗೆ "ವಿಗ್ರಹ" ವಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಪರಮಾತ್ಮನಿದ್ದಾನೆಂದು ಯಾವ ವೇದ ಹೇಳಿತೋ ಅದೇ ವೇದದಲ್ಲಿ ಪರಮಾತ್ಮನಿಗೆ "ರೂಪ, ಗುಣ, ವಿಭೂತಿಗಳೂ" ಉಂಟೆಂದು ಹೇಳಿದೆ. ವೇದ ಪ್ರಮಾಣದಿಂದಲೇ ದೇವರನ್ನು ಒಪ್ಪುವ ಅವರು ಅದೇ ಪ್ರಮಾಣದಿಂದ ದೇವರ ಆಕಾರ ಮುಂತಾದುವನ್ನೂ ಒಪ್ಪಲೇ ಬೇಕು.

ಆದರೆ ವೇದದಲ್ಲಿ ಹೀಗೆ ಕೆಲವು ವಾಕ್ಯಗಳಿವೆ. "ಅಪಾಣಿಪಾದಃ ಜವನೋಗ್ರಹೀತಾ" "ದೇವರಿಗೆ ಕೈ ಇಲ್ಲ, ಆದರೂ ಗ್ರಹಿಸುತ್ತದೆ, ಕಾಲಿಲ್ಲ ಆದರೂ ನಡೆಯುತ್ತದೆ, ಕಣ್ಣಿಲ್ಲ ಆದರೂ ನೋಡುತ್ತದೆ." "ಅವನು ನಿಷ್ಕಲ ನಿರ್ಗುಣ" ನೆಂದೂ ಮತ್ತೊಂದೆಡೆ ಹೇಳಿದೆ. ಈ ಶಂಕೆ ಸಹಜವೇ ಹೌದು. ಶ್ರೀ ರಾಮಾನುಜರು ಈ ತೊಡಕನ್ನು ಬಲು

ಸರಳವಾಗಿ ಬಿಡಿಸಿದ್ದಾರೆ. ವೇದದಲ್ಲಿ ಕಂಡುಬರುವ ನಿಷೇಧವು "ವಿಹಿತ ವ್ಯತಿರಿಕ್ತವಿಷಯ" ಎಂಬುದೇ ಆ ಗುಟ್ಟು. "ಒಂದು ಜಂತುವನ್ನೂ ಹಿಂಸಿಸಬೇಡ" ಎಂದು ಹೇಳಿದ ವೇದ, ಯಜ್ಞದಲ್ಲಿ ಪಶುವಿನ "ವಪೆ" ಯನ್ನು ಹೋಮಮಾಡಬೇಕೆಂದು ಹೇಳುವಾಗ, ಯಜ್ಞದಲ್ಲಿ ಹೊರತು ಪ್ರಾಣಿಹಿಂಸೆ ಕೂಡದೆಂದು ಎಲ್ಲಾ ವಾದಿಗಳೂ ಒಪ್ಪಿದ್ದಾರೆ. ಇದು ಉದಾಹರಣೆಗೆ ಹೇಳಿದ್ದು. ದೇವರ ಶರೀರವು ಪರಮಭೋಗ್ಯವೆಂದು ವೇದದಲ್ಲಿ ಹೇಳಿದೆ. "ಹಿರಣ್ಯಶ್ಮಶ್ರುಃ" "ತಸ್ಯ ಯಥಾ ಕಪ್ಯಾಸಂ ಪುಂಡರೀಕ ಮೇವಮಕ್ಷಿಣೀ." ಹಿಂದೆ ಹೇಳಿದ ನಿಷೇಧವಾಕ್ಯ ಮಾತ್ರವೇ ವೇದದಲ್ಲಿ ಇದ್ದಿದ್ದರೆ ಅವನಿಗೆ ವಿಗ್ರಹವಿಲ್ಲವೆನ್ನಬಹುದಾಗಿತ್ತು. ಅವ ನಿಗೂ ಶರೀರ ಉಂಟೆಂದು ಹೇಳುವ ಈ ವಾಕ್ಯಗಳೂ ಕಂಡುಬರುತ್ತವೆ ಯಾದುದರಿಂದ "ನಮ್ಮಂತೆ ಹೇಯಶರೀರವಿಲ್ಲ ದೇವರಿಗೆ. ಆತನ ವಿಗ್ರಹ ದಿವ್ಯ. ಅದು ಅಪ್ರಾಕೃತ." ಈ ವಿರೋಧ ಪರಿಹಾರವನ್ನು ಶ್ರೀ ರಾಮಾನುಜರು ಶ್ರೀಭಾಷ್ಯದಲ್ಲಿ ತೋರಿಸಿದ್ದಾರೆ. ಶಂಕರಾಚಾ ರ್ಯರು ವಿಗ್ರಹವನ್ನು ಒಪ್ಪದವರಾದರೂ ಭಗವದ್ಗೀತೆಯ ೧೧ನೇ ಅಧ್ಯಾ ಯದ ಐದನೆಯ ಶ್ಲೋಕದ ವ್ಯಾಖ್ಯಾನದಲ್ಲಿ 'ಅಪ್ರಾಕೃತ ವಿಗ್ರಹ' ಎಂದೇ ಅರ್ಥಮಾಡಿದ್ದಾರೆ. "ನಾನಾವಿಧಾನಿ ಅನೇಕ ಪ್ರಕಾರಾಣಿ ದಿವಿ ಭವಾನಿ ದಿವ್ಯಾನಿ ಅಪ್ರಾಕೃತಾನಿ, ನಾನಾವರ್ಣಾಕೃತೀನಿಚ ನಾನಾ ವಿಲಕ್ಷಣಾಃ ನೀಲಪೀತಾದಿ ಪ್ರಕಾರಾಃ ವರ್ಣಾಃ ತಥಾ ಆಕೃತಯಶ್ಚ ಅವಯವಸಂಸ್ಥಾನವಿಶೇಷಾಃ ಯೇಷಾಂ ರೂಪಾಣಾಂ ತಾನಿ ನಾನಾ ವರ್ಣಾಕೃತೀನಿಚ."

## ೧ ಪರರೂಪ

ಅಪ್ರಾಕೃತ ವೈಕುಂಠವೆನಿಸಿದ ದಿವ್ಯದೇಶವೊಂದರಲ್ಲಿ ದಿವ್ಯಮಂ ಗಳ ವಿಗ್ರಹದೊಡನೆ ಕೂಡಿಯೇ ಭಗವಂತ ಇರುವುದಕ್ಕೆ "ಪರತ್ವಾವಸ್ಥೆ" ಎಂದು ಹೆಸರು. ಅದೂ ತನಗಾಗಿ ಅಲ್ಲ; ಆಶ್ರಿತರಿಗಾಗಿ, ಮಹಿಷೀ ನಿತ್ಯ ಮುಕ್ತರಿಗಾಗಿ. ಅವರು ಅನುಭವಿಸಿ ಆನಂದಪಡುವುದಕ್ಕಾಗಿ. ಪೆರಿಯ ವಾಚ್ಚಾನ್ ಪಿಳ್ಳೈ ಎಂಬ ಆಚಾರ್ಯರು ಕೃಷ್ಣ ಗೋಕುಲದಲ್ಲಿ ಬೆಳೆದು

ಗೋಪಿಯರ ಸಂಗಡ ಕಲೆತಿರುವಾಗ ಪರಮಪದದಲ್ಲಿ ತಾನು ಇಟ್ಟಿಷ್ಟ ಪ್ರೀತಿಗೆ ಒಂದು ಉದಾಹರಣೆ ಹೇಳುತ್ತಾರೆ, ನೋಡಿ! ಹಿರಿಯ ಹೆಂಡತಿಯು ಎಲ್ಲಾದರೂ ಭಿಕ್ಷೆಗೆ ಹೊರಟುಬಿಡುವಳೆಂಬ ಭಯದಿಂದ ಅವಳ ಜೀವನಾಂಶಕ್ಕಾಗಿ 'ಪಡಿ' ಅಳೆಯುವ ಗಂಡನಂತೆ ದೇವರು ಪರಮಪದದಲ್ಲಿರುವವರಿಗೆ 'ಪಡಿ' ಅಳೆಯುತ್ತಾನೆ. 'ಪಡಿ' ಎಂದರೆ ವಿಗ್ರಹಕ್ಕೆ ತಮಿಳಿನಲ್ಲಿ ಹೆಸರು. ಆದುದರಿಂದ ಪರಮಪದದಲ್ಲಿರುವವರಿಗೆ ವಿಗ್ರಹವೇ ಜೀವಾಧಾರ. ಅಂದರೆ ಕಿರಿ ಹೆಂಡತಿಯ ಮೇಲಿನ ಪ್ರೇಮದಂತೆ ಗೋಪಿಯರ ಮೇಲೆ ಸ್ವಾಮಿಗೆ ಅನುರಾಗ ಹೆಚ್ಚು.

## ೨ ವ್ಯೂಹರೂಪ

ವ್ಯೂಹರೂಪವು ಜಗದ್‌ವ್ಯಾಪಾರ ನಿರ್ವಹಿಸುವುದಕ್ಕಾಗಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ಮೂರ್ತಿಯಾಗಿದ್ದರೂ ಮುಖ್ಯವಾಗಿ ಶಾಸ್ತ್ರಗಳಲ್ಲಿ ವ್ಯವಹರಿಸುವುದು ಕೊನೆಯ ಮೂರನ್ನೇ. ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು ಈ ಷಡ್ಗುಣಗಳು ಪರವಾಸುದೇವನಿಗೂ, ವ್ಯೂಹವಾಸುದೇವನಿಗೂ ಸಮನಾಗಿವೆ. ಹೀಗೆ ಗುಣಗಳಲ್ಲಿ ಏನೂ ವ್ಯತ್ಯಾಸವಿಲ್ಲದಿರುವುದರಿಂದ ವ್ಯೂಹವಾಸುದೇವನನ್ನು ಬಿಟ್ಟು ಉಳಿದ ಮೂರನ್ನೇ ಪ್ರಾಯಶಃ ಹೇಳುತ್ತಾರೆ. ಸೃಷ್ಟಿ, ಸ್ಥಿತಿ, ಸಂಹಾರ ಮಾಡುವಾಗ ಈ ಗುಣಗಳ ಪೈಕಿ ಎರಡೆರಡು ಗುಣಗಳು, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಈ ಮೂರ್ತಿಗಳಲ್ಲಿ ಎದ್ದು ಕಾಣುತ್ತವೆ. ಸಂಕರ್ಷಣನು ಜ್ಞಾನ, ಬಲ ಎನ್ನುವ ಗುಣಗಳಿಂದ ಸಂಹಾರಕ್ರಿಯೆಯನ್ನು ನಿರ್ವಹಿಸುತ್ತಾನೆ; ಪ್ರದ್ಯುಮ್ನನು ಐಶ್ವರ್ಯ, ವೀರ್ಯಯುಕ್ತನಾಗಿ ಮನ್ವಾದಿಸೃಷ್ಟಿಯನ್ನು ಮಾಡುತ್ತಾನೆ. ಅನಿರುದ್ಧನು ಶಕ್ತಿ, ತೇಜಸ್ಸು ಇವುಗಳನ್ನು ಹೊಂದಿದವನಾಗಿ 'ಕಾಲ' ಮೊದಲಾದ ಸೃಷ್ಟಿಗಳನ್ನು ಮಾಡಿ ರಕ್ಷಣೆಯ ಕಾರ್ಯದಲ್ಲಿ ನಿರತನಾಗಿದ್ದಾನೆ.

## ೩ ವಿಭವರೂಪ

ಹಿಂದೆ ಹೇಳಿದ ವ್ಯೂಹಮೂರ್ತಿಗೆ ನೆಲೆವೀಡಾದ ಕ್ಷೀರಾಬ್ಧಿಯಲ್ಲಿ ಬ್ರಹ್ಮಾದಿದೇವತೆಗಳು ತಮ್ಮ ಕಷ್ಟನಿವಾರಣೆಗಾಗಿಯೂ, ಲೋಕಕ್ಷೇಮಕ್ಕಾಗಿಯೂ ಮೊರೆಯಿಟ್ಟಾಗ ಆ 'ವ್ಯೂಹ' ದಿಂದ ವಿಭವಾವತಾರವಾಗುತ್ತದೆ. ರಾಜಾಜ್ಞೆಯನ್ನು ಉಲ್ಲಂಘಿಸುವವರ ಬಳಿಗೆ ರಾಜನೇ ಖುದ್ದಾಗಿ ಹೋಗುವಂತೆ ನಮ್ಮಲ್ಲಿಗೇ ಸ್ವಾಮಿ ಬರುತ್ತಾನೆಂದು ಹೇಳಬಹುದು. ನಾವು ಭಗವಂತನ ಶಾಸನೋಲ್ಲಂಘನೆಯಲ್ಲಿ ಬಲು ಘಟ್ಟಿಗರು. ನಮ್ಮನ್ನು ತನ್ನ ವಶವರ್ತಿಗಳನ್ನಾಗಿ ಮಾಡಿಕೊಳ್ಳುವ ಸಲುವಾಗಿ ದೇವರು ನಾವಿರುವೆಡೆಗೇ ಬಂದು ಅವತರಿಸುತ್ತಾನೆ.

ಈ ವಿಭವಾವತಾರದಲ್ಲಿ "ಪೂರ್ಣಾವತಾರ" "ಅಂಶಾವತಾರ" ವೆಂದು ಎರಡು ವಿಧ. ರಾಮ ಕೃಷ್ಣಾದ್ಯವತಾರಗಳೇ "ಪೂರ್ಣಾವತಾರ." ಪರಶುರಾಮ, ಬಲರಾಮ, ವ್ಯಾಸ ಮುಂತಾದವರು "ಅಂಶಾವತಾರ." ಈ ಎರಡು ಬಗೆಯ ಅವತಾರಗಳಲ್ಲಿ "ಪೂರ್ಣಾವತಾರ" ಪ್ರಬಲವಾದದ್ದು. ಇದನ್ನು ಶ್ರೀರಾಮ ಪರಶುರಾಮರ ಸಮಾಗಮ ಚರಿತ್ರೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಸೀತಾ ವಿವಾಹಾನಂತರ ಪರಶುರಾಮನು ದಾಶರಥಿರಾಮನಿಗೆ ತನ್ನ ವೈಷ್ಣವಾಸ್ತ್ರವನ್ನು ಕೊಟ್ಟು ಹೊರಟುಹೋಗುತ್ತಾನೆ. ಇಲ್ಲಿ ಪರಶುರಾಮ ಸೋಲುವುದೂ, ಶ್ರೀರಾಮ ಗೆಲ್ಲುವುದೂ ಎಂತು? ಇದರ ತತ್ವವೇನು? ಪರಶುರಾಮ ಒಬ್ಬ ಜೀವಾತ್ಮ. ಅವನದು ಪ್ರಾಕೃತ ಶರೀರ. ದುಷ್ಟ ಕ್ಷತ್ರಿಯರ ಸಂಹಾರಕ್ಕಾಗಿ ಕೆಲಕಾಲ ಆತನಲ್ಲಿ ದೇವರು "ಆವೇಶಾವತಾರ" ತಾಳಿದ್ದ. ವೈಷ್ಣವ ಧನುಸ್ಸಿನೊಡನೆ ತನ್ನ ಕಳೆಯೂ ರಾಮನಿಗೆ ಮತ್ತೆ ಸೇರಿಬಿಡುತ್ತದೆ. ಶ್ರೀರಾಮನು ಪರಮಾತ್ಮ. ಅವನ ಶರೀರವು ಅಪ್ರಾಕೃತ. ಆದುದರಿಂದಲೇ ಅವನದು "ಪೂರ್ಣಾವತಾರ."

## ೪ ಅಂತರ್ಯಾಮಿತ್ವ

ಅಂತರ್ಯಾಮಿತ್ವದಲ್ಲಿ "ಸ್ವರೂಪವ್ಯಾಪ್ತಿ," "ವಿಗ್ರಹವ್ಯಾಪ್ತಿ" ಎಂದು ಇಬ್ಬಗೆಯುಂಟು.

(a) ಸ್ವರೂಪವ್ಯಾಪ್ತಿ: ಈ ನಮ್ಮ ಶರೀರದಲ್ಲಿ ಪ್ರಾಣ ಇರುವಂತೆ ಸಕಲ ವಸ್ತುಗಳಲ್ಲಿಯೂ ಅಂತರಾತ್ಮನಾಗಿ ಭಗವಂತ ಇರುತ್ತಾನೆ. ಯಾವ ವಸ್ತುವೂ ಒಂದು ಕ್ಷಣವಿರಲಿ, ಆ ಕ್ಷಣಸಂಬಂಧವೇ ಆ ವಸ್ತುವಿಗೆ "ಸತ್ತೆ." ಆ ವಸ್ತುವಿಗೆ ಅನೇಕ ಕ್ಷಣಸಂಬಂಧವಿದ್ದರೆ "ಸ್ಥಿತಿ" ಎನಿಸಿಕೊಳ್ಳುವುದು. ಸರ್ವ ವಸ್ತುಗಳ ಸತ್ತಾ ಸ್ಥಿತಿ ನಿರ್ವಾಹಕ್ಕಾಗಿಯೇ "ಅಂತರ್ಯಾಮಿ." ಹೀಗೆ ದೇವರ ಸಂಬಂಧವಿಲ್ಲದ ವಸ್ತುವೇ ಇಲ್ಲ. ಇದೇ ವಿಶಿಷ್ಟಾದ್ವೈತ ತತ್ವದ ಸಾರಭೂತವಾದ ಅಂಶ. ಕಡಲ ನೀರಿನ ಅಣುವಿನಲ್ಲೂ ಪರಮಾತ್ಮ ಅಡಗಿದ್ದಾನೆಂದು ನಮ್ಮಾಳ್ವಾರ್ರು ಹೇಳುವಾಗ, "ಏನು ಅಷ್ಟು ಇಕ್ಕಟ್ಟಾದ ಜಾಗದಲ್ಲಿ ಬಹಳ ಸಂಕಟಪಟ್ಟುಕೊಂಡು ದೇವರಿದ್ದಾನೆಯೇ? ಎಂದರೆ ಇಲ್ಲ. "ಪರನ್ದವಣ್ಣಮಿದೆನ" ದೇಶೋ ವಿಶಾಲವಾದ ಹದಿನಾಲ್ಕು ಲೋಕಗಳನ್ನೊಳಗೊಂಡ ಅಂಡದಲ್ಲಿ ಸುಖವಾಗಿ ಸಂಚರಿಸುವಂತೆ ಜಲಪರಮಾಣುವಿನಲ್ಲೂ ದೇವರು ಅಡಗಿದ್ದಾನೆ. ಇದೇ "ಸ್ವರೂಪವ್ಯಾಪ್ತಿ" ಎಂಬುದು.

(b) ವಿಗ್ರಹವ್ಯಾಪ್ತಿ: ಭಕ್ತರ ಅನುಗ್ರಹಕ್ಕಾಗಿ ವಿಗ್ರಹಯುಕ್ತನಾಗಿ ಭಕ್ತರಿಗೆ ಪ್ರಕಾಶಪಡಿಸಿಕೊಳ್ಳುವ ನೆಲೆಯೇ "ವಿಗ್ರಹವ್ಯಾಪ್ತಿ" ಎನ್ನುವುದು. "ತೇಷಾಮೇವಾನುಕಂಪಾರ್ಥ ಮಹಮಜ್ಞಾನಜಂ ತಮಃ | ನಾಶಯಾಮ್ಯಾತ್ಮಭಾವಸ್ಥಃ ಜ್ಞಾನದೀಪೇನ ಭಾಸ್ವತಾ ||" ಎನ್ನುವ ಗೀತೆಯ ಶ್ಲೋಕದಿಂದ ಮೇಲಿನ ಅರ್ಥವು ಸ್ಪಷ್ಟವಾಗುತ್ತದೆ. ಆಳ್ವಾರುಗಳಿಂದಲೇ ಈ ವಿಗ್ರಹವ್ಯಾಪ್ತಿಯ ಸಮನ್ವಯವನ್ನು ನೋಡಬಹುದು. ಪೊಯ್‌ಗೈಯಾರ್, ಪೂದತ್ತಾರ್, ಪೇಯಾರ್ ಮುಂತಾದ ಆಳ್ವಾರುಗಳ ಜ್ಞಾನ ಭಕ್ತಿಗಳು ಭಗವಂತನಿಂದ ದತ್ತವಾದವು. ಅವರು 'ನಿತ್ಯಸೂರಿ' ಗಳೇ? ಸಂಸಾರಿಗಳೇ? ನಮ್ಮಂತೆ ಸಂಸಾರಿಗಳಾಗಿದ್ದವರೇ ಅವರು. ಆದರೆ ಭಗವಂತನ ನಿರ್ಹೇತುಕ ಕಟಾಕ್ಷದಿಂದ ಅವರು ಮಹನೀಯರಾದರು, ಪರಮ ವಿರಕ್ತರಾದರು. ಅವರು "ವೈರಾಗ್ಯ ನಿಧಿಗಳು." ಎಂದರೆ ನಮಗೂ ಅವರಿಗೂ ಅಂತರ್ಯ ಹೆಚ್ಚು. ಅವರಿಗೆ ವೈರಾಗ್ಯ ಹೆಚ್ಚು. ನಮಗೆ ರಾಗ ಹೆಚ್ಚು. ಇದನ್ನೇ "ರಸವರ್ಜಂ ರಸೋಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ" ಎಂಬಲ್ಲೂ ಹೇಳಿದೆ. ವೈರಾಗ್ಯ ಬರುವುದು

ಬಲು ಕಷ್ಟ. ರೂಪವನ್ನು ಕಣ್ಣಿಂದ ನೋಡದೆ ಕಣ್ಣು ಮುಚ್ಚಿಕೊಂಡರೂ ಮೂಗಿನಿಂದ ವಾಸನೆ ಹಿಡಿಯದೆ ಮೂಗು ಹಿಡಿದುಕೊಂಡರೂ ಮನದಲ್ಲಿ ಮಾತ್ರ ಆಸೆ ನಶಿಸದು. ಈ ಮಾನಸಿಕ ಆಸೆಯೂ ಹಿಂಗಬೇಕಾದರೆ, ವಿಷಯವೈರಾಗ್ಯ ಹುಟ್ಟಬೇಕಾದರೆ " ಪರದರ್ಶನ " ವಾಗಬೇಕು. ಜೀವಾತ್ಮನನ್ನೋ, ಪರಮಾತ್ಮನನ್ನೋ ಸಾಕ್ಷಾತ್ಕಾರಮಾಡಿಕೊಂಡಲ್ಲದೆ ಈ ವಿಷಯವಾಸನೆ ತೊಲಗದು. ಈ ಆತ್ಮಸಾಕ್ಷಾತ್ಕಾರಕ್ಕೆ ಇಂದ್ರಿಯನಿಗ್ರಹ ಬೇಕು. ಇಂದ್ರಿಯನಿಗ್ರಹ ಬರಬೇಕಾದರೆ ಆತ್ಮಸಾಕ್ಷಾತ್ಕಾರವಾಗಬೇಕು. ಈ ಅನ್ಯೋನ್ಯಾಶ್ರಯ ಇಲ್ಲಿ ಕಂಡುಬರುತ್ತದೆ. ತಾನಾಗಿ ಎಷ್ಟು ಪ್ರಯತ್ನಮಾಡಿದರೂ ಮಾನವನಿಗೆ ಸಿದ್ಧಿ ದೊರೆಯದು. ದೇವರೇ ತನ್ನನ್ನು ತೋರಿದಾಗ ವಿಷಯವೈರಾಗ್ಯ ಏರ್ಪಡುವುದು. ಭಗವಂತನ ಅನುಗ್ರಹದಿಂದಲೇ ಅದ್ವೇಷ, ಆಭಿಮುಖ್ಯ, ಬುದ್ಧಿಯೋಗ ಇವು ದೊರಕುವುವು. " ಆತ್ಮಭಾವಸ್ಥಃ " ದೇವರು ಭಕ್ತರಿಗೆ ಶುಭಾಶ್ರಯವಾದ ವಿಲಕ್ಷಣ ವಿಗ್ರಹವನ್ನು ತೋರಿಸುತ್ತಾನೆ. ಆಳ್ವಾರ್ರುಗಳಿಗೆ ಸ್ವಾಮಿ ತನ್ನನ್ನು ತೋರಿದಾಗ " ಎೞಿಮುದನ್ನೈ ಕಣ್ಡ ಕಣ್‌ಗಳ್ ಮತ್ತೊನ್ಱಿನೈ ಕಾಣಾವೇ " ಎಂದು ಬೇರೆ ವಿಷಯ ಅವರ ಕಣ್ಣಿಗೆ ತೋರದು. ಇಂಥ ವಿಲಕ್ಷಣಾಧಿಕಾರಿಗಳಿಗೆ ತನ್ನ ಸೌಂದರ್ಯ ತೋರಿ ದೇವರು ವಿಷಯಪ್ರಾವಣ್ಯವನ್ನು ನಾಶ ಮಾಡುತ್ತಾನೆ. ಹೀಗೆ ಭಕ್ತರ ಅನುಗ್ರಹಕ್ಕಾಗಿ ಭಗವಂತನ " ವಿಗ್ರಹವ್ಯಾಪ್ತಿ " ಯನ್ನು ಸಂಗ್ರಹವಾಗಿ ವಿವರಿಸಿದ್ದಾಯಿತು.

### ೫ ಅರ್ಚೆ

ವಿಭವದ ಪ್ರತಿನಿಧಿ ಅರ್ಚೆ. ರಾಮಕೃಷ್ಣಾದ್ಯವತಾರಕಾಲಗಳಲ್ಲಿ ಇಲ್ಲದೆ ಇದ್ದ ನಮ್ಮಂಥವರಿಗಾಗಿ ಈ ಅರ್ಚೆ. " ಪಿನ್ನಾನಾರ್ ವಣಙ್ಗುಂ ಶೋದಿ." ವಿಭವಕಾಲದಿಂದೀಚೆಗೆ ಜನ್ಮಪಡೆದ ನಾವು ನಮಿಸುವ ಜ್ಯೋತಿ ಇದು. ಅಂತೆಯೇ ಈ ಅರ್ಚಾವತಾರ ವಿಭವಾವತಾರದ ಪ್ರತಿನಿಧಿ. ದ್ರೋಣಾಚಾರ್ಯರಿಂದ ತಿರಸ್ಕೃತನಾದ ಏಕಲವ್ಯನು, ಗುರುಗಳ

ಪ್ರತಿನಿಧಿಯಾದ ವಿಗ್ರಹದ ಪೂಜಾಬಲದಿಂದಲೇ ಅಸ್ತ್ರಶಾಸ್ತ್ರದಲ್ಲಿ ನಿಪುಣನಾದನು.

ಈ ಅರ್ಚಾವತಾರವೂ ಇತರ ಎಲ್ಲ ಅವತಾರಗಳಂತೆಯೇ ಪರಾರ್ಥ. ಭಗವಂತನ ಕಟಾಕ್ಷ ಯಾರಿಗಿದೆಯೋ ಅವರಿಗೇ ಈ ಅರ್ಚೆಯಲ್ಲಿ ನಂಬಿಕೆ. ಅರ್ಚಾವತಾರದಲ್ಲಿ ಪ್ರಾವಣ್ಯಬರಬೇಕಾದರೆ, ಸತ್ಕುಲ ಪ್ರಸೂತಿಯೂ ಆಸ್ತಿಕ್ಯವೂ ಬೇಕು.

ಈ ಅರ್ಚಾವತಾರ ಅಪ್ರಾಕೃತ ವಿಗ್ರಹವೇ ಹೌದು! ಇದು ದೇವರ ಇಚ್ಛೆಯಿಂದಲೇ ಗೃಹೀತವಾದ ಮತ್ತು ಆತನಿಗೆ ಅಭಿಮತವಾದ ರೂಪ. "ನ ತಸ್ಯ ಪ್ರಾಕೃತಾ ಮೂರ್ತಿಃ" ದೇವರಿಗೆ ಪ್ರಾಕೃತಮೂರ್ತಿ ಎಂಬುದೇ ಇಲ್ಲ. ನಮಗೆ "ಅರ್ಚೆ ಅಪ್ರಾಕೃತ" ಎನ್ನುವ ಅನುಭವ ಕಷ್ಟ. ಜ್ಞಾನಿಗಳಿಗೆ ಅದರ ಅನುಭವಕ್ರಮ ಗೊತ್ತಿರುತ್ತದೆ. ನಮ್ಮಂಥವರಿಗೂ ಒಂದೊಂದು ಕಾಲದೇಶ ವಿಶೇಷದಲ್ಲಿ ಈ ಅನುಭವ ಕೊಂಚ ಮಟ್ಟಿಗೆ ಬರುತ್ತದೆ. ಈ ದಿವ್ಯದೇಶದಲ್ಲಿ ಚೆಲುವರಾಯಸ್ವಾಮಿಯ ಉತ್ಸವಗಳಲ್ಲಿ ಈ ಅನುಭವವು ಅನೇಕರಿಗೆ ಲಭಿಸುವುದು!

ತೊಂಡರಡಿಪ್ಪೊಡಿಯಾಳ್ವಾರ್ರು ಶ್ರೀರಂಗನಾಥನನ್ನು ದರ್ಶನ ಮಾಡಿ "ಉಡಲೆನಕ್ಕುರುಹುಮಾಲೋ ಎನ್ ಶೈಯರ್‌ಗೇನ್ ಉಲಹತ್ತೀರೇ" "ನನ್ನೊಡಲು ನಿಲ್ಲದು, ಏನು ಮಾಡಲಿ ಜನಗಳೇ" ಎನ್ನುವ ಭಾವ ಬಂಧ ನೋಡಿ! "ಆ ಮೂಲಸ್ತಂಭ" ವನ್ನು ಒರಗಿಕೊಂಡರೂ ಅವರಿಗೆ ಶರೀರಧಾರಣೆ ಸಾಗದು. ಅವರು ಅದೇಕೆ ದೇವರನ್ನಾಗಲೀ ಇತರ ಆಳ್ವಾರ್ರುಗಳನ್ನಾಗಲೀ ಕೇಳುವದಿಲ್ಲ? ಎಂದರೆ, ನೀರಾಗಿ ಕರಗಿಸುವವನೂ ದೇವರೇ! ನೀರಾಗುವವರೂ ಆಳ್ವಾರುಗಳೇ! ಅವರನ್ನು ಕೇಳಿ ಏನು? ದೇವರ ದರ್ಶನ ಮಾಡಿಯೂ, ಕಲ್ಲಿನಂತೆ ಘಟ್ಟಿಯಾಗಿಯೇ ಇರುವ ಲೋಕದ ಜನಗಳಾದರೆ ತಮ್ಮ "ಶೈಥಿಲ್ಯ" ಕ್ಕೆ ತಕ್ಕ ಔಷಧಿ ಇಟ್ಟಿರುವರೆಂದು, ತೊಂಡರಡಿಪ್ಪೊಡಿಯಾಳ್ವಾರ್ರು ಬರೆದಿದ್ದಾರೆ. ಆದುದರಿಂದಲೇ "ಉಲಹತ್ತೀರೇ" ಎಂದು ಲೋಕದ ಜನಗಳನ್ನು ಕೇಳುವುದು! ಹೀಗೆ ವಿಲಕ್ಷಣರ ಭಾಗಕ್ಕೆ ಈ "ಅರ್ಚೆ" ನಿಜಕ್ಕೂ

ಪ್ರಾಕೃತವಲ್ಲವೆಂದು ಹೊಳೆಯುವದಿಲ್ಲವೆ? ಪರ, ವ್ಯೂಹ, ವಿಭವ, ಅಂತರ್ಯಾಮಿಗಳಂತೆಯೇ ಇದೂ ಅಂಥವರ ಅನುಭವಕ್ಕೇ ಬರ ತಕ್ಕುದು.

ಹೀಗೆ ಭಗವಂತನ ಪಂಚ ರೂಪಗಳನ್ನು ವರ್ಣಿಸಿದುದಾಯಿತು. "ಏವಂ ಪಂಚ ಪ್ರಕಾರೋಽಹಂ" ಎಂದು ಭಗವಂತನೇ ಹೇಳಿದ್ದಾನೆ.

ಇದು ಮೊದಲ ಬಿನ್ನಪದ ಸಾರಾರ್ಥ.

## ಬಿನ್ನಪ ೨

ಎರಡನೆ ಬಿನ್ನಪದಲ್ಲಿ "ಶ್ರೀಮನ್ನಾರಾಯಣನೇ ಜಗತ್ಕಾರಣ ವಸ್ತು" ಎಂಬ ಶಾಸ್ತ್ರಾರ್ಥವನ್ನು ಶ್ರೀಭಾಷ್ಯದ ಕ್ರಮದಲ್ಲಿ ಸಮರ್ಥಿಸಿದೆ. "ಸಾಮಾನ್ಯವಿಶೇಷನ್ಯಾಯ" "ಛಾಗಪಶುನ್ಯಾಯ" ಈ ವಿಚಾರಪಂಥದಿಂದ ಇದು ಸಿದ್ಧಿಸುತ್ತದೆ. ಪರವಾದಿಗಳೂ ಒಪ್ಪುವಂತೆ ಹೇಳಬೇಕು. ಅದೀಗ ಜಾಣತನ. ಸ್ವಗೋಷ್ಠಿಯಲ್ಲಿ ಮಾತ್ರ "ಶ್ರೀಮನ್ನಾರಾಯಣನೇ ಜಗತ್ಕಾರಣ" ಎಂದು ಹೇಳುವುದೇನೂ ಕಷ್ಟವಿಲ್ಲ. ಶ್ರೀಮನ್ನಾರಾಯಣನೇ ಮೇಲಾದ ವಸ್ತುವೆನ್ನುವ ತತ್ವವು ವೇದದಲ್ಲಿಯೇ ಪ್ರತಿಪಾದಿಸಲ್ಪಟ್ಟಿದೆ. ಹೀಗಿದ್ದರೂ ಈ ತತ್ವವು ಕೆಲವು ಕಾಲದಲ್ಲಿ ಪ್ರಕಾಶಿಸುತ್ತದೆ, ಕೆಲವು ಕಾಲದಲ್ಲಿ ಮರೆತುಹೋಗುತ್ತದೆ. ನಮ್ಮಾಳ್ವಾರ್ರ ಕಾಲದಲ್ಲಿ ಇದು ತುಂಬಾ ಪ್ರಕಾಶಕ್ಕೆ ಬಂದಿತು. "ಊರುಂ ನಾಡುಮುಲಹಮುಂ ತನ್ನೈಪ್ಪೋಲ್" ಎಂದು ನಮ್ಮಾಳ್ವಾರ್ರು ಎಲ್ಲರನ್ನೂ ತಮ್ಮಂತೆಯೇ ವಿಷ್ಣುಭಕ್ತರನ್ನಾಗಿಸಿದರು. ಈ ವಿಷಯವನ್ನು ಅವರ ಜೀವನದ ಒಂದು ಚರ್ಯೆಯಲ್ಲಿ ಕಾಣಬಹುದು. ಭಗವಂತನನ್ನು ಪ್ರತ್ಯಕ್ಷವಾಗಿ ದರ್ಶನಮಾಡುವಾಗ "ಅಯ್ಯೋ! ನಾನು ಪರಮ ನೀಚ. ನೀನು ಪರಮೋತ್ತಮನು. ನನ್ನ ಮನಸ್ಸೂ ವಾಕ್ಕೂ ದುಷ್ಟಕರಣಗಳು. ನೀನಾದರೋ ನಿತ್ಯಮುಕ್ತರುಗಳು ಅನುಭವಿಸುವ ಉತ್ಕೃಷ್ಟ ವಸ್ತು." ಎಂದು "ವಳವೇೞುಲಹು" ಹಾಡಿ ಆಳ್ವಾರ್ರು ಭಗವಂತನ ಹೆಸರೂ, ಸ್ಮರಿಸದಂತೆಯೂ, ಉಚ್ಚರಿಸದಂತೆಯೂ, ಕಿವಿಗೆ ಬೀಳದಂತೆಯೂ ಇರಲೆಂದು ಒಂದು ಮುರುಕುಗೋಡೆಯ ಸನಿಯಕ್ಕೆ ಹೋಗಿ

ಮುಖಕ್ಕೆ ಬುರುಕಿಹಾಕಿಕೊಳ್ಳುತ್ತಾರೆ. ಅಲ್ಲೂ ಇವರಿಗೆ ದೇವರ 'ನಾಮ ಶ್ರವಣ' ತಪ್ಪದು! ಒಬ್ಬನು ಕಾಡಿನಿಂದ ಕಟ್ಟಿಗೆ ಹೊತ್ತುತಂದು, ಆ ಮೋಟುಗೋಡೆಯ ಮೇಲಿಟ್ಟು ಸುಧಾರಿಸಿಕೊಳ್ಳುತ್ತಾ "ಶಿಲ್ವನಾರಣಾ" ಎನ್ನುತ್ತಾನೆ! ಅದೂ ಬ್ರಹ್ಮಚಾರಿ ನಾರಾಯಣನನ್ನಲ್ಲ. "ಶ್ರೀಮನ್ನಾ ರಾಯಣ", ದಿವ್ಯಮಹಿಷೀ ಲಕ್ಷ್ಮೀಯೊಡನಿರುವ ನಾರಾಯಣ! ಅಜ್ಞಾನಾದ ಕಟ್ಟಿಗೆಯವನೂ ಶ್ರೀಮನ್ನಾರಾಯಣನ ನಾಮಸ್ಮರಣೆಯನ್ನು ಮಾಡಬೇಕಾದರೆ "ಅವನೇ ಮೇಲಾದ ವಸ್ತು" ಎನ್ನುವುದು ಎಷ್ಟರಮಟ್ಟಿಗೆ, ಪ್ರಕಾಶಮಾನವಾಗಿತ್ತೆಂದು ಊಹಿಸಬಹುದು. ಆಳ್ವಾರ್ರ ಕಾಲವಾದ ಮೇಲೆ ನಾಸ್ತಿಕ ಮತವು ಕ್ರಮೇಣ ತಲೆ ಎತ್ತುತ್ತಾ ಬಂದಿತು. ಶ್ರೀರಾಮಾನುಜರು ಅವತರಿಸಿ ನಾಸ್ತಿಕಮತವನ್ನು ಧ್ವಂಸಮಾಡಿ ಆಸ್ತಿಕ ಮತವನ್ನು ಪುನಃ ಸ್ಥಾಪಿಸಿದರು ಎಂಬೆರುಮಾನಾರ್‌ರವರ ಸಮಕಾಲದಲ್ಲಿ "ವಿಷ್ಣುಭಕ್ತಿ" ದೇಶದಲ್ಲಿ ಉಜ್ವಲವಾದುದಿರಲಿ! ಅವರಾದ ಬಹುಕಾಲದಮೇಲೆ ಹುಟ್ಟಿದ ಈ ಚಿಕ್ಕದೇವರಾಜಒಡೆಯರ ಭಗವದ್ ಭಕ್ತಿ ನೋಡಿದರೆ ರಾಮಾನುಜಾಚಾರ್ಯರ ಕೃಪಾಕಟಾಕ್ಷ ಮಹಿಮೆ ಮಹಾರಾಜನ ಮೇಲೆ ಇದ್ದು ಮುಂದೆಯೂ ವ್ಯಾಪಿಸುವಂತಾಯಿತು.

ವೇದದಲ್ಲಿ "ಶ್ರೀಮನ್ನಾರಾಯಣನೇ ಜಗತ್ಕಾರಣವಸ್ತು" ಎನ್ನುವುದು ಹೇಗೆ ಪ್ರತಿಪಾದಿಸಲ್ಪಟ್ಟಿದೆ ಎನ್ನುವುದನ್ನು ಈಗ ನೋಡಬಹುದು. ಮೊದಲು ವಿಶೇಷಾಕಾರೇಣ ನಿರ್ದೇಶಿಸದೆ "ಪಶುನಾ ಯಜೇತ" ಎಂದು ಹೇಳಿ ಬಳಿಕ "ಛಾಗಸ್ಯ ವಪಾಯಾಃ" ಎಂದು ಹೇಳಿದೆ. "ಪಶು" ಎಂದರೆ ನಾಲ್ಕು ಕಾಲುಗಳುಳ್ಳ ಪ್ರಾಣಿಗೆ ಹೆಸರಾಗುತ್ತದೆ. ಆ ಪ್ರಾಣಿಯನ್ನೇ ಯಜ್ಞಕ್ಕೆ ಉಪಯೋಗಿಸಬೇಕು. ಛಾಗವೆಂದರೆ ಆಡು. ಆಡಿನ ವಪೆಯನ್ನೇ ಉಪಯೋಗಿಸಬೇಕೆಂದಾಯಿತು. ಇದರಿಂದ ಸಾಮಾನ್ಯವಾಗಿ ನಿರ್ದಿಷ್ಟವಾದ "ಪಶು" ಶಬ್ದಕ್ಕೆ ಪಶು ವಿಶೇಷವಾದ ಛಾಗದಲ್ಲಿ ಪರ್ಯವಸಾನ ಏರ್ಪಟ್ಟಹಾಗಾಯಿತು. ಇದು ಪೂರ್ವಮೀಮಾಂಸಾಶಾಸ್ತ್ರದ ಒಂದು ನ್ಯಾಯ.

ವೇದ, ಜಗತ್ಕಾರಣವಸ್ತುವನ್ನು ಮೊದಲು "ಸತ್, ಬ್ರಹ್ಮ, ಆತ್ಮ" ಶಬ್ದಗಳಿಂದ ಹೇಳಿ, ಬಳಿಕ "ಏಕೋಹ ವೈ ನಾರಾಯಣ

ಆಸೀತ್, ನಬ್ರಹ್ಮಾ ನೇಶಾನಃ" ಎಂದು ಹೇಳಿದೆ. ಹಿಂದೆ ಹೇಳಿದ ಭಾಗಪಶುನ್ಯಾಯದಿಂದ ಇಲ್ಲಿ "ಸತ್, ಬ್ರಹ್ಮ, ಆತ್ಮ" ಶಬ್ದಗಳು "ನಾರಾಯಣ" ಎಂಬ ಪರದೇವತಾ ವಿಶೇಷದಲ್ಲಿ ಮುಕ್ತಾಯವಾಗಬೇಕು. ಪ್ರಳಯ ಹಾಗೂ ಸೃಷ್ಟಿಪ್ರಕರಣಗಳನ್ನು ವಿವರಿಸುವ ಉಪನಿಷದ್ ವಾಕ್ಯಗಳನ್ನು ಇಲ್ಲಿ ಗಮನಿಸಬೇಕು. ಜಗತ್ಕಾರಣವಸ್ತು ಯಾವುದೆಂಬುದು ಸಿಕ್ಕಬೇಕಾದರೆ ನಮಗೆ ಈ ವಾಕ್ಯಗಳಲ್ಲಿಯೇ! "ಎಲ್ಲವೂ ಉಡುಗಿಹೋಗಿ, ಪ್ರಳಯ ಅಥವಾ ಕಾರಣ ದೆಶೆಯಲ್ಲಿ ಯಾವುದು ನಾಶವಿಲ್ಲದೆ ಉಳಿದಿರುವುದೋ ಅದೊಂದೇ" ಎಂದು ಹೇಳುವಾಗ ಆ "ಒಂದು" ಯಾವುದು? ಇದೇ ಪ್ರಶ್ನೆ. "ನ ಸತ್, ನಚಾಸತ್, ಶಿವ ಏವ ಕೇವಲಃ" "ಹಿರಣ್ಯಗರ್ಭಃ ಸಮವರ್ತತಾಗ್ರೇ" ಈ ವಾಕ್ಯಗಳಿಂದ ಶಿವನೇ ಜಗತ್ಕಾರಣನೆಂದೂ, ಚತುರ್ಮುಖನೇ ಜಗತ್ಕಾರಣನೆಂದೂ ಹೇಳಬಹುದಾದರೂ ಒಂದು ಅಂಶವನ್ನು ಮಾತ್ರ ಗಮನಿಸಬೇಕು. "ಶಿವ ಒಬ್ಬನೇ ಇದ್ದ" ಅಥವಾ "ಹಿರಣ್ಯಗರ್ಭ ಒಬ್ಬನೇ ಇದ್ದ" ಎನ್ನುವಾಗ "ನಾರಾಯಣ" ನನ್ನು ನಿಷೇಧಿಸಿಲ್ಲ. ಆದರೆ "ನಾರಾಯಣ" ಒಬ್ಬನೇ ಇದ್ದ ಎನ್ನುವಾಗ "ದ್ಯಾವಾಪೃಥಿವೀ, ನಕ್ಷತ್ರ" ಮುಂತಾದ ಅಚೇತನ ಪದಾರ್ಥಗಳಂತೆ ರುದ್ರಚತುರ್ಮುಖಾದಿಗಳನ್ನೂ ನಿಷೇಧಿಸಿದೆ "ನ ಬ್ರಹ್ಮಾ ನೇಶಾನಃ" ಎಂದು. ಆದರೆ "ನ ನಾರಾಯಣಃ" ಎಂದು ಎಲ್ಲಿಯೂ ನಿಷೇಧಿಸಿಲ್ಲ.

ಚಿಕ್ಕ ತರಗತಿಗಳಿಗೆ ದೊಡ್ಡ ಗಣಿತ ತಿಳಿಯದು. ವೇದಾನ್ತದ ಪಾಡೂ ಹೀಗೆಯೇ! ಶಾಸ್ತ್ರಜ್ಞಾನವಿಲ್ಲದವನಿಗೆ ವೇದಾನ್ತ ತಿಳಿಯುವುದಿಲ್ಲ. ಆಚಾರ್ಯನ ಸಂಬಂಧದಿಂದ ಶಾಸ್ತ್ರಸಂಬಂಧ ಉಂಟಾಗಬೇಕು. ಅಂಥ ಜ್ಞಾನವಿಲ್ಲದವನಿಗೆ ತಿಳಿಯದೆ ಹೋದುದರಿಂದಲೇ "ಆ ಅರ್ಥ ತಪ್ಪು" ಎನ್ನಬಾರದು. "ಶಿವ ಏವ ಕೇವಲಃ" "ಹಿರಣ್ಯಗರ್ಭಃ ಸಮವರ್ತತಾಗ್ರೇ" ಈ ಎಡೆಗಳಲ್ಲಿ ಶಿವನೆಂದರೇನು? ಹಿರಣ್ಯಗರ್ಭನೆಂದರೇನು? "ಅವು ಮಂಗಳಗುಣ ಯೋಗಾದಿಗಳಿಂದ ನಾರಾಯಣನನ್ನೇ ಹೇಳುವುವು" ಎಂದು ಆಚಾರ್ಯರು ಪ್ರತಿಪಾದಿಸಿರುವರು ಎಂಬುದು ಶಾಸ್ತ್ರಜ್ಞರಿಗೆ ಗೊತ್ತು. ವಿಷ್ಣುಸಹಸ್ರನಾಮದಲ್ಲಿ "ಸರ್ವಃ ಶರ್ವಃ

ಶಿವಃ ಸ್ಥಾಣುಃ" "ರುದ್ರೋ ಬಹುಶಿರಾಬಭ್ರುಃ" ಎಂದು ಶಿವರುದ್ರಾದಿ ಶಬ್ದಗಳಿರುವಂತೆ ಶಿವಸಹಸ್ರನಾಮದಲ್ಲಿ "ನಾರಾಯಣ" ಶಬ್ದದ ಸುಳಿವೇ ಇಲ್ಲ! ಶಿವಾದಿಗಳಿಗೆ ನಾರಾಯಣಶಬ್ದ ವಾಚಕವಾಗದು. ಆದರೆ ಶಿವಾದಿಶಬ್ದ ನಾರಾಯಣನಿಗೆ ವಾಚಕವಾಗುವುದು ಅಷ್ಟು ಮಾತ್ರವಲ್ಲ. ಎಲ್ಲಾ ಶಬ್ದಗಳೂ ಭಗವಂತನಿಗೇ ವಾಚಕವಾಗುವುವು. ಈ ಸಿದ್ಧಾನ್ತವೇ ವಿಶಿಷ್ಟಾದ್ವೈತದ ಪ್ರತಿತಂತ್ರಾರ್ಥ.

ಇದೂ ಅಲ್ಲದೆ ವಿಷ್ಣುಸಹಸ್ರನಾಮಕ್ಕೆ ಇನ್ನೊಂದು ವಿಶೇಷವೂ ಉಂಟು. ಅನೇಕ ಧರ್ಮ ಉಪದೇಶಿಸಿದ ಭೀಷ್ಮಾಚಾರ್ಯರನ್ನು ಕುರಿತು ಯುಧಿಷ್ಠಿರನು ಕೇಳುತ್ತಾನೆ "ನೀವು ಹೇಳುವ ಧರ್ಮಗಳೆಲ್ಲಾ ಆಯಾಯಾ ಸಮಯಕ್ಕೆ ದೊಡ್ಡವೆಂದೇ ತೋರುತ್ತವೆ. ಪದಾರ್ಥಗಳಿಲ್ಲದ ದರಿದ್ರನು ಏನು ಧರ್ಮಮಾಡಿಯಾನು?" "ಎರಡು ವೇಳೆ ಮಾತ್ರ ಊಟ ಮಾಡಿ ಮಧ್ಯೆ ಏನೂ ತೆಗೆದುಕೊಳ್ಳದಿರುವುದು ಎಲ್ಲ ಧರ್ಮವನ್ನೂ ನಡೆಸಿದಂತೆ" ಎನ್ನುತ್ತಾರೆ ಭೀಷ್ಮರು. "ಈ ಧರ್ಮಗಳೆಲ್ಲಾ ಇರಲಿ. ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ?" ಹೀಗೆ ಸಾಮಾನ್ಯಾಕಾರೇಣ ಪ್ರಶ್ನೆ ಕೇಳಿದ್ದಕ್ಕೆ ಉತ್ತರ ವಿಷ್ಣುಸಹಸ್ರನಾಮವಾಗಿರುವಂತೆ, ಶಿವಾದಿಸಹಸ್ರನಾಮಗಳ ಹಿಂದೆ "ಸಾಮಾನ್ಯಪ್ರಶ್ನೆ" ಇಲ್ಲ. ಶಿವನ ಮಾಹಾತ್ಮ್ಯವನ್ನೇ ಹೇಳಬೇಕೆಂಬ ಶ್ರೋತೃಜಿಜ್ಞಾಸೆ ಅನುಸರಿಸಿ ಅದಕ್ಕೆ ಸರಿಯಾಗಿ ಅವನ್ನು ಹೇಳಿದೆ.

ಹೀಗೆ ಶ್ರೀಮನ್ನಾರಾಯಣನೇ ಜಗತ್ಕಾರಣ ವಸ್ತುವೆಂದು ಎರಡನೆಯ ಬಿನ್ನಪದ ಅರ್ಥವನ್ನು ವಿವರಿಸಲಾಯಿತು.

## ಬಿನ್ನಪ ೩ ಮತ್ತು ೪

ಜಗತ್ತಿನಲ್ಲಿ "ಪ್ರಮೇಯ" ವೆಂದರೆ "ತಿಳಿಯಲ್‌ತಕ್ಕ ವಸ್ತು". ಆ ವಸ್ತುವನ್ನು ತಿಳಿಯುವ ಪ್ರಮಾಣಗಳು "ಪ್ರತ್ಯಕ್ಷ, ಅನುಮಾನ, ಶಬ್ದ" ವೆಂದು ಮೂರು ವಿಧವಾಗಿರುವುವು. ಮೂರನೆಯ ಬಿನ್ನಹದಲ್ಲಿ "ಪ್ರತ್ಯಕ್ಷ, ಅನುಮಾನ, ಶಬ್ದ ಈ ಪ್ರಮಾಣಗಳು ಯಾವುವನ್ನು ತಿಳಿ

ಸುತ್ತವೆ? ಅವು ಬ್ರಹ್ಮನನ್ನು ತಿಳಿಸಬಲ್ಲವೇ? ಆರು ಬಗೆಯ ಪ್ರತ್ಯಕ್ಷ ಗಳು ಯಾವುವು?" ಈ ಪ್ರಶ್ನೆಗಳಿಗೆ ಉತ್ತರವಿದೆ.

## ಪ್ರತ್ಯಕ್ಷ

ಇಂದ್ರಿಯಾರ್ಥ ಸಂಬಂಧದಿಂದ ಹುಟ್ಟುವ ಜ್ಞಾನ ಪ್ರತ್ಯಕ್ಷ. ಕಣ್ಣಿನಿಂದ ನೋಟ, ಮೂಗಿನಿಂದ ವಾಸನೆ, ನಾಲಿಗೆಯಿಂದ ರುಚಿ, ಚರ್ಮದಿಂದ ಸ್ಪರ್ಶ, ಕಿವಿಯಿಂದ ಕೇಳುವುದು, ಮನಸ್ಸಿನಿಂದ ಸುಖ ದುಃಖ ತಿಳಿದುಕೊಳ್ಳುವುದು. ಆದರೆ ಈ ಪ್ರತ್ಯಕ್ಷದಿಂದಲೇ ಪರಮಾತ್ಮ ಸಿಗನೆಂದು ನಾಲ್ಕನೆಯ ಬಿನ್ನಪದಲ್ಲಿ ಹೇಳಿದೆ. "ನಚಕ್ಷುಷಾ ಗೃಹ್ಯತೇ ನಾಪಿ ವಾಚಾ" ಎಂಬುವ ವೇದವಾಕ್ಯದಿಂದ ಇದು ಸ್ಪಷ್ಟವಾಗಿ ತಿಳಿಯುತ್ತದೆ.

## ಅನುಮಾನ

ಅಡಿಗೆಯ ಮನೆಯಲ್ಲಿ ಬಹಳ ದಿವಸ ನೋಡಿ ನೋಡಿ "ಹೊಗೆ ಇದ್ದೆಡೆ ಬೆಂಕಿ ಇರುವುದೆಂಬುದು" ಮನದಟ್ಟಾಗಿರುತ್ತದೆ. ಒಂದು ಬೆಟ್ಟದ ಬಳಿ ಹೋದಾಗ ಮೇಲುಗಡೆ ಹೊಗೆ ಮಾತ್ರ ಕಾಣುತ್ತದೆ ಎನ್ನಿ. ಅದರಿಂದ ಅಲ್ಲಿ ಬೆಂಕಿ ಇದೆಯೆಂದು ಊಹಿಸಬಹುದು. ಇದು ಅನುಮಾನ. ಈ ಅನುಮಾನ ಪ್ರಮಾಣದಿಂದ ಭಗವಂತ ಸಿದ್ಧನಾಗಲಾರ. ಸಿದ್ಧಿಸಿದರೂ ಅವನು ಶ್ರೀಮನ್ನಾರಾಯಣನೇ ಎನ್ನುವುದನ್ನು ತಿಳಿಯಲಾಗದು. "ಶಾಸ್ತ್ರಯೋನಿತ್ವಾತ್" ಎನ್ನುವ ಸೂತ್ರದಲ್ಲಿ ಶ್ರೀ ವೇದವ್ಯಾಸರು ಹೇಳಿರುವಂತೆ ವೇದಶಾಸ್ತ್ರ ಒಂದರಿಂದಲೇ ತಿಳಿಯಬೇಕು. ಅನುಮಾನದಿಂದ ಸಿದ್ಧಿಸಬಹುದಾದ ಈಶ್ವರನು "ಅನ್ಯಮಿಂದ್ರಂ ಕರಿಷ್ಯಾಮಿ" ಎಂದು ಹೇಳಿದ ವಿಶ್ವಾಮಿತ್ರನಿಗಿಂತ ದೊಡ್ಡವನಾಗಿರಬಹುದು. ಅನುಮಾನ ವ್ಯಾಪ್ತಿಯು ಅಲ್ಲಿ ನಿಲ್ಲುತ್ತದೆ. ಅಷ್ಟೆ.

## ಶಬ್ದ

ಇದ್ದುದನ್ನು ಇದ್ದಂತೆ ತಿಳಿಸುವ ನುಡಿಯೇ ಶಬ್ದ ಪ್ರಮಾಣ. ಅದು ಲೌಕಿಕವೆಂದೂ ವೈದಿಕವೆಂದೂ ಎರಡು ವಿಧ. ಲೌಕಿಕವೆಂಬುದು

ಲೋಕದಲ್ಲಿ ಆಪ್ತರು ನುಡಿವ ನುಡಿ. ವೈದಿಕವೆಂಬುದು ವೇದ ಮೊದಲಾದ ವಿದ್ಯೆಗಳು. ಈ ವೇದವು ತಾನೇ ನಮಗೆ ಮುಖ್ಯವಾಗಿ ಭಗವಂತನ ಅರಿವನ್ನು ಉಂಟುಮಾಡಿಕೊಡುತ್ತದೆ. ಅಂಥ ವೇದವೂ ತಾನೆ ಏನು, ಪರಬ್ರಹ್ಮ ಶ್ರೀಮನ್ನಾರಾಯಣನನ್ನು ಪೂರ್ತಿಯಾಗಿ ಹೇಳಬಲ್ಲುದೇ? ಅದಕ್ಕೂ ದೇವರ ವಿಚಾರದಲ್ಲಿ ಇದ್ದದ್ದು ಇದ್ದಹಾಗೆ ಹೇಳಲು ಆಗುವುದಿಲ್ಲ. ಹೀಗೆ ಅಪರಿಚ್ಛಿನ್ನನಾದ ಭಗವಂತನು ವಾಕ್ಕಿಗೆ ಅವಿಷಯ, ಮನಸ್ಸಿಗೆ ಅಗೋಚರನಾದುದರಿಂದಲೇ "ನಾನು ಬ್ರಹ್ಮನನ್ನು ತಿಳಿದಿದ್ದೇನೆ" ಎನ್ನುವವನಿಗೆ ಅದು ತಿಳಿಯದೆಂದೂ, ಯಾರಿಗೆ ದೇವರು ತಿಳಿದಿಲ್ಲವೋ ಅಂಥವನೇ ದೇವರನ್ನು ತಿಳಿದಿರುವವನೆಂದೂ ಹೇಳುವುದು. "ಹಾಗಾದರೆ ದೇವರು ಜ್ಞಾನಕ್ಕೆ ವಿಷಯನಾಗನು" ಎಂದು ತರ್ಕಮಾಡುವವರಿಗೆ ಈ ಶಿಷ್ಯಾಚಾರ್ಯ ಕ್ರಮವೇಕೆ? ಇಷ್ಟು ಉಪದೇಶಗಳೇಕೆ? ಬ್ರಹ್ಮಸೂತ್ರಗಳೇಕೆ? ಇವುಗಳೆಲ್ಲಾ ಎಷ್ಟು ಹೇಳಿದರೂ ದೇವರನ್ನು "ಇಷ್ಟೇ" ಎಂದು ಪರಿಚ್ಛೇದಿಸಿ ಹೇಳಲಾರವು. ಆತನ ಸ್ವರೂಪ, ರೂಪ, ಗುಣ ಮುಂತಾದುವೆಲ್ಲವೂ "ಅಪರಿಚ್ಛಿನ್ನ" ಎಂದು ತಾನೆ ಅವು ಹೇಳಿಯಾವು! ಇಷ್ಟು ಹೊರತು ಸುತರಾಂ ಮೊಲದ ಕೊಂಬಿನಂತೆ "ಖ್ಯಾತ್ಯವಿಷಯತ್ವ" ರೂಪವಾದ ತುಚ್ಛತ್ವ ಬ್ರಹ್ಮನಿಗೆ ಬಾರದು.

"ವೇದವನ್ನು ಮಾತ್ರ ಇಟ್ಟುಕೊಂಡು ವೇದಕ್ಕೆ ಅರ್ಥಮಾಡಲು ಆಗುವುದಿಲ್ಲ. ಸ್ಮೃತಿ, ಇತಿಹಾಸ, ಪುರಾಣಗಳೆಂಬ ಉಪಬೃಂಹಣಗಳಿಂದ ವೇದಾರ್ಥವನ್ನು ಅರಿಯಬೇಕು" ಎಂದು ಚಿಕ್ಕದೇವರಾಜರು ಹೇಳುತ್ತಾರೆ. "ವೇದಾರ್ಥಂ ಅಱುತಿಯಿಡುವತು ಸ್ಮೃತೀತಿಹಾಸ ಪುರಾಣಂಗಳಾಲೇ" ಈ ಪೂರ್ವಾಚಾರ್ಯರ ಸತ್‌ಸಂಪ್ರದಾಯ ಚಿಕ್ಕದೇವರಾಜರದು. ಉಪಬೃಂಹಣದ ಆವಶ್ಯಕತೆಯನ್ನು ಈ ಮುಂದಿನ ವಿಷಯದಿಂದ ತಿಳಿಯಬಹುದು.

ಶಂಕರಾಚಾರ್ಯರೇನೂ ಸಾಮಾನ್ಯರಲ್ಲ. ಅವರಿಗೆ ಸರಿಯಾದವರು ರಾಮಾನುಜರು. "ತಸ್ಯ ಯಥಾ ಕಪ್ಯಾಸಂ ಪುಣ್ಡರೀಕಮೇವಮಕ್ಷಿಣೀ" ಎಂಬ ಶ್ರುತಿಯ ಅರ್ಥವನ್ನು ಶಂಕರಾಚಾರ್ಯರು ಉಪಬೃಂಹಣದ



ತಿರುನಾರಾಯಣಪುರಂ (ಮೇಲುಕೋಟೆ)
ಭಗವಾನ್ ಶ್ರೀ ಯತಿರಾಜ ಸಂಪತ್ಕುಮಾರನ್.
ನಿತ್ಯಸೇವಾ.

ಸಹಾಯ ಪಡೆಯದೆ ಒಂದು ರೀತಿ ಮಾಡಿದರು. ಆದರೆ ಶ್ರೀ ರಾಮಾನುಜರು ಮಾಡಿರುವ ಸುಪ್ರಸಿದ್ಧವಾದ ಅರ್ಥವಿದು :—" ಗಂಭೀರಾಂಭಸಮುದ್ಭೂತ ಸುಮೃಷ್ಟನಾಳ ರವಿಕರವಿಕಸಿತ ಪುಂಡರೀಕದಳಾಮಲಾಯತೇ ಕ್ಷಣಃ."

" ಕಪ್ಯಾಸಂ " ಎನ್ನುವುದಕ್ಕೆ ವ್ಯಾಖ್ಯಾನವನ್ನು ಬರೆದಾಗ ಶ್ರೀ ರಾಮಾನುಜಾಚಾರ್ಯರು ಮೂರು ವಿಧವಾದ ಅರ್ಥಗಳನ್ನು ಮನಸ್ಸಿನಲ್ಲಿ ಇಟ್ಟಿದ್ದರೆಂದು ಶ್ರುತಪ್ರಕಾಶಿಕಾಚಾರ್ಯರು ಬರೆದಿದ್ದಾರೆ. ಆಳವಾದ ನೀರಿನಲ್ಲಿ ಉದ್ಭವವಾದುದು (ಕಂ–ಜಲಂ, ಅಸ–ಭುವಿ) ; ಚೆನ್ನಾಗಿ ಬೆಳೆದ ನಾಳದಿಂದ ಕೂಡಿರುವುದು. (ಕಂ ಪಿಬತೀತಿ ನಾಳಂ, ತಸ್ಮಿನ್ ಆಸ್ತೇ ಇತಿ); ಸೂರ್ಯಕಿರಣದಿಂದ ವಿಕಸಿತವಾದುದು (ಕಂ ಪಿಬತೀತಿ ಆದಿತ್ಯಃ ತೇನ ಅಸ್ಯತೇ ಕ್ಷಿಪ್ಯತೇ ವಿಕಾಸ್ಯತೇ.)

ಈ ರೀತಿಯಾಗಿ ಮೂರು ವಿಧವಾದ ಶ್ರೇಷ್ಠಗುಣಗಳನ್ನು ಹೊಂದಿರುವ ಪುಂಡರೀಕದಳಕ್ಕೆ (ಕಮಲಪುಷ್ಪದಳಕ್ಕೆ) ಸದೃಶವಾದ ಕಣ್ಣುಗಳು ಭಗವಂತನವು, ಎನ್ನುವುದೇ ಈ ಶ್ರುತಿಯ ಅರ್ಥ.

ವಾಲ್ಮೀಕಿಯ " ರಾಮಃ ಕಮಲಪತ್ರಾಕ್ಷಃ ಸರ್ವಸತ್ವಮನೋಹರಃ " ಎಂಬ ಶ್ಲೋಕವನ್ನು ಸ್ಮರಿಸಿಕೊಂಡು ಶ್ರೀರಾಮಾನುಜರು ಶ್ಲಾಘ್ಯವಾದ ಈ ಅರ್ಥಮಾಡಿದ್ದಾರೆ. ಸಂಸ್ಕೃತ ಭಾಷೆಯ ಅಲ್ಪಜ್ಞಾನವಿದ್ದವರಿಗೂ ಈ ಶ್ಲೋಕವು ಸುಲಭವಾಗಿ ಅರ್ಥ ತಿಳಿಸಿಕೊಡುತ್ತದೆ. " ರಾಮಲಕ್ಷ್ಮಣರೋ ನರರು. ನೀವು ವಾನರರು, ನಿಮ್ಮಿಬ್ಬರಿಗೂ ಅದೆಂತು ಸೇರ್ಪಡೆಯಾಯಿತು ? ಅವರುಗಳ ಲಕ್ಷಣವೇನು ? " ಎಂದು ಸೀತಾದೇವಿಯು ಕೇಳುವ ಪ್ರಶ್ನೆಗೆ ಉತ್ತರ ಹೇಳುವಾಗ ಆಂಜನೇಯನು " ರಾಮಃ ಕಮಲಪತ್ರಾಕ್ಷಃ " ಎನ್ನುತ್ತಾನೆ. ಈ ಶ್ಲೋಕವು " ಕಪ್ಯಾಸ " ಶ್ರುತಿಗೆ ಉಪಬೃಹ್ಮಣ.

ಉಪಬೃಹ್ಮಣಕ್ಕೆ ಲಕ್ಷಣ ಹೇಳುವಾಗ " ಉಕ್ತಾರ್ಥಕಥನಂ ಯುಕ್ತಾರ್ಥಾಂತರಬೋಧನಂ " ಎಂದು ಎರಡನ್ನೂ ಹೇಳಿದೆ. ಈ

ಎರಡು ಲಕ್ಷಣಗಳನ್ನೂ ಈ ಶ್ಲೋಕದಲ್ಲಿ ನೋಡಬಹುದು. "ಅವನ ಕಣ್ಣುಗಳು ತಾವರೆ ಎಸಳಿನಂತಿರುವುವು" ಎಂದು ಹೇಳುವಾಗ "ಕಪ್ಯಾಸ ಶ್ರುತಿ" ಯ ಅರ್ಥವನ್ನು ತಿಳಿಸುತ್ತದೆ. ಇದೀಗ "ಉಕ್ತಾರ್ಥ ಕಥನ". "ಎಲ್ಲಾ ಪ್ರಾಣಿಗಳ ಮನಸ್ಸನ್ನು ಸೂರೆಗೊಳ್ಳುತ್ತಿದ್ದುವು" ಎಂದು ಹೇಳುವಾಗ ಯುಕ್ತ ಅರ್ಥಾಂತರ ಬೋಧನ. "ಇನ್ನೊಬ್ಬರ ಬುದ್ಧಿಯು ಮತ್ತೊಬ್ಬರಿಗೆ ಗೋಚರವಾಗದಿರುವಾಗ ನೀನೆಂತು ಅರಿತೆ, ಎಲ್ಲಾ ಪ್ರಾಣಿಗಳಿಗೂ ಆಹ್ಲಾದ ತರುತ್ತಿತ್ತು ಎಂಬುದನ್ನು" ಎಂದು ಸೀತೆಯು ಪ್ರಶ್ನೆಮಾಡಿದ್ದಕ್ಕೆ "ನಾಸು ಕಪಿ. ನನಗಿಂತಲೂ ಕೀಳಾದ ಪ್ರಾಣಿಯು ಯಾವುದೂ ಇಲ್ಲ. ಇಂಥ ನನಗೇ ಆ ಕಣ್ಣುಗಳು ಮನೋಹರವಾಗಿ ತೋರಿರುವಾಗ ಇತರ ಪ್ರಾಣಿಗಳಿಗೆ ಕೇಳಬೇಕೆ?" ಎಂದು ಆಂಜನೇಯನು ಹೇಳುತ್ತಾನೆ. ಈ ಅರ್ಥವಿಶೇಷವನ್ನು ನಂಬಿಳ್ಳೆಗಳು ದಯಪಾಲಿಸಿರುತ್ತಾರೆ.

ಹೀಗೆ ಒಂದನೆಯ ಬಿನ್ನಪದಲ್ಲಿ ಸರ್ವೇಶ್ವರನಿಗೆ ವಿಗ್ರಹವುಂಟೆಂಬ ವಿಶಿಷ್ಟಾದ್ವೈತದ ಪ್ರಧಾನ ತತ್ವ ಹೇಳಿ, ಎರಡನೆಯ ಬಿನ್ನಪದಲ್ಲಿ ಜಗತ್ಕಾರಣ ವಸ್ತುವಾದ ಶ್ರೀಮನ್ನಾರಾಯಣನೇ ಪರಾತ್ಪರನೆಂಬುದನ್ನು ಸಮರ್ಥಿಸಿ, ಮೂರನೆಯ ಬಿನ್ನಪದಲ್ಲಿ ಹೇಳಿದ ಪ್ರತ್ಯಕ್ಷ, ಅನುಮಾನ ಮತ್ತು ಲೌಕಿಕ ಶಬ್ದಗಳು ಭಗವಂತನನ್ನು ಗುರುತುಮಾಡಲಾರವೆಂದೂ ಉಪಬೃಹ್ಮಣಗಳಿಂದ ಕೂಡಿದ ವೇದ ಮಾತ್ರ ಬ್ರಹ್ಮಸ್ವರೂಪವನ್ನು ಅಪರಿಚ್ಛಿನ್ನವಾಗಿಯೇ ತಿಳಿಸುವುದೆಂದೂ ನಾಲ್ಕನೆಯ ಬಿನ್ನಪದಲ್ಲಿ ಹೇಳಿದ ಹಾಗಾಯಿತು.

# ಎರಡನೆಯ ದಿನದ ಉಪನ್ಯಾಸ

## ೫, ೬, ೭, ೮ ನೆಯ ಬಿನ್ನಪಗಳು

### ಬಿನ್ನಹ ೫.

"ಅಂಗ ಉಪಾಂಗ ಸಹಿತವಾದ ವೇದಗಳು ಭಗವಂತನನ್ನು ತಿಳಿಸುತ್ತವೆ." ಎನ್ನುವ ಅಂಶವನ್ನು ನಾಲ್ಕನೆಯ ಬಿನ್ನಪದಲ್ಲಿ ವ್ಯಾಖ್ಯಾನ

ಮಾಡಲಾಯಿತು. ಐದನೆಯ ಬಿನ್ನಪದಲ್ಲಿ ವೇದವು ಯಾವ ರೀತಿಯಲ್ಲಿ ಪರಬ್ರಹ್ಮನನ್ನು ಪ್ರತಿಪಾದಿಸುತ್ತದೆ, ಎನ್ನುವ ವಿಷಯವನ್ನು ಸ್ಪಷ್ಟಪಡಿಸಲಾಗುತ್ತದೆ.

ವೇದವು ಕರ್ಮಕಾಂಡವೆಂದೂ, ಜ್ಞಾನ ಅಥವಾ ಬ್ರಹ್ಮಕಾಂಡವೆಂದೂ ಎರಡು ಭಾಗವಾಗಿದೆ. ಕರ್ಮಕಾಂಡದಲ್ಲಿ ಯಜ್ಞ, ದಾನ, ತಪಸ್ಸು ಇವು ವಿವರಿಸಲ್ಪಟ್ಟಿವೆ. ಬ್ರಹ್ಮಕಾಂಡದಲ್ಲಿ ಜೀವಾತ್ಮಸ್ವರೂಪ, ಜೀವನಿಗೂ ಆತ್ಮವಾದ ಭಗವತ್‌ಸ್ವರೂಪವನ್ನೂ, ಆ ಭಗವಂತನನ್ನು ಆರಾಧಿಸುವ ಕ್ರಮಗಳನ್ನೂ, ಅವುಗಳ ಫಲವನ್ನೂ ನಿರೂಪಿಸಿದೆ.

ಉತ್ತರಭಾಗವಾದ ಬ್ರಹ್ಮಕಾಂಡವು ಭಗವಂತನನ್ನು ಕುರಿತು ತಿಳಿಸುವುದಾದರೂ ಪೂರ್ವಭಾಗವಾದ ಕರ್ಮಕಾಂಡವು ಅವನ ವಿಚಾರವಾಗಿ ತಿಳಿಸುವಂತೆ ಕಾಣುವುದಿಲ್ಲ. ಮತ್ತೆ ದೇವತಾಂತರಗಳ ವಿಷಯವಾಗಿಯೇ ಅಲ್ಲಿ ಹೇಳಲ್ಪಟ್ಟಿರುವುದು. ಇದರಿಂದ ಭಗವಂತನು ಅದೆಂತು "ಸಕಲ ವೇದ ವೇದ್ಯ" ನಾದಾನು ? ಎಂಬ ಸಂದೇಹ ಮೂಡಬಹುದು. ಇದಕ್ಕೆ ಪರಿಹಾರವಾಗಿ ರಾಜರು ಒಂದು ಸೊಗಸಾದ ಉದಾಹರಣೆಯನ್ನು ಕೊಟ್ಟಿದ್ದಾರೆ.

ಪ್ರಪಂಚದಲ್ಲಿ ಅರಸನನ್ನು ಸ್ತೋತ್ರಮಾಡುವುದಕ್ಕೋಸ್ಕರ, ನಾಡು ನಗರದವರು ಅರಸನ ಆಜ್ಞೆಯನ್ನು ಅನುಸರಿಸಿ ನಡೆಯುವ ಬಗೆಯನ್ನೂ ಅದಕ್ಕೆ ಪ್ರತಿಯಾಗಿ ಅರಸನು ಅವರಿಗೆ ತಕ್ಕ ಸನ್ಮಾನಗಳನ್ನು ಕೊಡುವ ರೀತಿಯನ್ನೂ, ಪ್ರಜೆಗಳ ನೆಲೆಯನ್ನೂ, ರಾಜನ ನೆಲೆಯನ್ನೂ, ರಾಜನ ಸನ್ನಿಧಾನವನ್ನು ಸೇರುವ ಮಾರ್ಗವನ್ನೂ, ರಾಜಸನ್ನಿಧಿಯಲ್ಲಿ ಇರುವವರ ಸೌಖ್ಯವನ್ನೂ ಕೈವಾರಿಕರು ವರ್ಣಿಸುತ್ತಾರೆ. ಅಂತೆಯೇ ಭಗವಂತನ ಪ್ರಜೆಗಳಾದ ವರ್ಣಾಶ್ರಮದವರು ಯಜ್ಞಾದಿಕರ್ಮಗಳನ್ನೂ ಅವನ ಆಜ್ಞಾಕರ್ಮಗಳೆಂದು ಮಾಡುತ್ತಾರೆ. ಅದಕ್ಕೆ ತಕ್ಕ ಸನ್ಮಾನಗಳಾದ ಇಹಪರ ಸುಖಗಳನ್ನು ಭಗವಂತನು ದಯಪಾಲಿಸುತ್ತಾನೆ. ಇದರಿಂದಲೇ ಯಜ್ಞಾದಿ ಕರ್ಮಗಳನ್ನೂ, ಅವುಗಳ ಫಲಗಳನ್ನೂ ವಿವರಿ

ಸುವ ಕರ್ಮಕಾಂಡವು ಭಗವಂತನ ಸ್ತುತಿರೂಪವಾಗಿಯೇ ಇರುವುದೆಂದು ತಿಳಿಯಬರುತ್ತದೆ.

ಭಗವಂತನ ಪ್ರಜೆಗಳಾದ ಜೀವಾತ್ಮರುಗಳ ಸ್ಥಿತಿಯನ್ನೂ, ಭಗವತ್ಸ್ವರೂಪವನ್ನೂ, ಅವನನ್ನು ಹೊಂದುವ ಮಾರ್ಗವನ್ನೂ, ಅವನ ಸನ್ನಿಧಿಯಲ್ಲಿರುವವರ ಮೋಕ್ಷಾನಂದವನ್ನೂ ಉತ್ತರಭಾಗವಾದ ಬ್ರಹ್ಮಕಾಂಡವು ನಿರೂಪಿಸಿದೆ. ಇದೂ ಕೂಡ ಭಗವಂತನ ಸ್ತುತಿರೂಪವಾಗಿಯೇ ಇರುವುದು. ಕೈವಾರಿಗಳು ಹೇಳುವ ವಿಷಯುಗಳೆಲ್ಲಾ ಹೇಗೆ ರಾಜನ ಸ್ತುತಿಯಲ್ಲಿ ಅನ್ವಯಿಸುವುವೋ ಹಾಗೆಯೇ ವೇದಗಳು ಹೇಳುವುದೆಲ್ಲಾ ಭಗವಂತನಲ್ಲೇ ಅನ್ವಯಿಸುವುದು. ಈ ರೀತಿಯಾಗಿ ಚಿಕ್ಕದೇವರಾಜರು, "ಭಗವಂತನು ಸಕಲ ವೇದವೇದ್ಯ" ನೆಂದು ಸೊಗಸಾಗಿ ವರ್ಣಿಸಿದ್ದಾರೆ. "ಪ್ರಶಸ್ತಿಃ ಸಾರಾಜ್ಞಃ ಯದಪಿ ಚ ಪುರೀಕೋಶಕಥನವ್" ಎಂದು ಶ್ರೀ ಪರಾಶರಭಟ್ಟರು ಶ್ರೀ ಗುಣರತ್ನಕೋಶದಲ್ಲಿ ಅಪ್ಪಣೆ ಕೊಡಿಸಿರುವ ವಾಕ್ಯವನ್ನು ಇಲ್ಲಿ ಸ್ಮರಿಸಬಹುದು.

ಋಷಿಯಾದ ಮನುವು ಬಲು ದೊಡ್ಡವನು. ಅವನ ಮಾತು ಯಾವಾಗಲೂ ಹಿತ. "ಯದ್ವೈ ಕಿಂಚನ ಮನುರವದತ್ ತದ್ ಭೇಷಜಂ" ಎಂದು ಮನುವನ್ನು ಕುರಿತು ವೇದವೇ ಹೇಳಿದೆ. ಅವನು ಹೇಳಿದುದೆಲ್ಲಾ ಪಥ್ಯ. ಮನುವಿನ ಬಳಿಗೆ ಬಂದು ಕೇಳಿದ ಋಷಿಗಳಿಗಾಗಿ ವರ್ಣ ಆಶ್ರಮ ಧರ್ಮಗಳನ್ನು ವಿವರಿಸಬೇಕಾಗುತ್ತದೆ. ಮೊದಲ ಏಳು ಶ್ಲೋಕಗಳಲ್ಲಿ ಪ್ರಳಯಕಾಲದಲ್ಲಿನ ಸ್ಥಿತಿಯನ್ನು ವರ್ಣಿಸಿ ಸೃಷ್ಟಿಕಾರಣನಾದ ಶ್ರೀಮನ್ನಾರಾಯಣನ ಸ್ವರೂಪವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾನೆ ಮನು. ಈ "ಸಪ್ತಶ್ಲೋಕಿ" ಹೇಳಿ ಬಳಿಕ ವರ್ಣಾಶ್ರಮ ಧರ್ಮಗಳನ್ನು ವಿಸ್ತಾರವಾಗಿ ವಿವರಿಸಿರುವುದರಿಂದ, ಮೊದಲು ಆರಾಧ್ಯ ದೇವತೆಯ ಸ್ವರೂಪವನ್ನೂ ಬಳಿಕ ಅವನ ಆರಾಧನಾರೂಪವಾದ ವರ್ಣಾಶ್ರಮ ಧರ್ಮಗಳನ್ನೂ ಹೇಳಿರುವುದಾಗಿ ಗ್ರಹಿಸಬೇಕು. "ಕುಲ್ಲೂಕಭಟ್ಟ" ಮತ್ತು "ಶ್ರುತಪ್ರಕಾಶಿಕಾಚಾರ್ಯರು" ಇವರೆಲ್ಲ ಈ ಏಳು ಶ್ಲೋಕಗಳಿಗೆ ವಿಸ್ತಾರವಾಗಿ ಅರ್ಥ ಬರೆದಿದ್ದಾರೆ. ಕುಲ್ಲೂಕ

ಭಟ್ಟರು ತಮ್ಮ ವ್ಯಾಖ್ಯಾನದಲ್ಲಿ ಮನುವಿನದು "ತ್ರಿದಂಡಿಮತ" ಎಂದಿದ್ದಾರೆ. ನಮ್ಮ ಆಚಾರ್ಯರೂ, ಯಜ್ಞ, ದಾನ, ತಪಃ ಕರ್ಮಗಳು ಭಗವಂತನ ಆರಾಧನಗಳೆಂದು ಸಾರಿ ಹೇಳಿರುವರು.

ಹೀಗೆ ಒಟ್ಟು ವೇದದಲ್ಲಿ ಆರಾಧನದೊಡನೆ ಸೇರಿದ ಆರಾಧ್ಯನನ್ನು ಹೇಳುವುದರಿಂದ "ಸಕಲ ವೇದ ಪ್ರತಿಪಾದ್ಯ" ದೇವರೆಂಬುದು ಸಿದ್ಧವಾಗುವುದು.

---

## ಬಿನ್ನಪ ೬

ಆರು, ಏಳು, ಮತ್ತು ಎಂಟನೆಯ ಬಿನ್ನಪಗಳಲ್ಲಿ ದೊಡ್ಡ ದೊಡ್ಡ ತತ್ವಾರ್ಥಗಳನ್ನು ಶ್ರೀಭಾಷ್ಯದಲ್ಲಿ ವಿಸ್ತರಿಸಿರುವ ಕ್ರಮದಲ್ಲಿ ನಿರೂಪಿಸಿದೆ. ಆರನೆಯ ಬಿನ್ನಪದಲ್ಲಿ "ಸಕಲಶಾಸ್ತ್ರ ಸಾಮಂಜಸ್ಯ" ತೋರಿಸಿರುವುದು ಚಿಕ್ಕದೇವರಾಜರ ಆಸ್ತಿಕ್ಯದ ಆಳವನ್ನು ಕಾಣಿಸುವುದಾಗಿದೆ. ಯಾರು ಸದಾಚಾರ್ಯರ ಅನುಗ್ರಹಕ್ಕೆ ಪಾತ್ರರೋ ಅಂಥವರೀಗ ಪೂರ್ವಾಪರ ವಿರೋಧವಿಲ್ಲದೆ, ಎಲ್ಲ ವೇದವಾಕ್ಯಗಳಿಗೂ ಅರ್ಥ ತಿಳಿಯಬಲ್ಲರು "ಆಚಾರ್ಯವಾನ್ ಪುರುಷೋ ವೇದ."

ಆಚಾರ್ಯನ ಸಂಬಂಧದಿಂದಲೇ ಸಂದೇಹವಿಲ್ಲದೆ ಶಾಸ್ತ್ರಾರ್ಥ ತಿಳಿಯುವುದು, ಎಂಬುದಕ್ಕೆ ಒಂದು ಇತಿಹಾಸವಿದೆ. ಪರಾಶರಭಟ್ಟರ ಬಳಿ ಶಾಸ್ತ್ರ ತಿಳಿಯದ ಒಬ್ಬ ವೃದ್ಧರೂ, ಮತ್ತೊಬ್ಬ ಚತುಶ್ಶಾಸ್ತ್ರ ಪಂಡಿತನೂ ವೇದಾನ್ತ ಕಾಲಕ್ಷೇಪಕ್ಕಾಗಿ ಬರುತ್ತಿದ್ದರು. ಚತುಶ್ಶಾಸ್ತ್ರ ಪಂಡಿತನಿಗಿಂತಲೂ ಹೆಚ್ಚು ಗೌರವ ಆ ಮುದುಕರ ಬಗ್ಗೆ ತೋರುತ್ತಿದ್ದುದಕ್ಕೆ ಗೋಷ್ಠಿಯಲ್ಲಿ ಕೆಲವರು ಆಕ್ಷೇಪಿಸಿದರು. ಮರುದಿನ ಕಾರಣ ತಿಳಿಸುವುದಾಗಿ ಭಟ್ಟರು ಹೇಳಿದರು. ಮೂರನೆಯದಿನ ಆ ಮುದುಕರು ಬಂದಾಗ "ಈವರೆಗೆ ಕಾಲಕ್ಷೇಪ ಕೇಳಿದ್ದಿರಲ್ಲಾ, ಏನು ಸಾರ ಗ್ರಹಿಸಿದ್ದೀರಿ?" ಎಂದು ಭಟ್ಟರು ಕೇಳಿದರು. "ಶ್ರೀಮನ್ನಾರಾಯಣನೇ ಪರತತ್ವ. ಅವನ ದಯೆಯೊಂದರಿಂದಲೇ ನಮಗೆ ಪುರುಷಾರ್ಥ." ಎಂದು ಈ ಉತ್ತರ ಥಟ್ಟನೆ ಮುದುಕರ ಬಾಯಿಂದ ಹೊರಟಿತು. ಭಟ್ಟರು ಆ ವಿದ್ವಾಂಸನನ್ನೂ

ಕೇಳಿದರು. ಪಂಡಿತನು ಯೋಚಿಸಿ, ಯೋಚಿಸಿ "ಸಾರಾರ್ಥವೇನೆಂಬು ದನ್ನು ಸುಲಭವಾಗಿ ಹೇಳಿಬಿಡುವಂತಿಲ್ಲ. ಕೆಲವಾಕ್ಯಗಳು ನಾರಾಯಣ ನಿಗೆ ಪರತ್ವ ಹೇಳುತ್ತವೆ. ಮತ್ತೆ ಕೆಲವು ದೇವತಾಂತರಗಳನ್ನೇ ದೊಡ್ಡ ದುಮಾಡಿವೆ. ಈ ವಿಚಾರ ಸಂದಿಗ್ಧವಾದುದು" ಎಂದು ಉತ್ತರಕೊಡು ತ್ತಾನೆ. ಶಾಸ್ತ್ರ ಓದಿದಾಕ್ಷಣ ನಿಶ್ಚಯಜ್ಞಾನ ಏರ್ಪಡುವುದಿಲ್ಲ. ವಾಕ್ಯಾರ್ಥ ನಡೆಸುವುದರಿಂದಲೇ ತತ್ವ, ಹಿತ, ಪುರುಷಾರ್ಥಗಳ ಅರಿವು ಸಿಗದು. ತತ್ವಜಾನವು ಆಚಾರ್ಯನ ಅನುಗ್ರಹದಿಂದಲೇ ಬರತಕ್ಕುದು. ಆಚಾರ್ಯನ ಮೂಲಕ ಬಾರದ ಜ್ಞಾನ ಜ್ಞಾನವೇ ಅಲ್ಲ; ಅದು ಅಜ್ಞಾನ.

ಬೇರೆ ಬೇರೆ ಶ್ರುತಿಗಳು ಬೇರೆ ಬೇರೆ ರೀತಿಯಲ್ಲಿ ಭಗವಂತನನ್ನು ಹೇಳಿರುವುವು. ಅವುಗಳಲ್ಲಿ ಒಂದಕ್ಕೊಂದು ವಿರೋಧವಾಗಿರುವಂತೆ ಕಾಣುವುದು. ಈ ವಿರೋಧಪರಿಹಾರವನ್ನು ಈ ಆರನೆಯ ಬಿನ್ನಪದಲ್ಲಿ ಮಾಡಿದ್ದಾರೆ. ಇದರಲ್ಲಿ ಮುಖ್ಯವಾಗಿ ನಾಲ್ಕೈದು ವಿಧವಾದ ವಿರೋಧ ಗಳು ಪರಿಹರಿಸಲ್ಪಟ್ಟಿವೆ. ಕೆಲವು ಶ್ರುತಿಗಳು ಭಗವಂತನನ್ನು, "ಸತ್ಯ ಕಾಮ, ಸತ್ಯಸಂಕಲ್ಪ, ಸರ್ವಜ್ಞ, ಸರ್ವವಿತ್" ಎಂದು ವರ್ಣಿಸಿ ಅವನನ್ನು "ಸಗುಣ" ನೆಂದು ಪ್ರತಿಪಾದಿಸಿವೆ. ಮತ್ತೆ ಕೆಲವು ಶ್ರುತಿಗ ಳಲ್ಲಿ "ಅವನು ನಿರ್ಗುಣ, ನಿರಂಜನ" ನೆಂದು ವರ್ಣಿಸಿದೆ. ಇದರಿಂದ ದೇವರು ಸಗುಣನೇ? ನಿರ್ಗುಣನೇ? ಎನ್ನುವ ಶಂಕೆಯು ಬರುತ್ತದೆ.

"ಅಪಾಣಿಪಾದಃ ಜವನೋ ಗ್ರಹೀತಾ" ಮೊದಲಾದ ಶ್ರುತಿಗಳಲ್ಲಿ ಭಗವಂತನಿಗೆ ರೂಪ ಆಕಾರಗಳು ಯಾವುವೂ ಇಲ್ಲವೆಂದೂ ಕಾಣಿಸಲ್ಪ ಟ್ಟಿವೆ. "ಹಿರಣ್ಯವರ್ಣಃ, ಹಿರಣ್ಯಶ್ಮಶ್ರುಃ, ಹಿರಣ್ಯಕೇಶಃ" ಎಂದು ಕೆಲಶ್ರುತಿಗಳು ಭಗವಂತನಿಗೆ ಆಕಾರವನ್ನು ಹೇಳಿವೆ. ಅದರಿಂದ ಅವನು ಸಾಕಾರನೆ? ನಿರಾಕಾರನೆ?

"ಅಣೋರಣೀಯಾನ್, ಮಹತೋ ಮಹೀಯಾನ್" ಎನ್ನುವ ಶ್ರುತಿಯು ಭಗವಂತನ ವಿಷಯವಾಗಿ ಹೇಳಿದೆ. ಇದರಿಂದ ಅಣುವಿಗೂ ಅಣುವಾಗಿರತಕ್ಕವನು ಹೇಗೆ ಮಹತ್ತಿಗೂ ಮಹತ್ತಾಗಿ ಇರುವನು? ಎಂಬ ಸಂಶಯ ಉಂಟಾಗುತ್ತದೆ.

"ಅಜಾಯಮಾನೋ ಬಹುಧಾ ವಿಜಾಯತೇ" ಎನ್ನುವ ಶ್ರುತಿ ವಾಕ್ಯದಲ್ಲಿ "ಅವನಿಗೆ ಹುಟ್ಟು ಇಲ್ಲವೆಂದೂ ಅನೇಕ ವಿಧವಾಗಿ ಹುಟ್ಟುತ್ತಾನೆಂದೂ" ಹೇಳಿದೆ. ಇದರಿಂದ ದೇವರಿಗೆ "ಹುಟ್ಟು" ಇದೆಯೆ? ಇಲ್ಲವೆ?

"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ" ಮುಂತಾದ ಶ್ರುತಿಗಳಲ್ಲಿ ಭಗವಂತನು "ಅವಾಙ್ಮನಸ ಗೋಚರನೆಂದು ಹೇಳಿದೆ." ಆದರೆ "ಬ್ರಹ್ಮವಿತ್ ಆಪ್ನೋತಿ ಪರಂ" ಮುಂತಾದ ಶ್ರುತಿಗಳಲ್ಲಿ ಅವನನ್ನು ಅರಿಯಬಹುದೆಂದು ಹೇಳಿದೆ, ಇಲ್ಲೂ ವಿರೋಧವು ಎದ್ದು ಕಾಣುವುದು.

ಇನ್ನು ಭಗವಂತನು ಸಗುಣನೇ? ನಿರ್ಗುಣನೇ? ಎನ್ನುವ ವಿಚಾರವನ್ನು ಮಾಡೋಣ. "ನಿರ್ಗುಣ" ಎಂದರೆ "ಯಾವ ಗುಣವೂ ಇಲ್ಲ. ಶುದ್ಧ" ಎಂದು ಅದ್ವೈತಿಗಳು ಹೇಳುತ್ತಾರೆ. ಅವರ ಅಭಿಪ್ರಾಯದಲ್ಲಿ ಪರಬ್ರಹ್ಮ ಒಂದೇ ನಿಜವಾದ ವಸ್ತು. ಆದರೆ ಉಪನಿಷತ್ತಿನಲ್ಲಿ "ಸತ್ಯಕಾಮಃ, ಸತ್ಯಸಂಕಲ್ಪಃ" ಎಂದು ಭಗವಂತನಿಗೆ ಗುಣಗಳನ್ನು ಕೊಂಡಾಡಿದೆ. ಈ "ಇಲ್ಲ–ಉಂಟು ವ್ಯಾಜ್ಯ" ಕ್ಕೆ ಪರಿಹಾರಮಾರ್ಗ ಬಲು ಬಗೆಯಾಗಿದೆ. ಸ್ವಾಮಿ ರಾಮಾನುಜರು ಕರುಣಿಸಿರುವ ಈ ಸಾಮರಸ್ಯ ಅತ್ಯಾಶ್ಚರ್ಯಕರವಾದುದು. ಭಗವಂತನಿಗೆ ಗುಣಗಳುಂಟು. ಇಲ್ಲವೆನ್ನುವುದು ಹೇಯಗುಣಗಳನ್ನು. ಅಂತೆಯೇ ದೇವರು "ಅಖಿಲಹೇಯ ಪ್ರತ್ಯನೀಕ, ಹಾಗೂ ಸಕಲಕಲ್ಯಾಣಗುಣಾತ್ಮಕ." ಈ ಸಗುಣ ನಿರ್ಗುಣ ಶ್ರುತಿಗಳ ಸಾಮಂಜಸ್ಯದ ಬಗ್ಗೆ ಶ್ರುತಪ್ರಕಾಶಿಕೆಯಲ್ಲಿ ಅನೇಕ ವಿವರಣಗಳು ಇವೆ. ಕೆಲವನ್ನು ಮಾತ್ರ ಹೇಳುತ್ತೇನೆ.

ರೋಜ ಅಥವಾ ಮಲ್ಲಿಗೆ ಹೂ ಇದೆಯೆನ್ನಿ. ರೋಜ ಹೂವಿನಲ್ಲಿ 'ವಾಸನೆ' ಎಂಬ ಗುಣವಿದೆ. ಆ ಹೂವನ್ನು ತೀರ್ಥಕ್ಕೆ ಹಾಕಿದಾಗ ಆ ವಾಸನೆ ತೀರ್ಥದಲ್ಲೂ ಎದ್ದು ಕಾಣುವುದು. ಆದರೆ ರೋಜ ಹೂವಿಗೆ ವಾಸನೆ ಸ್ವಾಭಾವಿಕ; ತೀರ್ಥದ ವಾಸನೆ ಔಪಾಧಿಕ. ಹೂವಿನ ಸಂಬಂಧದಿಂದ ನೀರಿನಲ್ಲಿ ವಾಸನೆ ತೋರಿಬರುವಂತೆ "ಅವಿದ್ಯೆ" ಯ ಸಂಬಂಧ

ದಿಂದ ದೇವರಲ್ಲಿ ಗುಣಗಳು ತೋರುತ್ತವೆ. ಆದರೆ ಅವು ಕಲ್ಪಿತಗಳು. ಇದನ್ನೇ "ವ್ಯಾವಹಾರಿಕ ದೆಸೆ" ಎನ್ನುವುದು. ಈ ನಿರ್ವಾಹ ಅದ್ವೈತಿಗಳದು. ಅವರು ರಾಮಾಯಣ, ಭಾಗವತ ಮುಂತಾದ ಸಂದರ್ಭಗಳಲ್ಲಿ ದೇವರನ್ನು ಸಗುಣನೆಂದೇ ಹೇಳುತ್ತಾರೆ. ಆದರೆ ಪಾರಮಾರ್ಥಿಕ ದೆಸೆಯಲ್ಲಿ ಆತ ನಿರ್ಗುಣ, ಸಗುಣಬ್ರಹ್ಮನ ಗುಣಗಳು ಔಪಾಧಿಕ.

"ಪುಷ್ಪಕ್ಕೆ ಪರಿಮಳದಂತೆ ದೇವರಿಗೆ ಗುಣಗಳು ಸ್ವಾಭಾವಿಕವೇ ಹೊರತು ನೀರಿಗಿರುವ ಪರಿಮಳದಂತಲ್ಲ" ಎಂದು ಶ್ರೀ ರಾಮಾನುಜಾಚಾರ್ಯರು ಅಭಿಪ್ರಾಯ ಪಡುತ್ತಾರೆಂದು ಶ್ರುತಪ್ರಕಾಶಿಕೆಯಲ್ಲಿ ಹೇಳಿದೆ. ಉಪನಿಷತ್ತುಗಳನ್ನು ಆಮೂಲಾಗ್ರವಾಗಿ ನೋಡಿದರೂ ಇಂಥ ಪದಾರ್ಥ ಸಂಬಂಧದಿಂದ ದೇವರಿಗೆ ಗುಣಗಳೆಂದು ಎಲ್ಲೂ ಹೇಳಿಲ್ಲ. "ಯಃ ಸರ್ವಜ್ಞಃ ಸರ್ವವಿತ್" ಎಂದು ಉಪಾಧಿ ನಿರ್ದೇಶವಿಲ್ಲದೆಯೇ ಸರ್ವಜ್ಞತ್ವಾದಿಗುಣಗಳನ್ನು ಹೇಳಿರುವುದಾಗಿ ನಾವು ಊಹಿಸಬಹುದು. ಊಹಿಸುವುದೇನು? "ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ" ಎಂದು ಶ್ರವಣವೇ ಇದೆ!

ಈ ನಿರ್ಗುಣ–ಸಗುಣ ವಿವಾದಕ್ಕೆ ಬೇರೆ ಪರಿಹಾರವೂ ಉಂಟು. "ನಿರ್ಗುಣ" ಎನ್ನುವಾಗ ಗುಣಗಳೆಂದರೆ ಸತ್ವ, ರಜಸ್ಸು, ತಮಸ್ಸು ಎಂಬ ಪ್ರಾಕೃತ ಹೇಯಗುಣಗಳು ವಿವಕ್ಷಿತ. ಇಂತಹ ಸತ್ವಾದಿ ತ್ರಿಗುಣಾತ್ಮಕವಾದ ಹೇಯಗುಣಗಳು ಭಗವಂತನಿಗೆ ಇಲ್ಲವೆಂದು ಹೇಳಿದರೆ ವಿರೋಧವೆಲ್ಲಿಂದ ಬಂತು?

"ಅಣೋರಣೀಯಾನ್ ಮಹತೋ ಮಹೀಯಾನ್" ಎಂಬ ಶ್ರುತಿವಾಕ್ಯಕ್ಕೆ ಏನು ಅಭಿಪ್ರಾಯವೆನ್ನುವುದನ್ನು ಈಗ ನೋಡೋಣ. ಹಿರಿಮೆ, ಕಿರಿಮೆ, ಈ ಪರಸ್ಪರ ವಿರುದ್ಧ ಧರ್ಮಗಳು ಒಂದೆಡೆ ಹೇಗಿರುವುವು? ಇಲ್ಲಿ ದೇವರಿಗೆ "ಮಹತ್ವ" ಎಂಬುದು "ಬೃಹತ್ವ ಬೃಂಹಣತ್ವ" ರೂಪವಾದುದು. ತಾನೂ ಸ್ವರೂಪತಃ ಗುಣತಃ ದೊಡ್ಡವನಾಗಿದ್ದು ಇತರ ಚಿತ್, ಅಚಿತ್ ಪದಾರ್ಥಗಳನ್ನೂ ಕ್ರಮವಾಗಿ ಗುಣತಃ



ಶ್ರೀ ಯೋಗಾನರಸಿಂಹಸ್ವಾಮಿ
ಮಲ್ಕೆ, ತಿರುನಾರಾಯಣಪುರಂ.

ಮತ್ತು ಸ್ವರೂಪತಃ ದೊಡ್ಡವುಗಳನ್ನಾಗಿ ಆಗಿಸುವವನೇ "ಬ್ರಹ್ಮ".
ಎಲ್ಲೆಲ್ಲೂ ದೇವರಿದ್ದಾನೆಂಬುದೇ "ಸ್ವರೂಪ ಬೃಹತ್ತ್ವ".

ಇದಕ್ಕೆ ಒಂದು ಪ್ರಮಾಣವಿದೆ. "ಅಗ್ನೌ ತಿಷ್ಠತಿ ವಿಪ್ರಾಣಾಂ ಹೃದಿತಿಷ್ಠತಿ ಯೋಗಿನಾಮ್ | ಪ್ರತಿಮಾಸ್ವಪ್ರಬುದ್ಧಾನಾಂ ಸರ್ವತ್ರ ಸಮದರ್ಶಿನಾಮ್ ||" ಇಲ್ಲಿಗೆ ಬೇಕಾದುದು ಕೊನೆಯ ಪಾದ ಒಂದೇ. ಸಮದರ್ಶಿಗಳಾದವರಿಗೆ ಆತ ಎಲ್ಲದರಲ್ಲಿಯೂ ತೋರುತ್ತಾನೆ. ಆದರೆ "ಪ್ರತಿಮಾಸ್ವಪ್ರಬುದ್ಧಾನಾಂ" ಜ್ಞಾನವಿಲ್ಲದವರಿಗೆ ಪ್ರತಿಮೆಗಳಲ್ಲಿ ದೇವರು ತೋರಿಕೊಳ್ಳುತ್ತಾನೆ, ಎನ್ನುವ ಮೂರನೆಯ ಪಾದವು ನಮಗೆ ಪ್ರಕೃತದಲ್ಲಿ ಅವಶ್ಯವಿಲ್ಲದಿದ್ದರೂ ಅದರಲ್ಲಿ ನಮ್ಮ ಸಂಪ್ರದಾಯಕ್ಕೆ ವಿರುದ್ಧವಾದ ಅರ್ಥ ತೋರಿಬರುವುದರಿಂದ, ಆ ವಿಚಾರವಾಗಿ ಸ್ವಲ್ಪ ಹೇಳಬೇಕಾದ ಅವಶ್ಯಕತೆ ಇದೆ. ಇದು ನಮ್ಮ ಸಂಪ್ರದಾಯಕ್ಕೇ ಕೊಡಲಿಪೆಟ್ಟಿನಂತಿದೆ. ಯಾಮುನಾಚಾರ್ಯರು "ಅಪ್ರಬುದ್ಧಾನಾಮಪಿ" ಅಜ್ಞಾನಿಗಳಿಗೂ ಕೂಡ ಎಂದು ಇಲ್ಲಿ ಅರ್ಥಮಾಡುತ್ತಾರೆ. "ಅಜ್ಞಾನಿಗಳಿಗೇ ಪ್ರತಿಮೆಗಳಲ್ಲಿ ದೇವರು ಕಾಣುವಾಗ, ಜ್ಞಾನಿಗಳಿಗೆ ಹೇಳಬೇಕೆ?" ಎಂಬ ಭಾವ.

ಮುಂದಿನ ಪಾದವಾದ "ಸರ್ವತ್ರ ಸಮದರ್ಶಿನಾಂ", ನೋಡಿ ಎಲ್ಲದರಲ್ಲಿಯೂ ಇರುವವನು ಪ್ರತಿಮೆಯಲ್ಲಿ ಇಲ್ಲವೆ? ಹೀಗೆ "ಅಪಿ" ಎಂಬ ಅವ್ಯಯವನ್ನು ಸೇರಿಸುವುದಕ್ಕೆ ಏನು ಆಧಾರವೆನ್ನುವಿರಾ? ಶ್ರೀ ರಾಮಚಂದ್ರನು ಸೀತಾಸಮೇತನಾಗಿ ಅರ್ಚಾರೂಪಿಯಾದ ಶ್ರೀ ರಂಗನಾಥನ ದರ್ಶನ ಮಾಡುವುದಕ್ಕೆ ಹೋದಾಗ "ಸಹಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್" ಎಂದು ವಾಲ್ಮೀಕಿಯು ವರ್ಣಿಸಿದ್ದಾನೆ. ಬಿಟ್ಟ ಕಣ್ಣನ್ನು ಸೀತೆ ಮುಚ್ಚಲಿಲ್ಲ! ಎಂದು ರಾಮಾಯಣದಲ್ಲಿ ಹೇಳಿರುವುದು ಸುಳ್ಳೆ? ಅಥವಾ ಸೀತಾ ರಾಮರು ಅಪ್ರಬುದ್ಧರೆ?

ಈಗ "ಸರ್ವತ್ರ ಸಮದರ್ಶಿನಾಂ" ಎನ್ನುವ ವಿಚಾರವನ್ನು ಮಾಡುವ ಉದ್ಧವ ಗೀತೆಯಲ್ಲಿ "ನಿಹೀನಜಂತುವಾದ ನಾಯಿಗೂ ನಮಸ್ಕಾರ ಮಾಡುವುದು ಅದರಲ್ಲೂ ದೇವರಿರುವುದರಿಂದ" ಎಂದು ಹೇಳಿದೆ.

*'ಅಕ್ಕಪಕ್ಕದವರು ಹಾಸ್ಯಮಾಡಿದರೂ ಪರವಾಗಿಲ್ಲ.' ಎಂದು ಪರಮಾತ್ಮನ ಅಸ್ತಿತ್ವವನ್ನು ಎಲ್ಲೆಡೆಯಲ್ಲೂ ಹೇಳಿದೆ. ಬ್ರಹ್ಮ ಇಲ್ಲದ ಜಾಗವೇ ಇಲ್ಲ. ಈ "ತ್ವಯ್ಯಸ್ತಿ ಮಯ್ಯಸ್ತಿ" ತತ್ವನಿಷ್ಠ ಪ್ರಹ್ಲಾದ ತೋರಿದ್ದಾನೆ. ಈ ಸರ್ವವ್ಯಾಪಿತ್ವವನ್ನೇ "ಸ್ವರೂಪತಃ ಬೃಹತ್ವ" ವೆಂದು ದೇವರಿಗೆ ಕರೆಯುವುದು.

"ಗುಣತಃ ಬೃಹತ್ವ" ಎಂದರೆ ಎಲ್ಲಾ ವಿಚಾರವನ್ನೂ ಆಯಾಯಾ ಎಲ್ಲ ಪ್ರಕಾರಗಳೊಡನೆ ಒಂದೇ ಸಲಕ್ಕೆ ಪ್ರತ್ಯಕ್ಷೀಕರಿಸುವ ಜ್ಞಾನ. ಹೀಗೆ ಒಂದು ಬಗೆಯಾಗಿ "ಗುಣಬೃಹತ್ವ" ವನ್ನು ನೋಡಲಾಯಿತು. ಇದನ್ನು ಬೇರೆ ರೀತಿಯಾಗಿಯೂ ಅನುಭವಿಸಬಹುದು. ಈ ದುರ್ಭಿಕ್ಷ ಕಾಲದಲ್ಲಿ ಅಕ್ಕಿಯೊಂದನ್ನು ಎಷ್ಟು ಪ್ರಯಾಸದಿಂದ ತಂದು, ಒಂದಷ್ಟು ಅನ್ನಮಾಡುವುದಕ್ಕೇ ಅದೆಷ್ಟು ಆಯಾಸವೂ, ಹೊತ್ತೂ ಹಿಡಿಸುತ್ತದೆ? ಹೀಗಿರುವಾಗ ಕೋಟಿ ಕೋಟಿ ಬ್ರಹ್ಮಾಂಡಗಳನ್ನು ಏಕಕಾಲದಲ್ಲಿ ಸೃಷ್ಟಿಸುವ ಭಗವಂತನ ಸಂಕಲ್ಪ ಮಹಿಮೆ ಎಂಥದಿರಬೇಕು.

ಇನ್ನು "ಬೃಂಹಣತ್ವ" ದ ವಿಚಾರ ಮಾಡೋಣ. ಜೇಡಿಮಣ್ಣು ತಂದು ಕೊಳೆಯಿಸಿ ಚಕ್ರದಂಡಾದಿಗಳಿಂದ ಕುಂಬಾರನು ಪ್ರಯಾಸದಿಂದ ಮಡಕೆಯನ್ನು ನಿರ್ಮಿಸುವಾಗ ಕೊಂಚ ಅಜಾಗರೂಕನಾದರೂ ಬಿರುಕು ಬಿಡುತ್ತದೆ. ಈ ಅಖಿಲ ವಿಶ್ವವನ್ನೇ ಆಯಾಸಲೇಶವೂ ಇಲ್ಲದೆ ಯಾವ ಕುಂದು ಕೊರತೆಯೂ ಇಲ್ಲದಂತೆ ನಿರ್ಮಿಸುವ ಈ "ಮಹಾಕುಲಾಲ" ನ ಪ್ರಭಾವ ಎಷ್ಟು ಅಪಾರವಾದುದು! ಹೀಗೆ ಸೂಕ್ಷ್ಮಪ್ರಕೃತಿಗೆ ಮಹತ್ವ ಉಂಟುಮಾಡುವುದೇ "ಬೃಂಹಣತ್ವ" ಎಂಬುದು.

ಪ್ರಕೃತಿಗೆ "ಹಿರಿಮೆ" ಯನ್ನುಂಟುಮಾಡುವವನು ಭಗವಂತ, ಎಂಬ ಬೃಂಹಣತ್ವವನ್ನು ವಿವರಿಸಿದ್ದಾಯಿತು. ಇನ್ನು ಅಣುಸ್ವರೂಪ

---

* ವಿಸೃಜ್ಯ ಸ್ಮಯಮಾನಾನ್ ಸ್ವಾನ್ ದೃಶಂ ವ್ರೀಡಾಂಚ ದೈಹಿಕೀಂ |
ಪ್ರಣಮೇದ್ದಂಡವದ್ ಭೂಮಾ ಆಶ್ವಚಾಂಡಾಲ ಗೋಖರಂ ||

ನಾದ ಜೀವಾತ್ಮನಿಗೆ " ಹಿರಿಮೆ " ಉಂಟುಮಾಡತಕ್ಕ ಬೃಂಹಣತ್ವವನ್ನು ಈಗ ವಿವರಿಸಬೇಕಾಗಿದೆ. ಜೀವಾತ್ಮ ಸ್ವರೂಪಕ್ಕೆ ಮಹತ್ವವಿಲ್ಲ. ಅವನು ಅಣುಸ್ವರೂಪ. ಅವನ ಜ್ಞಾನವು " ವಿಭು " ವಾಗಬಹುದು. ಈಗ ಸಾಧಾರಣವಾಗಿ ಜೀವಾತ್ಮನನ್ನೇ ಜ್ಞಾನಸ್ವರೂಪನೆಂದು ಹೇಳುವುದರಿಂದ ಜೀವಾತ್ಮನಿಗೂ ಅವನ ಜ್ಞಾನಕ್ಕೂ ನಾವು ಮಾಡಿರುವ ವ್ಯತ್ಯಾಸಕ್ಕೆ ಆಧಾರವೇನೆಂದು ಕೇಳಬಹುದು. ಸೂರ್ಯನಲ್ಲೂ ಅವನ ಪ್ರಭೆಯಲ್ಲೂ ಹೇಗೆ 'ತೇಜಸ್ಸು' ಧರ್ಮಿಯಾಗಿಯೂ ಧರ್ಮವಾಗಿಯೂ ಇರುವುದೋ, ಹಾಗೆ ಆತ್ಮನನ್ನು " ಧರ್ಮಿ ಭೂತವಾದ ಜ್ಞಾನ " ವೆಂದೂ, ಆ ಆತ್ಮನಿಗೆ ಬೇರೆ " ಧರ್ಮಭೂತ " ವಾದ ಜ್ಞಾನವಿರುವುದೆಂದೂ ನಾವು ತಿಳಿದುಕೊಳ್ಳಬೇಕು. ಶ್ರುತಿಗಳೂ ಹೀಗೆಯೇ ಆತ್ಮಸ್ವರೂಪವನ್ನು ಪ್ರತಿಪಾದಿಸಿವೆ. " ವಿಜ್ಞಾನಂ ಯಜ್ಞಂ ತನುತೇ " ಎನ್ನುವ ವಾಕ್ಯಗಳಲ್ಲಿ ಧರ್ಮಿಭೂತವಾದ ಜ್ಞಾನವನ್ನೂ " ವಿಜ್ಞಾತಾರಂ " ಎಂದು ಆತ್ಮನನ್ನು ವರ್ಣಿಸುವ ವಾಕ್ಯಗಳಲ್ಲಿ ಧರ್ಮಭೂತವಾದ ಜ್ಞಾನವನ್ನೂ ಹೇಳಿದೆ. ಬದ್ಧದಶೆಯಲ್ಲಿ ಜೀವಾತ್ಮನ ಧರ್ಮಭೂತ ಜ್ಞಾನವು ಸಂಕುಚಿತವಾಗಿರುವುದೆಂದೂ, ಮೋಕ್ಷ ದಶೆಯಲ್ಲಿ ವಿಕಸಿತವಾಗಿರುವುದೆಂದೂ ತಿಳಿದುಕೊಳ್ಳಬೇಕು. ಜೀವಾತ್ಮನ ಧರ್ಮ ಭೂತ ಜ್ಞಾನಕ್ಕೆ ಸಂಸಾರ ದಶೆಯಲ್ಲಿರುವ " ಸಂಕೋಚ " ವನ್ನು ತೊಲಗಿಸಿ ಮೋಕ್ಷ ದಶೆಯಲ್ಲಿ " ಜ್ಞಾನವಿಕಾಸ " ಕರುಣಿಸುವುದನ್ನೇ " ಬೃಂಹಣತ್ವ" ಎಂದು ಕರೆಯುವುದು. ದೇವರು ದೊಡ್ಡವನು ಎಂದಾಗ ಈ ಅವನ ಸ್ವರೂಪ ಬೃಹತ್ವ, ಜ್ಞಾನ ಬೃಹತ್ವ, ಚೇತನಾಚೇತನಗಳನ್ನು, ಕ್ರಮವಾಗಿ ಸ್ವರೂಪತಃ ಮತ್ತು ಜ್ಞಾನತಃ ಬೃಹತ್ತಾಗಿ ಮಾಡಿಸುವ " ಬೃಂಹಣತ್ವ " ಇವಿಷ್ಟೂ ತೋರಬೇಕು ನೋಡಿ !

" ಮಹತೋ ಮಹೀಯಾನ್ " ಎನ್ನುವುದರಲ್ಲಿ ಮೆಟ್ಟಲು ಮೆಟ್ಟಲುಗಳಾಗಿ ಹಿರಿಮೆಯಿರುವುದೆಂದೂ, ಎಲ್ಲಕ್ಕಿಂತಲೂ ಉನ್ನತ ಸ್ಥಾನದಲ್ಲಿ ಭಗವಂತನು ಇರುವನೆಂದೂ ಒಂದು ಭಾವನೆ ತೋರುವುದು. ಋಷಿಗಳಲ್ಲಿ ನಮಗಿಂತಲೂ " ಜ್ಞಾನಬೃಹತ್ವ " ವಿದೆ. ಆದುದರಿಂದಲೇ ವ್ಯಾಸ ವಾಲ್ಮೀಕಿಗಳನ್ನು " ಭಗವಾನ್ " ಎನ್ನುವುದು. ನಮಗವರು ದೊಡ್ಡ

ವರಾದರೂ ಅವರಿಗೂ ದೇವರು ದೊಡ್ಡವನು. ದೇವರೆಂಬ ಪರ್ವತದ ಮುಂದೆ ಅವರೂ ಪರಮಾಣುಗಳೇ! ಆದುದರಿಂದಲೇ ಭಗವಚ್ಛಬ್ದವು ನಾರಾಯಣನಿಗೇ ಮುಖ್ಯವಾಗಿ ಅನ್ವಯಿಸುವುದೆಂದು ಪರಾಶರರು ಹೇಳಿದ್ದಾರೆ.

ಇಂತು "ಮಹತೋ ಮಹೀಯಾನ್" ಆದವನು "ಅಣೋರಣೀಯಾನ್" ಅಣುವಾದ ಜೀವನಲ್ಲಿಯೂ ಅಂತರ್ಯಾಮಿಯಾಗಿರುತ್ತಾನೆ! ಇದೀಗ ಆತನ ಅಘಟಿತ ಘಟನಾ ಸಾಮರ್ಥ್ಯ! ಇದರಿಂದಲೇ ನಿರ್ವಹಿಸುವ ಅನೇಕ ವಿರುದ್ಧ ಸ್ವಭಾವಗಳನ್ನು ಭಗವಂತನಲ್ಲಿ ಕಾಣಬಹುದು. ಒಂದೇ ಕಾಲದಲ್ಲಿ ಹೆಚ್ಚಾದ ಕೃಪೆ, ಅದೇ ಕ್ಷಣದಲ್ಲಿ ಅಷ್ಟೊ ಅಷ್ಟು ಕೋಪ ಎಲ್ಲಾದರೂ ನಾವು ಕಂಡಿದ್ದೇವೆಯೆ? ಈ ಕೃಪಾಕೋಪಗಳು ಬೇರೆಬೇರೆ ವಿರುದ್ಧವಿಕಾರಗಳು. ಈ ಎರಡಕ್ಕೂ ಸಹಭಾವವನ್ನು ಭಕ್ತ ಪ್ರಹ್ಲಾದನಲ್ಲಿ ಕೃಪೆಯನ್ನೂ ಹಿರಣ್ಯಕಶಿಪುವಿನಲ್ಲಿ ರೋಷವನ್ನೂ ಏಕಕಾಲದಲ್ಲೇ ಪ್ರತ್ಯಕ್ಷಪಡಿಸಿದ ನರಸಿಂಹಾವತಾರದಲ್ಲಿ ನಾವು ಕಾಣುತ್ತೇವೆ. ಸಿಂಹದ ಹತ್ತಿರತಾನೇ ಇದನ್ನು ನೋಡಬೇಕು! ಆನೆಯ ಕುಂಭ ಸ್ಥಳಕ್ಕೆ ರೋಷದಿಂದ ಹಾರುವಾಗ ತನ್ನ ಮರಿಗೆ ಹೆಣ್ಣು ಸಿಂಹವು ನೇಹದಿಂದ ಮೊಲೆಯೂಡಿಸುತ್ತಲೇ ಇರುತ್ತದೆ! ಎಂದು ಶ್ರೀಪರಾಶರ ಭಟ್ಟರು ಸೊಗಸಾದ ಉದಾಹರಣೆಯನ್ನು ಕೊಟ್ಟಿದ್ದಾರೆ.

ಪ್ರಳಯಾಪತ್ತಿನಲ್ಲಿ ಆಗ ತಾನೆ ಮೊಗಳು ಬಿರಿದ ಆಲದೆಲೆಯ ಮೇಲೆ ಅಖಿಲಾಂಡಕೋಟಿ ಬ್ರಹ್ಮಾಂಡಗಳನ್ನೂ ಹೊಟ್ಟೆಯಲ್ಲಿ ಹೊತ್ತು ಸ್ವಾಮಿ ಮಲಗಿರಬೇಕಾದರೆ ಅದೆಂಥ ವಿಚಿತ್ರ! "ಪವನಾನ ಆಲಂ ತಳಿರ್" ಎಂದು ನಂಬಿಳ್ಳೈಗಳು ಹೇಳಿ "ಉದ್ಭವನ್–ಪವನ್" ಈ ತದ್ಭವ ಶಬ್ದವನ್ನು ತಮಿಳಿನಲ್ಲಿ ಬಳಸಿದ್ದಾರೆ.

ಚಪಲಚಿತ್ತರಾದ ಕಪಿಗಳ ಗಡಣ ಕಟ್ಟಿಕೊಂಡು, ಅವುಗಳನ್ನು ಹತೋಟಿಯಲ್ಲಿಟ್ಟು ಸಮುದ್ರಕ್ಕೆ ಸೇತುವೆ ಕಟ್ಟಿಸಿದ್ದು ತಾನೆ ಸಾಮಾನ್ಯವೇ? ಈ ಅಘಟಿತ ಘಟನಾ ಸಾಮರ್ಥ್ಯವನ್ನೇ "ಪರಾಸ್ಯ ಶಕ್ತಿಃ ವಿವಿಧೈವಶ್ರೂಯತೇ" ಮುಂತಾದ ವಾಕ್ಯಗಳು ಕಂಠತಃ ಹೇಳುವುವು.

ವಾಕ್ಕಿಗೆ ಅತೀತ ಆತನೆಂದಾಗ ದೇವರನ್ನು ಇಷ್ಟೇ ಎಂದು ಹೇಳ ಲಾಗದೆಂಬುದೇ ಭಾವ. ಇದನ್ನು ನಾವು ಶಾಸ್ತ್ರದಿಂದಲೇ ಅರಿಯಬೇಕ ಲ್ಲದೆ ತರ್ಕದಿಂದ ಅಲ್ಲ. ಶಾಸ್ತ್ರಕ್ಕೆ ಅನುಗುಣವಾಗಿ ನಾವು ಯುಕ್ತಿ ಹೇಳುವವರೇ ಹೊರತು ನಮ್ಮ ಯುಕ್ತಿಯ ನೇರಕ್ಕೆ ಶಾಸ್ತ್ರವನ್ನು ತರು ವವರಲ್ಲ. "ಯಸ್ತರ್ಕೇಣಾಃನುಸಂಧತ್ತೇ ವೇದಶಾಸ್ತ್ರಾವಿರೋಧಿನಾ."

ಇನ್ನು ಮೇಲೆ ಜನ್ಮವುಂಟು, ಜನ್ಮವಿಲ್ಲ, ಸಾಕಾರ, ನಿರಾಕಾರ ಎನ್ನುವುದನ್ನು ವಿಚಾರಮಾಡಲಾಗುತ್ತದೆ. ನಮ್ಮಂತೆ ಕರ್ಮದಿಂದ ಹೇಯಜನ್ಮವಿಲ್ಲದ ಭಗವಂತನು ಅಪ್ರಾಕೃತವಾದ ಅವತಾರ ತಾಳು ತ್ತಾನೆ. "ಅಜಾಯಮಾನೋ ಬಹುಧಾ ವಿಜಾಯತೇ" ಎನ್ನುವ ವಾಕ್ಯಕ್ಕೆ ಉಪಬೃಂಹಣ ಮಾಡಿರುವ ಋಷಿಗಳ ಮಾತಿರಲಿ. ಸಾಕ್ಷಾತ್ ಭಗವಂತನೇ ಗೀತೆಯಲ್ಲಿ ಹೇಳಿದ್ದಾನೆ. "ನಿನ್ನನ್ನು ಹುರಿದುಂಬಿಸುವು ದಕ್ಕಾಗಿ ನಾನು ಈ ಕರ್ಮಯೋಗ ಹೇಳಲಿಲ್ಲ. ನಾನೀ ಯೋಗವನ್ನು ಬಹಳ ಹಿಂದೆಯೇ ವಿವಸ್ವಂತನಿಗೆ ಹೇಳಿದೆ" ಎನ್ನುತ್ತಾನೆ ಕೃಷ್ಣ. ಆಗ ಅರ್ಜುನ "ಕಥಮೇತದ್ವಿಜಾನೀಯಾಂ ತ್ವಮಾದೌ ಪ್ರೋಕ್ತವಾ ನಿತಿ?" ಎಂದು ಕೇಳುತ್ತಾನೆ. ಇಲ್ಲಿ "ಕಥಂ" ಎನ್ನುವುದಕ್ಕೆ ರಾಮಾ ನುಜರು ಹೇಳುವ ಅರ್ಥ ಅದ್ಭುತವಾಗಿದೆ. ಶಂಕರಾಚಾರ್ಯರೇ ಆಗಲಿ, ಆನಂದತೀರ್ಥ ಸ್ವಾಮಿಗಳೇ ಆಗಲಿ ಇಷ್ಟು ವಿವರವಾಗಿ ಅರ್ಥ ಹೇಳಿಲ್ಲ. ಉತ್ತರ ಹೇಳುವ ಕೃಷ್ಣನಿಗೆ ಪ್ರಾಶ್ನಿಕನಾದ ಅರ್ಜುನನ ಭಾವ ಗೊತ್ತು. ಇಲ್ಲಿ ಶ್ರೀ ಕೃಷ್ಣನು ಉತ್ತರ ಹೇಳುವ ಶ್ಲೋಕಗಳಿಂದ ಪ್ರಶ್ನೆಯ ಅರ್ಥ ವನ್ನು ರಾಮಾನುಜರು ಒಡೆದು ಹೇಳಿದ್ದಾರೆ.

"ಕಥಂ"—ಹೇಗೆ? ಎಂಬ ಒಂದು ಚಿಕ್ಕ ಪ್ರಶ್ನೆಗೆ "ಬಹೂನಿ ಮೇ ವ್ಯತೀತಾನಿ" "ಅಜೋಽಪಿ ಸನ್ನವ್ಯಯಾತ್ಮಾ" "ಯದಾ ಯದಾ ಹಿ ಧರ್ಮಸ್ಯ" "ಪರಿತ್ರಾಣಾಯ ಸಾಧೂನಾಂ" "ಜನ್ಮ ಕರ್ಮಚ ಮೇ ದಿವ್ಯಂ" ಎಂಬ ಶ್ಲೋಕಗಳಿಂದ ವಿಸ್ತಾರವಾಗಿ ಕೃಷ್ಣ ಉತ್ತರ ಹೇಳುತ್ತಾನೆ. ಅರ್ಜುನನ ಸಂದೇಹ ಹೀಗೆ; "ಶರೀರ ಸಂಬಂಧ ಇರು ವವನಿಗೆ ಪ್ರಿಯ—ಅಪ್ರಿಯಗಳು ಉಂಟು. ಶರೀರ ಸಂಬಂಧವಿಲ್ಲದವ

ನಿಗೆ ಸುಖದುಃಖಗಳಿಲ್ಲ." "ನಹವೈಸಶರೀರಸ್ಯ ಸತಃ ಪ್ರಿಯಾಪ್ರಿಯಯೋಃ ಅಪಹತಿರಸ್ತಿ" ಎಂದು ಉಪನಿಷತ್ತಿನಲ್ಲಿ ಹೇಳಿದೆ. ಅರ್ಜುನನು ಸಾಮಾನ್ಯನಲ್ಲ. ವೇದಾಧ್ಯಯನ ಮಾಡಿದವನು! ಅವನಿಗೆ ಸಂದೇಹ ಬರಬೇಕಾದರೆ "ಕೃಷ್ಣ, ಈ ನಿನ್ನ ಶರೀರ ಇಂದ್ರಜಾಲದಂತೆ ಮಿಥ್ಯೆಯೇ? ಅಥವಾ ಸತ್ಯವೇ? ಮಿಥ್ಯೆಯಾದರೆ ಮಾತಿಲ್ಲ. ಸತ್ಯವೆಂದು ಹೇಳುವುದಾದರೆ ಈ ಶರೀರ ಗ್ರಹಣಕ್ಕೆ ಏನು ಕಾರಣ? ಇದಕ್ಕೆ ಫಲವೇನು? ಯಾವ ಯಾವಾಗ ನೀನು ಶರೀರ ಧರಿಸುವಿ?" ಇದೀಗ ಅರ್ಜುನನ ಪ್ರಶ್ನೆಯ ಭಾವ.

ಈ ಪ್ರಶ್ನೆಗೆ ಉತ್ತರವಾಗಿ ಭಗವಂತನು ಹೀಗೆ ಹೇಳುತ್ತಾನೆ. "ಬಹೂನಿಮೇ ವ್ಯತೀತಾನಿ" ಎನ್ನುವ ಶ್ಲೋಕದಲ್ಲಿ ಅರ್ಜುನನ ಜನ್ಮಗಳನ್ನು ಉದಾಹರಣೆಯಾಗಿ ತೋರಿಸಿ, ತನ್ನ ಜನ್ಮಗಳನ್ನು ಕುರಿತು ಹೇಳಿರುವುದರಿಂದ ತನ್ನ ಜನ್ಮಗಳು ಸತ್ಯವೆನ್ನುವುದನ್ನು ತೋರಿಸಿರುತ್ತಾನೆ. "ಅಜೋಪಿಸನ್ನವ್ಯಯಾತ್ಮಾ" ಎನ್ನುವ ಶ್ಲೋಕದಲ್ಲಿ ತನ್ನ ಐಶ್ವರ್ಯ ಸ್ವಭಾವವನ್ನು ಬಿಡದೆಯೇ ಅವತಾರವೆತ್ತುತ್ತಾನೆ ಎನ್ನುವುದನ್ನು ತೋರಿಸಿದೆ. "ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ" "ನನ್ನ ಪ್ರಕೃತಿ ಪ್ರಾಕೃತವಲ್ಲ; ದಿವ್ಯ, ಅಪ್ರಾಕೃತ" ಎಂದು ಹೇಳುತ್ತಾನೆ. "ಮಾಯಾ" ಎಂದರೆ "ಮಾಯಾ ವಯುನಂ ಜ್ಞಾನಂ" ಎಂಬ ನಿಘಂಟು ಉಕ್ತಿಯಂತೆ "ಜ್ಞಾನ–ಇಚ್ಛೆ" ಎಂದರ್ಥ. "ಮಾಯಯಾ ಸತತಂ ವೇತ್ತಿ ಪ್ರಾಣಿನಾಂಚ ಶುಭಾಶುಭಂ" ಇಲ್ಲೂ ಮಾಯೆಯೆಂದರೆ ಜ್ಞಾನವೆಂಬುದು ಸ್ಪಷ್ಟವಾಗಿದೆ. ಅದರಂತೆ "ಆತ್ಮಮಾಯಯಾ" ಎನ್ನುವುದರಲ್ಲೂ 'ಮಾಯಾ' ಎಂದರೆ ಜ್ಞಾನ ಇಚ್ಛೆ ಎಂದರ್ಥ.

"ಸಂಭವಾಮ್ಯಾತ್ಮಮಾಯಯಾ" ಎನ್ನುವುದರ ವಿವರಣೆ ರಾಮಾಯಣದಲ್ಲಿದೆ. "ತಿರುವಾಯ್‌ಮೊಳಿಯಲ್ಲಿ ಕಣ್ಣುನುಣ್‌ಶಿಱುತ್ತಾಂಬು" "ತಿರುವಾಯ್‌ಮೊಳಿಯಲ್ಲಿ ಪಲ್ಲಾಂಡು" ಎಂದು ದೊಡ್ಡವರು ಹೇಳಿದರೆ "ಭಾಗವತ ಶೇಷತ್ವ" "ಮಂಗಳಾಸನ"

ಎಂದು ವಿವಕ್ಷೆಮಾಡಿಕೊಳ್ಳಬೇಕು. ಹೀಗೆ ರಾಮಾಯಣದಲ್ಲಿ ಗೀತೆ ಉಂಟು! ಅಂದರೆ ರಾಮಾಯಣದಲ್ಲಿ ಗೀತೆಯ ಅರ್ಥ ಇದೆಯೆಂದು ಭಾವ. ನಾವು ಇವೆರಡು ಗ್ರಂಥಗಳ ಕಾಲದ ಗೊಡವೆಗೆ ಹೋಗುವವ ರಲ್ಲ ದಶರಥನನ್ನು ಕುರಿತು ರಾಮಾಯಣದಲ್ಲಿ ಹೀಗೆ ಹೇಳಿದೆ "ಸುತಾರ್ಥಂ ತಪ್ಯಮಾನಸ್ಯ ನಾಸೀತ್ ವಂಶಕರಃ ಸುತಃ" "ತಪ್ಯಮಾನಸ್ಯ" ಎಂದರೆ ಪರಿತಾಪ ಪಡುತ್ತಿರುವವನಿಗೆ ಎಂದು ಸ್ಥೂಲವಾದ ಅರ್ಥ. 'ಗೋವಿಂ ದರಾಜೀಯ' ದಲ್ಲಿ "ತಪಶ್ಚರತಃ" ಎಂದು ಅರ್ಥಮಾಡಿದ್ದಾರೆ. ಪುತ್ರಕಾಮೇಷ್ಟಿಯಾಗ ಮಾಡಿದುದರಿಂದ ರಾಮ ಅವತರಿಸಲಿಲ್ಲ! ದೇವ ತೆಗಳು ಮೊರೆಯಿಟ್ಟಾಗ "ಪಿತರಂ ರೋಚಯಾಮಾಸ ತದಾ ದಶರಥಂ ನೃಪಂ" ದಶರಥನು ತನಗೆ ತಂದೆಯಾಗಬೇಕೆಂಬ ಭಗವಂತನ ಆಸೆ, ಸಂಕಲ್ಪದಿಂದ ಅವತಾರವೇ ಹೊರತು, ದಶರಥ ತಪಸ್ಸುಮಾಡಿದರೂ ವಂಶಕರನಾದ ಪುತ್ರನಾಗಲಿಲ್ಲ. ಇದರಿಂದ ಕರ್ಮ ಕಾರಣವಲ್ಲ ಭಗ ವಂತನ ಅವತಾರಕ್ಕೆ; ಅವನು ಸ್ವೇಚ್ಛೆಯಿಂದ ಹುಟ್ಟುವನೆಂಬುದು ಸಷ್ಟವಾಯಿತು

ಇನ್ನು ಅವಾಙ್ಮನಸ ಗೋಚರನಾದ ಭಗವಂತನು ವೇದವೇದ್ಯ ನೆಂಬ ವಿರೋಧವನ್ನು ಪರಿಹರಿಸಬೇಕು. ಭಗವಂತನನ್ನು ಅವಾಙ್ಮನಸ ಗೋಚರನೆಂದು ಹೇಳುವಾಗ ಅವನ ಸ್ವರೂಪಕ್ಕೂ ಗುಣಕ್ಕೂ ಎಲ್ಲೆ ಯಿಲ್ಲ ಎಂದರ್ಥ. ಪರಿಮಿತವಾದ ವಿಷಯಗಳನ್ನೇನೋ ಗ್ರಹಿಸುವುದು ನಮ್ಮ ವಾಕ್ಕೂ ಮನಸ್ಸೂ-ಅಪರಿಚ್ಛಿನ್ನನಾದ ಭಗವಂತನ ಗುಣಗಳನ್ನು ಸಂಪೂರ್ಣವಾಗಿ ತಿಳಿಯಲಾಗುವುದಿಲ್ಲ. ಅವು ಅಪರಿಚ್ಛಿನ್ನವೆಂದು ತಿಳಿ ದುಕೊಳ್ಳುವುದೇ ಅವುಗಳ ವಿಚಾರವಾಗಿ ನಮಗೆ ತಿಳಿದು ಬರುವ ಜ್ಞಾನ ಇದನ್ನು ಶ್ರೀಕೂರತ್ತಾಳ್ವಾರ್ರು ಶ್ರೀಸ್ತವದಲ್ಲಿ ಸೊಗಸಾಗಿ ಹೇಳಿದ್ದಾರೆ.

ದೇವಿ ತ್ವನ್ಮಹಿಮಾವಧಿರ್ನ ಹರಿಣಾ ನಾಪಿತ್ವಯಾಜ್ಞಾಯತೇ
ಯದ್ಯಪ್ಯೇವ ಮಥಾಪಿ ನೈವಯುವಯೋಃ ಸರ್ವಜ್ಞತಾಹೀಯತೇ |
ಯನ್ನಾಸ್ತ್ಯೇವ ತದಜ್ಞತಾಮನುಗುಣಾಂ ಸರ್ವಜ್ಞತಾಯಾವಿದುಃ
ವ್ಯೋಮಾಂಭೋಜಮಿದಂತಯಾ ಕಿಲವಿದನ್ ಭ್ರಾಂತೋಯ
ಮಿತ್ಯುಚ್ಯತೇ ||

ಇಲ್ಲಿ " ಸರ್ವಜ್ಞನಾದ ಭಗವಂತನು ಕೂಡ, ಅವನ ಸರ್ವಜ್ಞತ್ವಕ್ಕೆ ಅನುಗುಣವಾಗಿ ತನ್ನ ಸ್ವರೂಪ ರೂಪ ಗುಣಗಳ ಅವಧಿಯನ್ನು ತಿಳಿದುಕೊಳ್ಳಲಿಲ್ಲ." ಎನ್ನುವುದನ್ನು ತೋರಿಸಲಾಗಿದೆ.

ಈ ವಿಷಯವಾಗಿ ನಂಬಿಳ್ಳೈಗಳು ಒಂದು ಉದಾಹರಣೆ ಕರುಣಿಸಿದ್ದಾರೆ. ತೀರದಿಂದ ಒಬ್ಬ ಸಮುದ್ರವನ್ನು ನೋಡಿದರೆ, ಆಕಾಶವು ಭೂಮಿಯನ್ನು ಮುಟ್ಟುವಂತೆ ಕಾಣುವ ಸ್ಥಳದವರಿವಿಗೂ ಅವನ ದೃಷ್ಟಿಗೆ ಕಾಣುತ್ತದೆಯೇ ಹೊರತು ಪೂರ್ತಿಯಾಗಿ ಸಮುದ್ರವು ಅವನ ದೃಷ್ಟಿಗೆ ಗೋಚರವಾಗುವುದಿಲ್ಲ. ಹೀಗೆ ಅವನ ದೃಷ್ಟಿಗೆ ಅಗೋಚರವೆನ್ನುವುದರಿಂದ ಸಮುದ್ರವು ಸಂಪೂರ್ಣವಾಗಿ ಅವನ ಜ್ಞಾನಸಕ್ಕೆ ವಿಷಯವಾಗುವುದಿಲ್ಲವೆಂದು ತಿಳಿಯುವುದು. ಆದರಿಂದ ಅವನಿಗೆ ಸಮುದ್ರವನ್ನು ಕುರಿತು ಯಾವುದನ್ನೂ ತಿಳಿದುಕೊಳ್ಳಲಾಗುವುದಿಲ್ಲವೆಂದು ಅರ್ಥವಲ್ಲ. ಅದರಿಂದಲೇ ಅಪರಿಚ್ಛಿನ್ನವಾದ ಭಗವಂತನ ಸ್ವರೂಪ ರೂಪಗುಣಗಳನ್ನು ವೇದಗಳೂ ಅಪರಿಚ್ಛಿನ್ನವಾಗಿಯೇ ಹೇಳಿರುವುವೆಂದು ಅರ್ಥ. ಹೀಗೆ ಶ್ರುತಿಗಳಲ್ಲಿ ತೋರಬಹುದಾದ ವಿರೋಧಗಳು ಪರಿಹಾರವಾಗಬೇಕಾದರೆ ಆಚಾರ್ಯನ ಕೃಪೆ ಬೇಕು.

## ಬಿನ್ನಪ ೭ ಮತ್ತು ೮

ಇನ್ನು ಏಳು ಎಂಟನೆಯ ಬಿನ್ನಪಗಳು: ಪ್ರಪಂಚ ಮಿಥ್ಯೆ ಅಲ್ಲ; ಸತ್ಯ. ಆದರೆ ಭಗವಂತನಿಗೆ ಶರೀರವಾಗಿ ಸೇರಿಯೇ ಇವೆಲ್ಲಾ ಇರುತ್ತವೆ. " ಪ್ರಪಂಚ ಮಿಥ್ಯೆ" ಎನ್ನುವ ವಾದ ಮನಸ್ಸಿಗೆ ಹಿಡಿಯುವುದು ಕಷ್ಟ. ಹಾಗೆಯೇ, ವಿಶಿಷ್ಟಾದ್ವೈತದಲ್ಲಿ ಹೇಳುವ " ಭಗವತ್ ಪರತಂತ್ರವಾದ ಪ್ರಪಂಚ ಸತ್ಯ" ಎಂಬ ಅನುಭವ ಬರುವುದೂ ಕಷ್ಟ! ಈ ಕಂಬ ನಿಜ. ಅದು ಸ್ವತಃ ನಿಜವೆಂದು ಸಾಮಾನ್ಯವಾಗಿ ಜನರು ತಿಳಿಯುವರು., ಆದರೆ ಅದರಲ್ಲಿಯೂ ಒಂದು ಜೀವ ಇದೆ. ಅದರಲ್ಲಿಯೂ ಭಗವಾನ್ ಅಂತರ್ಯಾಮಿ! ಈ ಹಾದಿ ವಿಶಿಷ್ಟಾದ್ವೈತದ್ದು. ಯಾವ ಪದಾರ್ಥ ನೋಡಿ

ದಾಗಲೂ, ತದಭಿಮಾನಿ ಜೀವ. ತದಂತರ್ಯಾಮಿ ಪರ್ಯಂತ ತಿಳಿಯು ವುದು ವೇದಾನ್ತಶ್ರವಣದಿಂದಲೇ ಸಾಧ್ಯ. "ವೇದಾನ್ತಶ್ರವಣೇನ ಹಿ ವ್ಯುತ್ಪತ್ತಿಃ ಪೂರ್ಯತೇ"

ಈ ತತ್ವವನ್ನೇ ಪೆರಿಯಾಳ್ವಾರ್ರು "ತಿರುಕ್ಕೋಟ್ಟಿಯೂರ್" ದಿವ್ಯದೇಶದ ವಿಚಾರವಾಗಿ ಬಹಳ ಸೊಗಸಾಗಿ ವರ್ಣಿಸಿದ್ದಾರೆ. ನಮ್ಮನ್ನು ರಕ್ಷಿಸುವುದಕ್ಕಾಗಿ ದೇವರು ಅರ್ಚಾವತಾರ ಎತ್ತಿದ್ದಾನೆಂದರೆ ಅವನಲ್ಲಿ ಅದೆಷ್ಟು ಕೃತಜ್ಞತೆ ತೋರಬೇಕು! ಈಗ ಭಗವಂತನ ಉಪಕಾರವನ್ನು ನೆನೆಯದ ಕೃತಘ್ನತೆಗೆ ಪರಿಹಾರವೇ ಇಲ್ಲವೆಂದು ಹೇಳಿದೆ. ಅವನು ಒಲುಮೆಯಿಂದ ಇರುವ ಸ್ಥಳಗಳಾದ ದಿವ್ಯದೇಶಗಳಲ್ಲಿ ಈ ಕೃತಜ್ಞತೆಗೆ ಅನುಗುಣವಾಗಿ ಆದರ ಮಾಡುವುದು ನಮ್ಮ ಕರ್ತವ್ಯ. ಅದು ದೇವ ರಿಗೆ ನಾವೀಯುವ ಧನ್ಯವಾದ! "ಪರುಹುನೀರುಂ ಉಡುಕ್ಕುಂ ಕೂರೈ ಯುಂ ಪಾವಂಶೈದನದಾನ್‌ಗೋಲೋ" ದಿವ್ಯದೇಶಗಳಲ್ಲಿ ಆದರ ಮಾಡದವನು ಕುಡಿಯುವ ನೀರೂ, ಉಡುವ ವಸ್ತ್ರವೂ ಪಾಪಮಾಡಿದ ವೆಂದು ತಿಳಿಯಿರಿ. ನೀರಿಗೆ, ಬಟ್ಟೆಗೆ ಪಾಪ ಹೇಗೆ? ಮಣವಾಳಮಾ ಮುನಿಗಳು "ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕ ರವಾಣಿ." ಎನ್ನುವ ಶ್ರುತಿವಾಕ್ಯವನ್ನು ಉದಹರಿಸಿದ್ದಾರೆ. ಒಂದು ವಸ್ತುವಿಗೆ ನಾಮರೂಪಗಳು ಉಂಟಾಗಬೇಕಾದರೆ, ಅದರಲ್ಲಿ ಜೀವ ದ್ವಾರಾ ಪರಮಾತ್ಮನು ಇದ್ದೇ ಇರುವನು. ಹೀಗೆ ಚಿತ್, ಅಚಿತ್ ವಿಶಿ ಷ್ಟನಾಗಿಯೇ ದೇವರಿರುವುದು. ಗೀತೆಯಲ್ಲಿ ಹೇಳಿರುವಂತೆ "ಭೂಮಿ ರಾಪೋಽನಲೋ ವಾಯುಃ" ಇವು ಮುಂತಾದವು ಭಗವಂತನ "ಅಪ ರಾಪ್ರಕೃತಿಗಳು". ಜೀವನು "ಪರಾಪ್ರಕೃತಿ".

ಮೇಲೆ ಹೇಳಿದ ಶ್ರುತಿವಾಕ್ಯದಿಂದಲೂ ಗೀತಾ ಶ್ಲೋಕದಿಂದಲೂ ಅಚಿತ್ತಿನಲ್ಲಿ ಜೀವನು ಇರುವನೆಂದೂ, ಆ ಜೀವನಲ್ಲಿ ಭಗವಂತನು ಅಂತರ್ಯಾಮಿಯಾಗಿ ಇರುವನೆಂದೂ ಸ್ಪಷ್ಟವಾಯಿತು. ಜೀವನು ಬದ್ಧ ನಾಗಿರುವುದರಿಂದ ಅವನಿಗೆ ಪುಣ್ಯಪಾಪ ಸಂಬಂಧಗಳು ಇದ್ದೇ ಇರುವುವು. ತಿರುಕ್ಕೋಟ್ಟಿಯೂರ್ ದಿವ್ಯದೇಶದಲ್ಲಿ ಪ್ರೀತ್ಯಾದರಗಳನ್ನು ಮಾಡದೆ

ಇರುವ ಪಾಪಿಗಳ ಸಂಬಂಧವನ್ನು ಹೊಂದಿರುವ ನೀರಿಗೂ ವಸ್ತ್ರಕ್ಕೂ ಹೇಗೆ ಪಾಪ ಉಂಟಾಯಿತೆಂಬುದನ್ನು ಈಗ ಚೆನ್ನಾಗಿ ತಿಳಿಯಲಾಯಿತು. ನೀರಿನ ಮತ್ತು ವಸ್ತ್ರದ ಪಾಪವು ಆ ಅಭಿಮಾನಿ ಜೀವಾತ್ಮಗಳ ಪಾಪವು.

ಈಗ ದಿವ್ಯದರ್ಶನ ಕೊಡುತ್ತಿರುವ ಶ್ರೀ ಯದುಗಿರಿನಾಚ್ಚಾರಮ್ಮನವರಿಗೆ ಧರಿಸಿರುವ ಪುಷ್ಪವನ್ನು ನೋಡಿ ಆನಂದಿಸುತ್ತಿದ್ದೇವೆ. ಅಮ್ಮನವರ ತಿರುಮೇನಿಗೆ ಧರಿಸಿರುವ ಹೂವು ಅದೇನು ಭಾಗ್ಯಮಾಡಿತೋ ? ಎಂದರೆ ಆ ಹೂವಿಗೆ ಅಭಿಮಾನಿಯಾದ ಜೀವಾತ್ಮನ ಭಾಗ್ಯ ಎಂಥದು ? ಎಂದಿಟ್ಟುಕೊಳ್ಳಬೇಕು.

ಈ ಸಂದರ್ಭದಲ್ಲಿ ವಿಷ್ಣುಧರ್ಮದಿಂದ ಈ ಶ್ಲೋಕವನ್ನು ಉದ್ಧರಿಸಬಹುದು.

"ವೇದವಿದ್ಯಾವ್ರತಸ್ನಾತೇ ಶ್ರೋತ್ರಿಯೇ ಗೃಹಮಾಗತೇ |
ಕ್ರೀಡಂತ್ಯೋಷಧಯಸ್ಸರ್ವಾಃ ಯಾಸ್ಯಾಮಃ ಪರಮಾಂಗತಿಂ ||
ನಷ್ಟಶೌಚೆ ವ್ರತಭ್ರಷ್ಟೇ ವಿಪ್ರೇ ವೇದವಿವರ್ಜಿತೇ |
ದೀಯಮಾನಂ ರುದತ್ಯನ್ನಂ ಕಿಂಮಯಾ ದುಷ್ಕೃತಂ ಕೃತಂ ||"

ಯಾವಾಗಲೂ ಬ್ರಹ್ಮನಿಗೆ ವಿಶೇಷಣವಾಗಿಯೇ ಸಕಲ ಚಿದಚಿತ್ತುಗಳೂ ತೋರಬೇಕು. ಹೀಗೆ ಬ್ರಹ್ಮಶರೀರವಾಗಿ ಪ್ರಪಂಚ ಸತ್ಯ. ಈ ಪ್ರಪಂಚ ನಾರಾಯಣನ ಐಶ್ವರ್ಯ. ಈ ನಿಲುವೇ ವಿಶಿಷ್ಟಾದ್ವೈತ ಯದು.

ಬುದ್ಧನ ನಾಲ್ವರು ಶಿಷ್ಯರಲ್ಲಿ "ಮಾಧ್ಯಮಿಕ" ಎಂಬುವನೊಬ್ಬ. ಅವನದು ಸರ್ವಶೂನ್ಯವಾದ "ಏನೂ ಇಲ್ಲ" ಎನ್ನುವುದೇ ಅವನ ಮತ. "ನೀನು ಹಾಗೆ ಹೇಳುವ ಮಾತಾದರೂ ಪ್ರಮಾಣವಲ್ಲವೆ ?" ಎಂದು ಕೇಳಿದರೆ "ಇಲ್ಲ ಎಂದು ಹೇಳುವುದಕ್ಕೆ ನನಗೆ ಪ್ರಮಾಣ ಏಕೆ ? ಉಂಟು ಎಂದು ಸಾಧಿಸುವ ನಿಮಗಾದರೆ ಪ್ರಮಾಣ ಬೇಕು !" ಇಂಥ ವಾದ ಪ್ರಬಲವಾಗಿದ್ದಾಗ ಶಂಕರಾಚಾರ್ಯರು ಅವತರಿಸಿದರು. ಈ ಆಚಾರ್ಯರ ದಾರಿ ನಾವು ನೋಡಬೇಕು. "ಪಶು, ಮನುಷ್ಯ, ಬೀದಿ, ಘಟ, ಇವು

ತೋರುವುವಲ್ಲಾ ! ಇದಕ್ಕೇನು ನಿರ್ವಾಹ ?" ಎಂದಾಗ ಮಾಧ್ಯಮಿಕನು ಹೇಳುತ್ತಾನೆ, "ಇಲ್ಲದೆಯೂ ವಸ್ತು ತೋರಬಹುದು." ಶಂಕರಾಚಾರ್ಯರು ಇದಕ್ಕೆ ಪ್ರತಿಯಾಗಿ "ಯಾವುದೇ ಆಗಲಿ ಇರುವುದರಿಂದಲೇ ವಸ್ತು ತೋರುವುದು" ಎನ್ನುತ್ತಾರೆ. ಭ್ರಮ ಎಂಬುದು ಉಂಟಾಗಬೇಕಾದರೆ ಒಂದು ಆಶ್ರಯ ಬೇಕು. ಯಾವುದಾದರೂ ಒಂದು ವಸ್ತುವನ್ನು ಕಂಡರಲ್ಲವೆ, ಅದರ ವಿಷಯವಾಗಿ ಭ್ರಮ ಏರ್ಪಡುವುದು. ಈ ರೀತಿ ಭ್ರಮಕ್ಕೆ ಆಸರೆಯಾದುದನ್ನೇ "ಅಧಿಷ್ಠಾನ" ಎನ್ನುವುದು. ಈ ಅಧಿಷ್ಠಾನ ಇಲ್ಲದೆ ಭ್ರಮವೆನ್ನುವುದಿಲ್ಲ ಎಂದು "ಸಾಧಿಷ್ಠಾನ ಭ್ರಮ"ವನ್ನು ಶಂಕರರು ಹೇಳುತ್ತಾರೆ. ಬ್ರಹ್ಮವೂ ಇಲ್ಲವೆಂದು ಹೇಳಿಬಿಟ್ಟರೆ ನಿಜವಾದ ಅಧಿಷ್ಠಾನವೇ ಯಾವುದೂ ಇಲ್ಲದಿರುವಾಗ ಭ್ರಮ ಉಪಪಾದನೆಮಾಡುವುದು ಕಷ್ಟವಾಗುತ್ತದೆ. ಅದಕ್ಕಾಗಿ ಅವರು "ಬ್ರಹ್ಮ ಒಂದು ಸತ್ಯ ಎಂದು ಒಪ್ಪಬೇಕು" ಎನ್ನುತ್ತಾರೆ. ಬೌದ್ಧರ ಮೇಲೆ ಅವರು ಹೇಳುವ ದೋಷವೇ "ಈ ನಿರಧಿಷ್ಠಾನ ಭ್ರಮಾ ಸಂಭವ" ಎಂಬುದು. ನೆಲದ ಮೇಲೆ ಹಗ್ಗ ಬಿದ್ದಿರುತ್ತದೆ. ಮಬ್ಬಿನಲ್ಲಿ ಅದನ್ನು ಕಂಡಾಗ 'ಹಾವು' ಎಂದು ತೋರುವುದೇ ಭ್ರಮ. ಅಲ್ಲಿ ಹಗ್ಗವೆಂಬ 'ಅಧಿಷ್ಠಾನ' ಇದೆ. ಆದರೆ ಸರ್ಪ ಇಲ್ಲ, ಅದರಂತೆ ಬ್ರಹ್ಮ ಒಂದು ಸತ್ಯ, ಜಗತ್ತು ಸರ್ಪದಂತೆ ಮಿಥ್ಯ. "ಅವಿದ್ಯೆ" ಎಂಬ ದೋಷದಿಂದ ಬ್ರಹ್ಮದಲ್ಲಿ ಜಗತ್ತು ಕಾಣುತ್ತದೆ" ಎನ್ನುವುದು ಶಂಕರಾಚಾರ್ಯರ ರೀತಿ.

ಇಲ್ಲಿ ರಾಮಾನುಜರು ಬಾಯಿ ಹಾಕುತ್ತಾರೆ. "ನೀವು ಹೇಳಿದ ಸರ್ಪವು ನಿಜವಾದ ಹಗ್ಗ ಇರುವಕಡೆ ಇಲ್ಲದಿದ್ದರೂ ಬೇರೊಂದೆಡೆಯಾದರೂ ಹಾವು ನಿಜ ತಾನೆ? ಅಥವಾ ಹಾವೇ ಎಲ್ಲೂ ಇಲ್ಲವೆ? ಅಂದರೆ ಹಾವೂ ಸತ್ಯವಾಗಲಿಲ್ಲವೆ? ಅಲ್ಲಿ ಭ್ರಮವಿಷಯವಾಗುವ ಪದಾರ್ಥವೂ ಅನ್ಯತ್ರ ಸತ್ಯವೆಂದರೇನೇ 'ಭ್ರಮ' ಉಪಪನ್ನವಾಗುವುದು. ಅಧಿಷ್ಠಾನವನ್ನು ಮಾತ್ರ ಸತ್ಯ ಎಂದು ಒಪ್ಪಿಕೊಂಡರೆ ಸಾಲದು. ವಿಶಿಷ್ಟಾದ್ವೈತ ಉಂಟಾಗುವುದೇ ಇಲ್ಲ! ಆದುದರಿಂದ ಪ್ರಪಂಚವೂ ಸತ್ಯ. ಆದರೆ ಅದು ಭಗವಂತನಿಗೆ ಶರೀರ.

ಇನ್ನು ಎಂಟನೆಯ ಬಿನ್ನಪದ ವಿಚಾರ. "ಸ್ವಪ್ನಪದಾರ್ಥಗಳಂತೆ ಜಗತ್ತು ಮಿಥ್ಯೆಯಾಗಬಹುದಲ್ಲಾ ?" ಎಂಬುದು ಮತ್ತೆ ಶಂಕರಾಚಾರ್ಯರ ವಾದ. ಬೀದಿ, ರಥ, ಕುದುರೆ ಇಲ್ಲದಿದ್ದರೂ ಒಬ್ಬ ರಥದಲ್ಲಿ ಕುಳಿತು ಹೋಗುತ್ತಿರುವಂತೆ ಸ್ವಪ್ನ ಕಾಣುತ್ತಾನೆ. ಆ ಸ್ವಪ್ನಾನುಭವವು ಅವನಿಗೆ ಮಾತ್ರ ಆ ವೇಳೆಯಲ್ಲಿ ಲಭಿಸುತ್ತದೆ. ಅವನಿಗೆ ಬೇರೆ ವೇಳೆಗಳಲ್ಲಿಯೂ, ಸ್ವಪ್ನಾನುಭವ ಇಲ್ಲದ ಇತರರಿಗೆ ಯಾವ ವೇಳೆಯಲ್ಲಿಯೂ ಆ ಸ್ವಪ್ನಪದಾರ್ಥವು ಲಭಿಸುವುದಿಲ್ಲ. ಆ ಪದಾರ್ಥವು ಕಾಲತ್ರಯದಲ್ಲೂ ಇಲ್ಲ. ಆದುದರಿಂದಲೇ ಅನಿತ್ಯ, ಮಿಥ್ಯ ಎಂದು ಶಂಕರಾಚಾರ್ಯರು ಅಭಿಪ್ರಾಯಪಡುತ್ತಾರೆ.

ಆದರೆ ಶ್ರೀ ರಾಮಾನುಜರ ಮತವು "ಸ್ವಪ್ನ ಪದಾರ್ಥಗಳೂ ಸತ್ಯ" ಎಂಬುದು. ಇದಕ್ಕೆ ಒಂದು ಶ್ರುತಿ ಆಧಾರ. "ನ ತತ್ರ ರಥಾಃ ನ ರಥಯೋಗಾನ್ ಪಥಃ ಸೃಜತೇ ...... ಸ ಹಿ ಕರ್ತಾ." ಈ ಶ್ರುತಿಯಲ್ಲಿ "ಸ್ವಪ್ನ ಕಾಣುವ ಪುರುಷನು ಸ್ವಪ್ನಕಾಲದಲ್ಲಿ ಅನುಭವಿಸುವ ಸ್ವಾಪ್ನಾರ್ಥಗಳನ್ನು, ಅವನ ಪುಣ್ಯಪಾಪಾನುಗುಣವಾಗಿ ಭಗವಂತನು ಸೃಷ್ಟಿಸುತ್ತಾನೆ" ಎಂದು ಭಗವಂತನ ಸೃಷ್ಟಿಕರ್ತೃತ್ವವನ್ನು ಹಿರಿಮೆಯಾಗಿ ಹೇಳಿದೆ. ಹಾಗೆ ಸ್ವಪ್ನಪದಾರ್ಥವು ಮಿಥ್ಯೆಯಾಗಿದ್ದರೆ, ಆ ಮಿಥ್ಯಾಪದಾರ್ಥ ಸೃಷ್ಟಿಯನ್ನು ಒಂದು ಹಿರಿಯ ಗುಣವೆಂದು ವೇದಗಳು ಘೋಷಿಸುವುವೆ ?

ಬ್ರಹ್ಮಸೂತ್ರದ ಸಂಧ್ಯಾಧಿಕರಣದಲ್ಲಿಯೂ ಶ್ರೀಭಾಷ್ಯದಲ್ಲಿಯೂ ಈ ವಿಚಾರವನ್ನು ವಿಸ್ತರಿಸಿದೆ. ಸ್ವಪ್ನಪದಾರ್ಥ ಸತ್ಯವಾದರೆ ಸ್ವಪ್ನ ಕಳೆದ ಮೇಲೆ ಆದಕ್ಕೆ ಹಿಂದೆಯೂ ಅದೇಕೆ ಅದು ಇರದು ಎಂದರೆ ಅದು ನಶ್ವರ, ಅನಿತ್ಯ, ಎಂದು ಬೇಕಾದರೆ ಹೇಳಿ. ಆದರೆ ಅದು ಮಿಥ್ಯೆ ಅಲ್ಲ. ಇದು ರಾಮಾನುಜರ ಭಾವ.

"ಸ್ವಪ್ನಪದಾರ್ಥ ಸತ್ಯವೆಂದರೆ ಎಲ್ಲರಿಗೂ ಕಾಣಬೇಕಲ್ಲಾ ?" ಎನ್ನಬೇಡಿ. ಬಲರಾಮ "ಕೃಷ್ಣ ಮಣ್ಣು ತಿಂದ" ಎಂದು ಯಶೋದೆಯ ಬಳಿ ಚಾಡಿ ಹೇಳುತ್ತಾನೆ. "ಇಲ್ಲ ಅಮ್ಮ" ಎಂದು ಕೃಷ್ಣ

ಬಾಯಿ ತೆರೆದು ತೋರಿಸುತ್ತಾನೆ. “ವೈಯ್ಯವೇೞುಂ ಕಣ್ಡಾಳ್ ಪಿಳ್ಳೈ ವಾಯುಳೇ” ಮಗನ ಬಾಯಿಯಲ್ಲಿ ಅವಳೊಬ್ಬಳಿಗೆ ಮಟ್ಟಿಗೆ ಏಳು ಲೋಕಗಳೂ ಕಾಣುತ್ತವೆ. ಮತ್ತಾರಿಗೂ ಕಾಣುವುದಿಲ್ಲ. ಇದರಿಂದ ಯಶೋದೆಯು ನೋಡಿದ ಏಳು ಲೋಕಗಳು ಸುಳ್ಳೆ ? ಅಥವಾ ಭಗವಂತನು ಸುಳ್ಳು ತೋರಿಸಿದನೆ! ಈ ಬಿನ್ನಪದಲ್ಲಿ ‘ನಂದಕ’ ಎಂಬ ಕತ್ತಿಯು ತಮಗೆ ಸ್ವಪ್ನದಲ್ಲಿ ಸ್ವಾಮಿಯಿಂದ ದೊರಕಿದುದಾಗಿ ಚಿಕ್ಕದೇವರಾಜರು ಹೇಳುವಾಗ ಸ್ವಪ್ನಕಾಲದಲ್ಲಿ ಮಾತ್ರ ಅವರ ಅನುಭವಕ್ಕೆ ಇಲ್ಲದೆ ಯಾವಾಗಲೂ ಶತ್ರುಸಂಹಾರಕ್ಕಾಗಿ ಆ ಖಡ್ಗವನ್ನು ಉಪಯೋಗ ಮಾಡುತ್ತಿದ್ದರೆಂದು ಅವರ ನೀತಿನಿಂದಲೇ ತಿಳಿಯಬರುತ್ತದೆ.

ಗುದ್ದಲಿ ಹಿಡಿದು ತೋಟಮಾಡುತ್ತಿದ್ದ ‘ಪೆರಿಯಾಳ್ವಾರ್ರಿಗೆ’ “ವೇಣ್ಡಿಯ ವೇದಂಗಳೋದಿ” ಎನ್ನುವಂತೆ ಪಾಂಡ್ಯರಾಜನ ಸದಸ್ಸಿಗೆ ಬಂದಾಗ, ಎಲ್ಲ ಅರ್ಥವನ್ನೂ ಭಗವಂತ ತಿಳಿಸಿದಂತೆ; “ನನ್ನ ತಾಯಿ ಹೇಳಿದ ದೇವರು ನೀನೇಯೆ ?” ಎಂದು ಕೇಳುವಷ್ಟು “ಮೌಗ್ಧ್ಯ” ಇದ್ದ ಧ್ರುವನನ್ನು ಪಾಂಚಜನ್ಯದಿಂದ ಸವರಿ ಜ್ಞಾನಿಯನ್ನಾಗಿಸಿದಂತೆ, ರಾಮಬಾಣ ವಾಲಿಯ ದೇಹ ಸಂಸ್ಪರ್ಶಿಸಿ ಅವನಿಗೆ ಜ್ಞಾನ ಉಂಟುಮಾಡಿ ಉತ್ತಮ ಗತಿ ಇತ್ತಂತೆ; ನಂದಕಾಂಶದಿಂದ ಚಿಕ್ಕದೇವರಾಜ ಒಡೆಯರಿಗೂ ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಮುಕ್ತಿ ದೊರಕಿದೆ. ಅಂಥ ಜ್ಞಾನಿ ಹೇಳುವ ವಾಕ್ಯಗಳೆಲ್ಲವೂ ವಿಶ್ವಸನೀಯ, ಹಾಗೂ ಉಪಾದೇಯಗಳೇ ಸರಿ.

# ಮೂರನೆಯ ದಿನದ ಉಪನ್ಯಾಸ

## ೯, ೧೦, ೧೧ ನೆಯ ಬಿನ್ನಪಗಳು

ಕಳೆದ ಎಂಟನೆಯ ಬಿನ್ನಹದಲ್ಲಿ “ಭಗವಂತನಿಗೆ ಶರೀರವಾದ ಪ್ರಪಂಚ ಸತ್ಯ; ಸ್ವಪ್ನದಲ್ಲಿ ಕಾಣುವ ವಸ್ತುವೂ ಸತ್ಯ” ಎಂದು ಸ್ಥೂಲವಾಗಿ ಹೇಳಲಾಗಿತ್ತು. “ಪ್ರಪಂಚ ಸತ್ಯ” ಎನ್ನುವ ವಿಷಯದಲ್ಲಿ ಹೇಳ

ಬೇಕಾದುದು ಕೊಂಚ ಉಳಿದಿದೆ. ನಮ್ಮ ದೇಶದಲ್ಲಿ ವೇದವನ್ನು ಪ್ರಮಾಣವೆಂದು ಒಪ್ಪುವ ವೈದಿಕರಲ್ಲಿ ಮುಖ್ಯವಾಗಿ ಮೂರು ಮತಗಳಿವೆ. "ಅದ್ವೈತ, ದ್ವೈತ, ವಿಶಿಷ್ಟಾದ್ವೈತ" ಎಂಬುವೇ ಅವು. ಅದ್ವೈತ ಮತದಲ್ಲಿ ಮತ್ತು ದ್ವೈತಮತದಲ್ಲಿ ಬ್ರಹ್ಮನಿಗೂ ಪ್ರಪಂಚಕ್ಕೂ ಸಂಬಂಧಿಸಿದ ಮಾತುಕತೆ ಹೇಗೆ? ವಿಶಿಷ್ಟಾದ್ವೈತಿಗಳು ಬ್ರಹ್ಮ, ಪ್ರಪಂಚ ಈ ವಿಚಾರದಲ್ಲಿ ಏನು ಹೇಳುವರು ?

ಶಂಕರಾಚಾರ್ಯರು "ನಿರಧಿಷ್ಠಾನ ಭ್ರಮ" ಕೂಡದೆಂದು ಹೇಳಿ "ಸಾಧಿಷ್ಠಾನ ಭ್ರಮ" ವನ್ನು ಒಪ್ಪಿರುವರೆಂದು ಹಿಂದೆಯೇ ಹೇಳಿರುವುದು ಸರಿಯಷ್ಟೆ? ಈ ಅಭಿಪ್ರಾಯವನ್ನು ಇನ್ನೂ ಸ್ಪಷ್ಟಪಡಿಸಲಾಗುತ್ತದೆ. ಪ್ರಪಂಚವನ್ನೇನೋ ಎಲ್ಲರೂ ಕಣ್ಣಾರ ಕಂಡು ಅನುಭವಿಸುತ್ತಿದ್ದಾರೆ. ಆದರೆ ಬ್ರಹ್ಮನನ್ನು ವೇದಾನ್ತದಿಂದಲೇ ತಿಳಿಯಬೇಕು, "ಮುತ್ತುಚಿಪ್ಪು ನೋಡಿದರೆ ಬೆಳ್ಳಿಯ ಹಾಗೆ ತೋರುತ್ತದೆ. ತೋರುವ ವಸ್ತುವು ನಿಜವೆ? ಆ ವಸ್ತುವು ಇರುವುದು ನಿಜವೆ? ಎಂದರೆ 'ತೋರಿಬರುವ ಬೆಳ್ಳಿ' ಮಿಥ್ಯೆ. ಮುತ್ತುಚಿಪ್ಪು ಮಾತ್ರ ಸತ್ಯ, ಹೀಗೆಯೇ, ತೋರುವ ಈ ಪ್ರಪಂಚ ಮಿಥ್ಯ; ಬ್ರಹ್ಮನೇ ಸತ್ಯ, ಅಂದರೆ ಬ್ರಹ್ಮನೇ ಪ್ರಪಂಚದ ಹಾಗೆ ತೋರುತ್ತಾನೆ. ಸತ್ಯವಾದ ಮುತ್ತುಚಿಪ್ಪಿನಲ್ಲಿ ತೋರಿಬರುವ ಬೆಳ್ಳಿ ಹೇಗೆ ಮಿಥ್ಯೆಯೋ, ಹಾಗೆ ಬ್ರಹ್ಮನಲ್ಲಿ ತೋರಿಬರುವ ಈ ಪ್ರಪಂಚವು ಮಿಥ್ಯೆ." ಈ ವಿಚಾರವನ್ನೇ "ಸರ್ವಂ ಖಲ್ವಿದಂ ಬ್ರಹ್ಮ" ಎಂದು ಶ್ರುತಿ ಹೇಳುವುದು. "ಬ್ರಹ್ಮನ ಹೊರತು ಯಾವುದೂ ಸತ್ಯವಲ್ಲದ್ದರಿಂದ ಎಲ್ಲವೂ ಬ್ರಹ್ಮವೇ!"

ಇನ್ನು ದ್ವೈತಿಗಳ ಅಭಿಪ್ರಾಯ ನೋಡುವ. "ಪ್ರಜೆ ಮತ್ತು ರಾಜನ ಸಂಬಂಧದಂತೆ, ಈ ಚೇತನಾಚೇತನಗಳಿಗೂ ಪರಬ್ರಹ್ಮನಿಗೂ 'ಪಾಲ್ಯಪಾಲಕಭಾವ ಸಂಬಂಧ' ವನ್ನು ಮಟ್ಟಿಗೆ ಅವರು ಒಪ್ಪುತ್ತಾರೆ. ಆ ರಾಜನಿಗೆ ಸೇರಿದ ರಾಷ್ಟ್ರ ಮತ್ತು ಪ್ರಜೆಗಳನ್ನು ಆ ರಾಜನೆಂದೇ ಹೇಳುವಂತೆ, ಈ ಪ್ರಪಂಚ ದೇವರಿಗೆ ಸೇರಿದುದರಿಂದ ದೇವರೇ" ಎಂದು ಈ ಶ್ರುತಿಯಲ್ಲಿ ಹೇಳಿದೆ. ಇದು ದ್ವೈತಿಗಳ ಮತ.

ಶ್ರೀ ರಾಮಾನುಜರಾದರೋ ಅದ್ವೈತಿಗಳಂತೆ ಪ್ರಪಂಚ ಇಲ್ಲವೆನ್ನಲೂ ಇಲ್ಲ; ದ್ವೈತಿಗಳಂತೆ ಬರೀ ಪಾಲ್ಯಪಾಲಕಭಾವದಲ್ಲಿಯೇ ಮುಗಿಸಿಬಿಡಲೂ ಇಲ್ಲ. ಸತ್ಯವಾದ ಈ ಪ್ರಪಂಚವು ಭಗವಂತನ ಶರೀರವೆಂದು ಪ್ರತಿಪಾದಿಸಿದ್ದಾರೆ. ಈ "ಶರೀರಾತ್ಮ ಭಾವ ಸಂಬಂಧ" ವೇ ವಿಶಿಷ್ಟಾದ್ವೈತದ ಮುಖ್ಯ ಜೀವಾಳ.

ಹೀಗೆ ಶಂಕರಾಚಾರ್ಯರೂ, ಆನಂದತೀರ್ಥಾಚಾರ್ಯರೂ ಹೇಳದ ರೀತಿಯಲ್ಲಿ ರಾಮಾನುಜರು "ಸರ್ವಂ ಖಲ್ವಿದಂ ಬ್ರಹ್ಮ" ಎಂಬೀ ಶ್ರುತ್ಯರ್ಥವನ್ನು ಹೇಳಿರುವುದನ್ನು ವಿಶ್ವಸಿಸುವುದಕ್ಕೆ ಒಂದು ಉಪಾಖ್ಯಾನವನ್ನು ನೋಡಬಹುದು. "ತಿರುವಲ್ಲಿಕ್ಕೇಣಿ" ಯ ಪಾರ್ಥಸಾರಥಿಯೇ ರಾಮಾನುಜರಾಗಿ ಅವತರಿಸಿದನೆಂದು ಶ್ರೀವೈಷ್ಣವರು ಒಂದು ಇತಿಹಾಸ ಹೇಳುವರು. ಈಗಲೂ ಪದ್ಧತಿ ಇರುವಂತೆ ಹಿಂದೆಯೂ ಸಮುದ್ರತೀರಕ್ಕೆ ಪಾರ್ಥಸಾರಥಿ ದಯಮಾಡಿಸಿ "ಮಘೋತ್ಸವ" ಕೈಗೊಳ್ಳುತ್ತಿದ್ದಾಗ ಶ್ರೀಪೆರಂಬೂದೂರಿಂದ ಓರ್ವ ದಂಪತಿಗಳು ಬಂದುದಾಗಿಯೂ, ಪುತ್ರ ಭಾಗ್ಯವಿಲ್ಲದೆ ಅವರು ಪಾರ್ಥಸಾರಥಿಯನ್ನು ಬೇಡಿಕೊಂಡಾಗ (ಬಲ) ರಾಮಾನುಜನೂ ಗೀತೋಪದೇಶಮಾಡಿದವನೂ ಆದ ಪಾರ್ಥಸಾರಥಿಯೇ, ಅವರಲ್ಲಿ ರಾಮಾನುಜರಾಗಿ ಅವತರಿಸಿದನೆಂದೂ ತಿಳಿದುಬರುತ್ತದೆ. ಶ್ರುತಿಗೆ ಭಗವಂತನಾದ ತಾನೇ ಉಪಬೃಂಹಣ ಮಾಡಿರುವ ಶ್ರೀಪಾರ್ಥಸಾರಥಿಯ ಭಾವ ಅದೇ ಅಂಶದಿಂದ ಜನಿಸಿದ ರಾಮಾನುಜರಿಗೆ ಗೊತ್ತು.

ಭಗವಂತನು ಕೊಟ್ಟ ದಿವ್ಯಚಕ್ಷುಸ್ಸಿನಿಂದ ವಿಶ್ವರೂಪವನ್ನು ನೋಡಿ, ಸಕಲ ತತ್ವವನ್ನೂ ಸಾಕ್ಷಾತ್ಕರಿಸುವ ನೆಲೆಯಲ್ಲಿ ಬಾಯಾರ ಹೇಳುವಾಗ, ಅರ್ಜುನ "ಅನಂತವೀರ್ಯಾಮಿತವಿಕ್ರಮಸ್ತ್ವಂ ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ" ಎನ್ನುತ್ತಾನೆ ಇದು "ಸರ್ವಂ ಖಲ್ವಿದಂ ಬ್ರಹ್ಮ" ಎನ್ನುವ ಶ್ರುತಿಯ ಉಪಬೃಂಹಣ ಅಥವಾ ವಿವರಣೆ. ಈ ವಾಕ್ಯಗಳು ಅರ್ಜುನನ ಬಾಯಿಂದ ಬಂದುವಾದರೂ ಭಗವಂತನ ಅಭಿಪ್ರಾಯಗಳನ್ನೇ ಹೊರಗೆಡಹುತ್ತವೆ ,"ಎಲ್ಲವನ್ನೂ ನೀನು

ಒಳಗೂ ಹೊರಗೂ ವ್ಯಾಪಿಸಿದ್ದೀಯೆ. ಆದುದರಿಂದಲೇ ಎಲ್ಲವೂ ನೀನೇ ಆಗಿದ್ದೀಯೆ!" ಹೀಗೆ ಚೇತನಾಚೇತನಗಳಿಗೂ ಪರಬ್ರಹ್ಮನಿಗೂ ಹೇಳಿರುವ "ಅಭೇದ" "ಒಳಹೊಕ್ಕು ವ್ಯಾಪಿಸಿರುವುದರಿಂದ" ಬಲರಾಮನ ತಮ್ಮನಾದ ರಾಮಾನುಜನ ಭಾವವನ್ನೇ ಈ ರಾಮಾನುಜರೂ ಎತ್ತಿ ಹಿಡಿದಿದ್ದಾರೆ.

ಅರ್ಜುನನ ವಾಕ್ಯಗಳಲ್ಲಿ ಜಗತ್ತು ಮಿಥ್ಯೆ ಎನ್ನುವ ಅದ್ವೈತ ಮತವೂ, ಜಗತ್ತಿಗೂ ಭಗವಂತನಿಗೂ ರಕ್ಷ್ಯರಕ್ಷಕಭಾವಮಾತ್ರ ಇರುವದೆಂಬ ದ್ವೈತಮತವೂ ತಿಳಿಯಬರುವುದಿಲ್ಲ. "ಭಗವಂತನೂ ಸತ್ಯ; ಜಗತ್ತೂ ಸತ್ಯ; ಜಗತ್ತನ್ನು ತನ್ನ ಶರೀರವಾಗಿ ಕೊಂಡು ಭಗವಂತನ ಅದರಲ್ಲಿ ಪ್ರವೇಶಿಸಿ ಅದನ್ನು ನಿಯಮಿಸಿ, ಧರಿಸಿ ಇರುವನು" ಎನ್ನುವ ವಿಶಿಷ್ಟಾದ್ವೈತಭಾವವೇ ಅಲ್ಲಿ ಸ್ಫುರಿಸುತ್ತದೆ. ಅರ್ಜುನನು ಏನು ಹೇಳುವನೆಂದರೆ ನೀನೇ ಎಲ್ಲಾ! ಇದು ನಿಜ. ಅಂದರೆ ಒಂದೊಂದರಲ್ಲಿಯೂ ಅಂತಃಪ್ರವೇಶ, ನಿಯಮನ, ಇವುಗಳಿಂದ ನೀನು ಅವುಗಳ ಆತ್ಮನಾಗಿದ್ದೀಯೆ. ನಿನಗೆ ಎಲ್ಲಾ ಶರೀರ. ನಿನ್ನ ಶರೀರವಾಗಿ ಇವುಗಳೆಲ್ಲಾ ಸತ್ಯ".

"ಆತ್ಮ" "ಶರೀರ" ಇವುಗಳ ಅರ್ಥವನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ಇದನ್ನೇ "ಅರ್ಥಂ ಬುದ್ಧ್ವಾ ಶಬ್ದರಚನಾ" ಎನ್ನುವುದು. ಆದರೆ ನಾವು ಅನೇಕ ಸಂದರ್ಭದಲ್ಲಿ ತಿಳಿಯದೆಯೆ, ಸರ್ವಜ್ಞರಂತೆ ಮಾತನಾಡುತ್ತೇವೆ. "ನಾವೂ ಈಶ್ವರನ ಶರೀರ" ಎನ್ನುವಾಗ "ಅನ್ತಃಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ" ಈ ಶ್ರುತ್ಯರ್ಥ ಎದೆಯಲ್ಲಿ ಊರಬೇಕು. ಒಂದೊಂದು ವಸ್ತುವೂ ಸತ್ಯವಾದರೆ ತಾನೇ ಅವುಗಳೊಳಗೆ ಭಗವಂತನ ಪ್ರವೇಶವೆನ್ನುವುದು ಸರಿಹೋಗುವುದು. ಅವೇ ಮಿಥ್ಯೆಯೆಂದರೆ ಇಲ್ಲದ ವಸ್ತುಗಳಲ್ಲಿ ಅದೆಂತು ಭಗವಂತ ಇದ್ದಾನು ? .ಈರೀತಿಯಲ್ಲಿ ಬ್ರಹ್ಮವ್ಯತಿರಿಕ್ತ ಸಮಸ್ತವೂ ಸತ್ಯ. ಆದರೆ ಅವು ಈಶ್ವರನ ಶರೀರವಾಗಿ ಸತ್ಯ. ಮೇಲೆ ಹೇಳಿರುವ ತತ್ವವನ್ನು 'ಮಯಿ ಸರ್ವಮಿದಂ ಪ್ರೋಕ್ತಂ ಸೂತ್ರೇ ಮಣಿಗಣಾಇವ'

ಎನ್ನುವ ಗೀತಾ ಶ್ಲೋಕದಲ್ಲಿ ಭಗವಂತನೇ ಪ್ರತಿಪಾದಿಸಿದ್ದಾನೆ. ಒಂದು ಸರದಲ್ಲಿ ರತ್ನ ಬೀಳದಿರುವಂತೆ ಹಿಡಿದಿರುವುದು ನೂಲು ತಾನೇ ? ಹಾಗೆ ಈ ಸಮಸ್ತ ಚೇತನಾಚೇತನಗಳನ್ನೂ ಸ್ವಾಮಿ ಧರಿಸಿಹಿಡಿದಿದ್ದಾನೆ. ನೂಲು ಕಣ್ಣಿಗೆ ಅಗೋಚರವಾಗಿ ರತ್ನಗಳನ್ನು ಧರಿಸಿರುವಂತೆ ಭಗವಂತನು ಸಮಸ್ತ ಚೇತನಾಚೇತನಗಳ ಒಳಹೊಕ್ಕು ಅದೃಶ್ಯನಾಗಿ, ಅಂತರ್ಯಾಮಿಯಾಗಿ ಅವುಗಳನ್ನು ಧರಿಸಿದ್ದಾನೆ. ಈ ಗೀತಾ ಶ್ಲೋಕದಲ್ಲಿ ಹೇಳಿರುವ ಉಪಮಾನದಲ್ಲಿ ಭಗವಂತನನ್ನು ನೂಲಿನ ಸ್ಥಾನದಲ್ಲಿಯೂ, ಸಕಲ ಚೇತನಾಚೇತನಗಳನ್ನು ಮಣಿಗಣಗಳ ಸ್ಥಾನದಲ್ಲಿಯೂ ಕಂಡುಕೊಳ್ಳಬೇಕು.

ಈ ಮುಂತಾದ ಆಧಾರಗಳಿಂದ ಸಿದ್ಧಿಸಬಹುದಾದ "ಶರೀರಾತ್ಮಭಾವ ಸಂಬಂಧ" ದಿಂದ ಅನೇಕ ಶ್ರುತ್ಯರ್ಥಗಳು ಸಮಂಜಸವಾಗಿ ಬಿಡುತ್ತವೆ.

## ಬಿನ್ನಪ ೯

ಒಂಭತ್ತನೆಯ ಬಿನ್ನಪದಲ್ಲಿ "ಈಶ್ವರನು ಸರ್ವಸಮ" ನೆಂದು ಸ್ಥಾಪಿಸಿದೆ. ನಮಗೇನಾದರೂ ಒಳ್ಳೆಯದಾದರೆ ಅದು ನಮ್ಮಿಂದ ಆಯಿತೆಂದೂ, ಕೇಡಾದರೆ ಅದು ದೇವರಿಂದ ಆಯಿತೆಂದೂ ನಾವೆಲ್ಲರೂ ತಿಳಿದಿರುತ್ತೇವೆ. ಇದು ಅಜ್ಞಾನವಿಲಾಸ ! ಈಶ್ವರನಿಗೆ ದೋಷ ಹೊರಿಸುವುದರಲ್ಲಿಯೇ ಎಲ್ಲರಿಗೂ ಅಭಿರುಚಿ. ನಿರ್ದೋಷಿಯಾದ ಲೋಕಮಾತೆ ಸೀತೆಯ ವಿಚಾರದಲ್ಲೇ ಜನ ತಪ್ಪು ಹೊರಿಸಿತು. ಹೆಂಡತಿಗೇ ಲೋಕನಿಂದೆ ತಪ್ಪದಿರುವಲ್ಲಿ ಗಂಡನಿಗೆ ಕೇಳಬೇಕೆ ? ದೇವರ ಮೇಲೆ ಹೇಳುವ ಆಕ್ಷೇಪಗಳು ಮೂರು ಬಗೆಯಾಗಿವೆ. "ವೈಷಮ್ಯ, ಪಾರತಂತ್ರ್ಯ, ದಯಾಹೀನತೆ." ಈ ಒಂಭತ್ತನೆಯ ಬಿನ್ನಪದಲ್ಲಿ ಈ ಮೂರು ಬಗೆಯ ಆಕ್ಷೇಪಗಳಿಗೂ ಸಮಾಧಾನ ಹೇಳಿದೆ.

"ಒಬ್ಬನಿಗೆ ಅಷ್ಟೈಶ್ವರ್ಯ ; ಮತ್ತೊಬ್ಬ ದಟ್ಟದರಿದ್ರ ; ಒಬ್ಬನಿಗೆ ಸುಖವಿಲಾಸ ; ಮತ್ತೊಬ್ಬನಿಗೆ ಉಣ್ಣಲು ಅನ್ನವಿಲ್ಲ ; ಉಡಲು ಬಟ್ಟೆ

ಯಿಲ್ಲ; ಕೂರಲು ತಾವು ಇಲ್ಲ. ಈ ವಿಷಮಸೃಷ್ಟಿ ಭಗವಂತನಿಗೆ ತಕ್ಕುದೇ ? ಅವನು ಸರ್ವ ಸಮನಾಗಿದ್ದರೆ ಎಲ್ಲರನ್ನೂ ಏಕೆ ಸುಖವಾಗಿ ರಿಸಬಾರದು ?" ಇದು ವೈಷಮ್ಯ ಪ್ರಶ್ನೆಯ ಭಾವ. "ನಮ್ಮ ನಮ್ಮ ಕರ್ಮಗಳಿಗೆ ಅಧೀನವಾಗಿ ನಮಗೆ ಸುಖದುಃಖಗಳನ್ನು ಬೇರೆಬೇರೆಯಾಗಿ ದೇವರು ಕಲ್ಪಿಸಿದ್ದಾನೆ ಎನ್ನುವುದಾದರೆ, ಈಶ್ವರನು ಕರ್ಮಕ್ಕೆ ಅಧೀನ ನಾದ. ಅಂತೂ ಈಶ್ವರನು ಸ್ವತಂತ್ರನಲ್ಲ. ಇದು ಪಾರತಂತ್ರ್ಯಶಂಕೆ, ಅವನು ನಮ್ಮ ಪುಣ್ಯಪಾಪ ಕರ್ಮಗಳಿಗೆ ಅಧೀನನಲ್ಲದೆ ಇದ್ದ ಪಕ್ಷದಲ್ಲಿ ನಮಗೆಲ್ಲಾ ಏತಕ್ಕಾಗಿ ಮೋಕ್ಷ ಕೊಟ್ಟಿಲ್ಲ? ಪುಣ್ಯಕಾರ್ಯದಿಂದ ಸ್ವರ್ಗ ವನ್ನೂ ಪಾಪಕರ್ಮಗಳಿಂದ ನರಕವನ್ನೂ ಸೇರಿಸುವ ಅವನೆಂತಹ ಸ್ವತಂತ್ರನು ?

ದೇವರು ಮಾಡುವ ಈ ವೈಷಮ್ಯಗಳನ್ನು ನೆನೆದರೆ ಅವನಿಗೆ ಕೊಂಚವೂ ದಯೆಯಿಲ್ಲವೆಂದು ವ್ಯಕ್ತವಾಗುವಂತೆ ತೋರುತ್ತದೆ. ಈ ನೈರ್ಘೃಣ್ಯಶಂಕೆ ಜ್ಞಾನಿಗಳಿಗೂ ಬರುವಂಥದು! ಇದಕ್ಕೆ ಉದಾಹರಣೆ ಯಾಗಿ "ಆಡಿಯಾಡಿ" ಎನ್ನುವ ತಿರುವಾಯ್‌ಮೊಳಿಯಲ್ಲಿ "ಎನದ ಪಳವಣ್ಣರ್ ತಹವುಗಳೇ" ಎಂದು ನಮ್ಮಾಳ್ವಾರ್ರು ತಾಯಿ ಅವಸ್ಥೆ ಯಲ್ಲಿ ಹೇಳುವಾಗ, ಅವರ ಭಾವವನ್ನು ವಿಚಾರಮಾಡೋಣ. ಆಳ್ವಾ ರದು ಶ್ರೀವೈಷ್ಣವಕುಲ. ಶ್ರೀವೈಷ್ಣವತ್ವಪೂರ್ತಿ ಅವರ ಮಾತಾಪಿತೃಗಳಿ ಗಿದೆ. ಕನ್ಯೆಗೆ ತಂದೆತಾಯಿಗಳಾಗಿರುವುದರಲ್ಲಿ ಬಲು ನೋವಿದೆ. ಮದು ವೆಗೆ ಮುಂಚೆ "ಕ್ವೇಯಂ ನೇಯಾ ಕನ್ಯಾ?" ಎಂದು ಸಾಯಣ ಭಾಷ್ಯದಲ್ಲಿ ಕನ್ಯಾಶಬ್ದಕ್ಕೆ ವ್ಯುತ್ಪತ್ತಿ ಹೇಳಿರುವಂತೆ ಸರಿಯಾದ ಅಳಿಯ ನನ್ನು ಹುಡುಕುವುದೇ ಆಗಿಬಿಡುತ್ತದೆ! ಒಬ್ಬನ ಕೈಗೆ ಇತ್ತಮೇಲೆ "ಅಲ್ಲಿ ಮಗಳು ಸುಖವಾಗಿದ್ದಾಳೆಯೆ ? ಇಲ್ಲವೆ ?" ಈ ಚಿಂತೆ ಹೀಗೆ ಯಾವ ಜ್ಜೀವ ಕನ್ಯಾಪಿತೃತ್ವ ಕಷ್ಟ. ಭಗವಾನ್ ಎಂಬ ನಾಯಕನೊಡನೆ ತನ್ನ ಮಗಳು ಸೇರಲಾಗದಿರುವಾಗ ಉಂಟಾಗಿರುವ ಮೋಹ ಕಂಡು ಅಕ್ಕಪಕ್ಕ ದವರು ಬಂದು ತಾಯಿಯನ್ನು ವಿಚಾರಿಸುತ್ತಾರೆ. ಅದಕ್ಕೆ ತಾಯಿಯಾ ದವಳು ಬಂದವರ ಬಳಿ ದೇವರನ್ನು ಛೀಮಾರಿ ಮಾಡುತ್ತಾಳೆ. "ಇಂಥ

ಒಳ್ಳೆ, ಆಳಿಯಂದಿರು ಶಿಷ್ಯರು, ನಾಲ್ಕು ಜನ ಇದ್ದರೆ ಸಾಕು ಲೋಕವೆಲ್ಲಾ ಅದೆಷ್ಟು ಕ್ಷೇಮದಿಂದಿರುವುದೋ?" ಚಿನ್ನದ ಗಣಿಯಲ್ಲಿ ಚಿನ್ನವಿರುವಂತೆ ದೇವರು ದಯಾಖನಿ ಯೆಂಬ ಅರಿವು ಇದ್ದರೂ ಅವನನ್ನು ಹೀಗೆ ಬೈಯು ವುದು, ತಾವು ಪಡುವ ಕಷ್ಟದ ಅತಿರೇಕದಿಂದ. ಶ್ರೀ ಪರಾಶರಭಟ್ಟ ರನ್ನು ಚಿಕ್ಕ ವಯಸ್ಸಿನಲ್ಲೇ ಪರಂಧಾಮಕ್ಕೆ ಕರೆದುಕೊಂಡುದಕ್ಕಾಗಿ ಜ್ಞಾನಿಗಳು ಕೂಡ ದೇವರನ್ನು ನಿಂದಿಸುತ್ತಿದ್ದರು.

ಆದರೆ ದೇವರು ಸರ್ವಸಮ. ಈ ಅರ್ಥ ಮನಸ್ಸಿಗೆ ಚೆನ್ನಾಗಿ ನಾಟಬೇಕು. ಒಬ್ಬರಿಗೆ ಸುಖ, ಮತ್ತೊಬ್ಬರಿಗೆ ದುಃಖ ಕೊಡಬೇಕೆಂಬ ವೈಷಮ್ಯಭಾವ ದೇವರಿಗಿಲ್ಲ. ಗೀತೆಯಲ್ಲೇ ಹೇಳಿದೆ "ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹದೇವತಾಃ .... ತಸ್ಯಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್." "ಸಕಲ ಕರ್ಮಗಳಿಗೂ ಫಲವನ್ನು ಕೊಡುವವನು ಭಗವಂತನೇ ಆಗಿದ್ದರೂ ಅವನನ್ನು ಏಕೆ ಎಲ್ಲರೂ ಪೂಜಿ ಸುವುದಿಲ್ಲ?" ಎಂಬ ಅರ್ಜುನನ ಮನಸ್ಸಿನಲ್ಲಿರುವ ಶಂಕೆಯನ್ನು ಇಂಗಿ ತಜ್ಞನಾದ ಭಗವಂತನು ತಿಳಿದುಕೊಂಡು, ಇಲ್ಲಿ ಅದಕ್ಕೆ ಉತ್ತರ ಹೇಳಿ ದ್ದಾನೆ. ಅವರವರ ಕರ್ಮಾನುಸಾರವಾಗಿ ಅವರವರಿಗೆ ಹುಟ್ಟುವ ರುಚಿ, ಅಭಿಲಾಷೆಗಳನ್ನು ತೃಪ್ತಿಪಡಿಸಿಕೊಳ್ಳುವುದಕ್ಕಾಗಿ ಜನಗಳು ಇತರ ದೇವ ತಾಭಜನೆಯನ್ನು ಮಾಡುತ್ತಾರೆ. ಇದಕ್ಕೆ ಕರ್ಮಾನುಗುಣವಾಗಿ ಫಲ ವನ್ನು ದಯಪಾಲಿಸುವ ಭಗವಂತನು ಒಂದು ವಿಧದಲ್ಲಿ ಹೊಣೆಗಾರನಾ ಗಿದ್ದರೂ ಮತ್ತೊಂದು ವಿಧದಲ್ಲಿ ಈ ಕರ್ಮಗಳನ್ನು ಮಾಡುವ ಜನ ಗಳೂ ಹೊಣೆಗಾರರು. ಈ ವಿಧವಾದ ವಿಚಿತ್ರಸೃಷ್ಟಿಗೆ ಭಗವಂತನು ಕರ್ತನಾಗಿಯೂ, ಅಕರ್ತನಾಗಿಯೂ ಇದ್ದಾನೆ. ಅಂದರೆ "ಅವರವರ ಸುಖದುಃಖಗಳನ್ನು ಅವರವರೇ ಪಡೆದುಕೊಳ್ಳುತ್ತಾರೆ. ಸೃಷ್ಟಿ ನನ್ನಿಂ ದಾದರೂ, ಆ ಸೃಷ್ಟಿಯಲ್ಲಿ ಕಂಡುಬರುವ ವ್ಯತ್ಯಾಸಕ್ಕೆ ನಾನು ಹೊಣೆ ಯಲ್ಲ."

ಭಗವಂತನನ್ನು ಸರಿಯಾಗಿ ಆರಾಧಿಸದೆ ಇರುವುದಕ್ಕೆ ಜನಗಳ ಪಾಪ ಒಂದೇ ಕಾರಣ. ಭಗವದಾರಾಧನ ಎನ್ನುವುದು ಸುಲಭವಾದ

ಅಂಶವಲ್ಲ. ಭಗವಂತನನ್ನು ಪೂಜಿಸಲು ಅಡ್ಡಿ ಆತಂಕಗಳು ಜನರಿಗಿರು ತ್ತವೆ. ದೊಡ್ಡವರ ಹತ್ತಿರ ಶಾಸ್ತ್ರಾರ್ಥ ಕೇಳುವಾಗ "ಹೌದು, ನಾಳೆ ಯಿಂದ ಹೊತ್ತಿಗೆ ಮುಂಚೆ ಎದ್ದು ಸ್ನಾನಮಾಡಿ ಕರ್ಮಾನುಷ್ಠಾನ ಮಾಡೋಣ" ಎನ್ನಿಸುತ್ತದೆ. ಹೀಗೆ ಮನಸ್ಸಿನಲ್ಲಿ ಬಯಕೆಯಿದ್ದರೂ ಕೆಲಸದಲ್ಲಿ ಅದು ನಡೆಯದು. ಇದಕ್ಕೆ ಕಾರಣ ಪಾಪ. ಆ ಪಾಪ ಹೋಗ ಬೇಕಾದರೆ ಬ್ರಹ್ಮಜ್ಞಾನ ಬೇಕು. ಬ್ರಹ್ಮನನ್ನು ಎಂಥದೆಂದು ತಿಳಿಯ ಬೇಕು.

"ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಂ .... ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ .... ಇತಿ ಮಾಂ ಯೋಽಭಿಜಾನಾತಿ ...." ಪ್ರಪಂಚಕ್ಕೆ ದೇವರು ಕರ್ತನಾದರೂ ಕರ್ತನಲ್ಲ. ಈ ಒಗಟನ್ನು ಚೆನ್ನಾಗಿ ಬಿಡಿಸಬೇಕು. ಜನರಲ್ಲಿ ಪರ ಸ್ಪರ ಕುಶಲಪ್ರಶ್ನೆಯಾಗುವಾಗ ಗಮನಿಸಿ. "ವರ್ಷಕ್ಕೆ ನಿಮಗೆಷ್ಟು ದಿನಸಿ ಬರುತ್ತದೆ?" "ಬರುವುದೇನೋ ಹತ್ತು ತಿಂಗಳುಗಳಿಗೆ ಆಗು ತ್ತದೆ. ದೇವರು ಇನ್ನೆರಡು ತಿಂಗಳುಗಳಿಗೆ ಕರುಣಿಸಿ ಬಿಟ್ಟಿದ್ದಾನೆ!" ಎನ್ನುತ್ತಾರೆಯೇ ಹೊರತು ಹತ್ತು ತಿಂಗಳು ಬರುವ ದಿನಸಿ ತನ್ನ ಕರ್ಮ ಫಲವಾಗಿ ದೇವರು ಕೊಟ್ಟಿದ್ದಾಗಿಯೂ, ಮಿಕ್ಕ ಎರಡು ತಿಂಗಳ ಧಾನ್ಯ ವನ್ನು ಪಡೆಯುವುದಕ್ಕೆ ತಾನು ಕರ್ಮಮಾಡಿಲ್ಲವೆಂದೂ ತಿಳಿಯುವುದಿಲ್ಲ! ವೇದಾನ್ತದೇಶಿಕರು ಇಲ್ಲಿ ಬಲು ಸೊಗಸಾಗಿ ವ್ಯಾಖ್ಯಾನಮಾಡಿದ್ದಾರೆ. ಭೂಮಿ ಉತ್ತು, ಅವರೆ, ತೊಗರಿ, ಬಿತ್ತಿ ನೀರೆರೆದರೆ, ಒಂದೇ ತೆರದ ನೀರು ಮಣ್ಣು ಇದ್ದರೂ, ನೊಳಕೆ, ಎಲೆ ಬೇರೆಬೇರೆ ರೀತಿಯಲ್ಲಿರುತ್ತವೆ. "ಧರಣಿ ಜಲಸಂಯೋಗ" ಎರಡಕ್ಕೂ ಒಂದೇ ಸಮನಾದರೂ ಬಿತ್ತದ ಲ್ಲಿರುವ 'ಸೂಕ್ಷ್ಮಾಂಶ' ಹೇಗೆ ಅವುಗಳ ವ್ಯತ್ಯಾಸಕ್ಕೆ ಕಾರಣವೋ ಹಾಗೆ ಭಗವಂತನು ಸೃಷ್ಟಿಗೆ ಕರ್ತನಾದರೂ, ಸೃಷ್ಟಿಯ ವೈಚಿತ್ರ್ಯಕ್ಕೆ ವ್ಯತ್ಯಾಸಕ್ಕೆ ಕರ್ತನಲ್ಲ. ಈ ತತ್ವ ಮನಸ್ಸಿಗೆ ಹಿಡಿದ ಹೊರತು ಈ "ವೈಷಮ್ಯ ಶಂಕೆ" ತೊಲಗದು. ಹೀಗೆ ದೇವರನ್ನು ತಿಳಿದಾಗ ನಮ್ಮ ಕರ್ಮವು ಹೋಗುವುದು ನಾವು ಅನುಭವಿಸುವ ಸುಖದುಃಖಗಳಿಗೆ ನಮ್ಮ ಕರ್ಮ

ಕಾರಣ ಹೋಯಿತು, ಈಶ್ವರನು ಕಾರಣನೆನ್ನುವುದು ಇನ್ನೂ ಪಾಪದ ಹೊರೆ ಹೊತ್ತುಕೊಂಡಂತೆ! ಆದುದರಿಂದ ಬ್ರಹ್ಮನನ್ನು ಸರ್ವಸಮನಾಗಿ ತಿಳಿದು ಕೊಳ್ಳುವುದು ನಮ್ಮ ಪಾಪಗಳನ್ನು ಕಡಿಮೆಮಾಡುತ್ತದೆ.

ಶ್ರೀ ಭಾಗವತದಲ್ಲಿ, ರುಕ್ಮಿಣೀ ಅಪಹರಣದ ಸಂದರ್ಭದಲ್ಲಿ, ರುಕ್ಮಿ ಕೃಷ್ಣನನ್ನು ತಡೆಯುತ್ತಾನೆ. ಆಗ ಕೃಷ್ಣನು ರುಕ್ಮಿಗೆ ಭಂಗಮಾಡು ತ್ತಾನೆ. ಕ್ಷತ್ರಿಯರಿಗೆ ವಧಕ್ಕಿಂತ 'ಭಂಗ' ಹೆಚ್ಚು ಅವಮಾನ. ಆಗ ಬಲರಾಮ ಬಂದು ಕೃಷ್ಣನ ಮೇಲೆ ಕೋಪಿಸಿಕೊಂಡ ರುಕ್ಮಿಣಿಯ ಸಹೋದರನಿಗೆ ಹೇಳುತ್ತಾನೆ. "ಯತಃ ಸ್ವಕೃತಭುಕ್ ಪುಮಾನ್" ಮಾಡಿದ್ದುಣ್ಣೋ ಮಹಾರಾಯ! ಪಿಳ್ಳೈಲೋಕಾಚಾರ್ಯರು ಪ್ರಪನ್ನ ದಿನಚರಿ ಹೇಳುವಾಗ "ಕುತ್ತಂಶ್ಶೈದವರ್‌ಹಳ್ ಪಕ್ಕಲ್ ಶಿರುಪ್ಪುಂ, ಉಹುಪ್ಪುಂ, ಉಪಕಾರ ಸ್ಮೃತಿಯುಂ" ಎಂದು ಮುಂತಾಗಿ ಹೇಳುತ್ತಾರೆ. ತಮಿಳರೂ ಸಹ ತನಗೆ ಒಬ್ಬನಿಂದ ಕಷ್ಟ ಬಂದಾಗ "ಅಳಣಂ, ಶಿರಿಕ್ಕಣಂ" ಎನ್ನುತ್ತಾರೆ. ನಮಗೆ ಒಬ್ಬ ತೊಂದರೆ ಮಾಡಿದ್ದು ಈಶ್ವರನಿಗೆ ಗೊತ್ತಾಗಿ ಆತ ಅವನನ್ನು "ಅಯ್ಯೋ! ಶಿಕ್ಷಿಸಿ ಬಿಡುತ್ತಾನಲ್ಲಾ!" ಎಂದು ಹೊಡೆದವನಿಗಾಗಿ ಅಳಬೇಕು. ಇವನು ನನ್ನನ್ನು ಹೊಡೆದದ್ದರಿಂದ ನನ್ನ ಒಂದು ಕರ್ಮ ತೀರಿತಲ್ಲಾ! ಎಂದು ಸಂತೋಷಪಡಬೇಕು.

ಪ್ರಜಾಪರಿಪಾಲನೆಗಾಗಿ ಒಂದು ಕಾನೂನು ಇರುತ್ತದೆ. ಆ ಕಾನೂ ನನ್ನು ಅನುಸರಿಸುವುದರಿಂದ ಸರಕಾರದ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತ ದೆಯೆ? ಹಾಗೆ ಅವನವನ ಕರ್ಮಾನುಗುಣವಾಗಿ ಸುಖದುಃಖಗಳನ್ನು ಕೊಟ್ಟಾಕ್ಷಣಕ್ಕೆ ದೇವರು ಆ ಕರ್ಮಗಳಿಗೆ ಅಧೀನನೆನ್ನಲಾಗದು. ಅವನು ಕರುಣೆಯ ಕಡಲು. ಪುತ್ರವಾತ್ಸಲ್ಯದಿಂದ ಕಡೆಗಾಲದಲ್ಲಿ ಹೇಳಿದ 'ನಾರಾಯಣ' ಎಂಬ ನಾಮದಿಂದ ಅಜಾಮಿಳನಿಗೆ ಮುಕ್ತಿ ಕೊಡು ತ್ತಾನೆ. ಹೀಗೆ ಒಂದು ವ್ಯಾಜಮಾತ್ರದಿಂದ ನಲ್ಮೆ ಎಣಿಸುವ ಆ ಕರು ಣಾನಿಧಿಯಲ್ಲಿ 'ದಯೆಯಿಲ್ಲ' ಎನ್ನಬಾರದು.

## ಬಿನ್ನಪ ೧೦

ಇನ್ನು ಹತ್ತನೆಯ ಬಿನ್ನಪ. ಈ ಬಿನ್ನಪದಿಂದ ಈಶ್ವರ ತತ್ವ ನಿರೂಪಣೆ ಮುಕ್ತಾಯವಾಗುತ್ತದೆ. ಪ್ರಪಂಚಕ್ಕೆ ಉಪಾದಾನ, ನಿಮಿತ್ತ, ಸಹಕಾರಿ ಈ ಮೂರು ವಿಧ ಕಾರಣಗಳೂ ಬ್ರಹ್ಮನೆಂಬುದೇ ಈ ಬಿನ್ನಪದ ಸಾರಾರ್ಥ. 'ಬಟ್ಟೆ' ಎಂಬ ಒಂದು "ಕಾರ್ಯವಸ್ತು" ಉಂಟಾಗಬೇಕಾದರೆ, ಉಪಾದಾನಕಾರಣ ಹತ್ತಿ, ನಿಮಿತ್ತಕಾರಣ ನೇಯ್ಗೆಯವನು; ಸಹಕಾರಿಕಾರಣ ಮಗ್ಗ. ಪ್ರಪಂಚವೆಂಬ ದೊಡ್ಡ ಕಾರ್ಯಕ್ಕೆ ಈ ಮೂರು ಕಾರಣಗಳೂ ಬೇರೆಬೇರೆಯಲ್ಲ. ಬ್ರಹ್ಮ ಒಬ್ಬನೇ ಸಕಲವಿಧ ಕಾರಣ. ಲೋಕಾನುಭವದಲ್ಲಿ ಈ ಕಾರಣಗಳು ಬೇರೆ ಬೇರೆಯಾಗಿ ಕಂಡುಬಂದರೂ ಶಾಸ್ತ್ರದೃಷ್ಟಿಯಿಂದ ಜಗತ್ತಿಗೆ ಮೂರು ವಿಧ ಕಾರಣವೂ ಬ್ರಹ್ಮನೆಂದು ಈ ಬಿನ್ನಪದಲ್ಲಿ ಉಪಸಂಹರಿಸಲ್ಪಟ್ಟಿದೆ.

ಈ 'ಕಾರಣತ್ವ' ವನ್ನು ಏಕೆ ಇಲ್ಲಿ ನಿರೂಪಿಸಬೇಕು? ಎಂದರೆ, ಮುಂದೆ ಭಗವತ್ಪ್ರಾಪ್ತಿಗೆ ಉಪಾಯ, ಭಕ್ತಿ ಎಂದು ಹೇಳುತ್ತದೆ. ಭಕ್ತಿ ಅಥವಾ ಧ್ಯಾನ ಮಾಡಬೇಕಾದರೆ, ಅದು ದೊಡ್ಡ ವಸ್ತುವನ್ನು ಕುರಿತುದಾಗಿರಬೇಕು. ಜಗತ್ಕಾರಣ ವಸ್ತುವನ್ನೇ ಧ್ಯಾನಮಾಡಬೇಕೆಂದು ಉಪನಿಷತ್ತಿನಲ್ಲಿ ಹೇಳಿರುವುದು. "ಕಾರಣಂ ತು ಧ್ಯೇಯಃ" ಪ್ರಪತ್ತಿಯನ್ನೂ ಕೂಡ ಜಗತ್ಕಾರಣವಸ್ತುವಿನಲ್ಲಿಯೇ ಎಸಗಬೇಕು. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ... ... ... ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎನ್ನುವ ಉಪನಿಷದ್ವಾಕ್ಯದಲ್ಲಿ ಇದು ವಿಶದವಾಗುತ್ತದೆ.

ದ್ವೈತಿಗಳು ಬಟ್ಟೆಗೆ ಹತ್ತಿಯಂತೆ, ಪ್ರಪಂಚಕ್ಕೆ ದೇವರು ಉಪಾದಾನಕಾರಣ ಎನ್ನುವುದನ್ನು ಒಪ್ಪುವುದಿಲ್ಲ. ಯಾದವಪ್ರಕಾಶರು ಬ್ರಹ್ಮನೇ ಚಿತ್, ಅಚಿತ್, ಈಶ್ವರ ರೂಪವಾಗಿ ಪರಿಣಮಿಸುವುದಾಗಿ ಹೇಳುತ್ತಾರೆ. ಮಾಧ್ವರು 'ದೇವರು ನಿರ್ವಿಕಾರ' ನೆಂದು ಹೇಳಿರುವ ಶ್ರುತಿಗೆ ವಿರೋಧ ಬರುವುದೆಂಬ ಭಯದಿಂದ "ಉಪಾದಾನ ಕಾರಣತ್ವ"

ಒಪ್ಪುವುದಿಲ್ಲ. ಯಾದವಪ್ರಕಾಶರು "ಉಪಾದಾನ ಕಾರಣತ್ವ" ಬ್ರಹ್ಮನಿಗೆ ಒಪ್ಪಿದರೂ, ನಿರ್ವಿಕಾರತ್ವಶ್ರುತಿವಿರೋಧ ಇದ್ದೇ ಇರುತ್ತದೆ. ಈ ಉಭಯ ಸಂಕಟವನ್ನು ಬಲು ಸುಖವಾಗಿ ರಾಮಾನುಜರು ನೀಗಿಸಿದ್ದಾರೆ. ಈ ವಿರೋಧಪರಿಹಾರ ಆನಂದವಾಗಿಬಿಡುತ್ತದೆ. ಚಿಕ್ಕದೇವರಾಜರು "ಮೊರಟು ವಿಶಿಷ್ಟಾದ್ವೈತಿ" ಎಂದು ತೋರುತ್ತದೆ. ಇತರ ಮತಗಳ ತತ್ತ್ವಾರ್ಥಗಳನ್ನು ಕಲಸಿ ಹೇಳದೆ ಇರುವುದು, ಅವರ ಎದೆಯಲ್ಲಿ ವಿಶಿಷ್ಟಾದ್ವೈತ ತತ್ವ ಚೆನ್ನಾಗಿ ಊರಿದ್ದುದಕ್ಕೆ ನಿದರ್ಶವಾಗಿದೆ.

"ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ" ಈ ಉಪನಿಷತ್ತು ನಿಜವಾದ ತತ್ತ್ವವನ್ನು ತಿಳಿಯಪಡಿಸುತ್ತದೆ. ಸುಖದುಃಖಗಳನ್ನು ಅನುಭವಿಸುವವನು ಒಬ್ಬ, ಅನುಭವಿಸಲ್ಪಡುವುದು ಒಂದು; ಇವೆಲ್ಲಕ್ಕೂ ಪ್ರೇರಣೆಮಾಡುವವನೊಬ್ಬ. ಹೀಗೆ ತತ್ವತ್ರಯದ ಸ್ಪಷ್ಟ ನಿರೂಪಣೆ ಇದರಲ್ಲಿದೆ. ಚಿತ್, ಅಚಿತ್, ಈಶ್ವರ ಇದೇ ಆ ತತ್ವತ್ರಯ. ಚಿತ್ ಎನಿಸಿದ ಜೀವಾತ್ಮಗಳೂ, ಅಚಿತ್ತುಗಳೂ, ಎಂದೆಂದಿಗೂ ಭಗವಂತನ ಶರೀರಗಳು. ಈ ಚಿದಚಿತ್ತುಗಳೊಡನೆ ಕೂಡಿರುವ ದೇವರೊಬ್ಬನೇ. ಇಂಥ ವಿಶಿಷ್ಟ ಒಬ್ಬನೇ ಹೊರತು ಸಮಸ್ತ ಚೇತನಾಚೇತನಗಳೊಡನೆ ಕೂಡಿರುವವ ಮತ್ತೊಬ್ಬನಿಲ್ಲ. ಅಂತೆಯೇ ಅದು "ವಿಶಿಷ್ಟಾದ್ವೈತ."

ಪ್ರಳಯದೆಶೆ, ಸೃಷ್ಟಿದೆಶೆ ಎಂದು ಎರಡುಂಟು. ಚತುರ್ಮುಖಬ್ರಹ್ಮನ ನೂರು ವರ್ಷಕ್ಕೆ ಒಂದು ಮಹಾಪ್ರಳಯವಾಗುತ್ತದೆ. (ಈಗ ಚತುರ್ಮುಖನಿಗೆ 51ನೇ ವರ್ಷ ನಡೆಯುತ್ತಿದೆ.) ಆ ಮಹಾಪ್ರಳಯದಲ್ಲಿ ಎಲ್ಲಾ ಚಿತ್ತು, ಅಚಿತ್ತುಗಳೂ ಸೂಕ್ಷ್ಮರೂಪವಾಗಿ ದೇವರಲ್ಲಿ ಹುದುಗಿರುತ್ತವೆ. ಈ ಸೂಕ್ಷ್ಮಸ್ಥಿತಿಯನ್ನೂ ಸ್ಥೂಲಸ್ಥಿತಿಯನ್ನೂ ತಿಳಿಯುವುದರಲ್ಲಿಯೇ "ವಿಶಿಷ್ಟಾದ್ವೈತ" ಇರುವುದು. ಒಂದು ಪಾತ್ರೆಯಲ್ಲಿ ಉಪ್ಪು ಹರಳು ಇರುತ್ತದೆ. ಆಗ ಅದನ್ನು 'ಉಪ್ಪು' ಎಂಬ ಹೆಸರಿನಿಂದ ಕರೆಯಬಹುದು. ಆ ಉಪ್ಪಿಗೆ ಒಂದು ಆಕಾರವೂ ಇರುತ್ತದೆ. ಇದು ಉಪ್ಪಿನ ಸ್ಥೂಲಾವಸ್ಥೆ–ನಾಮರೂಪಾವಸ್ಥೆ. ಅದೇ ಉಪ್ಪುಹರಳನ್ನು ನೀರಿಗೆ ಹಾಕೋಣ. ಆಗ ನೀರಿನಲ್ಲಿ ಉಪ್ಪು ಇದೆಯೆ, ಇಲ್ಲವೆ? ಇರುತ್ತದೆ.

ಆದರೆ ಆ ಹೆಸರು ಹೇಳಲು ವಸ್ತು ಕಾಣದು: ಆಕಾರವಿಲ್ಲ. ಆಗ ಉತ್ಪತ್ತಿನಲ್ಲಿ ಸೂಕ್ಷ್ಮಾವಸ್ಥೆಯಲ್ಲಿದೆ. ಇದೇ ನಾಮರೂಪವಿಭಾಗಾನರ್ಹಾವಸ್ಥೆ. ಹೀಗೆಯೇ ಪ್ರಳಯಕಾಲದಲ್ಲಿ ಸೂಕ್ಷ್ಮವಾದ ಚಿತ್, ಅಚಿತ್ ಪದಾರ್ಥಗಳೊಡನೆ ಸೇರಿ ದೇವರಿರುತ್ತಾನೆ. ಆಗ ಅವುಗಳನ್ನು ಬೇರೆ ಬೇರೆಯಾಗಿ ತಿಳಿಯಲು ಆಗುವುದಿಲ್ಲ. ಕಾರಣ, ಅವುಗಳ ಆಕಾರವೂ ಆಗ ಕಾಣದು. ಅಂತೆಯೇ ಅವುಗಳನ್ನು ಹೆಸರಿಸಲೂ ಆಗದು. ಮುಂದೆ ಅವುಗಳ ಸೃಷ್ಟಿ ಆಗುತ್ತದೆ ಎಂದಾಗ, ಸ್ಥೂಲ ಚಿದಚಿತ್ತುಗಳೊಡನೆ ದೇವರು ಕೂಡಿಕೊಳ್ಳುತ್ತಾನೆ. ಆ ಸೃಷ್ಟಿಯಲ್ಲಿ ಚಿತ್, ಅಚಿತ್‌ಗಳನ್ನು ಹೆಸರಿಸಲೂ ಬಹುದು, ಮತ್ತು ಅವುಗಳ ಆಕಾರವೂ ಕಾಣುತ್ತದೆ. ಇದೇ ಕಾರ್ಯದೆಸೆ. ಪ್ರಳಯಕಾಲವೆಂಬ ಕಾರಣದೆಸೆಯಲ್ಲಿ ಸೂಕ್ಷ್ಮ ಚೇತನ ಅಚೇತನಗಳೊಡನೆ ಕೂಡಿರುವವನೇ ಸೃಷ್ಟಿಕಾಲದಲ್ಲಿ ಸ್ಥೂಲ ಚೇತನಾಚೇತನಗಳೊಡನೆ ಕೂಡಿದವನಾಗುತ್ತಾನೆ. ಇಂಥ ವಿಶಿಷ್ಟ ಬ್ರಹ್ಮ ಒಬ್ಬನೇ! ಅದೇ "ವಿಶಿಷ್ಟಾದ್ವೈತ."

'ಉಪಾದಾನಕಾರಣ' ವಿಷಯವಾಗಿ ಚಿಕ್ಕದೇವರಾಜರು ಹೇಳುವಾಗ ಕಟಕ ಮಕುಟಾದಿ ಕಾರ್ಯಗಳಿಗೆ ಸ್ವರ್ಣವು ಉಪಾದಾನಕಾರಣವೆನ್ನುವ ಉದಾಹರಣೆಯನ್ನು ಕೊಟ್ಟಿದ್ದಾರೆ. ಈ ಉದಾಹರಣೆಯನ್ನು ಇಟ್ಟುಕೊಂಡೇ ಬ್ರಹ್ಮನು ಪ್ರಪಂಚಕ್ಕೆ ಹೇಗೆ ಉಪಾದಾನಕಾರಣನಾಗಿದ್ದಾನೆಂಬುದನ್ನು ಒಂದು ಬಗೆಯಾಗಿ ನೋಡಬಹುದು. ಚಿನ್ನದ ಘಟ್ಟಿಯ ಅವಸ್ಥೆ ಪ್ರಳಯ. ಒಡವೆಗಳನ್ನಾಗಿ ತಯಾರಿಸಿರುವ ಅವಸ್ಥೆ ಸೃಷ್ಟಿ. ಚಿನ್ನವು ಘಟ್ಟಿಯಾಗಿರುವಾಗ ಉಂಗುರ, ಬಳೆ ಎಂಬ ಹೆಸರಾಗಲೀ ಆಕಾರವಾಗಲೀ ಇರದು. ತಯಾರಿಕೆಯಾದ ಮೇಲೆ ನಾಮ—ರೂಪಗಳು ಬರುತ್ತವೆ. ಅಂತೂ ಚಿನ್ನ ಒಂದೇ! ಅದೀಗ ಒಡವೆಗಳ "ಮೂಲವಸ್ತು." ಹಾಗೆಯೇ ಭಗವಂತ ಎಲ್ಲಕ್ಕೂ ಉಪಾದಾನಕಾರಣ. ಇದರಿಂದ ಒಂದು ಶಂಕೆ ತೋರಬಹುದು. ಬ್ರಹ್ಮನೇ ಲೋಕವಾದರೆ ಬ್ರಹ್ಮನಿಗೆ ವಿಕಾರವುಂಟೆ? ಈ ಶಂಕೆಯನ್ನು ಮುಂದೆ ಪರಿಹರಿಸಬಹುದು.

ಇನ್ನೂ ಒಂದು ಬಗೆಯಲ್ಲಿ "ವಿಶಿಷ್ಟಾದ್ವೈತ" ಎನ್ನುವುದಕ್ಕೆ ವಿವರಣೆ ಕೊಟ್ಟಿದ್ದಾರೆ. ಪ್ರಳಯಕಾಲದಲ್ಲಿ ಸತ್ವ, ರಜಸ್ಸು, ತಮಸ್ಸು, ಈ



ತಿರುನಾರಾಯಣಪುರಂ ಶ್ರೀ ಉಡ್ಯೈಯವರ್
ಅಭಿಷೇಕೋತ್ಸವ ಪ್ರಾರಂಭಸೇವಾ

ಮೂರು ಗುಣಗಳೂ ಹೆಚ್ಚು ಕಡಿಮೆಯಿಲ್ಲದೆ ಒಂದೇ ಸಮನಾಗಿರುತ್ತವೆ. ಅಂದರೆ "ತ್ರಿಗುಣಗಳ ಸಾಮ್ಯಸ್ಥಿತಿ" ಪ್ರಳಯ. ಆದರೆ ಸೃಷ್ಟಿಯಾದಾಗ ಈ ಗುಣಗಳು ಹೆಚ್ಚು ಕಡಿಮೆಗಳಾಗುತ್ತವೆ. ಈ "ಗುಣವೈಷಮ್ಯ ಸ್ಥಿತಿ"ಯೇ ಸೃಷ್ಟಿ. ಆ ಮೂರ್ರು ಗುಣಗಳನ್ನೂ ಸಮನಾಗಿ ಒಳ ಗೊಂಡ ಯಾವ ಪ್ರಕೃತಿಗಳನ್ನು ಯಾವ ಭಗವಂತನು ಪ್ರಳಯಕಾಲ ದಲ್ಲಿ ಶರೀರಗಳನ್ನಾಗಿ ಹೊಂದಿರುವನೋ ಅವನೇ ಸೃಷ್ಟಿಕಾಲದಲ್ಲಿ ವಿಷ ಮಗುಣಗಳನ್ನೊಳಗೊಂಡ ಅದೇ ಪ್ರಕೃತಿಗಳನ್ನು ಶರೀರವಾಗಿ ಹೊಂದಿ ರುತ್ತಾನೆ.

ಪ್ರಕೃತಿಗೆ ಇರುವಂತೆ ಜೀವಾತ್ಮನಿಗೂ ಸ್ಥೂಲ ಸೂಕ್ಷ್ಮ ಅವಸ್ಥೆ ಯುಂಟು. ಜೀವಾತ್ಮನಿಗೆ ಜ್ಞಾನವೆನ್ನುವುದು ನಿತ್ಯಧರ್ಮ. ಆದರೂ ಸೃಷ್ಟಿಕಾಲದಲ್ಲಿ ಜೀವಾತ್ಮನ ಜ್ಞಾನಕ್ಕೆ ಸಂಕೋಚ, ವಿಕಾಸ, ಎರಡೂ ಇರುತ್ತವೆ. ಆದರೆ ಪ್ರಳಯಕಾಲದಲ್ಲಿ ಅತ್ಯಂತ ಸಂಕೋಚವಿರುತ್ತದೆ. ಈ "ಅತ್ಯಂತ ಸಂಕೋಚ" ಎಂಬುದೇ ಜೀವಾತ್ಮನಿಗೆ ಸೂಕ್ಷ್ಮಾವಸ್ಥೆ ಎನ್ನುವುದು. ಸಂಕೋಚ ವಿಕಾಸ ಎರಡೂ ಏರ್ಪಡುವುದೇ ಸ್ಥೂಲಾ ವಸ್ಥೆ. ಅಂದರೆ ಜೀವಾತ್ಮಸ್ವರೂಪಕ್ಕೆ ಸ್ಥೂಲತ್ವವಿಲ್ಲ; ಜೀವಾತ್ಮನ ಧರ್ಮಭೂತವಾದ ಜ್ಞಾನಕ್ಕೆ ಈ ಸೂಕ್ಷ್ಮತ್ವ ಸ್ಥೂಲತ್ವಗಳು. ಇಂಥ ಸೂಕ್ಷ್ಮಜೀವರಾಶಿಗಳನ್ನು ಪ್ರಳಯಸ್ಥಿತಿಯಲ್ಲಿ ಶರೀರವಾಗಿ ಹೊಂದಿರುವ ಪರಮಾತ್ಮನೇ ಸೃಷ್ಟಿಸ್ಥಿತಿಯಲ್ಲಿ ಸ್ಥೂಲ ಜೀವ ಶರೀರಕನಾಗಿ ಆಗುವುದ ರಿಂದ ಅವನು ಉಪಾದಾನ ಕಾರಣನಾಗಬಲ್ಲನು

ಆದರೆ ಯಾದವಪ್ರಕಾಶರು ಹೇಳಿದಂತೆ "ಸ್ವರೂಪ ವಿಕಾರ" ಬ್ರಹ್ಮನಿಗೆ ಅಂಟದು. ಪರಬ್ರಹ್ಮನ ಶರೀರವಾದ ಚಿತ್ ಅಚಿತ್ತುಗಳಲ್ಲಿ "ಸೂಕ್ಷ್ಮತ್ವ, ಸ್ಥೂಲತ್ವ" ಎಂಬ ವಿಕಾರಗಳೇ ಹೊರತು ನೇರವಾಗಿ ಪರ ಬ್ರಹ್ಮನಲ್ಲಿ ಆ ವಿಕಾರಗಳಿಲ್ಲ. ಆದರೆ ಅವನು ಉಪಾದಾನಕಾರಣನಾ ಗುತ್ತಾನೆ. ತಾಯಿಯ ಗರ್ಭದಿಂದ ಹಿಡಿದು ಶೈಶವ, ಬಾಲ್ಯ, ಕೌಮಾರ, ಯೌವನ, ಜರಾ ಈ ವಿಕಾರಗಳೆಲ್ಲಾ ಹೇಗೆ ಶರೀರಗತವೋ! ಅವು ಹೇಗೆ ಜೀವಾತ್ಮನಿಗೆ ತಟ್ಟುವುದಿಲ್ಲವೋ, ಹಾಗೆ ಶರೀರಗತ ವಿಕಾರಗಳು ಶರೀರಿಯಾದ ಪರಬ್ರಹ್ಮನಿಗೆ ಸಾಕ್ಷಾತ್ ಇಲ್ಲ. ಹೀಗೆ ವಿಕಾರವಿಲ್ಲದೆ

ಉಪಾದಾನಕಾರಣ ಬ್ರಹ್ಮ ಆಗುತ್ತದೆ ಎಂಬುದನ್ನು ರಾಮಾನುಜರು ಸಮರ್ಥಿಸಿದ್ದಾರೆ. ಇದರಿಂದ ಉಪಾದಾನ ಶ್ರುತಿಗಳೂ, ಹಾಗೆಯೇ ನಿರ್ವಿಕಾರ ಶ್ರುತಿಗಳೂ ಸಂರಕ್ಷಿತವಾದವು.

ಬ್ರಹ್ಮನ ಉಪಾದಾನಕಾರಣತ್ವವನ್ನೂ ನಿರ್ವಿಕಾರತ್ವವನ್ನೂ ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಶ್ವೇತಕೇತುವಿನ ಚರಿತ್ರೆಯಿಂದ ನೋಡಬಹುದು. ಹನ್ನೆರಡು ವಯಸ್ಸಾದರೂ ಶ್ವೇತಕೇತುವಿನ ತಂದೆ ಮಗನಿಗೆ ಉಪನಯನಮಾಡಲು ಆಗಲಿಲ್ಲ. "ಶಿಷ್ಯ ಆಚಾರ್ಯನ ಬಳಿ ಹೋಗಿ ಅಧ್ಯಯನಮಾಡು" ಎಂದು ತಂದೆ ಹೇಳುತ್ತಾನೆ. ಹನ್ನೆರಡು ವರ್ಷ ಕಾಲ ಗುರುಕುಲವಾಸ ಮಾಡಿ ಶ್ವೇತಕೇತು ಮನೆಗೆ ಹಿಂದಿರುಗುತ್ತಾನೆ. ವಿದ್ಯಾಭ್ಯಾಸವಾದರೂ ಮಗನು ಅವಿನಯದಿಂದ ಇರುವುದು ತಂದೆಗೆ ಕಂಡುಬರುತ್ತದೆ. "ಈ ಹುಡುಗನು ನಿಜವಾಗಿ ಒಂದೇ ವಿದ್ಯೆಯಾದ ಬ್ರಹ್ಮವಿದ್ಯೆ ಕಲಿತಿಲ್ಲ," ಎಂದು ತಂದೆಯು ಊಹಿಸಿ, ಮಗನನ್ನು ಕೇಳುತ್ತಾನೆ. "ಮಗುವೇ, ಯಾವುದನ್ನು ತಿಳಿದರೆ ಎಲ್ಲವೂ ತಿಳಿಯುತ್ತದೆಯೋ ಆ ನಿಯಮಕರ್ತನನ್ನು 'ಆದೇಶ' ವನ್ನು ಕೇಳಿ ತಿಳಿದುಕೊಂಡಿರುವೆಯಾ ?" * "ಅದೆಂತು ತಂದೆ ! ಒಂದು ಕೇಳಿದಾಕ್ಷಣಕ್ಕೆ ಎಲ್ಲವೂ ತಿಳಿಯುವುದು ?" ಮಗನ ಈ ಕಠಿಣಪ್ರಶ್ನೆಗೆ ಉತ್ತರವಾಗಿ ತಂದೆ ಉದ್ದಾಲಕರು ಮೂರು ಉದಾಹರಣೆ ಕೊಡುತ್ತಾರೆ. ಮೃತ್‌ಪಿಂಡ ಅಂದರೆ ಮಣ್ಣುಮುದ್ದೆ ನಖನಿಕೃಂತನ ಎಂದರೆ ಕರೀ ಕಬ್ಬಿಣದ ಘಟ್ಟಿ, ಲೋಹಮಣಿ ಅಂದರೆ ಚಿನ್ನದ ಘಟ್ಟಿ. ಆಯಾಯಾ ಮೂಲವಸ್ತು ಅಥವಾ ಉಪಾದಾನಗಳನ್ನು ತಿಳಿದಾಗ ಅವುಗಳ ಕಾರ್ಯಗಳೂ ತಿಳಿದಂತಾಗುತ್ತವೆ. ಈ ಶ್ರುತಿಯಲ್ಲಿ ಹೇಳಿರುವ ಮೃತ್‌ಪಿಂಡಾದಿ ದೃಷ್ಟಾಂತಗಳು ದ್ವೈತಾದ್ವೈತ ಮತಗಳಲ್ಲಿ ಸರಿಹೋಗವು. ದ್ವೈತಿಗಳು ಬ್ರಹ್ಮನು ಉಪಾದಾನಕಾರಣವೆಂಬುವುದನ್ನು ಒಪ್ಪುವುದಿಲ್ಲ. ಈ ಶ್ರುತಿಗೆ ಅವರು ಕಷ್ಟಪಟ್ಟು ಅರ್ಥಮಾಡಬೇಕಾಗುತ್ತದೆ.

---

* ಯೇನಾಶ್ರುತಂ ಶ್ರುತಂಭವತಿ, ಅಮತಂ ಮತಮವಿಜ್ಞಾತಂ ವಿಜ್ಞಾತಮಿತಿ ಕಥಂ ನು ಭಗವಃ ಸ ಆದೇಶೋ ಭವತೀತಿ.

ಅದ್ವೈತಿಗಳು ಒಂದು ವಿಧವಾಗಿ ಬ್ರಹ್ಮನನ್ನು ಪ್ರಪಂಚಕ್ಕೆ ಉಪಾದಾನಕಾರಣನೆಂದು ಒಪ್ಪುತ್ತಾರೆ. ಆದರೆ ಅವರ ಮತದ ಪ್ರಕಾರ ಕಾರಣವು ಸತ್ಯವಾದರೂ ಕಾರ್ಯವು ಮಿಥ್ಯೆ. ಉದ್ದಾಲಕನು ಇದನ್ನು ಉಪದೇಶಮಾಡುವ ಉದ್ದೇಶವಿದ್ದಿದ್ದರೆ, ಮೃತ್ಪಿಂಡ ಉದಾಹರಣೆಯಲ್ಲಿ "ಮೃತ್ತಿಕೈವ ಸತ್ಯಂ" ಎಂದು ಹೇಳಬೇಕಾಗಿತ್ತು. ಹಾಗೆ ಹೇಳಿದ್ದರೆ ಮಾತ್ರ "ಉಪಾದಾನಕಾರಣ ಸತ್ಯ, ಕಾರ್ಯ ಮಿಥ್ಯೆ" ಎನ್ನಬಹುದಾಗಿತ್ತು. ಆದರೆ ಅವನು "ಮೃತ್ತಿಕೇತ್ಯೇವ ಸತ್ಯಂ" ಎಂದು ಹೇಳಿದ್ದಾನೆ. ಅದರಿಂದ ಕಾರ್ಯ, ಕಾರಣ ಎರಡೂ ಸತ್ಯವೆಂದು ತಿಳಿಯುತ್ತದೆ.

ಇಲ್ಲಿಯವರೆಗೆ ಬ್ರಹ್ಮನು ಹೇಗೆ ಉಪಾದಾನಕಾರಣನೆನ್ನುವುದನ್ನು ಸ್ಪಷ್ಟಪಡಿಸಲಾಯಿತು. ಇನ್ನುಮೇಲೆ ಅವನು ಯಾವ ವಿಧವಾಗಿ ನಿಮಿತ್ತಕಾರಣನಾಗಿಯೂ, ಸಹಕಾರಿಕಾರಣನಾಗಿಯೂ ಇರುತ್ತಾನೆ ಎಂಬುದನ್ನು ನೋಡೋಣ. ಮಡಕೆ ಮುಂತಾದವುಗಳನ್ನು ಮಾಡಬೇಕೆಂಬ ಯೋಚನೆಯು ಕುಂಬಾರನಿಗೆ ಹೊಳೆಯುವಂತೆ ಎಲ್ಲವನ್ನೂ ಸೃಷ್ಟಿಸಬೇಕೆಂಬ "ಸಂಕಲ್ಪ" ದೇವರಿಗೆ ಉಂಟಾಗುವುದರಿಂದ, "ಈ ಸಂಕಲ್ಪ ವಿಶಿಷ್ಟತ್ವವೇಷೇಣ" ದೇವರು ನಿಮಿತ್ತಕಾರಣನಾಗುತ್ತಾನೆ. ಆದರೆ ಕುಂಬಾರನಿಗೆ ಚಕ್ರ, ಚೀವರಾದಿ ಸಲಕರಣೆಗಳು ಬೇಕಾಗುವಂತೆ ಬೇರೊಂದೂ ಉಪಕರಣಗಳಿಲ್ಲದೆಯೇ ದೇವರೇ ಜಗತ್ತನ್ನು ನಿರ್ಮಿಸುವುದರಿಂದ, ಅವನೇ "ಸಹಕಾರಿ ಕಾರಣ" ನೂ ಆಗುತ್ತಾನೆ. ಇದರಿಂದ ಬ್ರಹ್ಮನೊಬ್ಬನೇ ಪ್ರಪಂಚಕ್ಕೆ ತ್ರಿವಿಧಕಾರಣನಾಗಿದ್ದಾನೆಂದು ನಿದರ್ಶನವಾಗುತ್ತದೆ.

## ಬಿನ್ನಪ ೧೧

ಹನ್ನೊಂದನೆಯ ಬಿನ್ನಪದಲ್ಲಿ "ಜೀವತತ್ತ್ವ" ವನ್ನು ಕುರಿತು ಹೇಳಿದೆ. "ಪ್ರಾಪ್ಯ" ನಾದ ದೇವರನ್ನು ಕುರಿತು ಹಿಂದಿನ ಬಿನ್ನಪಗಳಲ್ಲಿ ಹೇಳಿದ ಮೇಲೆ, "ಅಂಥ ದೇವರನ್ನು ಹೊಂದಬೇಕಾದವನು ಯಾರು?" ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆ ಪ್ರಶ್ನೆಗೆ ಉತ್ತರವಾಗಿ "ಪ್ರಾಪ್ತಾ" ಜೀವಾತ್ಮ, ಎಂದು ಈ ಬಿನ್ನಪದಲ್ಲಿ ಹೇಳಿದೆ.

ಮುಂದಿನ ಬಿನ್ನಪಗಳಲ್ಲಿ ಅಚಿತ್‌ಪದಾರ್ಥಗಳ ಪರಿಶೋಧನೆ ನಡೆಯುತ್ತದೆ. ಅದಾದರೂ ಏಕೆಂದರೆ, ಸತ್ಯ ಹೇಳಬೇಕೆನ್ನುವವನು ಸುಳ್ಳೆನ್ನೂ ತಿಳಿದುಕೊಳ್ಳಬೇಕಾಗುತ್ತದೆ. ಅಂತೆಯೇ "ಅಥಾತೋ ಧರ್ಮಜಿಜ್ಞಾಸಾ?" ಎನ್ನುವಲ್ಲಿ "ಅಧರ್ಮ" ವನ್ನೂ ತಿಳಿಯಬೇಕಾಗುತ್ತದೆ. ಸತ್ಯ, ಧರ್ಮ ಇವುಗಳನ್ನು ಆಚರಿಸುವುದಕ್ಕಾಗಿಯೂ, ಸುಳ್ಳು, ಅಧರ್ಮ ಇವುಗಳನ್ನು ತೊರೆಯುವುದಕ್ಕಾಗಿಯೂ, ಹೀಗೆ ಎರಡನ್ನೂ ನಾವು ತಿಳಿದುಕೊಳ್ಳಬೇಕು. ಅಂತೆಯೇ, ಈಶ್ವರನನ್ನು ಹೊಂದುವುದಕ್ಕಾಗಿಯೂ, ಹೊಂದದೆ ಇರಬೇಕಾದ ಹೇಯಪ್ರಕೃತಿಯನ್ನು ಬಿಡುವುದಕ್ಕಾಗಿಯೂ, ಎರಡನ್ನೂ ತಿಳಿದುಕೊಳ್ಳಬೇಕು.

ಮೊದಲು ಈ ಹನ್ನೊಂದನೆಯ ಬಿನ್ನಪದಲ್ಲಿ ಹೇಳುವುದು ಜೀವಾತ್ಮನ ವಿಚಾರ. ಕಣ್ಣಿಗೆ ಕಾಣುವ ಈ ಶರೀರ, ಇಂದ್ರಿಯ, ಮನಸ್ಸು, ಪ್ರಾಣ, ಧರ್ಮಭೂತಜ್ಞಾನ, ಇವುಗಳಲ್ಲಿ ಯಾವುದೂ ಜೀವಾತ್ಮನಾಗದು. ಈ ವಿಚಾರಗಳನ್ನು ಅವರವರೇ ಕೊಂಚ ನಿಧಾನವಾಗಿ ಯೋಚಿಸಿದರೆ ತಿಳಿದುಬಿಡುತ್ತದೆ. ಶರೀರವನ್ನೇ ಜೀವಾತ್ಮನೆಂದು ಎಣಿಸಿದರೆ ಮೃತಶರೀರವೂ ಜೀವಾತ್ಮನಾಗಬಹುದಲ್ಲಾ! ಆದರೆ ಅದಕ್ಕೆ ಜ್ಞಾನವಿದೆಯೆ? ಇಂದ್ರಿಯವೇ ಜೀವಾತ್ಮನೆಂದರೆ, ಕಿವುಡ, ಕುರುಡರಲ್ಲಿ ಜೀವಾತ್ಮನು ಇಲ್ಲವೆಂದು ಹೇಳಬೇಕಾಗುವುದು. "ಹತ್ತು ವರ್ಷದ ಹಿಂದೆ ನಾನು ಚಿಕ್ಕವನಾಗಿದ್ದೆ. ಈಗ ದೊಡ್ಡವನಾಗಿದ್ದೇನೆ" ಈ ಮಾತು ಗಮನಿಸಿ! ದೇಹವು ಪ್ರತಿಕ್ಷಣವೂ ಬದಲಾವಣೆ ಹೊಂದುತ್ತಿದ್ದರೂ, ಬದಲಾವಣೆ ಹೊಂದದ ಒಂದು ವಸ್ತು ಇರುವುದಾಗಿ ಇದರಿಂದ ತೋರುವುದಿಲ್ಲವೆ? ಹೀಗೆ ಜೀವಾತ್ಮನು ಶರೀರಾದಿಗಳಿಗಿಂತ ವಿಲಕ್ಷಣನಾಗಿ ಇರುತ್ತಾನೆಂದು ತಿಳಿಯುತ್ತದೆ.

ಇನ್ನು ಈ ಜೀವನು ಸ್ವತಂತ್ರನೆ ಪರತಂತ್ರನೆ? ಎನ್ನುವ ವಿಚಾರ ಮಾಡೋಣ. ಜೀವನು ಎಂದಿಗೂ ಸ್ವತಂತ್ರನಲ್ಲ, ಪರತಂತ್ರ. ಭಗವಂತನಾದ ಶ್ರೀಮನ್ನಾರಾಯಣನಿಗೆ ಅತ್ಯಂತ ಪರತಂತ್ರ. ಜೀವಾತ್ಮನು ದಾಸ, ಪರಮಾತ್ಮನು ಸ್ವಾಮಿ. ಈ "ಸ್ವ ಸ್ವಾಮಿಭಾವ" ಶರೀರಾತ್ಮಭಾವದಲ್ಲೇ

ಅಂತರ್ಗತವಾಗುತ್ತದೆ. ಚಿಕ್ಕದೇವರಾಜ ಒಡೆಯರು, ಈ ಜೀವಾತ್ಮನು ದೇವರ ದಾಸನೆಂಬ ವಿಷಯವನ್ನು "ಅನನ್ಯ ಜನ ಸುಲಭ" ಎಂಬ ಸಂಬೋಧನೆಯಿಂದ ತಿಳಿಸಿದ್ದಾರೆ. "ತಾನು ಆಳು; ಆತ ಯಜ ಮಾನ" ಎಂಬ ಭಾವಬಂಧ ಇಲ್ಲದೆ ಆ ಪದ, ಪ್ರತಿ ಬಿನ್ನಪದ ಕೊನೆ ಯಲ್ಲೂ ಹೊರಡದು. ಏಕೆಂದರೆ, "ಅನನ್ಯಜನ" ಎಂದು ಹೇಳುವಾಗ ಭಗವಂತನಿಗೆ ನಿಕಟಸಂಬಂಧವನ್ನು ಹೊಂದಿರುವವರೆಂದು ತಿಳಿಯುತ್ತದೆ.

"ಈ ಜೀವಾತ್ಮನು ಭಗವಂತನ ಮಟ್ಟಿಗಲ್ಲ. ದಿವ್ಯಮಹಿಷಿಗಳಿಗೂ ಭಗವದ್ಭಕ್ತರಿಗೂ, ಆಚಾರ್ಯನಿಗೂ ಪರತಂತ್ರ" ಎನ್ನುವವರೆಗೆ ಹೋಗುತ್ತದೆ! ನಾವು ಸ್ವತಂತ್ರರಾಗಿದ್ದಿದ್ದರೆ, ನಾವು ಹಂಬಲಿಸುವುದೆಲ್ಲಾ ಹಸ್ತಗತವಾಗಬೇಕಾದೀತು! ಇಚ್ಛೆ ಇದ್ದರೂ, ನಾವು ಅನೇಕ ಕೆಲಸಗ ಳನ್ನು ಮಾಡಲು ಅಸಮರ್ಥರಾಗುತ್ತೇವೆ. ಇಚ್ಛೆ ಇಲ್ಲದಿದ್ದರೂ ಕೆಲವು ಕೆಲಸಗಳನ್ನು ಮಾಡಬೇಕಾಗುತ್ತದೆ! ಇದೆಂತಹ ಸ್ವಾತಂತ್ರ್ಯ! "ಜೀವಾತ್ಮನು ಪರಮಾತ್ಮನಿಗೆ ಶರೀರ, ಪರತಂತ್ರ." ಈ ವಿಚಾರವನ್ನು ನಾವು ಚೆನ್ನಾಗಿ ಮನದಟ್ಟುಮಾಡಿಕೊಳ್ಳಬೇಕು. ಯಾವ ವಸ್ತುವೇ ಆಗಲಿ, ಒಂದಕ್ಕೇ ನಿಯತವಾಗಿ ಪರತಂತ್ರವಾಗಿರಲು ಸಾಧ್ಯವಿಲ್ಲ. ತಂದೆಯ ಮಾತನ್ನು ಮಗನು ಎಷ್ಟುದಿನ ನಡೆಸುತ್ತಾನೆ? ಮಗನು ಗುಣ ಶಾಲಿಯಾದರೂ, ರಜೋಗುಣ ತಲೆಯೆತ್ತಿದರೆ ಆಯಿತು! ಪಿತೃಪಾರ ತಂತ್ರ್ಯವು ಹಾರಿಹೋಗುತ್ತದೆ. ಹೆಂಡತಿಯು ಗಂಡನಿಗೆ ಪರತಂತ್ರಳಾಗಿ ರುವ ಕಾಲವೂ ಉಂಟು. ಅವನನ್ನು ಲೆಕ್ಕಿಸದ ಕಾಲವೂ ಉಂಟು. ಶಿಷ್ಯನು, ಆಚಾರ್ಯನೆಡೆ ಒಂದೇ ಭಾವನೆಯಿಂದ ಎಂದಿಗೂ ಇರುತ್ತಾನೆಂ ಬುದು ಹೇಗೆ ಖಚಿತ? ಆದರೆ ಅವನವನ ದೇಹವು ಅವನು ಹೇಳುವ ಹಾಗೆ ಕೇಳುತ್ತದೆ, ಅವನ ಆತ್ಮಕ್ಕೆ ತೃಪ್ತಿ ಈಯುತ್ತದೆ. "ಹೀಗೆ ಜೀವಾತ್ಮನಿಗೆ, ಈ ಶರೀರವೊಂದೇ ಪರತಂತ್ರ" ಎಂದು ಒಪ್ಪುವಂತೆ, ಈ ಜೀವಾತ್ಮನೂ ಭಗವಂತನಿಗೆ ಶರೀರವಾಗಿರುವುದರಿಂದ ಪರತಂತ್ರನಾಗು ತ್ತಾನೆ. ಭಾರ್ಯಾಪುತ್ರಾದಿಗಳನ್ನು ಬಳಸಿಕೊಳ್ಳಲಾದೀತೆ?

"ಜೀವಾತ್ಮನು ಪರಮಾತ್ಮನಿಗೆ ಪರತಂತ್ರನೆಂದ ಮೇಲೆ, ದೇವರ ಇಷ್ಟದಂತೆ ಈ ಬದ್ಧಜೀವರು ನಡೆಯುತ್ತಿದ್ದಾರೆಯೆ? ಮುಕ್ತರೇನೋ

ಸರಿ; ದೇವರಿಗೆ ಅಚ್ಚುಮೆಚ್ಚಾಗಿದ್ದು ಸದಾಸರ್ವಕಾಲ ಅವನ ಸೇವೆ ಯಲ್ಲೇ ಮುಳುಗಿದ್ದಾರೆ." ಈ ಪ್ರಶ್ನೆಯನ್ನು "ಎಂಬಾರ್" ಅವರಿಗೆ ಒಬ್ಬರು ಹಾಕಿದಾಗ ಮುಕ್ತಾತ್ಮರನ್ನು ಭೋಗಕ್ಕಾಗಿ ಭಗವಂತನು ಉಪ ಯೋಗಿಸಿಕೊಳ್ಳುವಂತೆ, ಬದ್ಧಾತ್ಮರನ್ನು ಲೀಲೆಗಾಗಿ ಉಪಯೋಗಿಸಿಕೊ ಳ್ಳುತ್ತಿದ್ದಾನೆ ಎಂದು ಹೇಳಿದ್ದಾರೆ. ಈ ಲೀಲಾವಿಭೂತಿಯಲ್ಲಿರುವ ನಾವು ದೇವರ ಚೆಂಡು. "ಭಗವಚ್ಛೇಷತ್ವ" ಎಂಬುದು ಹೇಗೆ ಇಷ್ಟಬಂ ದರೆ ಹಾಗೆ ದೇವರು ಬಳಸಿಕೊಳ್ಳಬಹುದಾದ ಒಂದು ಸ್ಥಿತಿ. ಆದರೆ "ಪಾರತಂತ್ರ್ಯ" ವೆಂಬುದು ಬಳಸಿಕೊಂಡುಬಿಡುವುದೇ ಆಗಿದೆ. ಇದನ್ನೇ "ಯಥೇಷ್ಟ ವಿನಿಯೋಗಯೋಗ್ಯತ್ವಂ ಶೇಷತ್ವಂ" "ವಿನಿಯುಕ್ತತ್ವಂ" "ಪಾರತಂತ್ರ್ಯಂ" ಎಂದು ಪರಿಷ್ಕರಿಸುವುದು.

ಹೀಗೆ ಜೀವಾತ್ಮನು ದೇವರನ್ನು ಹೊಂದುವವನೆಂದಾಗ ಕೊಂಚ ಸ್ವಾತಂತ್ರ್ಯದ ಶಂಕೆ ಸುಳಿದೀತು. ಅದಕ್ಕಾಗಿ ಆಚಾರ್ಯರು ಹೇಳುತ್ತಾರೆ: "ಹೊಂದುವವನೂ ಕೃಷಿಮಾಡುವವನೂ ಎಲ್ಲಾ ದೇವರೇ, ಜೀವಾತ್ಮನ ಲಾಭ ಪರಮಾತ್ಮನಿಗೇ ಹೊರತು, ಜೀವಾತ್ಮನಿಗೆ ಪರಮಾತ್ಮನ ಲಾಭ ವಲ್ಲ. ಆ ಲಾಭದಿಂದ ಉಂಟಾಗುವ ಆನಂದವೂ ಪರಮಾತ್ಮನಿಗೇ." ಆದುದರಿಂದ "ಸ್ವಾಮಿ! ಈ ಅತ್ಯಂತ ಪರತಂತ್ರನಾದ ನನ್ನನ್ನು ನೀನೇ ಕಾಪಾಡಬೇಕು" ಎಂದು ಚಿಕ್ಕದೇವರಾಜ ಒಡೆಯರು ಈ ಹನ್ನೊಂದ ನೆಯ ಬಿನ್ನಪದ ಕೊನೆಯಲ್ಲಿ ಮೊರೆಯಿಡುತ್ತಾರೆ.

ಈ ವಿಷಯಗಳನ್ನೆಲ್ಲಾ ಇನ್ನೂ ವಿಸ್ತಾರವಾಗಿ ಪ್ರಸ್ತಾಪಿಸಬೇಕಾಗಿ ರುವುದರಿಂದ ನಾಳೆಯ ದಿನ ಅವುಗಳನ್ನು ಕುರಿತು ವಿಜ್ಞಾಪನೆಮಾಡಿ ಕೊಳ್ಳುತ್ತೇನೆ.

# ನಾಲ್ಕನೆಯ ದಿನದ ಉಪನ್ಯಾಸ

## ೧೨—೧೮ ಬಿನ್ನಪಗಳು

ಹಿಂದಿನ ಹತ್ತು ಬಿನ್ನಪಗಳಲ್ಲಿ ಚಿತ್, ಅಚಿತ್, ಈಶ್ವರನೆಂಬ ನಿಜವಾದ ತತ್ವಗಳಲ್ಲಿ ಈಶ್ವರನು ನಾರಾಯಣನೆಂಬುದನ್ನು ತೋರಿಸಿ. ಹನ್ನೊಂದನೆಯ ಬಿನ್ನಪದಲ್ಲಿ ಅಂಥ ಈಶ್ವರನನ್ನು ಆಶ್ರಯಿಸಬೇಕಾದ ಜೀವತತ್ವವನ್ನು ಹೇಳಿತು. ಅಂಥ ಜೀವಾತ್ಮನೇ ಹೇಯವಾದ ಅಚಿತ್ತುಗಳನ್ನು ವರ್ಜ್ಯಮಾಡುವವನೂ ಆದುದರಿಂದ, ಆ ಅಚಿತ್ತುಗಳನ್ನು ಮುಂದಿನ ಬಿನ್ನಪಗಳಲ್ಲಿ ತಿಳಿಸಲಾಗುತ್ತದೆ. 'ಈ ಜೀವಾತ್ಮನು ಪರಮಾತ್ಮನಿಗೆ ಪರತಂತ್ರ' ಎಂದು ನಿನ್ನೆ ತಿಳಿಸಿದೆ. ಜೀವಸ್ವರೂಪವನ್ನು ಹೇಳಿ ಮುಗಿಸುವ ಕಾಲದಲ್ಲಿ ಕೆಲವು ಸಾರವಾದ ವಿಷಯಗಳನ್ನು ವಿಸ್ತರಿಸಬೇಕು. ಒಂದೊಂದು ಶರೀರದಲ್ಲಿಯೂ ಒಂದೊಂದು ಜೀವಾತ್ಮ, ಹೀಗೆ ಎಲ್ಲೆಲ್ಲೂ ಇದ್ದಾನೆ. ಆತ ನಿತ್ಯ. ಈ ಶರೀರ, ಕಣ್ಣು, ಮನಸ್ಸು ಪ್ರಾಣಕ್ಕಿಂತ ಬೇರೆಯಾಗಿರುವ ಆ ಜೀವಾತ್ಮನು ಭಗವಂತನೊಬ್ಬನಿಗೇ ಆಳೆಂದು ತಿಳಿಸಲಾಯಿತು.

"ಮೃತೋ ದರಿದ್ರಃ ಪುರುಷಃ" ಎಂಬ ಒಂದು ವಚನವುಂಟು. ಹೆಚ್ಚು ಸಿರಿಯುಳ್ಳವರ ಮಧ್ಯದಲ್ಲಿ ಒಬ್ಬ ಬಡವನಿದ್ದರೆ ಅವನನ್ನು ಲೆಖ್ಖಕ್ಕೇ ತೆಗೆದುಕೊಳ್ಳುವುದಿಲ್ಲ; ಅವನು ಸತ್ತವನಂತೆಯೇ. ಇದೇ ರೀತಿ ಶಾಸ್ತ್ರಗಳಿಂದಲೂ ಜ್ಞಾನಿಗಳ ವಾಕ್ಯಗಳಿಂದಲೂ ಶ್ರಿಯಃಪತಿಯಾದ ಪರಮಪುರುಷನು ನಮಗೆ ಸ್ವಾಮಿಯೆಂದೂ, ಅವನಿಗೆ ಈ ಜೀವಾತ್ಮನು ಶೇಷಭೂತನೆಂದೂ, ಎಲ್ಲಿಯವರೆಗೆ ಯಾವನಿಗೆ ತಿಳುವಳಿಕೆಯು ಇರುವುದಿಲ್ಲವೋ ಅಲ್ಲಿಯವರೆಗೆ ಅವನು ಇದ್ದರೂ ಇಲ್ಲದಂತೆಯೇ! ಈ ಶೇಷತ್ವಜ್ಞಾನವೇ ಜೀವಾತ್ಮನ ಐಶ್ವರ್ಯ. ಈ ಭಾವವನ್ನು ಹನ್ನೊಂದನೆಯ ಬಿನ್ನಪದ ಕೊನೆಯಲ್ಲಿ ಚಿಕ್ಕದೇವರಾಜ ಒಡೆಯರು ತಿಳಿಸಿದ್ದಾರೆ. "ನಾನು ನಿನ್ನ ಸ್ವತ್ತು, ನೀನು ನನ್ನ ಯಜಮಾನ. ಈ ಜ್ಞಾನವು ನನಗಿಲ್ಲದಿದ್ದರೂ ನೀನೇ ಆ ಅರಿವನ್ನು ದಯಪಾಲಿಸಿದೆ. ಇದರಿಂದ ನಾನು

ಇರುವಿಕೆ ಹೊಂದಿ ನನ್ನನ್ನು ನಾನು ತಿಳಿದುಕೊಂಡೆನು. ಹೀಗೆ ಜೀವ ಸ್ವರೂಪವನ್ನು ನೀನು ತಿಳಿಸಿದ ಹಾಗೆಯೇ ಇನ್ನೂ ಮೇಲಿನ ನಲ್ಮೆಗಳನ್ನೂ ನೀನೇ ದಯೆಗೈಯಬೇಕು" ಎನ್ನುತ್ತಾರೆ.

"ಜೀವಾತ್ಮರಿಗೆ ಶೇಷತ್ವಜ್ಞಾನವೇ ಸತ್ತೆಯನ್ನು ಕೊಡುತ್ತದೆ" ಎನ್ನುವುದನ್ನು ತಿರುಮಳಿಶೈಯಾಳ್ವಾರ್ರು ತಮ್ಮ ಚರಿತ್ರವನ್ನೇ ಉದಾಹರಿಸಿ ಉಪಪಾದನೆ ಮಾಡಿದ್ದಾರೆ. ಇವರು ೭೦೦ ವರ್ಷಕಾಲ ಜೀವಿಸಿದ್ದರು. "ಶಾಕ್ಕಿಯಂ ಕತ್ತೋಂ, ಶಮಣಂ ಕತ್ತೋ" ಎಂಬಂತೆ ಬೌದ್ಧಮತಾವಲಂಬಿಗಳಾಗಿ ಜೈನಮತಾವಲಂಬಿಗಳಾಗಿ ಅವರು ಬಹುಕಾಲ ಇದ್ದರು. ಬಳಿಕ ಶೈವಮತಕ್ಕೂ ಸೇರಿ "ಶಂದವಿರುತ್ತಂ" ಎಂಬ ತಮಿಳು ಪ್ರಬಂಧವನ್ನು ಮಾಡಿದರು. ಕೊನೆಗೆ ಶ್ರೀವೈಷ್ಣವರಾದ ಮೇಲೆ "ತಿರುಚ್ಚಂದವಿರುತ್ತಂ" ಎಂಬ ಪ್ರಬಂಧವು ಅವರಿಂದ ನಿರ್ಮಿತವಾಯಿತು. ಮೊದಲಾಳ್ವಾರ್ರುಗಳಲ್ಲಿ ಒಬ್ಬರಾದ ಪೇಯಾಳ್ವಾರನ್ನು ಆಶ್ರಯಿಸಿ ತಿರುಮಳಿಶೈಯಾಳ್ವಾರ್ರು ಸ್ವರೂಪಜ್ಞಾನ ಪಡೆದರು. "ನಾರಾಯಣನೇ ಜಗತ್ಸ್ವಾಮಿ ಅವನಿಗೆ ಈ ಜೀವಾತ್ಮ ಶೇಷ" ಎಂಬ ಜ್ಞಾನವು ಹುಟ್ಟುದುದಕ್ಕೆ ಮುಂಚಿತವಾಗಿ ತಾವು ಇದ್ದರೂ ಇರಲೇ ಇಲ್ಲವೆಂಬುದನ್ನು ಚೆನ್ನಾಗಿ ಹೇಳಿದ್ದಾರೆ 'ತಿರುಚ್ಚಂದ ವಿರುತ್ತ' ದ ಈ ಪಾಶುರದಲ್ಲಿ ಈ ಅರ್ಥವನ್ನು ನೋಡಬಹುದು.

ನಿಱಿಐದೆನ್ಡ್ರೈಯೂರ ಕತ್ತಿರುನ್ದದೆನ್ಡ್ರೈಪಾಡಕತ್ತು
ಅಱಿಐದ್ವಿಕಣ್ಣೈ ಕ್ಕಿಡನ್ದ ತೆನ್ನಿಲಾದ ಮುನ್ನೆಲಾಮ್
ಅಱಿಐನಾನ್ ಪಿಱನ್ದಿಲೇ ಪಿಱನ್ದಪಿಱ್ ಮಱನ್ದಿಲೇ
ನಿಱಿಐದು ಮಿರುನ್ದಮದ್ ಕಿಡನ್ದುಮೆನ್ನೆಞ್ಜುಳೇ ||

"ಕೆಲವು ದಿವ್ಯದೇಶಗಳಲ್ಲಿ ದೇವರು ನಿಂತಿದ್ದಾನೆ. ಕೆಲವೆಡೆ ಕುಳಿತಿದ್ದಾನೆ. ಮತ್ತೆ ಕೆಲವುಕಡೆ ಮಲಗಿದ್ದಾನೆ. ಈ ಮೂರು ನೆಲೆಯಲ್ಲಿ ಸ್ವಾಮಿಯು ಈ ಬಗೆಯಾದ ದರ್ಶನಗಳನ್ನು ಕೊಡುತ್ತಿರುವುದು ಜೀವಾತ್ಮರನ್ನು ತನ್ನ ಅಡಿಯಾಳಾಗಿ ಸ್ವೀಕರಿಸುವುದಕ್ಕೋಸ್ಕರ" ಎಂದು ಅವರು

ಇಲ್ಲಿ ಹೇಳಿರುವುದನ್ನು ಈ ಉದಾಹರಣೆಯಿಂದ ಸ್ಪಷ್ಟಪಡಿಸಬಹುದು. ಒಬ್ಬ ಬ್ರಾಹ್ಮಣನು ಒಬ್ಬನಿಗೆ ಸಾಲಕೊಟ್ಟಿರುತ್ತಾನೆ. ಸಾಲಗಾರನು ಬಹು ದಿನಗಳಾದರೂ ಹಣವನ್ನೂ ಬಡ್ಡಿಯನ್ನೂ ವಾಪಸ್ಸುಮಾಡುವುದಿಲ್ಲ. ಆಗ ಹಣಕೊಟ್ಟವನು ಮೊದಲು ಕೆಲದಿನ ಸಾಲಗಾರನ ಮನೆಯ ಬಾಗಿಲಲ್ಲಿ ನಿಂತು, "ನನ್ನ ಹಣ ಕೊಡು" ಎಂದು ಕೇಳುತ್ತಾನೆ. ಆದರೂ ಸಾಲ ಗಾರನು ತೀರಿಸುವುದಿಲ್ಲ. ಜಗುಲಿಯ ಮೇಲೆ ಕೆಲವು ದಿನ ಝಾಂಡಾ ಹೂಡುತ್ತಾನೆ. ಅದಕ್ಕೂ ಸಾಲಗಾರನು ಬಗ್ಗದಿರುವಾಗ ಹಣಕೊಟ್ಟವನು ಸಾಲಗಾರನ ಮನೆಯ ಬಾಗಿಲಲ್ಲಿ ಅಡ್ಡಡ್ಡಲಾಗಿ ಮಲಗಿಬಿಡುತ್ತಾನೆ. "ಕೊಟ್ಟರೆ ಏಳುತ್ತೇನೆ. ಇಲ್ಲದಿದ್ದರೆ ಇಲ್ಲ" ಎನ್ನುತ್ತಾನೆ. "ಇದು ಬ್ರಾಹ್ಮಣ ಧರ್ಮ" ಎಂದು ಶ್ರೀ ರಾಮಾಯಣದಲ್ಲಿ ಹೇಳಿದೆ. 'ಆರನೇ ತಿಂಗಳ ಸಾಲಗಾರ' ಎಂದು ತಮಿಳಿನಲ್ಲಿ ಹೇಳುವುದುಂಟು. ಹೀಗೆ ನಾವೂ ನಾರಾಯಣನಿಂದ ಸಾಲ ಪಡೆದಿದ್ದೇವೆ. ಅದನ್ನು ನಮ್ಮಿಂದ ವಾಪಸ್ಸು ಪಡೆಯುವುದಕ್ಕಾಗಿ ದೇವರು ದಿವ್ಯದೇಶಗಳಲ್ಲಿ, ನಿಂತು, ಕುಳಿತು, ಮಲ ಗಿರುತ್ತಾನೆ. ಈ ಜೀವಾತ್ಮನು ದೇವರಿಗೆ ಆಳುತನಮಾಡಿದಾಗ ಋಣ ಮುಕ್ತನಾಗುತ್ತಾನೆ. ದೇವರಲ್ಲಿ ಭಕ್ತಿಮಾಡಿ, ಸೇವೆಮಾಡಿ, ಸಾಲ ತೀರಿಸಬೇಕು.

ವಿಶಿಷ್ಟಾದ್ವೈತದಲ್ಲಿ ಸಾರವಾದ ಅಂಶವೇ ಈ "ದಾಸೋಽಹಂ" ಜ್ಞಾನ. ಬರೀ ಜ್ಞಾನದಿಂದ ಸಾಲದು; ಆ ತಿಳುವಳಿಕೆಯು ಕೆಲಸದಲ್ಲಿ ಮೂಡಬೇಕು; ಭಗವತ್‌ಸೇವೆಯಲ್ಲಿ ಆ ಜ್ಞಾನವು ಪರ್ಯವಸಾನವಾಗ ಬೇಕು. ಜ್ಞಾನವನ್ನು ದಯಪಾಲಿಸುವವನೂ ಅವನೇ; ಆ ಜ್ಞಾನ ವನ್ನು ಅಭಿವೃದ್ಧಿಪಡಿಸಿ ಕೈಂಕರ್ಯದಲ್ಲಿ ನಿರತನಾಗುವಂತೆ ಮಾಡುವ ವನೂ ಅವನೇ; ಹೀಗೆ ಅವನ ಕೃಪೆಯಿಂದ ಲಭಿಸಿದ ಶೇಷತ್ವಜ್ಞಾನದೊ ಡನೆ ಅವನಿಗೇ ಸೇವಾವೃತ್ತಿ ನಡೆಸುವುದೇ ಶ್ರೇಯಸ್ಸೆಂಬುದು ಆಳ್ವಾರ್ ಆಚಾರ್ಯರ ಅಭಿಪ್ರಾಯ. "ದೇವರು ಪರತತ್ತ್ವ" ಎಂಬ ಜ್ಞಾನವೂ "ಜೀವಾತ್ಮ ಅಪರತತ್ತ್ವ" ಎಂಬ ಜ್ಞಾನವೂ ಮನಸ್ಸಿಗೆ ಹಿಡಿದರೆ ಹಿತದ ಬಗ್ಗೆ ಪ್ರವೃತ್ತಿ ಉಂಟಾಗುತ್ತದೆ. ಹಿತವೆಂದರೆ ಉಪಾಯ—ಸಾಧನಭಕ್ತಿ. "ಸ್ವಾಮಿನಿ ದಾಸಸ್ಯ ಅನುರಾಗಮಯೀ ಸ್ಥಿತಿಃ ಭಕ್ತಿಃ" "ನಾನು ಆಳು;

ದೇವರು ಸ್ವಾಮಿ" ಎನ್ನುವ ಭಾವ, ಭಕ್ತಿಯ ಸ್ವರೂಪ. "ನನಗಾಗಿ ಏನೂ ಇಲ್ಲ, ಎಲ್ಲವೂ ನನ್ನ ಯಜಮಾನನಾದ ಶ್ರೀಮನ್ನಾರಾಯಣನಿಗಾಗಿ." ಇದು ಭಕ್ತಿಯ ಮೂಲತತ್ವ. ಈ ಭಕ್ತಿಯಿಂದ ನಮಗೆ ದೊರಕುವ ಪುರುಷಾರ್ಥ ಮೋಕ್ಷ–ಪರಮಾನಂದ. ಇದೊಂದು ದೃಷ್ಟಿ.

ಆದರೆ ಆಚಾರ್ಯರು "ಜೀವಾತ್ಮನು ದೇವರನ್ನು ಹೊಂದಿ ಆನಂದ ಪಡುವುದಿರಲಿ. ದೇವರಿಗೆ ಜೀವಾತ್ಮನ ಲಾಭದಿಂದ ಆನಂದ ಉಂಟಾಗುತ್ತದೆ" ಎನ್ನುತ್ತಾರೆ. ಇದು ಸಾರತಮವಾದ ಅರ್ಥ. ಈ ದೃಷ್ಟಿಯನ್ನು ಕೊಂಚ ಮನಸ್ಸಿಗೆ ತಂದುಕೊಳ್ಳಬೇಕು. ಈ ಜೀವಾತ್ಮ ಸ್ವತ್ತು. ಇದನ್ನು ತನಗೆ ಇಷ್ಟಬಂದಂತೆ ಅನುಭವಿಸುವ ಸ್ವಾಮಿಯು ಶ್ರೀಮನ್ನಾರಾಯಣ. "ಸ್ವತ್ವಮಾತ್ಮನಿ ಸಂಜಾತಂ ಸ್ವಾಮಿತ್ವಂ ಬ್ರಹ್ಮಣಿ ಸ್ಥಿತಂ" ಈ ಸ್ವಸ್ವಾಮಿಭಾವಜ್ಞಾನವೇ ತತ್ವಜ್ಞಾನ, ಒಬ್ಬನಿಗೆ ಒಂದಷ್ಟು ಜಮೀನು ಇರುತ್ತದೆ. ಆದರೆ ಅದು ಬಂಜರು. ಆಗ ಯಜಮಾನನು ಅದಕ್ಕೆ ಉಳುಮೆ ಮಾಡಿ, ಅದರ ದೋಷವನ್ನೆಲ್ಲಾ ನೀಗಿ ಗೊಬ್ಬರಹಾಕಿ ಬಿತ್ತಿ ಫಸಲು ಪಡೆಯುತ್ತಾನೆ. ಈ ಆನಂದವು ಯಾರಿಗೆ? ಸ್ವಾಮಿಗೋ? ಸ್ವತ್ತಿಗೋ? ಸ್ವಾಮಿಗೆ! ಹಾಗೆ ಪ್ರಳಯಕಾಲದಲ್ಲಿ ಅತ್ಯಂತ ಜ್ಞಾನ ಸಂಕೋಚದಿಂದ ಅಚಿತ್‌ಕಲ್ಪಗಳಾಗಿರುವ ಜೀವಾತ್ಮರಿಗೆ ಕರಣ ಕಳೇಬರಗಳನ್ನೂ, ಜ್ಞಾನವಿಕಾಸವನ್ನೂ ಕೊಟ್ಟು, ಶಾಸ್ತ್ರಾರ್ಥಗಳನ್ನು ತಿಳಿಯಪಡಿಸಿ, ಪಾಪಗಳನ್ನು ಪರಿಹರಿಸಿ, ಪರಿಶುದ್ಧಿಮಾಡಿ ಅವುಗಳನ್ನು ತಾನು ಅನುಭವಿಸದಿದ್ದರೆ ಆ ಕೊರತೆ ಯಾರಿಗೆ? ದೇವರಿಗೇ ಅಲ್ಲವೇ?

ಆದರೆ ಈ ಮಾತು ವಿಚಿತ್ರವಾಗಿ ಕಾಣುತ್ತದೆ. "ದೇವರು ಜೀವಾತ್ಮನನ್ನು ಹೊಂದುವುದೇ? ಜೀವಾತ್ಮನು ಕೆಲಸಮಾಡಿದರೆ ತಾನೇ ಅವನಿಗೆ ಫಲ!" ಈ ದೃಷ್ಟಿಯೇ ಪ್ರಪಂಚದಲ್ಲಿ ಹೆಚ್ಚು. ಆದರೆ ಚಿಕ್ಕದೇವರಾಜ ಒಡೆಯರು ಈ ಸಾಮಾನ್ಯ ದೃಷ್ಟಿಯನ್ನೂ ದಾಟಿ ಮುಂದೆ ಹೋಗಿದ್ದಾರೆ. "ನಾನು ಶೇಷಭೂತನೆಂಬ ಜ್ಞಾನವನ್ನು ನೀನೇ ಉಂಟುಮಾಡಿದೆ. ಮುಂದಿನ ಕೆಲಸ, ಮುಂದಿನ ಫಲ ಎಲ್ಲವೂ ನಿನ್ನದು." ಈ ಅತಿರಹಸ್ಯ ಶಾಸ್ತ್ರಾರ್ಥವನ್ನು ದೊರೆ ಮನದಟ್ಟು ಮಾಡಿಕೊಂಡಿದ್ದಾರೆ.

ಸುಮಾರು ೮೦–೯೦ ವರ್ಷಗಳ ಹಿಂದೆ ಬಿಜಮಾಡಿಸಿದ್ದ ಎಂಬಾರ್ ಸ್ವಾಮಿಗಳು ಸುಪ್ರಸಿದ್ಧರು. ಅವರ ವಿಚಾರವು ಶ್ರೀವೈಷ್ಣವರಿಗೆಲ್ಲಾ ಗೊತ್ತು. ಈ ದಿವ್ಯದೇಶವನ್ನು (ತಿರುನಾರಾಯಣಪುರ) ಶ್ರೀರಂಗದ ಸಿರಿಯನ್ನೂ ಬೆಳಗಿಸಿದ ರಾಮಾನುಜರ ಅವತಾರಸ್ಥಳವಾದ ಶ್ರೀಪೆರುಂ ಬೂದೂರ್ ದಿವ್ಯಕ್ಷೇತ್ರವನ್ನು ಮುಂದೆ ತಂದ ಮಹನೀಯರು. ಅವರ ಶಿಷ್ಯ ಪ್ರಶಿಷ್ಯರು ಇಂದಿಗೂ ಇದ್ದಾರೆ. ಅಂಥ ಮಹಾನುಭಾವರು, "ಭಗ ವಂತನಿಗೇ ಜೀವಾತ್ಮಲಾಭ. ಅದರಿಂದ ಆನಂದವೂ ಅವನಿಗೇ!" ಎನ್ನುವುದನ್ನು ಶ್ರುತಿಪ್ರಮಾಣದಿಂದ ನಿರ್ವಹಿಸಿದ್ದಾರೆ.

"ಬ್ರಹ್ಮವಿತ್ ಆಪ್ನೋತಿ ಪರಂ" "ಬ್ರಹ್ಮಣೋ ಮಹಿಮಾನ ಮಾಪ್ನೋತಿ," ಈ ವಾಕ್ಯಗಳಿಂದ, "ಬ್ರಹ್ಮಜ್ಞಾನ" ವನ್ನು ಪಡೆದ ಜೀವಾ ತ್ಮನು, ಬ್ರಹ್ಮೋಪಾಸನೆ ಮಾಡಿದವನು, ಪರಬ್ರಹ್ಮನನ್ನು ಹೊಂದುತ್ತಾನೆ. ಅಂಥವನು ಪರಬ್ರಹ್ಮದ ಆನಂದಾದಿ ಮಹಿಮೆಯನ್ನು ಹೊಂದುತ್ತಾನೆ." ಎಂದು ಜೀವಾತ್ಮನಿಗೆ ಪರಮಾತ್ಮನ ಲಾಭವೂ, ಪರಮಾತ್ಮನ ಲಾಭ ದಿಂದ ಜೀವಾತ್ಮನಿಗೆ ಆನಂದವೂ ಹೇಳಲ್ಪಟ್ಟಿದೆಯಾದರೂ, ಇಲ್ಲಿ "ಆಪ್ನೋತಿ" ಎಂಬ ಪರಸ್ಮೈಪದಿ ಕ್ರಿಯಾಪದವಿರುವುದು ಗಮನಾರ್ಹ. ಯಾವ ಕೆಲಸಮಾಡಿದರೆ ಅದರಿಂದ ಉಂಟಾಗುವ ಫಲವು ಇನ್ನೊಬ್ಬನಿಗೆ ಸೇರುವುದೋ ಅಲ್ಲಿ ಪರಸ್ಮೈಪದಿ ಬರುತ್ತದೆಯೆಂದು ಪಾಣಿನಿ ಹೇಳಿದ್ದಾರೆ. ಜೀವಾತ್ಮನೇ ಹೊಂದುವವನಾದರೂ, ಆ ಪ್ರಾಪ್ತಿಫಲವಾದ ಆನಂದವು, ತನಗಾಗಿ ಅಲ್ಲ. "ಪರಸ್ಮೈ–ಪರಸ್ಮೈಬ್ರಹ್ಮಣೇ" ಶ್ರೀಮನ್ನಾರಾಯಣನಿ ಗಾಗಿ. ಸಂಸ್ಕೃತ ಸಾಹಿತ್ಯದಲ್ಲಿ "ಪಚತಿ; ಪಚತೇ" ಎರಡು ಕ್ರಿಯಾಪದ ಕ್ಕೂ ಅಡಿಗೆಮಾಡುವುದೇ ಅರ್ಥವಾದರೂ, ಯಜಮಾನನಿಗಾಗಿ ಅಡಿಗೆ ಮಾಡುವ ಸಂದರ್ಭದಲ್ಲಿ 'ಪಚತಿ' ಎಂಬ ಪರಸ್ಮೈಪದಿಯೂ, ತನ ಗಾಗಿ ಅಡಿಗೆಮಾಡಿಕೊಳ್ಳುವಾಗ 'ಪಚತೇ' ಎಂಬ ಆತ್ಮನೇಪದಿಯೂ ಬರುವುದು ರೂಢಿಯಾಗಿದೆ.

ಮಹಾ ಘಟ್ಟಿಗರಾದ ಅಪ್ಪಯ್ಯ ದೀಕ್ಷಿತರೂ "ನಯಮಯೂಖ ಮಾಲಿಕೆ" ಎಂಬ ತಮ್ಮ ಗ್ರಂಥದಲ್ಲಿ ಆನಂದಮಯಾಧಿಕರಣದ ವಿವರ

ಣೆಯ ಸಂದರ್ಭದಲ್ಲಿ ಜೀವಾತ್ಮನ ಪ್ರಾಪ್ತಿಯಿಂದ ಪರಬ್ರಹ್ಮನಿಗೇ ಆನಂದಫಲವೆಂಬುದನ್ನು ತಿಳಿಸಿದ್ದಾರೆ. "ಆನಂದಮಯೋಽಭ್ಯಾಸಾತ್" ಎನ್ನುವುದು ಬ್ರಹ್ಮಸೂತ್ರ. ಚಿತ್ ಆದ ಜೀವಾತ್ಮನಿಗಿಂತಲೂ ವಿಲಕ್ಷಣ ಪರಮಾತ್ಮನೆಂಬುದನ್ನು ಈ ಸೂತ್ರದಲ್ಲಿ ಸಿದ್ಧಾಂತಪಡಿಸಿದೆ. 'ವಿಜ್ಞಾನಮಯನಾದ ಜೀವನಿಗಿಂತಲೂ ಆನಂದಮಯನಾದವನು ವಿಲಕ್ಷಣ' ಎಂಬ ಅರ್ಥಬರುವ "ತಸ್ಮಾದ್ವೇತಸ್ಮಾತ್ ವಿಜ್ಞಾನಮಯಾತ್" ಈ ಶ್ರುತಿವಾಕ್ಯವು ಈ ಸೂತ್ರಕ್ಕೆ ವಿಷಯ. "ಇಲ್ಲಿ ಆನಂದಮಯ" ನೆಂದರೆ ಜೀವಾತ್ಮ, ಎಂಬುದು ಪೂರ್ವಪಕ್ಷ. ಆದರೆ, ಭಗವಂತನೇ ಆನಂದಮಯನೆಂಬುದು ಸಿದ್ಧಾಂತ. ಈ ಆನಂದಮಯ ಪುರುಷನನ್ನು ಮನಸ್ಸಿಗೆ ತೋರಿಸಿಕೊಡುವುದಕ್ಕಾಗಿ ಆ ಪುರುಷನಿಗೆ ತಲೆ, ಕೈ, ನಡು, ಪಕ್ಕೆ, ಇಂಥದೆಂದು, ಶ್ರುತಿಯು, ರೂಪಣಮಾಡಿ ಹೇಳುತ್ತದೆ. "ತಸ್ಯ ಪ್ರಿಯಮೇವ ಶಿರಃ | ಮೋದೋ ದಕ್ಷಿಣಃಪಕ್ಷಃ | ಪ್ರಮೋದ ಉತ್ತರಃಪಕ್ಷಃ | ಆನಂದ ಆತ್ಮಾ ||" 'ಪ್ರಿಯ' ವೆಂಬುದೇ ಆ ಆನಂದಮಯ ಪುರುಷನ ತಲೆ. 'ಮೋದಪ್ರಮೋದ' ಗಳೇ ಪಕ್ಕೆಗಳು. 'ಆನಂದ'ವೇ ಮಧ್ಯಕಾಯ. ಇನ್ನೂ ಕಣ್ಣಿಗೆ ಕಂಡಿಲ್ಲದ ಪ್ರಿಯ ಪದಾರ್ಥವೊಂದು ಆಗತಾನೆ ಕಾಣುತ್ತದೆ. ಆ ಸಂತೋಷಕ್ಕೆ 'ಪ್ರಿಯ' ವೆಂದು ಹೆಸರು. ಆ ವಸ್ತುವು ಕೈಗೆ ಸಿಕ್ಕಿದಾಗ ಪಡುವ ಸಂತೋಷವೇ 'ಮೋದ.' ಕೈಗೆ ದೊರೆತಮೇಲೆ ಅದನ್ನು ಬಳಸಿಕೊಳ್ಳುವುದರಿಂದ ಒಂದು ಸಂತೋಷವುಂಟಾಗುತ್ತದೆ, ಅದೇ 'ಪ್ರಮೋದ.' ಈ ಪ್ರಮೋದವು ನಿತ್ಯವಾದಾಗ 'ಆನಂದ' ವೆನ್ನಿಸಿಕೊಳ್ಳುವುದು.

ಈಗ ಈ ನಾಲ್ಕನ್ನೂ 'ಆನಂದಮಯ' ನಿಗೆ ಹೇಳಬೇಕು. ಅವನು ಪರಬ್ರಹ್ಮ ಹೇಗಾದಾನು ? ಸರ್ವಶಕ್ತನೂ ಅವಾಪ್ತಸಮಸ್ತಕಾಮನೂ ಆದ ದೇವರು ಒಂದು ಪ್ರಿಯ ಪದಾರ್ಥವನ್ನು ಕಣ್ಣಿಂದ ಕಂಡಿಲ್ಲವೆಂದರೂ, ಅದು ಅವನಿಗೆ ಸಿಕ್ಕಿಲ್ಲವೆಂದರೂ, ಅದು ಬಳಕೆಗೆ ಬಂದಿಲ್ಲವೆಂದರೂ, ಅಸಂಗತ. ಆದುದರಿಂದ ಇಲ್ಲಿ 'ಆನಂದಮಯ' ಎಂದರೆ ಜೀವಾತ್ಮನನ್ನೇ ಹೇಳಬೇಕು. ಜೀವಾತ್ಮನಿಗಾದರೆ ನೋಡದ್ದು ನೋಡು

ವುದು, ಸಿಗದಿದ್ದುದು ಸಿಗುವುದು, ಬಳಸದಿದ್ದುದು ಬಳಸುವುದು ಎಂಬುದು ಸರಿಹೋಗುತ್ತದೆ; ಇದೇ ಪೂರ್ವಪಕ್ಷವಾದ.

ಈ ಶಂಕೆಗೆ ಅಪ್ಪಯ್ಯದೀಕ್ಷಿತರು, ಇಷ್ಟವಸ್ತುದರ್ಶನ, ವಸ್ತು ಲಾಭ, ವಿನಿಯೋಗ, ನಿತ್ಯವಿನಿಯೋಗಗಳಿಂದ ಉಂಟಾಗುವ ಆನಂದಗಳಾದ ಪ್ರಿಯ, ಮೋದ, ಪ್ರಮೋದ, ಆನಂದಗಳು ಪರಮಾತ್ಮನಿಗೆ ಉಂಟೆಂದು ಹೇಳಿ ಆನಂದಮಯನೆಂದರೆ ಪರಬ್ರಹ್ಮನೇ ಎಂಬುದನ್ನೂ ಸಿದ್ಧಾಂತಪಡಿಸಿದ್ದಾರೆ.

ಈ ಲೋಕದಲ್ಲಿ ದೇವರಿಗೆ ಜ್ಞಾನಿಯಾದವನು ಸುಲಭವಾಗಿ ಸಿಗನೆಂಬುದು "ವಾಸುದೇವಸ್ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ" ಎಂದು ಭಗವಂತನೇ ಗೀತೆಯಲ್ಲಿ ಹೇಳಿರುವುದರಿಂದ ವ್ಯಕ್ತಪಡುತ್ತದೆ. ಆಳ್ವಾರ್, ಆಚಾರ್ಯರನ್ನು ಕಂಡಾಗ ದೇವರಿಗೆ "ಇಷ್ಟವಸ್ತು ದರ್ಶನ ಜನ್ಯ ಆನಂದ" ಉಂಟಾಗುತ್ತದೆ. ಈ ತಿರುನಾರಾಯಣಪುರವು ರಾಮಾನುಜರನ್ನು ಹೊಂದಿದ ಕಾಲಕ್ಕೆ, ತಿರುನಾರಾಯಣಸ್ವಾಮಿಗೆ ಅದೆಷ್ಟು ಆನಂದವಾಗಿರಬೇಕು? ತಮಿಳುನಾಡಿನಲ್ಲಿ ಒಂದು ಕ್ಷೋಭೆಯನ್ನು ಹುಟ್ಟಿಸಿ, ದೇವರು ರಾಮಾನುಜರನ್ನು ಈ ದಿವ್ಯದೇಶದಲ್ಲಿ ಹನ್ನೆರಡು ವರ್ಷ ಕಾಲ ಇರಿಸಿಕೊಂಡು ನಲಿದಾಡಿದ್ದಾನೆ. ಹೀಗೆ ವೇದಾನ್ತದಲ್ಲಿ "ಜ್ಞಾನಿ" ದೇವರಿಗೆ ಬೇಕಾದವನೆಂದೂ ಜ್ಞಾನಿಯನ್ನು ನೋಡಿದರೆ ದೇವರಿಗೆ ಅತಿ ಸಂತೋಷವಾಗುವುದೆಂದೂ ಹೇಳಿದೆ. ಈ ವಿಚಾರವನ್ನು ಅದ್ವೈತಿಗಳೂ, ಪರಮಶೈವರೂ ಆದ ಅಪ್ಪಯ್ಯ ದೀಕ್ಷಿತರೂ ಅಪ್ಪಣೆ ಕೊಡಿಸಿದ್ದಾರೆ!

"ನಾವು ಅವನ ಸ್ವತ್ತು" ಎನ್ನುವ ನೆಲೆ ನಮಗೆ ಸರಿಯಾಗಿದ್ದರೆ ನಮ್ಮ ದೋಷ ಒಂದನ್ನೂ ಎಣಿಸದೆ ದೇವರು ಆಳ್ಗೊಳ್ಳುವನೆಂದು ಈ ಹನ್ನೊಂದನೆಯ ಬಿನ್ನಪದಲ್ಲಿ ತೋರಿಸಿದ್ದಾರೆ.

## ಬಿನ್ನಪ ೧೨

ಹನ್ನೆರಡನೆಯ ಬಿನ್ನಪದಿಂದ ಆರೇಳು ಬಿನ್ನಪಗಳಲ್ಲಿ ಅಚಿತ್‌ಪದಾರ್ಥಗಳನ್ನು ವಿಸ್ತಾರವಾಗಿ ವಿವರಿಸಿದೆ. ತತ್ವಜಿಜ್ಞಾಸೆಯಲ್ಲಿ ವಿಶೇಷ ಶ್ರದ್ಧೆ ಇರುವವರಿಗೆ ಮಾತ್ರ ಅವುಗಳ ವಿಚಾರದಲ್ಲಿ ರಸವುಂಟಾಗುವುದು. ಆದರೆ ಎಲ್ಲರೂ ಆ ತತ್ವ ಸೃಷ್ಟಿಕ್ರಮಗಳಿಗೆ ಸೇರಿದಂತೆ ಕೆಲವು ವಿಚಾರಗಳನ್ನು ಸಾರವಾಗಿ ತಿಳಿದುಕೊಳ್ಳಬೇಕು. ಆ ಏಳು ಬಿನ್ನಪಗಳನ್ನೂ ಸಂಗ್ರಹಗೊಳಿಸಿ ಮುಖ್ಯವಾಗಿ ಈ ಚೇತನವು ತಿಳಿದುಕೊಳ್ಳಬೇಕಾದ ಅಂಶವನ್ನು ವಿವರಿಸುತ್ತೇನೆ.

ಹನ್ನೆರಡನೆಯ ಬಿನ್ನಪದಲ್ಲಿ, ಮಹಾಪ್ರಳಯ ಕಾಲದಲ್ಲಿ 'ಪ್ರಕೃತಿ' ಸೂಕ್ಷ್ಮಾವಸ್ಥೆಯಲ್ಲಿರುತ್ತದೆ. ಎಲ್ಲಿಯವರೆಗೆ ಆ ಸೂಕ್ಷ್ಮತೆ ಎಂದರೆ "ತಮಃಪರೇ ದೇವ ಏಕೀಭವತಿ" ಕಟ್ಟಕಡೆಯ ಪ್ರಕೃತಿಯ ನೆಲೆಯೆಂದರೆ ತಮಸ್. ಈ ತಮಸ್ಸು ದೇವನಲ್ಲಿ ಐಕ್ಯಗೊಳ್ಳುವುದು. ಆಗ ಅದನ್ನು ಬೇರೆಯಾಗಿ ಕಾಣಲೂ ಆಗದು. ಇಂಥ "ಅವಿಭಕ್ತ ತಮಸ್ಸನ್ನು" ವಿಭಕ್ತವನ್ನಾಗಿಸಿ ಅಕ್ಷರ, ಅವ್ಯಕ್ತ, ಮಹತ್, ಅಹಂಕಾರ, ತನ್ಮಾತ್ರ, ಪಂಚಭೂತ, ಇಂದ್ರಿಯ ಮುಂತಾದ ಕ್ರಮಗಳಲ್ಲಿ ಸೃಷ್ಟಿಸುವ ನಿರೂಪಣೆ ಇದೆ.

## ಬಿನ್ನಪ ೧೩

ಪ್ರಳಯಕಾಲದಲ್ಲಿ ಸತ್ವರಜಸ್ತಮೋಗುಣಗಳು ಸಮನಾಗಿರುವುವು. ಆ ಮೇಲೆ ಕೆಲವೆಡೆ ಈ ಗುಣಗಳಲ್ಲಿ ಹೆಚ್ಚುಕಡಿಮೆ ವ್ಯತ್ಯಾಸಗಳು ಏರ್ಪಡುವುವು. ಆಗ 'ಮಹತ್' ಎನ್ನುವ ತತ್ವವು ಉಂಟಾಗುವುದು. ಇದು ಸತ್ವಗುಣ ಹೆಚ್ಚಾಗಿರುವಾಗ ಸಾತ್ವಿಕ ಅಹಂಕಾರವೆಂದೂ, ರಜೋಗುಣವು ಹೆಚ್ಚಾಗಿರುವಾಗ ರಾಜಸಾಹಂಕಾರವೆಂದೂ, ತಮೋಗುಣವು

ಹೆಚ್ಚಾಗಿರುವಾಗ ತಾಮಸಾಹಂಕಾರವೆಂದೂ, ಮೂರು ಬಗೆಯಾಗಿರುವುದು. ಸಾತ್ವಿಕಾಹಂಕಾರದಿಂದ ಚಕ್ಷುರಾದಿ ಜ್ಞಾನೇಂದ್ರಿಯಗಳೂ, ಕೈ, ಕಾಲು ಮೊದಲಾದ ಕರ್ಮೇಂದ್ರಿಯಗಳೂ, ಮನಸ್ಸೂ ಉಂಟಾಗುವುವು. ತಾಮಸಾಹಂಕಾರದಿಂದ, ತನ್ಮಾತ್ರೆಗಳೂ, ಪಂಚಭೂತಗಳೂ ಉಂಟಾಗುವುವು. ಸಾತ್ವಿಕಾಹಂಕಾರವು ಚಕ್ಷುರಾದಿ ಇಂದ್ರಿಯಗಳು ಹುಟ್ಟುವುದಕ್ಕೂ, ತಾಮಸಾಹಂಕಾರವು ತನ್ಮಾತ್ರ ಮತ್ತು ಪಂಚಭೂತಗಳು ಹುಟ್ಟುವುದಕ್ಕೂ, ರಾಜಸಾಹಂಕಾರವು ಬೀಜವು ಮೊಳೆಯುವುದಕ್ಕೆ ನೀರಿನಂತೆಯೂ ಸಹಾಯಕವಾಗಿರುವುವು. *

ಈ ಹದಿಮೂರನೆಯ ಬಿನ್ನಪದಲ್ಲಿ "ಪಂಚೀಕರಣ" "ಸಪ್ತೀಕರಣ" ಎಂಬ ಈ ಭೂತಸೃಷ್ಟಿಯ ಪ್ರಕ್ರಿಯಾವಿಧಾನಗಳನ್ನು ಬೆಳಸಿದೆ. ಪಂಚಭೂತಗಳೂ ಮಹದಹಂಕಾರಗಳೂ ಬೇರೆಬೇರೆಯಾಗಿರುವುದರಿಂದ ಯಾವ ಕೆಲಸಕ್ಕೂ ಉಪಯೋಗವಿಲ್ಲದೆ ಹೋಗುವುದರಿಂದ ಅವುಗಳನ್ನು ಅನೇಕ ವಿಧವಾಗಿ ಒಗ್ಗೂಡಿಸಿ ಭಗವಂತನು ಅಂಡಾದಿ ಸೃಷ್ಟಿಗಳನ್ನು ಮಾಡಿದನು. ಶ್ರುತಿಯಲ್ಲಿ ಪೃಥ್ವಿ, ಅಪ್, ತೇಜಸ್ಸು ಇವು ಮೂರನ್ನೂ ಒಂದಾಗಿ ಸೇರಿಸುವ "ತ್ರಿವೃತ್‌ಕರಣವು" ಹೇಳಲ್ಪಟ್ಟಿದೆ. ಆ ರೀತಿಯಾಗಿ ಒಟ್ಟಿಗೆ ಸೇರುವುದರಿಂದ ಅವು ಕಾರ್ಯೋನ್ಮುಖವಾಗಿ ಆಗುತ್ತವೆ. ಈ ತ್ರಿವೃತ್‌ಕರಣವನ್ನೇ ಪಂಚೀಕರಣಕ್ಕೂ, ಸಪ್ತೀಕರಣಕ್ಕೂ ಉಪಲಕ್ಷಣವಾಗಿ ತೆಗೆದುಕೊಳ್ಳಬೇಕು.

ತ್ರಿವೃತ್‌ಕರಣವಾದ ಮೇಲೆ ಪೃಥ್ವಿ ಎಂದು ಹೇಳುವ ತತ್ವದಲ್ಲಿ, ಪೃಥ್ವಿಯು ಅರ್ಧಭಾಗವೂ, ಅಪ್, ತೇಜಸ್ಸು, ಇವೆರಡೂ ಕಾಲುಕಾಲು ಭಾಗವೂ ಇರುತ್ತವೆ. ಇದೇ ರೀತಿಯಾಗಿ ಅಪ್‌ವಿಷಯವಾಗಿಯೂ ತೇಜಸ್ ವಿಷಯವಾಗಿಯೂ ತಿಳಿದುಕೊಳ್ಳಬೇಕು. ಪಂಚಭೂತಗಳೂ ಬೆರತೇ ಭೂತಸೃಷ್ಟಿ ಸಾಗುವುದು. ಇದಕ್ಕೆ "ಪಂಚೀಕರಣ" ವೆಂದು ಹೆಸರು. ಈ ವಿಷಯದಲ್ಲಿ ಲೋಕಾಚಾರ್ಯರು ಒಂದು ಸೊಗಸಾದ ಉದಾಹರಣೆ

---

* ಈ ವಿಷಯವನ್ನು ಸ್ಪಷ್ಟಪಡಿಸುವ ಒಂದು ನಕ್ಷೆಯನ್ನು ಕಡೆಯಲ್ಲಿ ಕೊಟ್ಟಿದೆ.

ಯನ್ನು ಕೊಟ್ಟಿದ್ದಾರೆ. ಮಣ್ಣನ್ನೂ, ಮರಳನ್ನೂ, ನೀರನ್ನೂ ಸೇರಿಸಿ ಒಂದು ದ್ರವ್ಯವನ್ನಾಗಿ ಮಾಡಿ ಗೋಡೆಯನ್ನು ಕಟ್ಟುವಂತೆ ಈಶ್ವರನು ಪಂಚಭೂತಗಳನ್ನು ಸೇರಿಸಿ ಅಂಡಸೃಷ್ಟಿಮಾಡಿದನು. ಪೃಥ್ವೀ ಭಾಗ ವಾದ ಮಣ್ಣಿಗೆ 'ಅಪ್' ಆದ ನೀರನ್ನು ಕಲಸಿ ಗೋಡೆಹಾಕಿದಮೇಲೆ ವಾಯು ತೇಜೋಭಾಗಗಳಾದ ಗಾಳಿ, ಬಿಸಿಲಿಗೆ ಒಣಗಿ ಅದು ಘಟ್ಟಿಯಾ ಗುತ್ತದೆ, ಹೀಗೆ ಗೋಡೆಕಟ್ಟುವುದರಲ್ಲಿ ಪಂಚಭೂತಗಳ ಸೇರುವಿಕೆಯನ್ನು ನೋಡಿರುತ್ತೇವೆ.

ಈ ಪಂಚಭೂತಗಳ ಜೊತೆಗೆ, "ಮಹತ್, ಮತ್ತು ಅಹಂಕಾರ" ಗಳನ್ನು ಸೇರಿಸಿದಾಗ "ಸಪ್ತೀಕರಣ" ವಾಗುತ್ತದೆ, ತತ್ವಶ್ರದ್ಧೆಯಿಂದ ಕೇಳುವವರಿಗೆ ಈ ವಿಚಾರವು ರುಚಿಸುತ್ತದೆ.

ಪೃಥಿವಿಯನ್ನು ಸೃಷ್ಟಿಮಾಡುವುದೆಂದರೆ ಪಂಚೀಕರಣಪ್ರಕ್ರಿಯಾ ರೀತ್ಯಾ ಹೀಗೆ; ಅರ್ಧ ಭಾಗ ಪೃಥಿವೀ ಅಂಶ ಇದ್ದು, ಉಳಿದ ಅರ್ಧ ಭಾಗ ಉಳಿದ ನಾಲ್ಕು ಭೂತಗಳಿಂದ ತುಂಬಿರುತ್ತದೆ. "ಪೃಥಿವೀ" ಎಂಬ ವಸ್ತುವಿನಲ್ಲಿ ಶೇ. ೫೦ ರಷ್ಟು ಪೃಥಿವೀ ಭಾಗವೂ ⅛, ⅛ ಭಾಗ ದಷ್ಟು, ನೀರು, ಶಾಖ, ಗಾಳಿ, ಮತ್ತು ಆಕಾಶ ಇವುಗಳೂ ಇರುತ್ತವೆ. ಅಂದರೆ ಹೆಚ್ಚುಭಾಗ ಪೃಥಿವೀ ಇರುವುದರಿಂದ, ಅದನ್ನು 'ಪೃಥಿವೀತತ್ವ' ಎನ್ನುವುದು. ಹೀಗೆಯೇ 'ಜಲತತ್ವ' ಮುಂತಾದವುಗಳನ್ನೂ ತಿಳಿಯ ಬೇಕು.

"ಸಪ್ತೀಕರಣ" ದಲ್ಲಿ ಯಾವ ತತ್ವವನ್ನು ತೆಗೆದುಕೊಂಡರೂ ಅದು ಅರ್ಧಭಾಗವೂ, ಮಿಕ್ಕ ಆರು ತತ್ವಗಳು, $\frac{1}{12}$ ಅಂಶಗಳಾಗಿ ಅರ್ಧ ಭಾಗವೂ ಇರುತ್ತವೆ. ಕಡೆಯಲ್ಲಿ ಕೊಟ್ಟಿರುವ ಪಟ್ಟಿಯಿಂದ ಈ ಮೂರು ಕರಣಗಳ ವಿವರಣೆಯು ಸ್ಪಷ್ಟವಾಗುತ್ತದೆ. *

---

* ನಕ್ಷೆಯನ್ನು ಕಡೆಯಲ್ಲಿ ಕೊಟ್ಟಿದೆ.

## ಬಿನ್ನಪಗಳು ೧೪—೧೭

ಹದಿನಾಲ್ಕನೆಯ ಬಿನ್ನಪದಲ್ಲಿ ಬ್ರಹ್ಮಾಂಡದಲ್ಲಿರುವ ಹದಿನಾಲ್ಕು ಲೋಕಗಳ ನೆಲೆಯನ್ನು ನಿರ್ಣಯಿಸಿದೆ.

ಹದಿನೈದನೆಯ ಬಿನ್ನಪದಲ್ಲಿ ಭೂಮಂಡಳದ ಅಳತೆಯನ್ನು ಗಣನೆ ಮಾಡಿದೆ.

ಹದಿನಾರನೆಯ ಬಿನ್ನಪದಲ್ಲಿ ಸುಖಾನುಭವಸ್ಥಾನಗಳಾದ, ಭೂ ಸ್ವರ್ಗಗಳ ರೀತಿಯನ್ನು ವರ್ಣಿಸಿದೆ.

ಹದಿನೇಳನೆಯ ಬಿನ್ನಪದಲ್ಲಿ ಪಾಪಮಾಡಿದವರು ಹೊಂದುವ, ದುಃಖಾನುಭವಸ್ಥಾನಗಳಾದ ನರಕಗಳ ಸ್ಥಿತಿಯನ್ನು ವಿಸ್ತರಿಸಿದೆ.

---

## ಬಿನ್ನಪ ೧೮

ನರಕಾನುಭವದಿಂದ ಪಾಪಿಗಳ ಪಾಪವು ಕೊಂಚ ಕಡಿಮೆಯಾಗುತ್ತದೆ. ಅಂತೆಯೇ ಪ್ರಾಯಶ್ಚಿತ್ತಾದಿ ಕರ್ಮಗಳಿಂದಲೂ ಸ್ವಲ್ಪ ಪಾಪ ಪರಿಹಾರವಾಗುತ್ತದೆ. ಆದರೆ ಸಂಸಾರದಲ್ಲಿ ಇರುವ ನಾವುಗಳು ಮಾಡಿರುವ ಪಾಪಗಳಿಗೆ ಲೆಖ್ಖವೇ ಇಲ್ಲದುದರಿಂದ ಅವುಗಳನ್ನು ಅನುಭವಿಸಿಯೋ ಅಥವಾ ಪ್ರಾಯಶ್ಚಿತ್ತಮಾಡಿಯೋ ತೊಲಗಿಸುವುದಕ್ಕೂ ಆಗುವುದಿಲ್ಲ. ಹಾಗಾದರೆ ಇಷ್ಟು ಪಾಪಮಾಡುವವನಿಗೆ ಪರಿಹಾರವೇ ಇಲ್ಲವೆ? ಎಂದರೆ ಎಷ್ಟೇ ಪಾಪಿಯಾದರೂ ಭಗವಂತನ ಸ್ಮರಣ ಒಂದರಿಂದಲೇ ಸಕಲಪಾಪಗಳನ್ನೂ ತೊಳೆದುಕೊಳ್ಳಬಹುದೆಂಬುದು ಹದಿನೆಂಟನೆಯ ಬಿನ್ನಪದಲ್ಲಿ ಉಕ್ತವಾಗಿದೆ.

ಗರುಡಪುರಾಣದಲ್ಲಿ ಹೇಳಿರುವ ನರಕದುಃಖಾನುಭವದ ಚಿತ್ರವು ಹೇಳುವವರಿಗೂ ಕೇಳುವವರಿಗೂ ಭಯ ತರುವುದಾಗಿದೆ. ಅರ್ಧಕ್ಷಣದಲ್ಲಿ ಮಾಡುವ ಪಾಪಗಳಿಗೆ ಅನೇಕ ಲಕ್ಷ ಕಲ್ಪ ಕಲ್ಪಗಳು ಶಿಕ್ಷೆ ಅನುಭವಿಸಬೇಕಾಗಿರುವಾಗ ನಾವೆಷ್ಟು ಅರ್ಧಕ್ಷಣಗಳನ್ನು ಪಾಪಗಳಲ್ಲಿ ಕಳೆದಿ

ದ್ದೇವೆ? ಅಂತಹೆ ನಮಗೆಂತು ಪಾಪವಿಮೋಚನೆ? ಇದಕ್ಕೆ ಉತ್ತರ "ತಿರುಮಾಲೈ" ದಿವ್ಯಪ್ರಬಂಧದಲ್ಲಿ ಸೂಚಿಸಿರುವ ಮುದ್ಗಲಚರಿತ್ರೆಧಲ್ಲಿ ಬರುತ್ತದೆ

"ನಮನು ಮುಜ್ಞಿಲನುಂ ಪೇಶ ನರಕಿಲ್ ನಿಂಆರ್‌ಕಳ್ ಕೇಳ್ಕ |
ನರಕಮೇ ಶುವರ್ಕಮಾಕುಮ್ ನಾಮಜ್ಞಳುಡೈಯ ನಮ್ಬಿ ||"

ಎಂದು ತೊಂಡರಡಿಪ್ಪೊಡಿಯಾಳ್ವಾರ್ರು ಅಪ್ಪಣೆ ಕೊಡಿಸಿದ್ದಾರೆ. "ಯಮನೂ, ಮುದ್ಗಲನೂ, ಸಂಭಾಷಣೆ ಮಾಡುವುದನ್ನು ನರಕವಾಸಿಗಳು ಕೇಳುತ್ತಿದ್ದಾಗ ನರಕವೇ ಸ್ವರ್ಗವಾಯಿತು" ಎಂದು ಅರ್ಥ. ಮುದ್ಗಲನೆಂಬುವನು ಮಹಾಪಾಪಿ. ಅವನು ಸತ್ತ ಕ್ಷಣವೇ ಯಮಭಟರು ಅವನನ್ನು ಹಿಂಸಿಸಿ ನರಕಕ್ಕೆ ಎಳೆದುಕೊಂಡು ಹೋದರು. ಆದರೆ ಯಮನು ಅವನನ್ನು ಇದಿರುಗೊಂಡು ಮರ್ಯಾದೆ ಮಾಡುತ್ತಾನೆ. ಮುದ್ಗಲನು "ನಾನು ಪರಮ ಪಾಪಿ! ನಿನ್ನ ಭಟರು ನನ್ನನ್ನು ತೊಂದರೆ ಮಾಡಿರುವಾಗ ನೀನು ಮಾತ್ರ ನನ್ನನ್ನೇಕೆ ಪ್ರೀತಿಯಿಂದ ಕಾಣುತ್ತೀಯೇ ?" ಎಂದು ಕೇಳುತ್ತಾನೆ. ಆಳ್ವಾರುಗಳು ಪಾಪಮಾಡಿರುವುದನ್ನು ಹೀಗೆ ವರ್ಣಿಸುತ್ತಾರೆ. "ಪಾವಮೇ ಶೈದು ಪಾವಿಯಾನೇನ್" "ಕೆಲವರು ಪಾಪ ಜಾಸ್ತಿಯಾಗಿ ಮಾಡಿ, ಕೊಂಚವಾದರೂ ಪುಣ್ಯವೆಸಗಿ ಸುಕೃತಿಗಳೆನ್ನಿಸಿಕೊಳ್ಳುತ್ತಾರೆ. ಅಂಥ ಮಿಶ್ರಪಾಪವನ್ನಲ್ಲ ನಾನು ಮಾಡಿದ್ದು, ಮಾಡಿದುದೆಲ್ಲಾ ಪಾಪ. ಅನ್ನಿಸಿಕೊಂಡದ್ದೂ ಪಾಪಿಯೆಂದೇ!" ಯಮನು ಮುದ್ಗಲನಿಗೆ ಹೇಳುತ್ತಾನೆ, "ಅಯ್ಯ! ನೀನೊಮ್ಮೆ ತಿಲಗೋದಾನ ಮಾಡುವಾಗ 'ಕೃಷ್ಣಾಯ' ಎಂದು ಹೇಳಿದ್ದೀಯೆ. ಈ ಒಳ್ಳೆ ದೇವರ ಹೆಸರು ಕೇಳಿ ನರಕದಲ್ಲಿ ಯಾತನೆ ಅನುಭವಿಸುತ್ತಿದ್ದವರೆಲ್ಲ ತಮ್ಮ ಯಾತನೆಯ ದುಃಖ ಮರೆತರು. ಅಂತೂ ನರಕ ಸ್ವರ್ಗವಾಯಿತು!"

ಈ ಹದಿನೆಂಟನೆಯ ಬಿನ್ನಪದಲ್ಲಿ, ಎಲ್ಲರನ್ನೂ ಪಾವನಗೊಳಿಸುವ ಈಶ್ವರನ ಶಕ್ತಿಯ ವಿಷಯದಲ್ಲಿ ರಾಜರು ಬಲು ವಿಶ್ವಾಸ ತೋರಿದ್ದಾರೆ. ಈ 'ಪಾವನತ್ವ' ಎಂಬ ಈಶ್ವರನ ಗುಣವೇ ವೇದಾನ್ತದ ಪ್ರಧಾನಾರ್ಥ. ನಮ್ಮ ಪಾಪಗಳನ್ನು ನೋಡಿದಾಗ, ಆ ಪಾಪಪರಿಹಾರದ ಹಾದಿಯೇ

ಇಲ್ಲವೆಂದು ತೋರುತ್ತದೆ. ಆದರೆ ಹಾಗೆ ನೆನೆಯಬಾರದು. ಭಗವಂತನ "ಶುದ್ಧಿಯೋಗ" ವನ್ನು ನಾವು ಸ್ಮರಿಸಿಕೊಳ್ಳಬೇಕು. ಪರಮಾತ್ಮನ ಪ್ರಭಾವದಿಂದ ಎಂಥ ಪತಿತರೂ ಪಾವನರಾಗುತ್ತಾರೆ. ರಾಮ ಲಕ್ಷ್ಮಣರೊಡನೆ, ವಿಶ್ವಾಮಿತ್ರನು ಮಿಥಿಲೆಗೆ ಹೋಗುವಾಗ ಶೂನ್ಯಾಶ್ರಮವೊಂದು ರಾಮನ ಕಣ್ಣಿಗೆ ಬೀಳುತ್ತದೆ. ಅಲ್ಲಿ ಅಹಲ್ಯೆ ಪುನೀತಳಾಗುತ್ತಾಳೆ. ಇಲ್ಲಿ ನಾವು ನೋಡಬೇಕಾದುದು ಅಹಲ್ಯೆಯ ಹೊಲಸನ್ನಲ್ಲ, ಈ ಶ್ರೀರಾಮನ ಪಾದಧೂಳಿಯ ಪಾವನತ್ವವನ್ನು! 'ಪಾವನಃ ಸರ್ವ ಲೋಕಾನಾಂ ತ್ವಮೇವ ರಘುನಂದನ.'

ಅಪರಾಧಗಳನ್ನು ಸಹಿಸಿ, ನಮ್ಮನ್ನು ಪಾವನರನ್ನಾಗಿ ಮಾಡುವ ಭಗವಂತನ ಗುಣವನ್ನು ನಮ್ಮಾಳ್ವಾರರ ದಿವ್ಯಪ್ರಬಂಧದಲ್ಲಿ ನೋಡಬೇಕು. "ಅಞ್ಞಿರೈಯ ಮಡನಾರಾಯ್" ಎನ್ನುವ ದಶಕದಲ್ಲಿ ದೇವರ 'ಅಪರಾಧ ಸಹತ್ವ' ವೆಂಬ ಗುಣವನ್ನು ಅವಲಂಬಿಸಿ ಸಿಫಾರಸುಮಾಡುವಂತೆ ಹಕ್ಕಿಗಳನ್ನು ದೇವರ ಬಳಿಗೆ ದೂತರನ್ನಾಗಿ ಆಳ್ವಾರ್ರು, ನಾಯಕೀ ಅವಸ್ಥೆಯನ್ನು ಹೊಂದಿ ಕಳಿಸುತ್ತಾರೆ. "ಎನ್ ಪಿೞೈಕ್ಕೈಯೇ ನಿನೈಂದರುಳಿ" 'ನನ್ನ ಅಪರಾಧವನ್ನು ಗಮನಿಸಿದರೇ ಹೊರತು ತನ್ನ ಕ್ಷಮಾಗುಣವನ್ನು ಗಮನಿಸಲಿಲ್ಲ.' ಎಂದು ಆಳ್ವಾರವರು ದೂತಮುಖೇನ ತಿಳಿಸಿದ್ದ ಈ ಹಾಡು ಈ ದಶಕದ ಉಸಿರು. ಒಂದು ಹಕ್ಕಿಯನ್ನು ನೋಡಿ, ನಾಯಕನು ತೊರೆದಿರುವ ತನ್ನ ತೊಂದರೆಯನ್ನು ದೇವರಿಗೆ 'ಪರಾಂಕುಶ ನಾಯಕಿಯು' ಹೇಳಿಕಳಿಸುತ್ತಾಳೆ. "ದೇವರೆ, ನೀನೇನು ಅವಳ ತಪ್ಪನ್ನೇ ನೋಡಬೇಕೆ? ನಿನ್ನ ಅರುಳನ್ನು ನೋಡಬಾರದೆ? ಎಂದು ಹೇಳು ಹಕ್ಕಿ. ನನ್ನ ಅವಗುಣವು ಮಟ್ಟಿಗೆ ಅವನಿಗೆ ತಿಳಿಯಿತೇ ಹೊರತು ತನ್ನ ಸಜ್ಜನಿಕೆ ಕಾಣಲಿಲ್ಲವೆ? ಅದೆಂಥ ಸರ್ವಜ್ಞ ಆತ? ಆಶ್ರಿತರ ಅಪರಾಧಗಳ ವಿಷಯದಲ್ಲಿ ಅವಿಜ್ಞಾತಾವಾಗಿರಬೇಕಾದ ನೀನು ಅವುಗಳಲ್ಲಿ ಸರ್ವಜ್ಞನಾಗಿಯೂ, ನಿನ್ನ ಕೃಪಾಕಾರುಣ್ಯಗಳಲ್ಲಿ ಅವಿಜ್ಞಾತಾವಾಗಿಯೂ ಹೀಗೆ ನಿನ್ನ ಸ್ವರೂಪವು ತಲೆಕೆಳಗಾಗಿ ಹೋಗಿಬಿಟ್ಟಿತಲ್ಲಾ! ಅಪರಾಧವನ್ನು ಮನ್ನಿಸುವ ಗುಣ ಏನು ಸುಮ್ಮನೆ ಅವನಲ್ಲಿ ಇರುವುದು ಮಾತ್ರವೋ? ಅಥವಾ ಆ ಗುಣ

ಪ್ರಕಾಶಿಸುವುದೋ?" ಹಾಗೆ ಇಲ್ಲಿ ಮಹಾರಾಜರೂ ತನ್ನ ದೋಷ ನೋಡದೆ ದೇವರು ತನ್ನ ಗುಣ ತೋರಬೇಕೆಂದು ಕೋರಿಕೊಳ್ಳುತ್ತಾರೆ. "ತಿರುವಾಯ್ ಮೊಳಿಯನ್ನು ಬೆಳೆಸಿದ" ರಾಮಾನುಜರ ಸಂಬಂಧ ದಿಂದ ರಾಜರ ಬಾಯಲ್ಲಿ ಇಂಥ ಮುತ್ತಿನಂಥ ಮಾತು ಉದುರುತ್ತದೆ.

ಈ ಹದಿನೆಂಟನೆಯ ಬಿನ್ನಪದಿಂದ "ಹಿತ" ಅಥವಾ "ಸಾಧನ" ದ ವಿಚಾರವು ಆರಂಭವಾಗುತ್ತದೆ. ಈ ಹಿತವನ್ನು "ಭಜನ" "ಭಕ್ತಿ" ಈ ಶಬ್ದಗಳಿಂದ ಕರೆಯಲಾಗಿದೆ. ಆ ಭಜನವೂ ಬರೀ ಭಜನವಲ್ಲ. ಅನನ್ಯಭಜನ. ಬೇರೊಬ್ಬರನ್ನೂ ಭಜಿಸದೆ ಶ್ರೀಮನ್ನಾರಾಯಣನನ್ನೇ ಸೇವಿಸುವ ನಿಷ್ಠೆ ಇವರ ಎದೆಯಲ್ಲಿ ಊರಿದೆ. ಅಂತೆಯೇ ಮೂವತ್ತು ಬಿನ್ನಪಗಳಲ್ಲಿಯೂ "ಅನನ್ಯ ಜನ ಸುಲಭ, ಅನನ್ಯ ಜನ ಸುಲಭ" ಎಂಬ ಅಚ್ಚು ಮೆಚ್ಚಿನ ಸಂಬೋಧನೆ ಇರುವುದು.

ದೇವರೊಬ್ಬನಿಗೇ ಅಡಿಯಾಳೆಂಬ ಅರ್ಥವನ್ನು "ಪ್ರಣವ" ತಿಳಿ ಸುತ್ತದೆ. ಜೀವಾತ್ಮನು ದೇವರಿಗೆ ಹೊರತು ಅನ್ಯರಿಗೆ ಶೇಷನಲ್ಲ. ಮದುವೆ ಯಾದ ಮೇಲೆ ಹೆಣ್ಣು ಗಂಡನಿಗೆ ಹೇಗೆ ಅಸಾಧಾರಣಳೋ, ಹಾಗೆ ಈ ಜೀವಾತ್ಮಗಳೆಲ್ಲಾ ನಾರಾಯಣನೊಬ್ಬನಿಗಾಗಿಯೇ. ಇಂಥ ಜೀವಾತ್ಮ ನನ್ನು ಮತ್ತೊಂದೆಡೆ ಸೇರಿಸುವುದೆಂದರೆ ಅದು ಬಲು ಅಪಚಾರ. "ಅನನ್ಯ ಭಜನ" ಎನ್ನುವಾಗ ಎರಡಿದೆ. "ಅನನ್ಯತ್ವ" ಮತ್ತು "ಭಜನ." ಒಂದು ವೇಳೆ 'ಭಜನ' ವಿಲ್ಲದಿದ್ದರೂ ಸರಿಯೆ. 'ಅನನ್ಯತ್ವ' ಅತಿಮುಖ್ಯ. ಗೀತೆಯಲ್ಲಿ ಭಕ್ತಿಯ ಮಾತು ಬರುವಾಗ ಲೆಲ್ಲಾ "ಅನನ್ಯಾಶ್ಚಿಂತಯಂತೋ ಮಾಂ" "ಭಕ್ತ್ಯಾತ್ವನನ್ಯಯಾ ಶಕ್ಯಃ" ಎಂದು ಈ 'ಅನನ್ಯತ್ವ' ವನ್ನು ಮುಖ್ಯವಾಗಿ ಪರಿಗಣಿಸಿದೆ.

'ಅಂಜಿರೈಯ ಮಡನಾರಾಯ್' ಎನ್ನುವ ಪ್ರಬಂಧವಲ್ಲಿ ದೂತರನ್ನು ಕಳಿಸಿದ್ದಕ್ಕೆ ದೇವರು ಎದುರಿಗೆ ಬಂದು ನಿಂತರೆ ಆಳ್ವಾರ್ರು "ಅಯ್ಯೋ! ನಾನು ಪಾಪಿ! ದೂರ ಹೋಗುತ್ತೇನೆ!" ಎಂಬರ್ಥಬರುವ "ವಳವೇ ಳುಲಹು" ಹಾಡುತ್ತಾರೆ. ದೇವರು ಮತ್ತೆ ಆಳ್ವಾರ್ರಿಗೆ ಗಿರಾಕಿಮಾಡಿ,

ಅವರನ್ನು ತನ್ನ ಬಳಿಗೆ ಸೇರಿಸಿಕೊಳ್ಳುತ್ತಾನೆ. ಆಳ್ವಾರ್ರು ದೇವರನ್ನು ಕಾಣದಿದ್ದಾಗ ಅವನಿಗಾಗಿ ಆಸೆಪಡುವುದೂ, ಕಂಡಾಗ ಓಡುವುದೂ ಪದ್ಧತಿ! ಆಳ್ವಾರನ್ನು ದೇವರು ಹೀಗೆ ಕರೆಯುತ್ತಾನೆ.

" ಆಳ್ವಾರ್ರೇ! ಓಡಬೇಡಿ, ಇಲ್ಲಿ ಕೇಳಿ. ನಾನು ಕೃಷ್ಣನಾಗಿ ಹುಟ್ಟಿ ಬೆಣ್ಣೆ ತಿಂದ ಸಮಾಚಾರವು ನಿಮಗೆ ಗೊತ್ತಿಲ್ಲವೆ?"

ತಮಗೆ ಗೊತ್ತಿದ್ದರೂ ದೇವರೇ ಬಾಯಿಬಿಟ್ಟು ಹೇಳಲೆಂದು ಆಳ್ವಾರ್ರು, "ನನಗೆ ಗೊತ್ತಿಲ್ಲ" ಎನ್ನುತ್ತಾರೆ.

" ಹಾಗಾದರೆ ಕೇಳಿ; ಪ್ರಳಯಕಾಲದಲ್ಲಿ ಈ ಪ್ರಪಂಚಗಳನ್ನೆಲ್ಲಾ ಹೊಟ್ಟೆಯಲ್ಲಿಟ್ಟು ಸೃಷ್ಟಿಕಾಲ ಬರಲು ಹೊರಕ್ಕೆ ಕಕ್ಕಿದೆನಲ್ಲಾ! ಆಗ ಹೊಟ್ಟೆಯಲ್ಲಿ ಕಲ್ಲುಮಣ್ಣು ಏನಾದರೂ ಉಳಿದಿರಬಹುದೆಂದು ಔಷಧಿಯ ರೂಪವಾಗಿ ಬೆಣ್ಣೆಯನ್ನು ಮೆದ್ದೆ."

" ಹೊಂ! ಅದು ಹೇಗಾದೀತು? ಅದು ನಡೆದದ್ದು ಯಾವಾಗಲೋ, ಬೆಣ್ಣೆ ಮೆದ್ದದ್ದು ಯಾವಾಗಲೋ?"

" ಹಾಗಾದರೆ ಇನ್ನೇಕೆ ಹೇಳಿ"

" ನಿನಗೆ ಬೇಕಾದವರಾದ ಗೋಪಿಯರು ಕೈಮುಟ್ಟಿದ್ದೆಂದು ಆ ಬೆಣ್ಣೆಯನ್ನು ತಿಂದಿದ್ದೀಯೆ."

" ಅವರಂತೆ ನೀವೂ ನನಗೆ ಬೇಕಾದವರು"

" ನಾನೇನೂ ಅಂಥ ಬೆಣ್ಣೆಯಲ್ಲ"

" ಇನ್ನೇನು?"

" ಪೂತನಿಯಂತೆ ವಿಷ ನಾನು"

" ವಿಷವೂ ನನಗೆ ಇಷ್ಟ."

ಇದನ್ನೇ ಆಳ್ವಾರ್ರು ತಮ್ಮ ಪ್ರಬಂಧದಲ್ಲಿ " ವಿಡಪ್ಪಾಲಮುದಾವ ಮುದುಶೈದಿಟ್ಟ ಮಾಯನ್" ಎನ್ನುವುದು. " ಸ್ತನ್ಯಂ ತದ್ವಿಷಸಂಮಿಶ್ರಂ ರಸ್ಯಮಾಸೀಜ್ಜಗದ್ಗುರೋಃ" ಇದು ವ್ಯಾಸಮಹರ್ಷಿಯ ವಾಕ್ಯ.

ಆ ಪೂತನಿಯು ಕೊಟ್ಟ ಸ್ತನ್ಯವು ವಿಷದೊಡನೆ ಸೇರಿದ್ದರೂ ಸ್ವಾಮಿಗೆ ರುಚಿಯಾಗಿತ್ತಂತೆ! ಇಲ್ಲಿ 'ನಂಬಿಳ್ಳೈ' ಅರ್ಥಮಾಡುತ್ತಾರೆ, ಯಶೋದೆಯ ಹಾಲಿನಂತೆಯೇ ಪೂತನಿಯ ಎದೆಹಾಲೂ ಇನಿಮೆಯಿಂದ ಕೂಡಿತ್ತು. ಅದು ಹೇಗೆಂದರೆ, ಪೂತನಿಯ ಮನಸ್ಸಿನಲ್ಲಿ ಏನಿತ್ತು? "ಈ ವಿಷವು ನನಗೂ ಅಲ್ಲ, ಮತ್ತಾರಿಗೂ ಅಲ್ಲ, ಕೃಷ್ಣನೊಬ್ಬನಿಗಾಗಿಯೇ!" ಈ ಕೆಟ್ಟ ಯೋಚನೆಯಲ್ಲಿಯೂ "ಅನನ್ಯತ್ವ" ಇದ್ದುದರಿಂದ, ಆಕೆ ಕೊಟ್ಟ ವಿಷವೇ ಸ್ವಾಮಿಗೆ ಅಮೃತವಾಯಿತು! ಮುಖ್ಯವಾಗಿ ದೇವರ ಹೊರತು ಅನ್ಯಸಂಬಂಧ ಇಲ್ಲದಿದ್ದರೆ ಸರಿ. ನಾವೇನು ಮಾಡಿದರೂ ಏನು ಕೊಟ್ಟರೂ ಅದು ದೇವರಿಗೆ ಸಲ್ಲುತ್ತದೆ, ಇದೀಗ ಸಂಪ್ರದಾಯದ ಮಹಿಮೆ.

"ಪೊತ್ತ ಉರಲೈ ಕವಿಳ್ತದನ್ ಮೇಲೇರಿ" ಎನ್ನುವ ಪಾಶುರದಲ್ಲಿ ಪೆರಿಯಾಳ್ವಾರವರು, ಬಾಲಕೃಷ್ಣನು ಒಡೆದು ಹೋದ ಒರಳುಕಲ್ಲಿನ ಮೇಲೇರಿ, ನಿಲುವಿನಲ್ಲಿದ್ದ ಹಾಲನ್ನೂ ಬೆಣ್ಣೆಯನ್ನೂ ತೆಗೆದು ತಿಂದನೆಂದು ಹೇಳುವ ಸಂದರ್ಭದಲ್ಲಿಯೂ, ಭಗವಂತನ ಈ ಗುಣವು ಪ್ರಕಾಶಿಸುವುದು. ಒಡೆದು ಹೋಗಿ ಉಪಯೋಗಕ್ಕೆ ಬಾರದ ಒರಳುಕಲ್ಲನ್ನು ಏಕೆ ಕೃಷ್ಣನು ಆರಿಸಿಕೊಂಡ? ಮನೆಯವರು ಬಳಸುವ ಹೊಸ ಒರಳುಕಲ್ಲು ಅನ್ಯಾರ್ಹ, ಅದನ್ನು ಮುಟ್ಟಬಾರದೆಂದು! ಹೀಗೆ ಅನನ್ಯವಾದ ವಸ್ತುವಿನ ಮೇಲೆಯೇ ದೇವರಿಗೆ ಬಲು ಪ್ರೀತಿ! ವೈಷ್ಣವ ಸಂಪ್ರದಾಯದಲ್ಲಿ ಮಟ್ಟಿಗಲ್ಲ, ಎಲ್ಲ ಪಂಥದವರೂ ಈ 'ಅನನ್ಯತ್ವ' ವನ್ನು ಪುರಸ್ಕರಿಸುತ್ತಾರೆ.

ಇನ್ನು 'ಭಜನ' ವೆಂದರೇನು? ಎನ್ನುವುದನ್ನು ಗಮನಿಸೋಣ. ಭಜನೆ, ಭಕ್ತಿ. ಭಕ್ತಿಯನ್ನು ವಿವರಿಸುವಾಗ "ತೈಲಧಾರಾವದವಿಚ್ಛಿನ್ನ ಸ್ಮೃತಿಸಂತಾನ ರೂಪ" ಎಂದಿದೆ. ಅಂದರೆ ಭಗವಂತನ ಸ್ಮರಣೆಯಲ್ಲಿ ಬೇರೆ ಯಾವ ವಿಷಯವೂ ಕಲೆತಿರಬಾರದು. ಅಂಥ ಭಕ್ತಿಯಿಂದ ಮುಕ್ತಿಯು ದೊರಕುತ್ತದೆ. ನಾವು ಮಾಡುವ ಭಕ್ತಿಯಿಂದ ನಾವು ಪಾವನರಾಗುತ್ತೇವೆಯೆ? ಅಥವಾ ದೇವರಿಂದಲೇ? ಭಗವಂತನ ಸ್ಮರಣೆಯಿಂದ ನಮ್ಮ ದುಃಖವು ಪರಿಹಾರವಾಗುತ್ತದೆ. ಕಾಯಿಕ, ವಾಚಿಕ ಮತ್ತು ಮಾನ

ಸಿಕ ಈ ತ್ರಿಕರಣಗಳಿಂದಲೂ ಮಾಡಲ್ಪಡಬಹುದಾದ ಭಗವದ್ಭಾಗವತಾಪಚಾರಗಳಿಗೂ ಭಗವಂತನ ಸ್ಮರಣೆಯೇ ಮದ್ದು. ಅಂಥ ಭಗವತ್ ಸ್ಮರಣರೂಪವಾದ ಭಕ್ತಿಯಿಂದಲೇ ಪಾವನವಾಗುತ್ತಾನೆ ಚೇತನ. 'ವೇದಾನ್ತ ಜ್ಞಾನ' ಇಲ್ಲಿ ಸರಿಯಾಗಿರಬೇಕು. 'ಪಾವನತ್ವ' ಭಕ್ತಿಗೆನ್ನುವುದೇನೋ ನಿಜ. ಹಾಗಾದರೆ ಭಗವಾನ್ ಪಾವನನೇ? ಭಕ್ತಿಯು ಪಾವನಕಾರಿಯೆ? ಸ್ಮರಣರೂಪವಾದ ಭಕ್ತಿಯಲ್ಲಿ ಭಗವಂತನು ವಿಷಯವಾಗಿರುವುದರಿಂದ ಭಕ್ತಿಯು ಪಾವನ.

ಭಗವತ್ಸಂಬಂಧದಿಂದ ಭಕ್ತಿಗೆ ಪಾವನತ್ವವು ಬರುವುದೆಂಬ ವಿಷಯವನ್ನು ಈ ಚರಿತ್ರದಿಂದ ನೋಡಬಹುದು. ತ್ರಿವಿಕ್ರಮಾವತಾರ ಎತ್ತಿದಾಗ ದೇವರ ಒಂದು ಪಾದವು ಸತ್ಯಲೋಕಕ್ಕೆ ತಾಗಿತು. ಚತುರ್ಮುಖನು ಆ ಶ್ರೀಪಾದವನ್ನು ತೊಳೆದನು, ಆ ನೀರು ಗಂಗೆಯಾಯಿತು. ಗಂಗೆಯ ಪಾವನತ್ವ ಎಂಥದು? ಸ್ವಾಮಿಯ ಪಾದಸಂಸ್ಪರ್ಶದಿಂದ! ಈ ದಿವ್ಯದೇಶದ ಪವಿತ್ರವಾದ ಕಲ್ಯಾಣಿಯು ಭಾಗವತಸಂಬಂಧದಿಂದ ಪರಮಪಾವನಳು. ಹನ್ನೆರಡು ವರ್ಷ ಕಾಲ ರಾಮಾನುಜರು ಇಲ್ಲಿದ್ದು, ಅವರ ಶ್ರೀಪಾದ ಸಂಬಂಧದಿಂದ 'ಕಲ್ಯಾಣಿ' ಯು ಪವಿತ್ರತಮ.

ತಾಯಿ ಮಗುವಿಗೆ ಔಷಧಿ ಕೊಡಬೇಕು. ಕಹಿಯೆಂದು ತಿನ್ನದೆ ಚಂಡಿ ಹಿಡಿಯುತ್ತದೆ. ಅದೇ ಔಷಧಿಯನ್ನು ಬೆಲ್ಲದಲ್ಲಿ ಹುದುಗಿಸಿಕೊಟ್ಟಾಗ ಮಗು ತಿನ್ನುತ್ತದೆ. ಈಗ ಬೆಲ್ಲವು ಮಗುವಿನ ಬಾಯಿಲಿ ಹೋಗಲಾಡಿಸುವುದೇ? ಔಷಧಿಯೆ? ಚೇತನರಿಗೆ ಮನಸ್ಸಿಗೆ ಇಷ್ಟವಾದವುಗಳಲ್ಲೇ ಪ್ರವೃತ್ತಿಯು ಸಹಜ. 'ಪ್ರಯತ್ನವಿಲ್ಲದಿದ್ದರೆ ಫಲವಿಲ್ಲ.' ಅದರಿಂದ ಏನೂ ಮಾಡದೆ ಸುಮ್ಮನಿರುವ 'ನಿವೃತ್ತಿಶಾಸ್ತ್ರ' ಹೇಳುವುದು ಕಷ್ಟವಾಗುತ್ತದೆ. ನಿವೃತ್ತಿಧರ್ಮದಲ್ಲಿ ಚೇತನನಿಗೆ ವಿಶ್ವಾಸವು ಉಂಟಾಗದು. 'ನಾನು ಏನಾದರೂ ಮಾಡಿಯಲ್ಲದೆ ನನಗೆ ಹೇಗೆ ಫಲ ಸಿಕ್ಕುತ್ತದೆ?' ಈ ಚಿಂತೆಯು ಅವನನ್ನು ಬಾಧಿಸುತ್ತದೆ. ಆದುದರಿಂದ "ಇದು ಮಾಡು, ಆದು ಮಾಡು" ಎಂದು ಕರ್ಮ, ಜ್ಞಾನ, ಭಕ್ತಿಗಳೆಂಬ ಪ್ರವೃತ್ತಿ ಮಾರ್ಗಗಳನ್ನು ಶಾಸ್ತ್ರವು ಬೋಧಿಸುತ್ತದೆ. ಆದರೆ ಅವುಗಳ ಒಳಗೆ ದೇವ

ರನ್ನು ಹುದುಗಿಸಿದೆ. ಹೀಗೆ ಎಲ್ಲಾ ವಿಚಾರದಲ್ಲಿಯೂ 'ಕಾರ್ಯಕಾರಿಯಾದ ಪಾವನತ್ವ' ಸರ್ವೇಶ್ವರನೊಬ್ಬನಿಗೇ ಇರುವುದರಿಂದ "ಸ್ವಾಮಿ, ನಿನ್ನ ಪತಿತಪಾವನತೆಯನ್ನು ನನ್ನಲ್ಲೂ ತೋರು" ಎಂದು ಚಿಕ್ಕದೇವರಾಜರು ಬಿನ್ನವಿಸಿಕೊಳ್ಳುತ್ತಾರೆ.

ಒಟ್ಟಿನಲ್ಲಿ ಏನು ಹೇಳಿದಹಾಗಾಯಿತು ? ಕರ್ಮ ಜ್ಞಾನ ಭಕ್ತಿಗಳು ಪಾವನಗಳು ಎಂದಾಗ, ಆ ಪಾವನತ್ವ 'ಔಪಚಾರಿಕ.' ಮುಖ್ಯವಾದ ಪಾವನತ್ವವು ಭಗವಂತನಲ್ಲಿಯೇ ಅವನ ಸಂಬಂಧದಿಂದ ಕರ್ಮಜ್ಞಾನ ಭಕ್ತಿಗಳನ್ನು 'ಶುದ್ಧಿಕಾರಿ' ಗಳೆಂದು ಹೇಳುವುದು ಗೌಣ. ಈ ಭಗವಂತನ ಪಾವನತ್ವವೇ "ಹೇಯಪ್ರತ್ಯನೀಕತ್ವ" ವೂ ಆಗುತ್ತದೆ.

ಈ ಎಲ್ಲಾ ಬಿನ್ನಪಗಳ ಕೊನೆಯಲ್ಲಿ ಚಿಕ್ಕದೇವರಾಜ ಒಡೆಯರು ಹೇಳಿರುವ ಒಂದೊಂದು ಮಾತೂ ಗಮನಿಸಿದರೆ, ರಾಜ್ಯದಲ್ಲಿ ವಿರಕ್ತಿಯೂ, ಭಗವತ್‌ಸಂಬಂಧದಲ್ಲಿ ಆಸಕ್ತಿಯೂ ಇದ್ದ ಕುಲಶೇಖರಾಳ್ವಾರರ ಜ್ಞಾಪಕ ಬರುತ್ತದೆ! "ಅನನ್ಯಜನ ಸುಲಭ" ಎಂದು ಈ ರಾಜರು ಮಾಡಿರುವ ಸಂಬೋಧನೆಯು, ದೇವರ ಕೃಪೆ ಇರುವವರು ಹೇಳುವ ಮಾತು. ತಾವು ಮನಸಾರ ರಾಜಭೋಗ ತ್ಯಾಗ ಮಾಡದೆ ರಾಜರು ಈ ಮಾತು ಆಡಿಲ್ಲ.

ಸಾಧಾರಣವಾಗಿ ಜನತೆಯು ತಮ್ಮನ್ನು ಸುಖವಾಗಿರಿಸಿದರೆ ದೇವರ ಅನುಗ್ರಹವಿದೆಯೆಂದು ತಿಳಿದುಕೊಳ್ಳುತ್ತದೆ. ಆದರೆ "ಯಸ್ಯಾನುಗ್ರಹಮಿಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಂ" ಎನ್ನುವ ವಾಕ್ಯದಲ್ಲಿ, ದೇವರ ಅನುಗ್ರಹವಿದೆಯೆಂಬುದಕ್ಕೆ ಬೇರೆ ವಿಧವಾಗಿ ಗುರುತು ಹೇಳಿದೆ. ಇರುವುದೆಲ್ಲವನ್ನೂ— ಆಸ್ತಿ, ಪಾಸ್ತಿ, ಹೆಂಡರು-ಮಕ್ಕಳು-ಅಪಹರಿಸಿ ಅವನನ್ನು ಅನುಗ್ರಹದ ಹಾದಿಯಲ್ಲಿ ಸ್ವಾಮಿಯು ಒಯ್ಯುತ್ತಾನೆ ಎಂದು. ಈ ವಿಚಾರವು ವಿವೇಕಿಗಳಾಗಿರುವವರ ಮನಸ್ಸಿಗೇ ಚೆನ್ನಾಗಿ ಹತ್ತುವುದು.

ವೇದಾಂತದೇಶಿಕರು 'ರಹಸ್ಯತ್ರಯಸಾರ' ವೆಂಬ ತಮ್ಮ ಗ್ರಂಥದಲ್ಲಿ, ಐಹಿಕ ಸಂಪತ್ತನ್ನೂ, ಬಂಧುಗಳ ಕೂಡಿಯಾಟವನ್ನೂ ಏಕೆ

ಈಶ್ವರಾನುಗ್ರಹರೂಪವಾಗಿ ಭಾವಿಸಬಾರದು ಎಂಬ ಅಂಶವನ್ನು ಒಡೆದು ವಿಶದಪಡಿಸಿದ್ದಾರೆ. ದೀರ್ಘಾಯುಸ್ಸು ನಮಗೆ ಇರುವುದಾದರೆ ನಮ್ಮ ಕಣ್ಣುಮುಂದೆಯೇ, ನಮ್ಮ ಮನೆತನದ ಅನೇಕರು ಸಾಯುವ ದೃಶ್ಯ ವನ್ನು ಕಂಡು ದುಃಖಪಡಬೇಕಾಗುತ್ತದೆ. ಪುಷ್ಟಿಕರವಾದ ಆಹಾರವನ್ನು ತಿಂದು ತೇಗಿ, ಆರೋಗ್ಯದಿಂದ ದೃಢಕಾಯನಾದಲ್ಲಿ ಇಂದ್ರಿಯವು ಉದ್ರೇ ಕಗೊಂಡು ಅನೀತಿಯ ಹಾದಿಯಲ್ಲಿ ಹೋಗಬಹುದು. ನಾಲ್ಕು ಕಾಸು ಕೈಗೆ ಕೂಡಿಬಂದರೆ, ಆ 'ಧನಮದ' ವು ಮಾಡಬಾರದುದನ್ನು ಮಾಡಿ ಸುತ್ತದೆ."

'ಒರುನಾಯಕಂ' ಎಂಬ ದಿವ್ಯಪ್ರಬಂಧದಲ್ಲಿ ನಮ್ಮಾಳ್ವಾರ್ ರವರು, ಐಶ್ವರ್ಯ, ಕೈವಲ್ಯಗಳನ್ನು ನಿರಾಕರಿಸಿ 'ತಿರುನಾರಣನ್' ಪಾದ ಸ್ಮರಣೆಯನ್ನೇ ಪುರುಷಾರ್ಥವನ್ನಾಗಿ ಹೇಳಿದ್ದಾರೆ. ಈ ದಿವ್ಯಪ್ರಬಂಧದ ಅರ್ಥವೇ ಈ ದಿವ್ಯದೇಶದ ತಿರುಳು.

ನಮಗೆ ಹೆಚ್ಚಾಗಿ ಭೋಗಪುರುಷಾರ್ಥದಲ್ಲಿಯೇ ದೃಷ್ಟಿಯು ಇರು ತ್ತದೆ. ಇಂತಹ ಭೋಗಿಯಾದವನು ಖಂಡಿತ ಈಶ್ವರನ ನಿಗ್ರಹಕ್ಕೆ ಪಾತ್ರ ನೆಂದು ತಿಳಿಯಬೇಕು. ಭೋಗಗಳನ್ನು ಮಾತ್ರ ಇತ್ತು ತಾನು ದೂರ ಸರಿದುಬಿಡುತ್ತಾನೆ. ಸ್ವರ್ಗಾದಿ ಸುಖಗಳಲ್ಲಿ ಭೋಗ್ಯತಾಬುದ್ಧಿಯು ಬಾರ ದಿರಲೆಂದು ದೊರೆಗಳು ಬೇಡಿದ್ದಾರೆ.

ಈ ರೀತಿಯಾದ ವೈರಾಗ್ಯವು ರಾಜನಾದವನಿಗೆ ಹುಟ್ಟುವುದು ಕಷ್ಟ. ಇರುವೆಯು ತ್ಯಾಗಮಾಡಬೇಕಾದುದಕ್ಕಿಂತ ಚತುರ್ಮುಖಬ್ರಹ್ಮನು ಹೆಚ್ಚು ಭೋಗಗಳನ್ನು ತ್ಯಾಗಮಾಡಬೇಕಾಗುತ್ತದೆ. ಇರುವೆಯು ತನ್ನ ಒಂದು ಗೂಡನ್ನು ಬಿಡುವುದು ಸುಲಭ, ಆದರೆ ಹದಿನಾಲ್ಕು ಲೋಕಗ ಳನ್ನೂ ಬ್ರಹ್ಮನು ತೊರೆಯಬೇಕಾಗುತ್ತದೆ. ಈ ರೀತಿ ಚಿಕ್ಕದೇವರಾಜರು 'ಅನನ್ಯ ಪ್ರಯೋಜನ' ರಾಗಿ ಪ್ರಾರ್ಥಿಸಿರುವುದೂ ದೈವಾನುಗ್ರಹವಿಲ್ಲದೆ ಸಾಧ್ಯವಿಲ್ಲ. ಯಜ್ಞಾದಿಗಳಿಂದ ಬರುವ ಸ್ವರ್ಗಾದಿಸುಖಗಳನ್ನೂ ಕಾಲಿ ನಿಂದ ಒದ್ದು 'ನಿನ್ನ ಆಳ್ತನ ಒಂದನ್ನು ಮಾತ್ರ ಕರುಣಿಸು' ಎನ್ನು

ತ್ತಾರೆ. "ನೀನು ನಿಖಿಲಭೋಗಪ್ರದನೇನೋ ಹೌದು. ಆದರೆ ನಿನ್ನ ಕೈಂಕರ್ಯಭೋಗವೊಂದನ್ನೇ ಕೊಡು." ಹೀಗೆ ದೊರೆಗಳು ಬಿನ್ನತಿಗೈದಿರುವುದು ತಮಗೋಸ್ಕರವೇ ಅಲ್ಲದೆ, ತಮ್ಮ ನಾಡಿನ ಪ್ರಜೆಗಳೂ ಅನನ್ಯಪ್ರಯೋಜನರಾಗಿರಲೆಂದೇ.

## ಐದನೆಯ ದಿನದ ಉಪನ್ಯಾಸ

### ೧೯—೨೨ ಬಿನ್ನಪಗಳು

ಹಿಂದಿನ ಹದಿನೆಂಟು ಬಿನ್ನಪಗಳಲ್ಲಿ ಪರಬ್ರಹ್ಮನಾದ ಶ್ರಿಯಃಪತಿ ಶ್ರೀಮನ್ನಾರಾಯಣನು ಈ ಎಲ್ಲಾ ಚೇತನಾಚೇತನಗಳನ್ನೂ ಶರೀರಗಳನ್ನಾಗಿ ಹೊಂದಿರುವನೆಂದೂ ಎಲ್ಲಾ ವೇದಭಾಗಗಳೂ ಅವನನ್ನೇ ಸ್ತುತಿಸುವುವೆಂದೂ ಆತನು ಸರ್ವಸಮನೆಂದೂ, ಅಘಟಿತಘಟನಾಸಮರ್ಥನೆಂದೂ ಈ ರೀತಿಯಲ್ಲಿ ವೇದಾನ್ತೋಕ್ತವಾದ ಅನೇಕ ಲಕ್ಷಣಗಳನ್ನು ಸ್ವಾಮಿಗೆ ಹೇಳಿ, ಜೀವಾತ್ಮಗಳೂ ಮತ್ತು ಅಚಿತ್‌ಪ್ರಕೃತಿಗಳೂ ಅವನ ಸ್ವತ್ತುಗಳೆಂದೂ, ಇದನ್ನು ಪಂಚೀಕರಣಾದಿ ಪ್ರಕ್ರಿಯೆಗಳಿಂದ ಮೊದಲು ಸಮಷ್ಟಿ ಸೃಷ್ಟಿಮಾಡಿ, ಬಳಿಕ ಅಂಡಸೃಷ್ಟಿ, ಹದಿನಾಲ್ಕು ಲೋಕಗಳು, ಸ್ವರ್ಗನರಕಾದಿ ಸ್ಥಾನಗಳು ಮೊದಲಾದ ಈ ಅಚಿದ್ವಿಕಾರಗಳನ್ನು ಭಗವಂತನು ಸೃಜಿಸಿದುದನ್ನು ಹೇಳಲಾಯಿತು.

ಹತ್ತೊಂಭತ್ತನೆಯ ಬಿನ್ನಪದಲ್ಲಿ ಮೋಕ್ಷವೆಂಬುದು ದೊಡ್ಡ ಪುರುಷಾರ್ಥ ಎಂಬ ವಿಚಾರವು ಹೇಳಲ್ಪಟ್ಟಿದೆ. ಅಲ್ಲಿ ಸಂಗ್ರಹವಾಗಿ ಹೇಳಿರುವುದನ್ನು ವಿಸ್ತರಿಸಬೇಕು. ಚಿತ್, ಅಚಿತ್, ಈಶ್ವರ ಎಂಬ ಮೂರು ತತ್ವಗಳಂತೆ ಪುರುಷಾರ್ಥಗಳೂ ಮೂರು. ಅಚಿತ್‌ತತ್ವದಿಂದ ಐಶ್ವರ್ಯಪುರುಷಾರ್ಥವೂ, ಚಿತ್‌ತತ್ವದಿಂದ ಕೈವಲ್ಯಪುರುಷಾರ್ಥವೂ, ಈಶ್ವರನಿಂದ ನಿತ್ಯಕೈಂಕರ್ಯರೂಪ ಮೋಕ್ಷಪುರುಷಾರ್ಥವೂ ಸಿದ್ಧಿಸುತ್ತದೆ.

ಆದರೆ ಗೀತೆಯಲ್ಲಿ "ಚತುರ್ವಿಧಾ ಭಜಂತೇ ಮಾಂ" ಎಂದು ನಾಲ್ಕು ಫಲಗಳನ್ನು ಉದ್ದೇಶಿಸಿ ಆರ್ತ, ಅರ್ಥಾರ್ಥಿ, ಜಿಜ್ಞಾಸು, ಜ್ಞಾನಿ ಎಂಬ ನಾಲ್ವರು ಅಧಿಕಾರಿಗಳನ್ನು ಹೇಳಿರುವುದು. ಇದ್ದ ಐಶ್ವರ್ಯವನ್ನು ಕಳೆದುಕೊಂಡ ಆರ್ತನನ್ನೂ–ಇಲ್ಲದ ಐಶ್ವರ್ಯವನ್ನು ಅಪೇಕ್ಷಿಸುವ ಅರ್ಥಾರ್ಥಿಯನ್ನೂ, ಐಶ್ವರ್ಯವೆಂಬ ಒಂದೇ ಅಚಿತ್ ತತ್ತ್ವವನ್ನು ಅಪೇಕ್ಷಿಸುವ ಒಂದೇ ಅಧಿಕಾರಿಯನ್ನಾಗಿ ಇಟ್ಟುಕೊಂಡಾಗ, ಮೂರೇ ಎನ್ನುವುದು ಸರಿ ಹೋಗುತ್ತದೆ. ಈ ಐಶ್ವರ್ಯವು ಅಸ್ಥಿರ; ಆತ್ಮಾನುಭವರೂಪವಾದ ಕೈವಲ್ಯವು ಅಸ್ಥಿರವಲ್ಲದಿದ್ದರೂ ಶ್ಲಾಘ್ಯವಲ್ಲ, ಭಗವದನುಭವವೇ ಮೇಲಾದ ಪುರುಷಾರ್ಥ, ಈ ಭಗವದನುಭವ ಎನ್ನುವುದು ಪರಮಪದದಲ್ಲಿ ಶ್ರೀಮನ್ನಾರಾಯಣನಿಗೆ ಮಾಡುವ ಊಳಿಗದಲ್ಲಿ ಪರ್ಯವಸಾನವಾಗುತ್ತದೆ.

ಐಶ್ವರ್ಯವು ಸ್ಥಿರವಾದ ಪುರುಷಾರ್ಥವಲ್ಲವೆಂದು ತಿಳಿದಿದ್ದರೂ ನಮಗೆ ವಿರಕ್ತಿಯು ಹುಟ್ಟಿಲ್ಲ. ಶ್ರೀಭಾಗವತದಲ್ಲಿ ಸೃಷ್ಟಿ ಸಂಹಾರಗಳನ್ನು ಪುನಃ ಪುನಃ ಹೇಳುವುದಕ್ಕಾದರೂ ಅಭಿಪ್ರಾಯ ಇದೇ. "ಈ ಐಶ್ವರ್ಯವೆಂಬ ಅಚಿತ್ತು ಶಾಶ್ವತವಲ್ಲವೆಂಬ ಪಾಠವನ್ನು ಕಲಿಸುವ ಸಲುವಾಗಿ ಅಷ್ಟು ಬಾರಿ ಸೃಷ್ಟಿಸಂಹಾರಗಳ ವರ್ಣನೆಯು ಅಲ್ಲಲ್ಲಿ ಕಂಡುಬರುವುದು. ವೇದಾಂತದಲ್ಲಿ ಈ ಸೃಷ್ಟಿ ಸ್ಥಿತಿ ಸಂಹಾರಗಳನ್ನೂ, ಮೇಲ್ಮೇಲೇಳುವ ಕಡಲ ಅಲೆ, ನೊರೆ, ಗುಳ್ಳೆ ಇವುಗಳಿಗೆ ಹೋಲಿಸಿದೆ. ಬ್ರಹ್ಮನಾದ ನಿತ್ಯವಾದ ಸಮುದ್ರದಲ್ಲಿ ಸೃಷ್ಟಿ ಸ್ಥಿತಿ ಲಯಗಳು ಕ್ಷಣಿಕವಾದ ನೊರೆ ಗುಳ್ಳೆಗಳಂತೆ, ಆದುದರಿಂದ ಈ ಪ್ರಪಂಚ, ಐಶ್ವರ್ಯಗಳು, ಶಾಶ್ವತವೆಂದು ತಿಳಿದುಕೊಳ್ಳುವುದು ಬುದ್ಧಿವಂತನ ಲಕ್ಷಣವಲ್ಲ. ಐಶ್ವರ್ಯದ ಮೇಲಿನ ಆಸೆ ಈ ಪಂಚಭೂತಾತ್ಮಕವಾದ ಶರೀರವನ್ನು ಕೇಂದ್ರೀಕರಿಸಿ, ಹುಟ್ಟಿ, ಹೆಚ್ಚಿಕೊಳ್ಳುವುದು. "ಜೀವಾತ್ಮನ ಮೊಟ್ಟಮೊದಲು ಸ್ವತ್ತು ಎಂದರೆ ಈ ಶರೀರ" ಈ ಭಾವನೆಯು ಎಲ್ಲರಲ್ಲಿಯೂ ಹೆಚ್ಚಾಗಿ ಇದೆ. ಈ ಸ್ವತ್ತನ್ನು ಅವಲಂಬಿಸಿಯೇ ಇತರ ಸೌಭಾಗ್ಯಗಳೂ ಬೇಕಾಗುತ್ತವೆ. ಈ ಶರೀರವು ಬಂದ ಮೇಲೆಯೇ ಮಾನವನಿಗೆ 'ಪೌರುಷ' ಬರುವುದು. ಮನುಷ್ಯನಲ್ಲಿ ಮುಖ್ಯವಾದದ್ದೇ ಈ ಪೌರುಷ ಎನ್ನುವುದನ್ನು ಗೀತೆಯೂ ಹೇಳಿದೆ. ಈ ಶರೀರವನ್ನೇ ಮೊಟ

ಮೊದಲ ದೊಡ್ಡ ಸಂಪತ್ತೆಂದು ಭಾವಿಸುತ್ತದೆ ಜನತೆ. ಭಾರತದಲ್ಲಿ ಧರ್ಮ ಪುತ್ರನು ಲೋಕದಲ್ಲಿ ಆಶ್ಚರ್ಯಕರವಾದುದು ಯಾವುದೆಂಬ ಯಕ್ಷನ ಪ್ರಶ್ನೆಗೆ ಉತ್ತರ ಹೇಳುವಾಗ "ಶೇಷಾಃ ಸ್ಥಾವರಮಿಚ್ಛಂತಿ" ಎನ್ನುತ್ತಾನೆ. ಒಂದು ಕ್ಷಣದಲ್ಲಿ ಈ ಪ್ರಪಂಚದಲ್ಲಿ ಎಷ್ಟು ಜನ ಸಾಯುವರೋ, ಎಷ್ಟು ಜನ ಹುಟ್ಟುವರೋ ಅದನ್ನು ಕಂಡೂಕಂಡು 'ನಾವು ಮಾತ್ರ ಸ್ಥಿರ' ಎಂದು ಕೊಳ್ಳುವುದೇ ಲೋಕದಲ್ಲಿ ಆಶ್ಚರ್ಯಕರವಾದ ವಿಷಯ. ನಾವೂ ಅಂಥದೇ ಯಾವುದೋ ಒಂದು ಕ್ಷಣದಲ್ಲಿ ಹುಟ್ಟಿರುವವರೂ, ಅಂತಹ ಯಾವು ದೋ ಒಂದು ಕ್ಷಣದಲ್ಲಿ ಈ ಶರೀರವನ್ನು ತೊರೆಯುವವರೂ ಆಗಿದ್ದೇವೆ.

"ಹುಟ್ಟುವವರು ಹುಟ್ಟುತ್ತಿದ್ದಾರೆ; ಸಾಯುವವರು ಸಾಯುತ್ತಿ ದ್ದಾರೆ." ನಾವು ಮಾತ್ರ ಸ್ಥಿರವೆಂಬ ಭ್ರಮೆಯಿಂದ ಮೆರೆಯುತ್ತೇವೆ. ತಿರುಕ್ಕಣ್ಣಪ್ಪುರಂ ಪಟ್ಟಸ್ವಾಮಿಗಳು "ಶೇಷಾಃ ಸ್ಥಾವರಮಿಚ್ಛಂತಿ" ಎನ್ನುವ ಸ್ಥಳದಲ್ಲಿ "ಶೇಷಾಃ" ಎಂದರೆ "ವಾಹಕತ್ವೇನ ಶೇಷಭೂತಾಃ" ಎಂದು ಸ್ವಾರಸ್ಯವಾಗಿ ಅರ್ಥಮಾಡಿದ್ದಾರೆ. "ಸತ್ತ ಹೆಣವನ್ನು ಸಾಯುವ ಹೆಣಗಳು ಹೊರುತ್ತವೆ!" ಎನ್ನುವುದೇ ಇದರ ಅಭಿಪ್ರಾಯ. ಈ ಶರೀರ ವಿಯೋಗವಾದ ಮೇಲೆ ಅದಕ್ಕೆ ಸಂಸ್ಕಾರಮಾಡುವುದಕ್ಕೆ ಎತ್ತಿ ಕೊಂಡು ಹೋಗುವವರು 'ವಾಹಕರು.' ಇವರಿಗೆ 'ಶ್ಮಶಾನ ವೈರಾಗ್ಯ' ಎಂಬುದೂ ಇಲ್ಲ! ಆ ಮಟ್ಟವನ್ನೂ ಮೀರಿ, ಈ ಹೆಣ ಹೊರುವವರು. ಹೇಳಿಕೊಳ್ಳುತ್ತಾರೆ. "ನಿತ್ಯ ಜನ ಸಾಯುತ್ತಲೇ ಇದ್ದಾರೆ. ನಾವು ಹೊರುತ್ತಲೇ ಇದ್ದೇವೆ!" ಹದಿನಾಲ್ಕು ಲೋಕಗಳ ಉತ್ಪತ್ತಿ ಮತ್ತು ವಿನಾಶದ ಚರಿತ್ರೆಗಳಿಂದಲಾದರೂ ಇವೆಲ್ಲಾ ನಶ್ವರವೆಂಬುದು ಇವರಿಗೆ ತಿಳಿಯುವುದಿಲ್ಲವೆ?

ಇಹಲೋಕದ ಪುರುಷಾರ್ಥವನ್ನು ಜನ ಎಷ್ಟರ ಮಟ್ಟಿಗೆ ಭಾವಿಸಿದೆ, ಎನ್ನುವುದಕ್ಕೆ ವ್ಯಾಸರು ಮಹಾಭಾರತದಲ್ಲಿ ಒಂದು ಕಥೆಯನ್ನು ಹೇಳಿ ದ್ದಾರೆ. ಕಾಡಿನಲ್ಲಿ ಹೋಗುತ್ತಿರುವ ಒಬ್ಬನನ್ನು ಹುಲಿಯೊಂದು ಅಟ್ಟಿಸಿ ಕೊಂಡು ಬರುತ್ತದೆ. ಆ ಮನುಷ್ಯನು ಪ್ರಾಣಭಯದಿಂದ ಓಡುತ್ತಾನೆ. ಹುಲಿ ಹಿಂದೆ ಬರುತ್ತಿದೆ. ಆತುರ, ಗಾಬರಿ! ಪೊದರು ಕವಿದಿದ್ದ ಒಂದು

ಹಾಳುಭಾವಿಗೆ ಬಿದ್ದುಬಿಡುತ್ತಾನೆ. ಅದೋ ಬಹಳ ಆಳವಾದ ಭಾವಿ! ಕೆಳಗೆ ಬೀಳುತ್ತಿರುವುದು ಅವನಿಗೆ ಗೊತ್ತಾಗುತ್ತಿರುತ್ತದೆ. ಮಧ್ಯೆ ಭಾವಿ ಯಲ್ಲಿ ಬೆಳೆದಿದ್ದ ಒಂದು ಗಿಡದ ಪೊದರ ತುದಿಯನ್ನು ಬಿಗಿಯಾಗಿ ಹಿಡಿದು ಕೊಳ್ಳುತ್ತಾನೆ. ಇಲಿಯು ಆ ಗಿಡದ ಬೇರನ್ನು ಕೊರೆಯುತ್ತಿರುತ್ತದೆ. ಭಾವಿಯಲ್ಲಿ ಕೆಳಗೆ ವಿಷಸರ್ಪಗಳು ಹರಿದಾಡುತ್ತಿವೆ. ಜೇನುಹುಳುಗಳು ಮೇಲಿಂದ ಉದುರಿ ಕಚ್ಚುತ್ತಿವೆ. ಹುಲಿಯೋ ಇನ್ನೂ ಮೇಲೆ ಕಾದಿದೆ. ಮೇಲಿನ ಜೇನುಗೂಡಿನಿಂದ ಜೇನುಹನಿಗಳು ತೊಟ್ಟಿಕ್ಕುತ್ತಿರುತ್ತವೆ. ಆ ಹನಿಗಳನ್ನು ನೆಕ್ಕಲು ನಾಲಿಗೆ ನೀಡುತ್ತಾನೆ, ಆ ಅವಸ್ಥೆಯಲ್ಲಿ ಕೂಡ! ನಮ್ಮ ಸುಖವೂ ಇಂಥದೇ! ನಮ್ಮ ಸುಖಗಳೂ ಯಾವಾಗಲೂ ದುಃಖ ದೊಡನೆ ಸೇರಿಯೇ ಇರುತ್ತವೆ. ಶುದ್ಧವಾದ ಸುಖ ಇಲ್ಲವೇ ಇಲ್ಲ! ಇವುಗಳೆಲ್ಲಾ ನೋಡುವವನಿಗೆ 'ಈ ಸುಖ ನಶ್ವರ. ಇದಕ್ಕೆ ಕಾರಣ, ನಶ್ವರವಾದ ಅಚಿತ್ತಿನಿಂದ ಈ ಸುಖ ಉಂಟಾಗುತ್ತದೆ.' ಈ ಅರಿವು ಅಗತ್ಯ ಏರ್ಪಡಬೇಕು.

ಆತ್ಮಾನುಭವ ಅಥವಾ ಕೈವಲ್ಯವೆಂಬ ಪುರುಷಾರ್ಥವನ್ನು ಈ ಬಿನ್ನಪದಲ್ಲಿ ಪ್ರಸ್ತಾಪಿಸದೆ ಇದ್ದರೂ 'ಉಪಲಕ್ಷಣವಿಧಿನಾ' ಅದನ್ನೂ ಹೇಳಿದಂತೆಯೇ ಇಟ್ಟುಕೊಳ್ಳಬೇಕು. ಈ ಕೈವಲ್ಯಪುರುಷಾರ್ಥವು ಅನಿ ತ್ಯವೆಂದು ಕೆಲವು ಆಚಾರ್ಯರೂ, ನಿತ್ಯವೆಂದು ಮತ್ತೆ ಕೆಲವು ಆಚಾರ್ಯರೂ ಅಭಿಪ್ರಾಯಪಡುತ್ತಾರೆ. ಅದು ಹೇಗಾದರೂ ಇರಲಿ, ಎಲ್ಲರೂ 'ಆತ್ಮಾ ನುಭವವು ಸಾರವಲ್ಲ' ಎಂಬುದನ್ನು ಮಾತ್ರ ಸಮಾನವಾಗಿ ಒಪ್ಪಿಕೊಂಡಿ ದ್ದಾರೆ. ಜ್ಞಾನ ಆನಂದ ಗುಣಗಳುಳ್ಳ ಜೀವಾತ್ಮನು ತನ್ನೊಬ್ಬನನ್ನೇ ತಾನು ಅನುಭವಿಸುವುದೇ ಕೈವಲ್ಯ. ಹೀಗೆ ತನ್ನನ್ನು ಮಟ್ಟಿಗೆ ತಾನು ಅನು ಭವಿಸಿಕೊಳ್ಳುವ ಆನಂದವು, ಆನಂದವಲ್ಲವೆಂಬುದನ್ನು ನಮ್ಮಾಳ್ವಾರ್ರು ಪೆರುಂತುನ್ಬಂ–ದೊಡ್ಡ ದುಃಖ ಎಂದು ಕರೆದಿದ್ದಾರೆ.

ಪೆರಿಯವಾಚ್ಚಾನ್ ಪಿಳ್ಳೈಗಳು 'ಈ ಕೈವಲ್ಯ ಎನ್ನುವುದು ಐಶ್ವ ರ್ಯದಂತೆಯೂ ಅಲ್ಲ' ಎಂದು ತಿರುಪ್ಪಲ್ಲಾಂಡು ವ್ಯಾಖ್ಯಾನದಲ್ಲಿ ಸೊಗ ಸಾಗಿ ಪ್ರತಿಪಾದಿಸಿದ್ದಾರೆ. ತಿರುಪ್ಪಲ್ಲಾಂಡಿನಲ್ಲಿ ಪೆರಿಯಾಳ್ವಾರ್ರು ತಾವು

ಮಾಡಿದ ಭಗವನ್ಮಂಗಳಾಶಾಸನದಲ್ಲಿ ತೃಪ್ತರಾಗದೆ, ಮೋಕ್ಷಾರ್ಥಿಗಳನ್ನೂ ಕೈವಲ್ಯಕಾಮರನ್ನೂ ಮತ್ತು ಐಶ್ವರ್ಯವನ್ನು ಅಪೇಕ್ಷಿಸುವವರನ್ನೂ ಹೀಗೆ ಎಲ್ಲರನ್ನೂ ತಮ್ಮ ಸಂಗಡ ಸೇರಿಸಿಕೊಂಡು ಭಗವಂತನನ್ನು ಮಂಗಳಾಶಾಸನ ಮಾಡುವಂತೆ ಕರೆಯುತ್ತಾರೆ. 'ವಾಳಾಳ್‌ಪಟ್ಟು' ಎನ್ನುವ ಪಾಶುರದಲ್ಲಿ ಮೊದಲು ಭಗವತ್‌ಪ್ರಾಪ್ತಿಕಾಮರನ್ನು ಕರೆಯುತ್ತಾರೆ. ಆಮೇಲೆ 'ಏಡುನಿಲತ್ತಿಲ್' ಎನ್ನುವ ಮುಂದಿನ ಪಾಶುರದಲ್ಲಿ ಕೈವಲ್ಯಾರ್ಥಿಗಳನ್ನೂ ಕರೆಯುತ್ತಾರೆ. ಇಲ್ಲಿ ಪೆರಿಯವಾಚ್ಚಾನ್‌ಪಿಳ್ಳೈಗಳು ಹೀಗೆ ವ್ಯಾಖ್ಯಾನಮಾಡುತ್ತಾರೆ; "ಐಶ್ವರ್ಯವನ್ನು ಅಪೇಕ್ಷಿಸುವವರಿಗಿಂತ, 'ಆತ್ಮಪ್ರಾಪ್ತಿ' ಬೇಕೆನ್ನುವವರು ಉತ್ಕೃಷ್ಟರು ಎನ್ನುವ ಅಭಿಪ್ರಾಯದಿಂದ ಅವರನ್ನು ಮೊದಲು ಕರೆಯಲಿಲ್ಲ. ಆದರೆ ಕೈವಲ್ಯವೆಂಬ ಮೋಕ್ಷವು, ಅನರ್ಥಕರವಾದುದೆಂದು, ಅವರ ಮೇಲೆ ಹುಟ್ಟಿದ ದಯಾತಿಶಯದಿಂದ ಅವರನ್ನು ಆತುರಾತುರವಾಗಿ ಕರೆಯುತ್ತಾರೆ." ಈ ಪಾಶುರದಲ್ಲಿ 'ವಂದು ಒಲ್ಲೈಕೂಡುಮಿನೋ' ಎಂದಿದೆ. ಇಲ್ಲಿ 'ಒಲ್ಲೈ' ಎಂದರೆ 'ಶೀಘ್ರವಾಗಿ' ಎಂದರ್ಥ. ಕೈವಲ್ಯಾರ್ಥಿಗಳ 'ನಿತ್ಯದುರ್ಗತಿ' ಯ ವಿಷಯದಲ್ಲಿ ಪಶ್ಚಾತ್ತಾಪಪಟ್ಟು ಈ ರೀತಿ ಪೆರಿಯಾಳ್ವಾರ್‌ರು ಕರೆಯುತ್ತಾರೆಂದು ಪೆರಿಯವಾಚ್ಚಾನ್‌ಪಿಳ್ಳೈಗಳು ಅಭಿಪ್ರಾಯಪಟ್ಟಿದ್ದಾರೆ.

ಕೈವಲ್ಯವು ಅಸಾರವೆಂದು, ಇನ್ನೊಂದೆಡೆಯಲ್ಲಿ ಪೆರಿಯವಾಚ್ಚಾನ್‌ಪಿಳ್ಳೈಗಳು ಸಮರ್ಥನಮಾಡಿದ್ದಾರೆ. ಸತ್ತುಬಿದ್ದಿರುವ ರಾವಣನನ್ನು ನೋಡಿ ಅಳುವ ಮಂಡೋದರಿಯ ಭಾವವಾಗಿ ಇದನ್ನು ತೋರಿಸಿದ್ದಾರೆ. ಮಂಡೋದರಿಯು ಶ್ರೀರಾಮನ ದೊಡ್ಡಸ್ತಿಕೆಯನ್ನು ವರ್ಣಿಸುತ್ತಾ "ವ್ಯಕ್ತಮೇಷ ಮಹಾಯೋಗೀ.... ತಮಸಃ ಪರಮೋ ಧಾತಾ" ಎಂದು ಮುಂತಾಗಿ ಹೇಳುತ್ತಾಳೆ. ಇಲ್ಲಿ 'ಧಾತಾ' ಎಂದರೆ 'ಸಕಲವಿಧ ಫಲಗಳನ್ನೂ ಕೊಡುವವನು' ಎಂದು ಅರ್ಥಮಾಡುತ್ತಾರೆ. ಅವನ ಪರತ್ವಕ್ಕೆ ಕೆಲವು ಕಾರಣಗಳುಂಟು, "ಫಲಮತ ಉಪಪತ್ತೇಃ" ಎಂಬ ಬ್ರಹ್ಮಸೂತ್ರದ ಆಧಾರದಿಂದ ಸಕಲಫಲಪ್ರದನು ಯಾರೋ, ಅವನೇ ದೊಡ್ಡವಸ್ತು ಎಂದು ನಿಶ್ಚಯಿಸಬಹುದು. ಈಗ ಶ್ರೀರಾಮನು ಸರ್ವೇಶ್ವರನೆಂಬುದನ್ನು ಹೇಗೆ ತಿಳಿಯಬಹುದು? ಆತನು ಧರ್ಮ, ಅರ್ಥ, ಕಾಮ

ಮತ್ತು ಮೋಕ್ಷ ಎಲ್ಲವನ್ನೂ ಕೊಟ್ಟಿದ್ದಾನೆ; ಅಂತೆಯೇ ಆತನು ಪರ ದೇವತೆ. ದಂಡಕಾರಣ್ಯವಾಸಿಗಳಿಗೆ ರಾಮನು ಧರ್ಮವುಳಿಸಿಕೊಟ್ಟ. ವಿಭೀಷಣನಿಗೆ ಲಂಕೈಶ್ವರ್ಯವನ್ನೂ ಕೊಟ್ಟ. 'ಭಜಸ್ವ ಕಾಮಂ ಸುಗ್ರೀವ' ಎಂದು ಸುಗ್ರೀವನಿಗೆ ಕಾಮುವನ್ನೂ ಇತ್ತ. ಮೋಕ್ಷ ಎರಡು ವಿಧ. ಭಗವತ್‌ಕೈಂಕರ್ಯ ಒಂದು ವಿಧ, ಅಂಥ ಪರಮಗತಿಯನ್ನು ವಾಲಿಗೆ, ಜಟಾಯುವಿಗೆ, ಶಬರಿಗೆ ದಯಪಾಲಿಸಿದ್ದಾನೆ. ಇನ್ನೊಂದು ತೆರನಾದ ಮೋಕ್ಷವನ್ನು 'ಆತ್ಮಾನುಭೂತಿರಿತಿ ಯಾ ಕಿಲ ಮುಕ್ತಿರುಕ್ತಾ' ಎಂದು ಕೂರತ್ತಾಳ್ವಾರ್‍ರು ಹೇಳಿದ್ದಾರೆ. ಅಂಥ ಅಸಾರವಾದ ಕೈವಲ್ಯವನ್ನು ತನಗೆ ಕೊಟ್ಟಿದ್ದಾನೆಂದು ಮಂಡೋದರಿಯು ವಿಲಪಿಸುವುದಾಗಿ ಪೆರಿಯವಾಚ್ಚಾನ್ ಪಿಳ್ಳೈಗಳು ವ್ಯಾಖ್ಯಾನಮಾಡಿದ್ದಾರೆ. ಕೈವಲ್ಯದಲ್ಲಿ ಏಕಾಂತವಾಗಿ ಜೀವಾತ್ಮನು, ತನ್ನೊಬ್ಬನನ್ನೇ ತಾನು ನೋಡಿಕೊಳ್ಳುತ್ತಿರುವಂತೆ, ಮೂಲೆಯಲ್ಲಿ ಯಾರಿಗೂ ಕಾಣದಂತೆ ಕುಳಿತು ತನ್ನೊಬ್ಬಳನ್ನೇ ನೋಡಿಕೊಳ್ಳುವ ಸ್ಥಿತಿಯು ಮಂಡೋದರಿಗೆ ಬಂದಿದೆ. ಭಗವಂತನೊಡನೆ ಇದ್ದು, ಆತನನ್ನು ಜೀವಾತ್ಮನು ಅನುಭವಿಸುವುದು, ಪತಿವ್ರತೆಯಾದವಳು ಗಂಡನೊಡನಿರುವಂತೆ.


ಆದುದರಿಂದ ಈಶ್ವರಕೈಂಕರ್ಯರೂಪವಾದ ಮೋಕ್ಷವೇ ಉತ್ತಮ ಪುರುಷಾರ್ಥವೆಂದು ತಿಳಿದ ಹಾಗಾಯಿತು. ಈಶ್ವರಕೈಂಕರ್ಯವು ನಶ್ವರವಲ್ಲ; ಕೈವಲ್ಯದಂತೆ ಏಕಾಕಿಯಾಗಿ ಇರಬೇಕಾದ ಪರಿಸ್ಥಿತಿಯೂ ಅದರಲ್ಲಿಲ್ಲ; ಜೀವಾತ್ಮನ ಸ್ವರೂಪಕ್ಕೆ ಅತ್ಯಂತ ಅನುಗುಣವಾಗಿಯೂ ಇದೆ. ಈ ಪರಮಮೋಕ್ಷಪುರುಷಾರ್ಥದಲ್ಲಿ ವಿವೇಕಿಗಳಿಗೆ ಇಚ್ಛೆಯು ಉಂಟಾಗುತ್ತದೆ. ಈ ಮೋಕ್ಷಕ್ಕೆ ಉಪಾಯ ದೇವರೇ. ಗೀತೆ ಮುಂತಾದುವುಗಳಲ್ಲಿ ಕರ್ಮ, ಜ್ಞಾನ, ಭಕ್ತಿ ಉಪಾಯವೆಂದರೂ, ಈ ಬಿನ್ನಪದಲ್ಲಿ ದೇವರನ್ನೇ ಉಪಾಯವೆಂದು ಹೇಳಿರುವುದು, ಚಿಕ್ಕದೇವರಾಜ ಒಡೆಯರು ಒಬ್ಬ ಮಹಾರ್ಷಿ ಹತ್ತಿರ ಸಹವಾಸಮಾಡಿದುದರ ಫಲ.

ಕರ್ಮಯೋಗವು ಎರಡು ತೆರನಾಗಿದೆ. ಒಂದು ವರ್ಣಾಶ್ರಮಧರ್ಮರೂಪವಾದುದು, ಇನ್ನೊಂದು ಭಗವತ್‌ಸೇವಾರೂಪವಾದುದು. ದೇವರ

ಸೇವೆ ಮಾಡುವಾಗ ಕರ್ತೃತ್ವ ತ್ಯಾಗ, ಮಮತಾ ತ್ಯಾಗ, ಮತ್ತು ಫಲ ತ್ಯಾಗ ಮುಖ್ಯ. ಒಂದು ಕೆಲಸಮಾಡಿದಾಗ ನಾನು ಮಾಡಿದೆನೆಂಬ ಭಾವನೆಯು ಇದ್ದೇ ಇರುತ್ತದೆ. ನಾವು ಮಾಡಿದುದನ್ನು ಹತ್ತಾರು ಜನರು ಹೊಗಳಬೇಕು; ಅದನ್ನು ನಮ್ಮ ಕಿವಿಯಿಂದ ನಾವು ಕೇಳಬೇಕು, ಎನ್ನುವ ಆಸೆಯೂ ಇರುತ್ತದೆ. ಈ ಕರ್ತೃತ್ವಾನುಸಂಧಾನವು ಬಹಳ ಕೆಟ್ಟದ್ದು. ಅಮ್ಮನವರಿಗೆ ಹೂಮಾಲೆ ಸಮರ್ಪಿಸಿದಾಗ 'ನಾವು ಅರ್ಪಿಸಿದೆವು' ಎಂದು ತಿಳಿಯಬಾರದು. ಎಲ್ಲವೂ ಅವಳಿಗೆ ಸೇರಿದುದರಿಂದ ನಾವೇನು ತಾನೆ ನಮ್ಮದೆಂದು ಕೊಡುವುದಕ್ಕಿದೆ?

ಕರ್ತೃತ್ವಾನುಸಂಧಾನವು ಕೂಡದೆಂದು ಬಾರಿಬಾರಿ ಶಾಸ್ತ್ರದಿಂದ ಕೇಳಿದರೂ ಮದಿರಾಬಿಂದುಮಿಶ್ರವಾದ ನೀರಿನಂತೆ ನಮ್ಮ ಮನದಲ್ಲಿ ಸೂಕ್ಷ್ಮರೂಪವಾಗಿ ಅಹಂಕಾರವಿದ್ದೇ ಇರುತ್ತದೆ. ಈ ಅಹಂಕಾರವನ್ನು ಹೋಗಲಾಡಿಸುವುದಕ್ಕಾಗಿ ಗೀತೆಯಲ್ಲಿ ಶ್ರೀಕೃಷ್ಣನು ದಾರಿಯನ್ನು ತೋರಿಸಿದ್ದಾನೆ. ಜೀವಾತ್ಮನು ಲೋಕದಲ್ಲಿ ಮಾಡುವ ಕೆಲಸಗಳನ್ನೆಲ್ಲಾ ಪ್ರಕೃತಿಯೊಡನೆ ಹೊಂದಿಕೊಂಡೇ ಮಾಡುತ್ತಾನೆ. ಸತ್ವಾದಿ ಗುಣಗಳು ಪ್ರೇರಣೆಮಾಡುವ ಮಾರ್ಗದಲ್ಲಿಯೇ ಜೀವಾತ್ಮನು ಪ್ರವರ್ತಿಸುತ್ತಾನೆ. ಇದನ್ನರಿತು ಪ್ರಕೃತಿಯ ಗುಣಗಳ ಕರ್ತೃತ್ವವನ್ನು ಅನುಸಂಧಾನಮಾಡಿದರೆ ಅಹಂಕಾರವನ್ನು ತೊಲಗಿಸಬಹುದೆಂದು ಗೀತಾಚಾರ್ಯನು "ನಾನ್ಯಂ ಗುಣೇಭ್ಯಃ ಕರ್ತಾರಂ" "ಪ್ರಕೃತೇಃ ಕ್ರಿಯಮಾಣಾನಿ" ಮುಂತಾದ ಶ್ಲೋಕಗಳಲ್ಲಿ ಉಪದೇಶಮಾಡಿದ್ದಾನೆ. ಸತ್ವವು ಬಲಿತಾಗ ಅದಕ್ಕೆ ಸರಿಯಾದ ಕೆಲಸ ಸರಿಯಾದ ತಿಳುವಳಿಕೆ; ರಜೋಗುಣ ತಮೋಗುಣ ತಲೆಯೆತ್ತಿದಾಗ ಕೋಪ ತಾಪ, ಅಜ್ಞಾನ, ವಿಪರೀತಜ್ಞಾನ, ಆಲಸ್ಯ ಇವುಗಳು ಉಂಟಾಗುತ್ತವೆ. ಜೀವಾತ್ಮನೆಂಬ ದೊರೆಯು, ಸತ್ವಾದಿ ಗುಣಗಳೆಂಬ ಮಂತ್ರಿಗಳಿಗೆ ವಶನಾಗಿ ಕೆಲಸಮಾಡುತ್ತಾನೆ.

ಯಾವ ಕೆಲಸ ಮಾಡುವಾಗಲೂ "ನಾನು, ನನ್ನದು ಈ ಫಲಕ್ಕಾಗಿ" ಎಂಬ ಭಾವನೆಯಿರಬಾರದು. ಪ್ರಕೃತಿಯು ಕೆಲಸಗಳನ್ನು ಮಾಡುತ್ತದೆ ಎನ್ನುವ ಭಾವದೊಡನೆ, ಸರ್ವೇಶ್ವರನು ಈ ಜೀವಾತ್ಮನ



ಶ್ರೀ || ಉ || ಅರಕೆರೆ ತಿರುನಾರಣ್ಯೈಯ್ಯಂಗಾರ್ ಸ್ವಾಮಿಗಳವರು.

ಒಳಗೂ ಇರುವುದರಿಂದ 'ಎಲ್ಲವೂ ಆತನಿಂದ' ಎನ್ನುವ ವಿನಯವೂ ಇರಬೇಕು. ಈ ಮಾನಸಿಕ ಶಿಕ್ಷಣ ವನ್ನು ಗೀತೆಯು, ಚೆನ್ನಾಗಿ ಕೊಡುತ್ತದೆ. "ಮಯಿ ಕರ್ಮಾಣಿ ಸಂನ್ಯಸ್ಯ" ಎಂಬುವ ರೀತಿಯಲ್ಲಿ ಸತ್ವಾದಿಗುಣಗಳಿಂದಾಗುವ ಕರ್ತೃತ್ವವೂ ಸರ್ವೇಶ್ವರನದೆಂಬ ಭಾವ ಬಂಧವು ಚೆನ್ನಾಗಿರಬೇಕು.

ಕೆಲಸಮಾಡುವಾಗ ಇರಬೇಕಾದ ಈ ಮಾನಸಿಕ ಪರಿಸ್ಥಿತಿಯನ್ನು "ಸುಖದುಃಖೇ ಸಮೇಕೃತ್ವಾ" ಮುಂತಾದ ಶ್ಲೋಕಗಳಲ್ಲಿ ಗೀತೆಯು ಹದ್ದಿನಲ್ಲಿರಿಸುತ್ತದೆ. ಫಲಸಿದ್ಧಿಯಲ್ಲಿ ಸಂತೋಷವನ್ನೂ ಅಸಿದ್ಧಿಯಲ್ಲಿ ದುಃಖವನ್ನೂ ಇಡಬಾರದು. ಈ ಮನಸ್ಸಿನ ಸಮತೆಯನ್ನು ಶ್ರೀರಾಮನ ಚರಿತ್ರದಲ್ಲಿ ನೋಡಬಹುದು. ದಶರಥನು ರಾಮನನ್ನು ಕರೆದು ರಾಜ್ಯಾಭಿಷೇಕಮಾಡುವುದಾಗಿ ಹೇಳಿದಾಗಲೂ, ಕಾಡಿಗೆ ಹೋಗಬೇಕೆಂದು ಕೈಕೇಯಿಯು ತಿಳಿಸಿದಾಗಲೂ ರಾಮನ ಮನಸ್ಸು ಒಂದೇ ತೆರನಿತ್ತು !

ದಶರಥ ಚಕ್ರವರ್ತಿಯು ಮೂರ್ಛೆ ಹೊಂದಿದ್ದಾನೆ. ಆಗ ಕೈಕೇಯಿಯು 'ರಾಮ ! ನಿನ್ನ ತಂದೆಯು ಮೂರ್ಛೆ ಹೊಂದಿದ್ದಾನೆ. ಅವನು ಮಾತಾಡಲಾರ. ನಿನಗವನು ಕಾಡಿಗೆ ಹೋಗಬೇಕೆಂದು ಅಪ್ಪಣೆಮಾಡಿದ್ದಾನೆ' ಎನ್ನುತ್ತಾಳೆ. ಶ್ರೀರಾಮನು "ತಾಯಿ ! ತಂದೆಯು ಹೇಳಲೇ ಬೇಡ. ನೀನು ಹೇಳಿದರೂ ನಾನು ಕಾಡಿಗೆ ಹೋಗುವೆನು" ಎನ್ನುತ್ತಾನೆ. ಇದನ್ನು "ಶಿತ್ತವೈಪಣಿಯಾಲ್ ಮುಡಿತುರನ್ದಾನೈ" ಎಂದು ತಿರುಮಜ್ಗೈಯಾಳ್ವಾರ್ರು ಹೇಳಿದ್ದಾರೆ. "ಚಿಕ್ಕಮ್ಮನಮಾತಿನಂತೆ ಕಿರೀಟತೊರೆದವನು" ಎಂದು ಅದರ ಅರ್ಥ. ಕಂಬರಾಮಾಯಣದಲ್ಲಿ ಶ್ರೀರಾಮನ ಮನಸ್ಸನ್ನು ಸೊಗಸಾಗಿ ಹೀಗೆ ಚಿತ್ರಿಸಿದೆ.

ಮನ್ನವನ್‌ಪಣಿ ಅನ್ರಾಹಿಲ್‌ನುಮ್‌ಪಣಿಮರುಪ್ಪನೋ
ಎನ್ ಪಿನ್ನವನ್ ಪೆತ್ತ ಶೆಲ್ವಂ
ಅಡಿಯನೇನ್ ಪೆತ್ತದನ್ರೋ!

ಈ ರಾಮನ ಮನದ ನಿಲುವು ಕರ್ಮಯೋಗಿಗೆ ಬೇಕು.

ಕೈಕೇಯಿಯ ಮಾತಿನಲ್ಲಿ" ತನಗಿದ್ದ ಗೌರವವನ್ನು ಪ್ರಕಾಶಪಡಿಸಿ ರಾಮನು ಅವಳೊಡನೆ ಹೀಗೆ ಹೇಳುವನು. "ನನ್ನ ತಮ್ಮನಾದ ಭರತ ನಿಗೆ ರಾಜ್ಯವು ಬಂದರೆ ನನಗೆ ಬಂದಂತಲ್ಲವೆ ? "

ಈ ಸಿದ್ಧ್ಯಸಿದ್ಧಿಗಳಲ್ಲಿ ಸಮಚಿತ್ತತೆಯು ಇದ್ದರೇ ಮನಸ್ಸು ಪರಿ ಶುದ್ಧವಾಗುವುದು. ನಮ್ಮ ಮನಸ್ಸಿನಲ್ಲಿ ಕಶ್ಮಲವಿಲ್ಲದಿಲ್ಲ. ಆದುದರಿಂದ ಈ ಕರ್ಮಯೋಗದ ಮಹಿಮೆಯು ನಮ್ಮ ಅನುಭವಕ್ಕೇ ಬರುತ್ತದೆ. ಒಂದು ತಿಂಗಳು ಶಾಸ್ತ್ರಹೇಳುವಂತೆ ಮಾಡುತ್ತಿದ್ದ ಕಾರ್ಯಗಳನ್ನು ಒಂದು ದಿನ ಮಾಡದೆ ಬಿಟ್ಟರೆ ನಮ್ಮ ಮನಸ್ಸಿಗೇ ಅಶುಚಿಯು ತೋರು ತ್ತದೆ. ಈ ಮನಶ್ಶುದ್ಧಿ ಎನ್ನುವುದು ಬಲು ಕಷ್ಟ. 'ನಾವು ಶುದ್ಧರು' ಎಂದು ನೆನೆಯುವುದಕ್ಕಿಂತ 'ಅಶುದ್ಧಿ' ಬೇರೊಂದಿಲ್ಲ !

ಆಳ್ವಾರ್ರು, ತಮ್ಮ ಹೊಲಸುಮನವನ್ನು ನಾಶಮಾಡಿ ಬೇರೊಂದು ಹೊಸ ಮನವನ್ನೇ ಸ್ವಾಮಿಯು ತನ್ನ ಸೇವೆಗಾಗಿ ಕರುಣಿಸಿದನೆಂದು ಹೇಳುತ್ತಾರೆ. "ಮರುವಿತ್ತೊಳುಂ ಮನಮೇ ತನ್ದಾಯ್" "ಎನ್ನೈ ತೀಮನಂ ಕೆಡುತ್ತಾಯ್", ಎಂಬುದೇ ಅವರ ವಾಕ್ಯ. ತಿಂಗಳು ಗಟ್ಟಲೆ ಉಪ್ಪಿನಲ್ಲಿ ಊರಿದ ಉಪ್ಪಿನಕಾಯಿಂದ ಉಪ್ಪನ್ನು ಬೇರ್ಪಡಿಸಲು ಆಗುವುದಿಲ್ಲ. ಹಾಗೆಯೇ ಆಳ್ವಾರ್ರು ಹೇಳಿಕೊಂಡಿರುವ ಹಿಂದಿನ ಕೆಟ್ಟ ಮನಸ್ಸನ್ನು, 'ಪರಾಸ್ಯ ಶಕ್ತಿಃ' ಎಂದು ಹೇಳುವ ದೇವರ ಶಕ್ತಿಯೂ ಸರಿಪಡಿಸಲು ಸಮರ್ಥವಾಗಲಿಲ್ಲ. ಆದುದರಿಂದ ಬೇರೊಂದು ಹೊಸ ಮನಸ್ಸನ್ನೇ ಸಿದ್ಧಮಾಡಿಕೊಟ್ಟನೆಂದರೆ 'ಮನಃ ಪರಿಶುದ್ಧಿ' ಎಂಬುದು ಎಷ್ಟು ಕಷ್ಟವೆಂದು ತಿಳಿದೀತು !

ಅನೇಕಕಾಲ ಕರ್ಮಯೋಗ ಮಾಡುವುದರಿಂದ ಚಿತ್ತಶುದ್ಧಿಯು ಉಂಟಾಗಿ ಅದರಿಂದ ಆತ್ಮಚಿಂತನೆಯಾಗುವ ಜ್ಞಾನಯೋಗವು ಏರ್ಪಡು ವುದು. ಅಂತಹ ಜ್ಞಾನದಿಂದ ಆತ್ಮಸಾಕ್ಷಾತ್ಕಾರ ಈ ಆತ್ಮಸಾಕ್ಷಾತ್ಕಾರವು ಸ್ವಯಂಪ್ರಯೋಜನವಾಗಿರುವುದರಿಂದ, ಈ ಜ್ಞಾನವನ್ನು ಆಚಾರ್ಯರು ಪ್ರಪನ್ನನಿಗೆ ಸಾಧನಕೋಟಿಯಲ್ಲಿ ಸೇರಿಸದೆ ಸ್ವರೂಪ ಪ್ರಕಾಶದಲ್ಲಿ ಹುದು

ಗಿಸಿದ್ದಾರೆ. ಜೀವಾತ್ಮನ ಸ್ವರೂಪವು ಪ್ರಕಾಶವಾಗುವ ನೆಲೆಯಲ್ಲಿ 'ಅದು ಭಗವಂತನ ಶೇಷವಸ್ತು' ಎಂದು ತಿಳಿದುಬರುವುದರಿಂದ 'ಪರಮಾತ್ಮ ಚಿಂತನೆ' ಎನಿಸಿಕೊಳ್ಳುವ ಭಕ್ತಿಯು ಉಂಟಾಗುತ್ತದೆ. ಬೇರೆ ಯಾವ ಒಂದು ವಿಷಯವೂ ಕಲೆಯದೆ, ತೈಲಧಾರೆಯಂತೆ ಬಿಡುವಿಲ್ಲದೆ ದೇವರನ್ನೇ ನೆನೆಯುವುದು ಭಕ್ತಿ. ದೇವರು ಪ್ರೀತಿಪಾತ್ರನಾದುದರಿಂದ ಅವನ ನೆನಪೂ ಪ್ರಿಯವಾಗುತ್ತದೆ. ಹೀಗೆ ಭಕ್ತನ ಭಕ್ತಿಯು ಸ್ವಯಂ ಪ್ರಿಯವಾಗುತ್ತದೆ. ಕಾಮುಕನಿಗೆ ಕಾಮಿನಿಯ ಸ್ಮರಣದಂತೆ ಭಕ್ತನಿಗೆ ಈ ಭಗವತ್ ಸ್ಮರಣವು ಭೋಗರೂಪವಾಗುತ್ತದೆ. ಇದಕ್ಕೆ ಕಾರಣ, ಆ ಸ್ಮರಣದಲ್ಲಿ ತೋರಿಕೊಳ್ಳುವ ಪರಮಾತ್ಮನು 'ಆನಂದಮಯ' 'ಇಂಥ ಭಕ್ತಿಯೇ ಪುರುಷಾರ್ಥ' ಎಂದು ಎಣಿಸುವವರೆಗೂ ಹೋಗಬೇಕು. ಅಂತಹ ಭಕ್ತಿಯು ಇನ್ನೂ ಬಲಿತು ಪರಿಪಕ್ವವಾದಾಗ ಈಶ್ವರನು ಮೋಕ್ಷವನ್ನು ಕೊಡುತ್ತಾನೆ.

ಇಲ್ಲಿ ಇನ್ನೂ ಸಾರವಾದ ಅಂಶವಿದೆ. ಸಂಪ್ರದಾಯದಲ್ಲಿ ಅದು ಅತ್ಯಂತ ತಿರುಳಾದುದು. ಒಬ್ಬ ಜೀವಾತ್ಮನು ತನಗಿಂತಲೂ ದೊಡ್ಡವನಾದ ದೇವರಲ್ಲಿ ಇಡುವ ಪ್ರೀತಿ ಎಂಬುವ ಶಾಸ್ತ್ರೀಯ ಭಕ್ತಿಯಿಂದಲೇ ಮೋಕ್ಷವಿಲ್ಲ. ಜೀವಗತ ಪ್ರೀತಿಯು ಕಾರ್ಯಕಾರಿಯಾಗದು. ಆದರೆ ಈ ಮಾತು "ಕಾರಣಂತು ಧ್ಯೇಯಃ" "ಆತ್ಮಾವಾಽರೇ ದ್ರಷ್ಟವ್ಯಃ ಶ್ರೋತವ್ಯಃ ಮನ್ತವ್ಯಃ ನಿದಿಧ್ಯಾಸಿತವ್ಯಃ" ಈ ಶ್ರುತಿವಚನಗಳಿಗೆ ವಿರುದ್ಧವಾಗಿ ಕಾಣುತ್ತದೆ. ಅಭಿಪ್ರಾಯವೇನೆಂದರೆ, ನಮ್ಮ ಭಕ್ತಿಯಿಂದಲೇ ಮೋಕ್ಷವು ಬಾರದು. ದೇವರ ಪ್ರೇಮವೂ ನಮ್ಮ ಮೇಲೆ ಹರಿಯಬೇಕು. ಆಳಾದವನು ದೊರೆಯನ್ನು ಎಷ್ಟು ಭಕ್ತಿಯಿಂದ ಸೇವಿಸಿದರೇನು? ರಾಜನಿಗೆ ಭೃತ್ಯನ ಮೇಲೆ ಪ್ರೇಮವು ಹರಿದರೀಗ ಲಾಭ. ಇದನ್ನೇ ಉಪನಿಷತ್ತು 'ಯಮೇವೈಷ ವೃಣುತೇ ತೇನ ಲಭ್ಯಃ' ಎನ್ನುವ ವಾಕ್ಯದಲ್ಲಿ, ಭಗವಂತನಿಂದ ವರಿಸಲ್ಪಟ್ಟವರೇ ಅವನನ್ನು ಹೊಂದಬಹುದು ಎಂದು ಸ್ಪಷ್ಟವಾಗಿ ಹೇಳಿದೆ. ಈ ಅರ್ಥವನ್ನು ಗುಹ, ಭರತ ಇವರ ವಿಷಯದಲ್ಲಿ ನೋಡಬಹುದು. ಭರತನು ಉತ್ತಮಾಧಿಕಾರಿ ತಾನೇ? ಆತನು

ಶಿರಸಾ ಯಾಚಿಸಿದರೂ, ಅವನ ಮಾತನ್ನು ನಡೆಸಲಿಲ್ಲ ರಾಮ! ಆದರೆ ತಾನೇ ಹೋಗಿ ಗುಹನ ಮೇಲೆ ಬೀಳುತ್ತಾನೆ. ಹೀಗೆ ಭರತನ ನಲ್ಮೆಯೇ ದೋಷವಾಗುವುದು! ಗುಹನ ದೋಷವೇ ನಲ್ಮೆಯಾಗುವುದು!

ಇಂಥ ವಿಚಿತ್ರವಾಗಿ ತೋರುವ ಪರಿಸ್ಥಿತಿಗೆ ಭಗವಂತನು ನಿರಂಕುಶ ಸ್ವತಂತ್ರನಾಗಿರುವುದೇ ಕಾರಣ! ಭರತನು ಚಿತ್ರಕೂಟದಲ್ಲಿ, ಅಯೋಧ್ಯೆಗೆ ಹಿಂದಿರುಗಿ ಬರಬೇಕೆಂದು ರಾಮನನ್ನು ಬೇಡಿಕೊಂಡಾಗ, ರಾಮನು ಅವನ ಪ್ರಾರ್ಥನೆಯನ್ನು ಅಂಗೀಕರಿಸುವುದಕ್ಕೆ ಎಷ್ಟೋ ಕಾರಣಗಳಿದ್ದುವು. ರಾಮನ ಮನಸ್ಸನ್ನು ಮಾರ್ಪಡಿಸುವುದಕ್ಕೋಸ್ಕರ, ವೇದವಿತ್ತುಗಳೂ ಜ್ಞಾನಿಗಳೂ ಆದ ಜಾಬಾಲಿಗಳು ನಾಸ್ತಿಕವಾದಕ್ಕೇ ಇಳಿದು ಬಿಡುತ್ತಾರೆ! ಅದು ರಾಮನ ಮನಸ್ಸಿಗೆ ಹಿಡಿಸದೆ ಇದ್ದುದನ್ನು ವಸಿಷ್ಠರು ತಿಳಿದುಕೊಂಡು ಧರ್ಮಕ್ಕೆ ವಿರೋಧವಿಲ್ಲದ ಮಾರ್ಗದಲ್ಲಿ, ರಾಮನನ್ನು ಹಿಂತಿರುಗಬೇಕೆಂದು ಆಚಾರ್ಯಸ್ಥಾನದಿಂದ ಆಜ್ಞೆಮಾಡುತ್ತಾರೆ! ಭರತನೋ ತುಂಬಿದ ದುಃಖದಿಂದ, ಅಂತರಂಗಶುದ್ಧಿಯಿಂದ ತನ್ನ ಪ್ರಾರ್ಥನೆಯನ್ನು ಒತ್ತಿ ಒತ್ತಿ, ನಿರ್ಬಂಧಪಡಿಸುತ್ತಾನೆ. ಅವನು ಸಾಹಸ ಕೃತ್ಯವೂ ಬ್ರಾಹ್ಮಣರಿಗೆ ಯುಕ್ತಧರ್ಮವಾದ ಪ್ರಾಯೋಪವೇಶವನ್ನು ಮಾಡುವುದಕ್ಕೆ ಯತ್ನಿಸುತ್ತಾನೆ. ಆಳ್ವಾರ್, ಆಂಡಾಳ್ ಚರಿತ್ರಗಳಲ್ಲಿ ಬರುವ ದೂತಪ್ರೇಷಣ, ವ್ರತಾಚರಣೆ, ಮಡಲಿಡುವುದು ಇವೇ ಮುಂತಾದ ದಾರಿಬಿಟ್ಟಾದರೂ ಹೋಗಿ ಎಸಗುವ ಸ್ವಪ್ರವೃತ್ತಿಗಳು ಕೈಂಕರ್ಯದಂತೆ ಭಗವಂತನಿಗೆ ಆನಂದವೆನಿಸಿದರೂ, ಭರತನ ಈ ಸಾಹಸವುಮಾತ್ರ ಶ್ರೀರಾಮಚಂದ್ರನಿಗೆ ಹಿಡಿಸಲಿಲ್ಲ. ಆಗ ರಾಮನು ಅದು ತಪ್ಪೆಂದು ಹೇಳಿ ತನ್ನನ್ನೂ ಮತ್ತು ನೀರನ್ನೂ ಸ್ಪರ್ಶಿಸಿ ಭರತನು ಶುದ್ಧನಾಗಬೇಕೆಂದು ತಿಳಿಸುತ್ತಾನೆ. ಆದರೆ ಇದೇ ರಾಮನು ಸಮುದ್ರರಾಜನ ಮುಂದೆ ಪ್ರಾಯೋಪವೇಶಮಾಡಿದ್ದಾನೆ! ಇದು ಅವನ ಸ್ವೇಚ್ಛಾವಿಲಾಸ!

ಈಗ ಗುಹನ ಚರಿತ್ರವನ್ನು ನೋಡೋಣ. "ಏಳೈಯೇದುರ್ಮ ಕೀಳ್ ಮಹನೆನ್ನಾದು" ಎನ್ನುವ ಪಾಶುರದಲ್ಲಿ ಹೇಳಿರುವಂತೆ, ತನ್ನ ದೋಷ

ವನ್ನೂ ಮತ್ತು 'ಆಕಿಂಚನ್ಯ' ವನ್ನೂ ತಿಳಿಯಪಡಿಸಿ ಗುಹನು ಶರಣಾಗತಿ ಮಾಡಲಿಲ್ಲ. ಸ್ವದೋಷ, ಆಕಿಂಚನ್ಯಾದಿಗಳನ್ನು ಹೇಳಿಕೊಂಡೇ ಎಲ್ಲರೂ ಶರಣಾಗತಿ ಮಾಡತಕ್ಕ ರೀತಿ. ವಿಭೀಷಣನು ಶ್ರೀರಾಮನಲ್ಲಿ ಶರಣಾಗತಿಮಾಡುವಾಗ, 'ದುರ್ವೃತ್ತ' ನಾದ ರಾವಣನ ತಮ್ಮ ತಾನೆಂದು ಹೇಳಿಕೊಂಡು ಬಂದ! ಯಾಮುನಾಚಾರ್ಯರೂ ಕೂಡ 'ನ ಧರ್ಮನಿಷ್ಠೋಽಸ್ಮಿ ನಚಾತ್ಮವೇದೀ' ಎಂದು ಹೇಳಿಯೇ ಶರಣಾಗತಿಮಾಡಿದರು. ಈ ರೀತಿ ಗುಹನು ಯಾವುದನ್ನೂ ಹೇಳಿಕೊಳ್ಳದಿದ್ದರೂ ಶ್ರೀರಾಮನು ಅವನನ್ನು ಸ್ವೀಕರಿಸುತ್ತಾನೆ. 'ಎನ್ನಾದೇ' ಎಂಬೆಡೆಯಲ್ಲಿ ಎರಡರ್ಥವಿದೆ 'ದೋಷ ಕಣ್ಣಿಗೆ ಬೀಳದಿರುವುದೊಂದು, ದೋಷ ಕಂಡರೂ ಎಣಿಸದಿರುವುದೊಂದು ಇದು ಭಗವಂತನ ಒಂದು ವಿಶೇಷಗುಣ. ಅವನಾಗಿ ಮಾಡುವ ದಯೆಯೊಂದೇ ನಮ್ಮಗಳಿಗೆ ನಲ್ಮೆ ತರುವುದು.'

ನಮ್ಮಾಳ್ವಾರ್, ತಿರುಮಂಗೈಯಾಳ್ವಾರ್ ಮತ್ತು ರಾಮಾನುಜರಿಗೆ ಸೇರಿದವನೆಂದು ತನ್ನನ್ನು ಕಾಪಾಡುವಂತೆ ಚಿಕ್ಕದೇವರಾಜ ಒಡೆಯರು ಈ ಬಿನ್ನಪದಲ್ಲಿ ಬೇಡಿದ್ದಾರೆ. 'ಯಂ ಪ್ರಜಾಪತಿಃ ವೇದ ಸ ಪುಣ್ಯೋ ಭವತಿ', 'ಉನ್‌ಮನತ್ತಾಲ್ ಎನ್ನಿನೈನ್ದಿರುನ್ದಾಯ್'— ಯಾವ ಚೇತನನನ್ನು ದೇವರು ನೆನೆಯುತ್ತಾನೆಯೋ ಅವನಿಗೇ ಮೋಕ್ಷ! ಈ ಅರ್ಥವು ಈ ವಾಕ್ಯಗಳಲ್ಲಿದೆ.

## ೨೦ ನೇ ಬಿನ್ನಪ

ಇಪ್ಪತ್ತನೆಯ ಬಿನ್ನಪದಲ್ಲಿ 'ವೇದವೊಂದರಿಂದಲೇ ಅರ್ಥ ನಿಶ್ಚಯವಾಗುವುದಿಲ್ಲ. ಸ್ಮೃತೀತಿಹಾಸ ಪುರಾಣಗಳ ಸಹಾಯವೂ ಬೇಕು.' ಎಂಬ ಮಾತು, ಮತ್ತೆ ಬರುತ್ತದೆ. ರಾಮಾಯಣ, ಮಹಾಭಾರತ ಇತಿಹಾಸಗಳು. ಪುರಾಣಗಳಲ್ಲಿ ಸಾತ್ವಿಕ, ರಾಜಸ ಮತ್ತು ತಾಮಸಗಳೆಂಬ ಮೂರು ಬಗೆಯಿವೆ. ಈ ಬಗೆಯ ಎಲ್ಲ ಪುರಾಣಗಳನ್ನೂ ಉಪ

ದೇಶಮಾಡಿದವನು ಚತುರ್ಮುಖ ಬ್ರಹ್ಮ. ಅವನೂ ಒಬ್ಬ ಬದ್ಧಜೀವನೇ. ಅವನಿಗೂ ಈ ತ್ರಿಗುಣಗಳುಂಟು. ಅವನ ಹಗಲುಗಳಿಗೆ 'ಕಲ್ಪ'ಗಳೆಂದು ಹೆಸರು. ಯಾವ ಕಲ್ಪದಲ್ಲಿ ಯಾವ ಗುಣ ತಲೆಯೆತ್ತಿರುತ್ತದೆಯೋ ಅದಕ್ಕೆ ಅನುಗುಣವಾಗಿ ಆ ಕಲ್ಪದಲ್ಲಿ ಅವನು ಉಪದೇಶಮಾಡಿದ ಪುರಾಣವು ಇರುತ್ತದೆ. ಮುಮುಕ್ಷುವಾದವನಿಗೆ ರಾಜಸ, ಮತ್ತು ತಾಮಸ ಉಪಾದೇಯವಲ್ಲ, ಸಾತ್ವಿಕವೊಂದೇ ಪರಿಗ್ರಾಹ್ಯ.

ಹಾಗಾದರೆ ರಾಜಸ, ತಾಮಸ ಪುರಾಣಗಳನ್ನು ಬ್ರಹ್ಮನು ಏಕೆ ರಚಿಸಬೇಕಿತ್ತು? ಚತುರ್ಮುಖನ ಮಾಹಾತ್ಮ್ಯವನ್ನು ಹೇಳುವ ರಾಜಸ ಪುರಾಣಗಳನ್ನೂ, ಅಗ್ನಿ, ಶಿವ ಇವರ ಮಹತ್ವವನ್ನು ತಿಳಿಸುವ ತಾಮಸ ಪುರಾಣಗಳನ್ನೂ ಏಕೆ ಪ್ರವರ್ತಿಸಬೇಕಿತ್ತು? ಅವರವರ ರುಚಿಗೆ ತಕ್ಕಂತೆ ಎಲ್ಲವನ್ನೂ ಹೇಳಬೇಕು. ಆದರೆ ವಿವೇಕಿಯಾದವನು ಸರಿಯಾದುದನ್ನೇ ಸ್ವೀಕರಿಸಬೇಕು. ಇದನ್ನೇ 'ತ್ರೈಗುಣ್ಯವಿಷಯಾ ವೇದಾಃ ನಿಸ್ತ್ರೈಗುಣ್ಯೋ ಭವಾರ್ಜುನ' ಎಂದು ಗೀತೆಯಲ್ಲಿ ಹೇಳಿದೆ. 'ಅಯ್ಯ! ಅರ್ಜುನ, ವೇದದಲ್ಲೇನೋ ಎಲ್ಲವನ್ನೂ ಹೇಳಿದೆ. ನೀನು ಮಾತ್ರ ರಜಸ್ಸು ತಮಸ್ಸು ಇವುಗಳೊಡನೆ ಬೆರೆಯದ ಸತ್ವಗುಣವನ್ನೇ ಆರಿಸಿಕೋ.'

ಮುಮುಕ್ಷುವು ಹೊಂದಬೇಕಾದ ಪರಬ್ರಹ್ಮನ ವಿಚಾರ, ಹೊಂದುವವನಾದ ಸ್ವವಿಚಾರ, ಹೊಂದಲು ಬೇಕಾದ ಉಪಾಯ, ಈ ವಿಚಾರಗಳಲ್ಲಿ ಬರಬಹುದಾದ ಎಡರು ತೊಡರುಗಳು, ಮತ್ತು ಹೊಂದುವುದರಿಂದ ಸಿಕ್ಕುವ ಫಲ, ಈ 'ಅರ್ಥಪಂಚಕಗಳೆಂಬ ಐದು ಅಂಶಗಳನ್ನು ಇತಿಹಾಸಗಳಲ್ಲಿಯೂ, ಸಾತ್ವಿಕಪುರಾಣಗಳಲ್ಲಿಯೂ ಹೇಳಿದೆ. ಹೀಗೆ ಸಾತ್ವಿಕ ಪುರಾಣಗಳು, ಅರ್ಥಪಂಚಕಗಳನ್ನು ಒಳಗೊಂಡ 'ಅಷ್ಟಾಕ್ಷರಿ' ಮಂತ್ರಕ್ಕೆ ಉಪಬೃಂಹಣಗಳಾಗಿವೆ. 'ಪಾದ್ಮೋತ್ತರ' ಎಂಬ ಪುರಾಣ ಭಾಗದಲ್ಲಿ ಇಂಥವುಗಳೇ ಸಾತ್ವಿಕಗಳೆಂದು ಹೇಳಿದೆ.

ಗೀತೆಯನ್ನು ಎಲ್ಲರೂ ಒಪ್ಪುತ್ತಾರೆ. ರಜೋಗುಣದಿಂದ ಅನ್ಯಥಾ ಜ್ಞಾನವೂ, ತಮೋಗುಣದಿಂದ ವಿಪರೀತಜ್ಞಾನವೂ, ಸತ್ವಗುಣದಿಂದ

ಯಥಾವಸ್ಥಿತವಾದ ಜ್ಞಾನವೂ ಬರುವುದಾಗಿ ಅದರಲ್ಲಿ ಹೇಳಿದೆ. ಇದರಿಂದ ಈ ಅರ್ಥಪಂಚಕದ ಯಥಾವಸ್ಥಿತಜ್ಞಾನವೂ, ಸಾತ್ವಿಕಪುರಾಣಗಳಿಂದಲೇ ಬರಬೇಕೆಂದೂ, ರಾಜಸ, ತಾಮಸ ಪುರಾಣಗಳಿಂದ ಲಭಿಸುವ ಜ್ಞಾನವು ಸರ್ವಾಂಶಗಳಿಂದಲೂ ಉಪಾದೇಯವಲ್ಲವೆಂದೂ ಸ್ಪಷ್ಟಪಡುತ್ತದೆ. ಆದರೆ ರಾಜಸ ತಾಮಸ ಪುರಾಣಗಳಲ್ಲಿ, ಸಾತ್ವಿಕಪುರಾಣಾಂಶಗಳಿಗೆ ವಿರೋಧವಿಲ್ಲದ ಅಂಶಗಳೇ ಸ್ವೀಕರಿಸಲು ಅರ್ಹ.

ಸಾತ್ವಿಕಪುರಾಣಗಳೆಲ್ಲವೂ ವಿಷ್ಣುವಿನ ಪರತ್ವವನ್ನು ವರ್ಣಿಸುತ್ತವೆ. ಸತ್ವಗುಣವೇ ವಿಷ್ಣುವಿಗೆ ಅಸಾಧಾರಣವಾಗಿ ಹೇಳಲ್ಪಟ್ಟಿದೆ. "ಸತ್ವಸ್ಯೈಷ ಪ್ರವರ್ತಕಃ" ಎಂದೂ "ಪರಮಸತ್ವಸಮಾಶ್ರಯಃ ಕಃ" ಎಂದೂ ವಿಷ್ಣುವು ಸತ್ವಗುಣಕ್ಕೆ ಆಶ್ರಯಭೂಮಿಯಾಗಿಯೂ, ಪ್ರವರ್ತಕನಾಗಿಯೂ ಹೇಳಲ್ಪಟ್ಟಿದೆ. ಶ್ರೀಭಾಗವತದಲ್ಲಿಯೂ ಈ ವಿಚಾರವು ಬರುತ್ತದೆ. ಋಷಿಗಳ ಕೂಟವು ಸೇರಿರುವಾಗ, ತ್ರಿಮೂರ್ತಿಗಳಲ್ಲಿ ಸಾತ್ವಿಕರು ಯಾರೆಂಬುದನ್ನು ಪರಿಶೀಲಿಸುವುದಕ್ಕಾಗಿ 'ಭೃಗು' ಋಷಿಗಳನ್ನೇ ನೇಮಿಸುತ್ತಾರೆ. ಆ ಋಷಿಗಳು ಕೈಲಾಸಕ್ಕೆ ಹೋದಾಗ ರುದ್ರನಿಗೆ ನಮಸ್ಕಾರ ಮಾಡುವುದಿಲ್ಲ. ಅವರನ್ನು ಸಂಹರಿಸಿಬಿಡಬೇಕೆನ್ನುವಷ್ಟು ಕೋಪವು ಈಶ್ವರನಿಗೆ ಏರುತ್ತದೆ. ಪಾರ್ವತಿ ಅದನ್ನು ಶಮನಮಾಡುತ್ತಾಳೆ. ಸತ್ಯಲೋಕಕ್ಕೆ ಅದೇ ಋಷಿಗಳು ಹೋಗಿ ಚತುರ್ಮುಖನ ಪರೀಕ್ಷೆ ನಡೆಸುತ್ತಾರೆ. ಅವಿನೀತರಾದ ಆ ಋಷಿಗಳನ್ನು ನೋಡಿ ಬ್ರಹ್ಮನಿಗೂ ಕೋಪವು ಬರುತ್ತದೆ. ಅಲ್ಲಿಂದ ಮುಂದೆ ಹೋಗಿ 'ಶ್ರೀವೈಕುಂಠ' ವೆನ್ನುವೆಡೆ ಇದ್ದ ವಿಷ್ಣುವನ್ನು ಆ ಋಷಿಗಳು ಕಾಲಿನಿಂದ ಒದೆಯುತ್ತಾರೆ. ವಿಷ್ಣುವು ಅವರು ಒದ್ದುದನ್ನೇ ಪೂಜೆಯೆಂದು ಸ್ವೀಕರಿಸುತ್ತಾನೆ. ಇದರಿಂದ ಮಹಾವಿಷ್ಣುವಿನ ಸತ್ವಗುಣವು ಪ್ರಕಾಶಿಸುತ್ತದೆ.

ವಿಷ್ಣುವಿನ ಸತ್ವಗುಣಕ್ಕೆ ಇನ್ನೊಂದು ಸಂದರ್ಭವಿದೆ. ಅವನು ನರನಾರಾಯಣ ಅವತಾರವನ್ನು ಎತ್ತಿದಾಗ, ನಾರಾಯಣ ಋಷಿಯು ಬದರಿಕಾಶ್ರಮದಲ್ಲಿ ತಪಸ್ಸುಮಾಡುತ್ತಿದ್ದುದನ್ನು ಕೆಡಿಸುವುದಕ್ಕಾಗಿ ಇಂದ್ರನು ಮನ್ಮಥನನ್ನೂ ಅಪ್ಸರೆಯರನ್ನೂ ಕಳುಹಿಸುತ್ತಾನೆ. ತಪಸ್ಸಿನ

ಲ್ಲಿದ್ದ ಶಿವನು ಹಣೆಗಣ್ಣಿನಿಂದ ಮನ್ಮಥನನ್ನು ದಹಿಸಿದಂತೆ ನಾರಾಯಣನು ದಹಿಸುವುದಿಲ್ಲ, ಆದರೆ ಅವರನ್ನು ಕಂಡು ನಗುತ್ತಾನೆ. ಈ ಮಂದಹಾಸವು ಮನ್ಮಥನ ಸೊಕ್ಕನ್ನು ಸಂಪೂರ್ಣವಾಗಿ ಇಳಿಸುತ್ತದೆ. ಆಗ ಮನ್ಮಥನು "ನನ್ನನ್ನು ಸುಟ್ಟವನು ಕಾಮಾರಿಯಲ್ಲ. ನನ್ನನ್ನು ಉಳಿಸಿ ನನಗೆ ಪಾಠಕಲಿಸಿದ ನೀನೀಗ ಕಾಮಾರಿ! ನಮ್ಮ ಕಿರಿಮೆಗೆ ತಕ್ಕುದನ್ನು ನಾವೂ ನಿನ್ನ ಹಿರಿಮೆಗೆ ತಕ್ಕುದನ್ನೂ ನೀನೂ ಮಾಡಿದ್ದೀಯೆ" ಎನ್ನುತ್ತಾನೆ. 'ನಾನು ಕೊಟ್ಟೆನೆಂದು ಈ ಅಪ್ಸರೆಯರನ್ನು ಕೊಂಡು ಹೋಗಿ ನಿನ್ನ ಇಂದ್ರನಿಗೆ ಕೊಡು, ಎಂದು ನಾರಾಯಣನು, ಮನ್ಮಥನು ಕರೆತಂದಿದ್ದ ಅಪ್ಸರೆಯರಿಗಿಂತ ಎಷ್ಟೋ ಪಾಲು ಹೆಚ್ಚು ಸೌಂದರ್ಯವುಳ್ಳ ಒಬ್ಬ ಅಪ್ಸರ ಸ್ತ್ರೀಯನ್ನು ತನ್ನ ತೊಡೆಯಿಂದ ಅನಾಯಾಸವಾಗಿ ಸೃಷ್ಟಿಸಿ ಮನ್ಮಥನ ಕೈಲಿಟ್ಟು, ಅವರಿಗೆ ಅತಿಥಿಸತ್ಕಾರಮಾಡಿ ಕಳುಹಿಸುತ್ತಾನೆ. ಈ ಅಪ್ಸರೆಯೇ "ಊರ್ವಶಿ" ಎನ್ನುವವಳು. ದೇವರ 'ಊರು' ಎಂದರೆ ತೊಡೆಯಿಂದ ಹುಟ್ಟಿದವಳಾದುದರಿಂದ 'ಊರ್ವಶಿ'ಯಾದಳು.

ಮಹಾವಿಷ್ಣುವಿಗೆ ಶುದ್ಧಸತ್ವಗುಣವಿರುವಂತೆ ರಾಜಸಮುಖ್ಯವಾದ ತ್ರಿಗುಣಗಳು ಚತುರ್ಮುಖನಲ್ಲಿಯೂ, ತಾಮಸಮುಖ್ಯವಾದ ತ್ರಿಗುಣಗಳು ಶಿವನಲ್ಲಿಯೂ ಇರುತ್ತವೆ. ಹುಟ್ಟುವ ಕಾಲದಲ್ಲಿ ಮಕ್ಕಳನ್ನು ಈ ತ್ರಿಮೂರ್ತಿಗಳಲ್ಲಿ ಯಾರಾದರೊಬ್ಬರು ನೋಡುತ್ತಾರೆ ಎಂದು ಶ್ರುತಿಯಲ್ಲಿಯೂ ಭಾರತದಲ್ಲಿಯೂ ಹೇಳಿದೆ. ವಿಷ್ಣುವು ಕಟಾಕ್ಷಿಸಿದರೆ ಹಸುಳೆಯು ಸಾತ್ವಿಕ ಸ್ವಭಾವದಲ್ಲಿಯೂ, ಚತುರ್ಮುಖನು ನೋಡಿದ್ದಾದರೆ ಮಗುವು ರಾಜಸ ಸ್ವಭಾವದಲ್ಲಿಯೂ, ಶಿವನು ನೋಡಿದರೆ ತಾಮಸ ಸ್ವಭಾವದಲ್ಲಿಯೂ ಬೆಳೆಯುವುದೆಂದು ವೇದಾನ್ತದಲ್ಲಿ ಹೇಳಿದೆ. "ಜಾಯಮಾನಂಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ | ಸಾತ್ವಿಕಃ ಸತು ವಿಜ್ಞೇಯಃ ಸವೈ ಮೋಕ್ಷಾರ್ಥ ಚಿನ್ತಕಃ ||" ಎಂತಹವರಿಗೂ ಹುಟ್ಟುವಾಗ ದೇವರನ್ನು ನೋಡಿಬಿಟ್ಟರೆ ಸರಿ. ಸತ್ವಗುಣವು ಉಂಟಾಗುತ್ತದೆ. ವಿಷ್ಣು ಕಟಾಕ್ಷದಿಂದ ಸತ್ವಗುಣ ಉಂಟಾಗುತ್ತದೆ ಎನ್ನುವುದಕ್ಕೆ ರಾಮಾಯಣದ ಒಂದು ಸಂದರ್ಭ ಹೇಳುತ್ತೇನೆ.

ವಾಲಿಯು ಸತ್ತಮೇಲೆ ರಾಮನ ಬಳಿಗೆ ತಾರೆಯು ಬರುತ್ತಾಳೆ. ದುಃಖದಿಂದ ರಾಮನನ್ನು ಬೈಯ್ಯಬೇಕೆಂದೇ ಅವಳು ಬರುತ್ತಿರುವುದು. ಆದರೆ "ಸಾ ತಂ ಸಮಾಸಾದ್ಯ ವಿಶುದ್ಧಸತ್ವಾ" ಧನುಸ್ಸು ಊರಿಕೊಂಡು ಠೀವಿಯಿಂದ ನಿಂತಿರುವ ಆ ರಾಮನು ಬಳಿಗೆ ಬರಲು, ತಾರೆಗೆ ಸತ್ವಗುಣವು ತಲೆಯೆತ್ತಿಬಿಡುತ್ತದೆ. ಗಂಡನನ್ನು ಕೊಂದ ರಾಮನನ್ನು ನಿಂದಿಸಬಂದ ವಳು "ತ್ವಮಪ್ರಮೇಯಃಶ್ಚ ದುರಾಸದಶ್ಚ" ಎಂದು ಮುಂತಾಗಿ ಸ್ತೋತ್ರ ಮಾಡತೊಡಗುತ್ತಾಳೆ. ಸ್ವಾಮಿಯ ದಿವ್ಯಮಂಗಳ ವಿಗ್ರಹ ದರ್ಶನ ಮಾಡಿದರೇ ಸಾಕು! 'ಸತ್ವಸ್ಯೈಷ ಪ್ರವರ್ತಕಃ' ಇದರ ಸತ್ಯತೆಯು ಕಂಡುಬಂದೀತು! ಜನರ ಸತ್ವಗುಣವು ಹೆಚ್ಚಲೆಂದೇ ಅರ್ಚಾವತಾರವು ದಿವ್ಯದೇಶಗಳಲ್ಲಿರುವುದು. ಈ ಬಿನ್ನಪದಲ್ಲಿ ಈ ರೀತಿಯಾಗಿ ಇತಿಹಾಸ ಗಳೂ ಸಾತ್ವಿಕಪುರಾಣಗಳೂ ಮಾತ್ರ ಪ್ರಮಾಣಗಳು ಎಂದು ರಾಜರು ಪ್ರತಿಪಾದಿಸಿದ್ದಾರೆ.

## ಬಿನ್ನಪ ೨೧

ಇಪ್ಪತ್ತೊಂದನೆಯ ಬಿನ್ನಪದಲ್ಲಿ ಪಾಂಚರಾತ್ರಾಗಮಕ್ಕೆ ವೇದ ದಷ್ಟೇ ಪ್ರಾಮಾಣ್ಯವುಂಟೆಂಬುದನ್ನು ಒಡೆಯರು ಹೇಳಿದ್ದಾರೆ. ಬ್ರಹ್ಮ ಸೂತ್ರದ ಎರಡನೆಯ ಅಧ್ಯಾಯದ "ಉತ್ಪತ್ತ್ಯಸಂಭವಾತ್" ಎಂಬ ಸೂತ್ರದಲ್ಲಿ, "ಸಾಂಖ್ಯ, ಯೋಗ, ಪಾಶುಪತದಂತಲ್ಲದೆ, ಈ ಪಾಂಚರಾ ತ್ರಾಗಮವು ಶ್ರೇಷ್ಠವಾದ ಪ್ರಮಾಣ" ಎಂಬ ಅಂಶವು ಸ್ಪಷ್ಟವಾಗಿದೆ. ಏಕೆಂದರೆ ಭಗವದುಪಾಸನ ಪ್ರಕಾರವೇ ಪಾಂಚರಾತ್ರದಲ್ಲಿ ಹೇಳಿರುವುದು. ಸಾಂಖ್ಯ, ಯೋಗ, ಪಾಶುಪತಗಳಲ್ಲಿ ವೇದಕ್ಕೆ ವಿರುದ್ಧವಾದ ಅಂಶವಿರು ವಂತೆ ಪಾಂಚರಾತ್ರಾಗಮದಲ್ಲಿಲ್ಲ.

ಸಾಂಖ್ಯ, ಯೋಗ, ಪಾಶುಪತಗಳೆಂಬ ಇವು ಮೂರೂ ವೈದಿಕಮತ ಗಳಾಗಿದ್ದರೂ, ಕೆಲವೆಡೆಗಳಲ್ಲಿ ವೇದವಿರುದ್ಧವಾದ ಅಂಶಗಳನ್ನು ಹೇಳಿವೆ.

ಪ್ರಕೃತಿಯನ್ನೂ ಅದರ ಕಾರ್ಯವಸ್ತುಗಳನ್ನೂ ವೇದದಲ್ಲಿ ಹೇಳಿದೆ. ವೇದದಲ್ಲಿ ಪ್ರಕೃತಿಯನ್ನು ಒಂದು 'ದ್ರವ್ಯ' ವಾಗಿಯೂ ಸತ್ವ, ರಜಸ್, ತಮಸ್ಸುಗಳನ್ನು ಆ ದ್ರವ್ಯದ ಗುಣಗಳಾಗಿಯೂ ಹೇಳಿದೆ. ಆದರೆ ಸಾಂಖ್ಯ ಮತದಲ್ಲಿ ಈ ಮೂರು ಗುಣಗಳೇ ಪ್ರಕೃತಿ ಎಂದು ಪ್ರತಿಪಾದಿಸಲ್ಪಟ್ಟಿದೆ. ಈಶ್ವರನನ್ನು ಆತ್ಮನಾಗಿ ಹೊಂದಿ, ಆ ಈಶ್ವರನಿಗೆ ಪರತಂತ್ರನೆಂದು ವೇದದಲ್ಲಿ ಹೇಳಲ್ಪಟ್ಟಿರುವ ಪುರುಷನನ್ನೂ, ಪ್ರಕೃತಿಯನ್ನೂ ಸ್ವತಂತ್ರ ರೆಂದು ಸಾಂಖ್ಯಮತೀಯರು ಹೇಳುತ್ತಾರೆ. ಆತ್ಮನಿಗೆ ಕರ್ತೃತ್ವವು ವೇದದಲ್ಲಿ ಅಂಗೀಕರಿಸಲ್ಪಟ್ಟಿದೆ. ಆದರೆ ಸಾಂಖ್ಯಮತದಲ್ಲಿ ಹಾಗಿಲ್ಲ. ಈ ರೀತಿಯಾಗಿ ಕೆಲವು ಮುಖ್ಯ ಅಂಶಗಳಲ್ಲಿ ವೇದಕ್ಕೂ ಸಾಂಖ್ಯಕ್ಕೂ ವ್ಯತ್ಯಾಸವಿದೆ. ಯೋಗಮತದಲ್ಲಿ ಪರಮಾತ್ಮನನ್ನು ಜಗತ್ತಿಗೆ ನಿಮಿತ್ತ ಕಾರಣನೆಂದು ಮಾತ್ರ ಒಪ್ಪಿಕೊಳ್ಳುತ್ತಾರೆ. ಆದರೆ ವೇದದಲ್ಲಿ ಅವನು ಜಗತ್ತಿಗೆ ನಿಮಿತ್ತ, ಉಪಾದಾನ, ಸಹಕಾರಿ ಎಂಬ ತ್ರಿವಿಧ ಕಾರಣ ನೆಂದೂ ಪ್ರತಿಪಾದಿಸಲ್ಪಟ್ಟಿದೆ. ಪಾಶುಪತದಲ್ಲಿ ದೇವತಾಂತರಪರತ್ವ ವನ್ನು ಹೇಳಿರುವುದರಿಂದ ಅದು ವೇದವಿರುದ್ಧವಾಗಿರುವುದು. ಈ ರೀತಿ ಯಾಗಿ ಪಾಂಚರಾತ್ರವು ಯಾವ ದೃಷ್ಟಿಯಿಂದ ನೋಡಿದರೂ, ವೇದಕ್ಕೆ ವಿರುದ್ಧವಾಗಿ ಹೋಗಿಲ್ಲ. ಈ ಅಂಶವು ಶಂಕರಾಚಾರ್ಯರಿಗೂ ಸಮ್ಮತವೇ? ಅವರು ಹೇಳುವುದಾದರೂ ಏನು? 'ವೇದ ವಿರುದ್ಧಾಂಶ ಇದ್ದರೆ ಬೇಡ' ವೆನ್ನುತ್ತಾರೆ. ಶಂಕರಾಚಾರ್ಯರ ಈ ಉಪಪಾದನೆಯ ಕ್ರಮವನ್ನು ನೋಡಿದರೆ, ಈ ಪಾಂಚರಾತ್ರಶಾಸ್ತ್ರದಲ್ಲಿ ವೇದವಿರುದ್ಧಾಂಶವಿಲ್ಲದುದ ರಿಂದ ಇದು ಅವರಿಗೂ ಪ್ರಮಾಣವೆಂದು ತೋರುತ್ತದೆ. ಶ್ರೀ ರಾಮಾನು ಜಾಚಾರ್ಯರು ಪಾಂಚರಾತ್ರದ ಪ್ರಾಮಾಣಿಕತ್ವವನ್ನೂ ಇನ್ನೂ ಸ್ಪಷ್ಟ ವಾಗಿ ನಿರ್ಣಯಮಾಡಿದ್ದಾರೆ.

ಈ ಪಾಂಚರಾತ್ರಶಾಸ್ತ್ರಕ್ಕೆ ವಕ್ತಾ ಶ್ರೀಮನ್ನಾರಾಯಣನೇ. ಲೋ ಕವು ಸನ್ಮಾರ್ಗದಲ್ಲಿ ಪ್ರವರ್ತಿಸಿ, ಕ್ಷೇಮವನ್ನು ಹೊಂದುವುದಕ್ಕಾಗಿ ಭಗ ವದುಪಾಸನಾಕ್ರಮಗಳನ್ನು ಈ ಶಾಸ್ತ್ರದಲ್ಲಿ ತುಂಬ ವಿಸ್ತಾರವಾಗಿ ಹೇಳ ಲಾಗಿದೆ. "ಮದ್ಯಾಜೀ" ಎಂದು ಗೀತಾಚಾರ್ಯನು ಸಂಗ್ರಹವಾಗಿ ಉಪದೇಶಮಾಡಿರುವುದರ ವಿವರಣೆಯನ್ನೂ ಪಾಂಚರಾತ್ರದಲ್ಲಿ ನೋಡ

ಬಹುದು. ಹೀಗೆ ಭಗವಂತನಿಂದ ಪ್ರವರ್ತಿಸಲ್ಪಟ್ಟು, ಅಲ್ಲದೆ ಅನೇಕ ಋಷಿಗಳಿಂದ ಪ್ರವಚನಮಾಡಲ್ಪಟ್ಟು ಪಾಂಚರಾತ್ರಶಾಸ್ತ್ರವು ಇದ್ದಾಗಲೂ ಕೂಡ, ಸಂಸಾರದಲ್ಲಿ ಸಿಲುಕಿರುವ ಲೋಕಕ್ಕೆ ದುರ್ಗತಿಯು ಹೋಗಲಿಲ್ಲ. ಈ ಸನ್ನಿವೇಶದಲ್ಲಿ ನಮ್ಮಾಳ್ವಾರ್ರು ಅವತರಿಸಿ, ಪಾಂಚರಾತ್ರಾಗಮದಲ್ಲಿ ಹೇಳಿರುವ ಉಪಾಸನಾಕ್ರಮವನ್ನು ಉಪದೇಶಮಾಡಿ ಲೋಕವನ್ನು ಸರಿಪಡಿಸಿದರು. "ಒನ್ನುಂ ತೇವುಂ" ಎಂಬ ಅವರ ಪರತತ್ವೋಪದೇಶಕ್ಕೆ ಕಿವಿಗೊಟ್ಟು ಎಲ್ಲರೂ ವಿಷ್ಣುಭಕ್ತರಾದುದನ್ನು ಕಂಡು ಆಳ್ವಾರ್ರು 'ಪೊಲಿಹ ಪೊಲಿಹ' ಎಂದು ಭಾಗವತ ಸಮೃದ್ಧಿಗೆ ಮಂಗಳಾಶಾಸನವನ್ನು ಮಾಡುವಂತಾಯಿತಲ್ಲವೆ ?

ಭೂಲೋಕದಲ್ಲಿರುವವರು ನಮ್ಮಾಳ್ವಾರ್ ಮೊದಲಾದ ಆಚಾರ್ಯರ ಮುಖೇನ ಪಾಂಚರಾತ್ರಶಾಸ್ತ್ರದ ಅನುಷ್ಠಾನದಿಂದ ಕ್ಷೇಮವನ್ನು ಪಡೆದಂತೆ ಪಾತಾಳವಾಸಿಗಳಾದ ಅಸುರರೂ ಆ ಶಾಸ್ತ್ರದಿಂದಲೇ ಕ್ಷೇಮವನ್ನು ಪಡೆದುದನ್ನು 'ಉಪರಿಚರವಸು' ಎಂಬುವನ ಚರಿತ್ರದಿಂದಲೇ ನೋಡಬಹುದು. ಅವನು ಒಬ್ಬ ರಾಜ. ಪಾಂಚರಾತ್ರಶಾಸ್ತ್ರವಾದ ಸಾತ್ವತಸಂಹಿತೆಯ ಪ್ರಕಾರ ಅವನು ದೇವರನ್ನು ತಪ್ಪದೆ ಪೂಜಿಸುತ್ತಿದ್ದನು. ಆಕಾಶದಲ್ಲಿ ಸಂಚರಿಸುವ ಶಕ್ತಿ ಆತನಿಗಿತ್ತು. ಋಷಿಗಳಿಗೂ ದೇವತೆಗಳಿಗೂ ಒಮ್ಮೆ ಜಿಜ್ಞಾಸೆಯು ನಡೆಯಿತು. 'ಧಾನ್ಯವನ್ನು ಉಪಯೋಗಿಸಿ ಯಜ್ಞಮಾಡಬೇಕೇ ? ಪಶುವನ್ನು ವಧೆಮಾಡಿ ಯಾಗಮಾಡಬೇಕೇ ?' ಎಂದು. ದೇವತೆಗಳಿಗೆ ಪಶುಯಾಗವೆಂದರೆ ಬಲು ಇಷ್ಟ. ಈ ಉಪರಿಚರವಸುವು ದೇವತಾಪಕ್ಷಪಾತದಿಂದ ಪಶುಯಾಗವೇ ಶ್ರೇಷ್ಠವೆನ್ನಲು ಪಾತಾಳಕ್ಕೆ ಬಿದ್ದುಬಿಡುತ್ತಾನೆ. ಭಗವದ್‌ಭಕ್ತಿಶೀಲನಾದ ಆತನನ್ನು ಕೊಲ್ಲಲು ಅಲ್ಲಿನ ಅಸುರರು ಹವಣಿಸುತ್ತಾರೆ. ಅಸುರರು "ವಿಷ್ಣುಭಕ್ತಿಮಾಡಬೇಡ, ಅದು ಶ್ರೇಯಸ್ಕರವಲ್ಲ" ಎಂದು ಅವನಿಗೆ ಬೇಕಾದಷ್ಟು ಬೋಧಿಸುತ್ತಾರೆ. ಆದರೆ ಉಪರಿಚರವಸುವು ನಿಧಾನವಾಗಿ ಆ ಅಸುರರಿಗೆಲ್ಲಾ ಸದುಪದೇಶಮಾಡುತ್ತಾನೆ. ಈ ವೈಷ್ಣವೋಪದೇಶದಿಂದ ಅಸುರರೆಲ್ಲರೂ ಸಾತ್ವಿಕರಾಗುತ್ತಾರೆ.

## ಬಿನ್ನಪ ೨೨

ಇಪ್ಪತ್ತೆರಡನೆಯ ಬಿನ್ನಪದಲ್ಲಿ ಇತರ ವಿಷಯವೈರಾಗ್ಯ ಎನ್ನುವುದು ಭಗವಂತನ ಕೃಪೆಯಿಂದ ಬರುತ್ತದೆಯೆಂದು ಹೇಳಿದೆ. "ಈ ವೈರಾಗ್ಯ ಎನ್ನುವುದು ಯಾರಿಗೂ ಸುಲಭವಲ್ಲ. ಅಡಿಗಡಿಗೆ ದೊಡ್ಡವರ ಹತ್ತಿರ ಎಷ್ಟು ವಿಷಯವನ್ನು ಕೇಳಿದರೂ ಆಗಮಟ್ಟಿಗೆ ಸುಲಭವೆನಿಸುತ್ತದೆ. ಆಮೇಲೆ ಕಾರ್ಯತಃ ನಡೆಸುವುದು ಅಸಾಧ್ಯ" ಎಂಬ ಶಂಕೆ ಎಲ್ಲರಿಗೂ ಬರತಕ್ಕದ್ದು. ಇದಕ್ಕೆ ಚಿಕ್ಕದೇವರಾಜ ಒಡೆಯರ ಉತ್ತರವು ಸ್ಪಷ್ಟವಾಗಿದೆ, ಸದಾಚಾರ್ಯ ಸಂಬಂಧ ಇದ್ದರೆ ವಿಷಯವೈರಾಗ್ಯ ಅತಿ ಸುಲಭವು, ಇಲ್ಲದಿದ್ದರೆ ಅತಿಕಷ್ಟ.

ನನ್ನದು ಎನ್ನುವ ಮಮಕಾರವನ್ನು ಬಿಟ್ಟರೆ ಎಲ್ಲಾ ಬಿಟ್ಟಹಾಗೆ. ಈ ವಿಷಯದಲ್ಲಿ ಗೀತೆಯ ಶ್ಲೋಕವೊಂದನ್ನು ನೋಡಬಹುದು.

"ಯಜ್ಞಶಿಷ್ಟಾಶಿನಸ್ಸಂತಃ ಮುಚ್ಯಂತೇ ಸರ್ವಕಿಲ್ಬಿಷೈಃ |
ತೇತ್ವಘಂ ಭುಂಜತೇ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ||"

ಭಗವನ್ನಿವೇದನವಾದ ಅನ್ನವನ್ನೇ ಭುಂಜಿಸಬೇಕೆಂದು ಇಲ್ಲಿ ಹೇಳಿರುವುದು ಶಿಷ್ಟಾಚಾರದಲ್ಲಿ ಬಂದಿದೆ. ಶಿಷ್ಟರಾದವರ ಮನೆಯಲ್ಲಿ ಬಳಸುವ ವಾಕ್ಯಗಳಿಗೆ ಸೂಕ್ಷ್ಮವಾದ ಅರ್ಥವಿರುತ್ತದೆ. ಗಂಡಸು ಹೊರಗೆ ಹೋಗಿ ಸಂಪಾದಿಸಿ ತರುತ್ತಾನೆ. ಯಜಮಾನಿಯಾದವಳು ಆ ದಿನದ ಅಡುಗೆಯ ವಿಷಯವಾಗಿ ಯಜಮಾನರನ್ನು ಕೇಳುತ್ತಾಳೆ. "ಈವೊತ್ತು ಏನು ಮಾಡುವುದು ದೇವರಿಗೆ ?" ಇದು ಸದ್ಗೃಹಿಣಿಯ ಪ್ರಶ್ನೆ. "ಸಂಪತ್ಕುಮಾರನಿಗೆ ಈವೊತ್ತು ಕ್ಷೀರಾನ್ನವನ್ನು ಭೋಗ್ಯವಾಗಿ ಮಾಡು!" ಇದು ಗಂಡನ ಉತ್ತರ. ಈ ವ್ಯವಹಾರವು ಬಾಹ್ಯಕ್ಕೆ ಒಂದು ತೆರನಾಗಿ ಕಂಡರೂ ಶಾಸ್ತ್ರೀಯದೃಷ್ಟಿಯು ಈ ವ್ಯವಹಾರದ ತಲದಲ್ಲಿ ಅಡಗಿದೆ. "ಭಗವಂತನಿಗಾಗಿ ಪಾಕಮಾಡಿ ನಿವೇದಿಸಿ ತಿನ್ನಬೇಕು; ತನಗಾಗಿ ಎಂದು ಅಡುಗೆಮಾಡಬಾರದು. ವ್ಯಾಪಾರ ಸ್ಥಳಗಳಲ್ಲಿ ಕೊಂಡು ತಿನ್ನುವವರೂ,

ಅಡುಗೆ ಮಾಡುತ್ತಿರುವಾಗಲೇ ಬಾಯಿಗೆ ಹಾಕಿಕೊಳ್ಳುವವರೂ ಊಟ ಮಾಡುವುದು ಆ ಪದಾರ್ಥಗಳನ್ನಲ್ಲ. ಅಷ್ಟಷ್ಟು ಪಾಪವನ್ನೇ ಅವರು ತಿನ್ನುತ್ತಾರೆ ಎಂದಿದೆ ಗೀತೆಯಲ್ಲಿ. ಏನುಬೇಕಾದರೂಮಾಡಿ ತಿನ್ನೋಣ; ಆದರೆ "ದೇವರಿಗಾಗಿ" ಎನ್ನುವ ಒಂದು ನಮ್ರನಿವೇದನೆಯ ಭಾವವು ನಮ್ಮಲ್ಲಿರಬೇಕು. ಒಬ್ಬ ದೊರೆಯ ಬಳಿ ಇರುವ ನೌಕರನು ರಾಜಾದಾಯಗಳನ್ನು ದೊರೆಗೆ ಸಲ್ಲಿಸದೆ ತಾನೇ ತಿಂದರೆ ಹೇಗೆ ತಪ್ಪೋ, ಹಾಗೆಯೇ ಭುಂಜಿಸುವ ಪದಾರ್ಥಗಳನ್ನು ಭಗವನ್ನಿವೇದನೆಮಾಡದೆ ಸ್ವಭೋಗಕ್ಕಾಗಿ ತಿಂದರೆ ಪರಮಾಪಚಾರ.

'ವಿಷಯವೈರಾಗ್ಯವು ದುರ್ಲಭ' ಎಂಬ ಆಕ್ಷೇಪದ ಬಗ್ಗೆ ನಂಬಿಳ್ಳೆಗಳು ಬಲುಚೆನ್ನಾಗಿ ಹೇಳಿದ್ದಾರೆ. ಹೆಂಡತಿ, ಮಕ್ಕಳು, ರತ್ನ, ಧನ, ಧಾನ್ಯ, ಹೊಲ, ಗದ್ದೆ, ಇವುಗಳನ್ನು ತೊರೆಯುವುದಾದರೂ ಎಂತು? ಅವುಗಳನ್ನು ಧ್ವಂಸಮಾಡಿಬಿಡೋಣವೆಂದರೆ ಭಗವಂತನ ವಿಭೂತಿಯನ್ನು-ಐಶ್ವರ್ಯವನ್ನು-ಅಳಿಸಿದಂತಾಗುತ್ತದೆ. ಯಾವುದೊಂದೂ ಇಲ್ಲದೆಡೆಗೆ ಹೋಗೋಣವೆಂದರೆ ಅಂಥ ಸ್ಥಳವು ಈ ಲೀಲಾವಿಭೂತಿಯಲ್ಲಿ ಎಲ್ಲಿರುತ್ತದೆ? ಶುದ್ಧ ಸತ್ವಗುಣವು ಇರುವ ಪರಮಪದಕ್ಕೇ ಹೋಗಬೇಕು! ಆದಿಭರತನು ವಿಷಯವೈರಾಗ್ಯವನ್ನು ತಾಳಿ, ಗಂಗಾತೀರದಲ್ಲಿ ವಾಸ ಮಾಡುತ್ತಿದ್ದರೂ ಜಿಂಕೆಯ ಮರಿಯಲ್ಲಿ ಸಕ್ತನಾಗಿ ಸಂಸಾರಿಯಾದನು! ಸೌಭರಿಋಷಿಯು ನೀರೊಳಗಿನ ಮತ್ಸ್ಯಸಂಚಾರವನ್ನು ಕಂಡು ಮುಗ್ಧನಾದನು. ಪರಮವಿರಾಗಿಗಳಿಗೂ ಕೂಡ ಹೀಗೆ ದುರ್ಲಭವಾದ ವಿಷಯವೈರಾಗ್ಯವು ಸಾಮಾನ್ಯರಿಗೆ ಹೇಗೆ ಲಭಿಸೀತು ಎನ್ನುವ ಶಂಕೆಯು ಬರಬಹುದು. ಆ ಶಂಕೆಗೆ ಸಮಾಧಾನ ಹೀಗಿದೆ "ಯಾವುದನ್ನೂ 'ನನ್ನದು' ಎಂದು ನೆನೆಯಬೇಡ, 'ನನ್ನದು' ಎನ್ನುವ ಸ್ಥಾನದಲ್ಲಿ 'ನಿನ್ನದು' ಬಂದರೆ ಸಾಕು. ಈ 'ಮಮೇದಂ' ಎಂಬುದು 'ತವೇದಂ' ಆದರೆ ಸರಿ. "ನೀರ್‌ನುಮರ್‌ದೆನ್ನಿವೈವೇರ್ ಮುದಲ್‌ಮಾಯ್‌ತ್ತು" 'ನೀವು, ನಿಮ್ಮದು' ಎನ್ನುವುದನ್ನು ಬೇರುಸಹಿತ ಕೀಳಿರಿ ಎನ್ನುತ್ತಾರೆ ಆಳ್ವಾರ್ರು. 'ಯಾನ್ ಎನದು' ಎಂದರೆ, 'ನಾನು, ನನ್ನದು' ಎಂದು ಆಳ್ವಾರ್ರು ಹೇಳದೆ

ಹೀಗೆ ಹೇಳುವುದಾದರೂ ಏಕೆ ? ಸಂಸಾರಿಗಳಲ್ಲಿ ಬೇರೂರಿರುವ ' ನಾನು, ನನ್ನದು ' ಎನ್ನುವುದನ್ನು ಅನುವಾದಮಾಡಿ ಬಾಯಾರ ಹೇಳಲೂ ಆಳ್ವಾರರಿಗೆ ಅಸಹ್ಯ !

ಗೀತೆಯ ಭಾಷ್ಯದಲ್ಲಿ ಶ್ರೀಮದಾನಂದತೀರ್ಥಾಚಾರ್ಯರು ಈ ಮಮತೆಯ ವಿಚಾರದಲ್ಲಿ ಬಲು ಸೊಗಸಾಗಿ ಹೇಳಿದ್ದಾರೆ. ಒಬ್ಬ ಪ್ರಭುವಿಗೆ ಕುದುರೆಸವಾರಿ ಎಂದರೆ ಬಲು ಇಷ್ಟ. ಎರಡು ಸಾವಿರ ರೂಪಾಯಿ ಕೊಟ್ಟು ಒಳ್ಳೆಯ ಕುದುರೆಯೊಂದನ್ನು ಕೊಳ್ಳುತ್ತಾನೆ. ಕೊಂಡಮೇಲೆ ಆ ಕುದುರೆಯ ಕಾಲು ಕುಂಟಾಗುತ್ತದೆ. ರಾಜನಿಗೆ ಎಷ್ಟು ದುಃಖವಾಗಿರಬೇಕು ? ಆದರೆ ಇನ್ನೊಬ್ಬನು ಮತ್ತೊಂದು ಕುದುರೆಯನ್ನು ಕೊಳ್ಳುತ್ತಾನೆ. ಅದಕ್ಕೂ ಹಾಗೆಯೇ ಕಾಲು ಕುಂಟಾಗುತ್ತದೆ, ಆದರೆ ಆ ದೊರೆಗೆ ಆಗ ದುಃಖವಾಗದು. ಒಂದು ಹೆಣ್ಣನ್ನು ಮದುವೆಮಾಡಿಕೊಂಡಮೇಲೆ ಆಕೆಯು ಖಾಯಿಲೆ ಬೀಳುತ್ತಾಳೆ, ಒಂದು ವೇಳೆ ಅವಳನ್ನು ಮದುವೆ ಮಾಡಿಕೊಳ್ಳದೆ ಅವಳಿಗೆ ವ್ಯಾಧಿಬಂದಿದ್ದರೂ ಇವನು ಮರುಗುತ್ತಿದ್ದನೆ ? ಇಲ್ಲೆಲ್ಲಾ ಉಂಟಾಗುವ ದುಃಖಕ್ಕೆ ' ನನ್ನದು, ನನ್ನವಳು ' ಎಂದು ಉಂಟಾಗುವ ಮಮತೆಯೇ ಮೂಲಕಾರಣ. ಯಾವುದನ್ನು ಬಿಟ್ಟರೆ ಕಷ್ಟವಿಲ್ಲವೋ, ಅದು ಸುಖ ಎನ್ನುವ ರೀತಿಯಲ್ಲಿ ವಿವೇಕಿಯು ಹೋಗಬೇಕು.

ಎಲ್ಲರೊಡನೆಯೂ ಇದ್ದು ಮಮತೆಯನ್ನು ಬಿಡುವುದೇ ಬಲು ಮೇಲಾದ ಮಾರ್ಗ. ಇಂಥವನನ್ನು ನಂಟರಿಷ್ಟರು ' ಸಾಂಖ್ಯಪುರುಷ ' ನೆಂದು ಲೇವಡಿ ಮಾಡುವುದುಂಟು. ತಾವರೆ ಎಲೆಯ ಮೇಲಿನ ನೀರಿನಂತಿದ್ದು ಮನೆ ಮಡದಿ ಹೋದರೂ ದುಃಖಪಡಬಾರದು. " ಮಿಥಿಲಾಯಾಂ ಪ್ರದೀಪ್ತಾಯಾಂ ನಮೇ ಕಿಂಚಿತ್ ಪ್ರದಹ್ಯತೆ " ಎಂದು ಘೋಷಿಸಿದ ಜನಕನಂತಿರಬೇಕು ! ಸತ್ರದ ಹಾಗೆ ನಮ್ಮ ಮನೆಯನ್ನು ನೋಡಬೇಕು. " ನಿವೃತ್ತರಾಗಸ್ಯ ಗೃಹಂ ತಪೋವನಂ " ಮಾನಸಿಕವಾಗಿ ಈ ಮಮತೆಯನ್ನು ತೊರೆಯುವುದೇ ಮುಖ್ಯ. ಇದು ಸುಲಭವೆ ? ಲೋಕವ್ಯವಹಾರಕ್ಕೆ ಸೇರುವುದೇ ! ಚಿಕ್ಕವಯಸ್ಸಿನಿಂದಲೇ ಮಕ್ಕಳಿಗೆ ಈ

ಮಮತೆಯನ್ನು ಕಲಿಸುತ್ತೇವೆ. ಆ ಮಗುವು 'ಇದು ನನ್ನದು' ಎಂದು ಹೇಳುವುದನ್ನು ಕೇಳಿ ನಾವು ಸಂತೋಷಪಟ್ಟು ಈ ಮಮಕಾರವೆಂಬ ದುರ್ಗುಣವನ್ನು ಬೆಳೆಸುತ್ತೇವೆ. ಇದು ಲೋಕರೀತ್ಯಾ ಚೆನ್ನಾಗಿರುತ್ತದೆ. ಆದರೆ ಶಾಸ್ತ್ರರೀತ್ಯಾ ಇದು ವಿಷ.

ಈಶ್ವರನ ಕೃಪೆಯಿಲ್ಲದೆ ಈ ಮಮಕಾರವು ನಿಶ್ಶೇಷವಾಗಿ ಹೋಗದು. ವೈರಾಗ್ಯವನ್ನು ಹೊಂದಲು ಬೇಕಾದ ಕಾರಣಕಲಾಪಗಳಿದ್ದರೂ ನಮಗೆ ಅದು ಏರ್ಪಡಲಿಲ್ಲ. ಕಾರ್ಯಕ್ಷೇತ್ರಕ್ಕೆ ಬಂದಾಗ ಮಮತಾಪರಿತ್ಯಾಗವು ಕಷ್ಟವಾಗುತ್ತದೆ. ನಮ್ಮಾಳ್ವಾರರೂ ಮೊದಮೊದಲು ನಮ್ಮಂತೆಯೇ ಸಂಸಾರಿಗಳಾಗಿದ್ದು ಅಜ್ಞಾನ, ಅನ್ಯಥಾಜ್ಞಾನ, ವಿಪರೀತಜ್ಞಾನಗಳು ಹೋಗುವಂತೆ ಭಕ್ತಿರೂಪಜ್ಞಾನವನ್ನು ಸ್ವಾಮಿಯು ದಯೆಗೈದ ಕ್ಷಣವೇ "ಯಾನೇ ಎನ್‌ತನದೇ ಎನ್ನಿರುನ್ದೇ" ಎಂದವರು "ಯಾನೇನೀ, ಎನ್ನುಡೈಮೆಯುಂ ನೀಯೇ" ಎಂದರು. ಯಾವುದನ್ನೂ ಸ್ವರೂಪತಃ ತ್ಯಾಗಮಾಡಲು ಆಗದು, ಆದರೆ ಎಲ್ಲವೂ ದೇವರದೆನ್ನುವ ನಿಷ್ಠೆಯು ಬರಬೇಕು. ಭಗವಂತನು ಮಾಡಿರುವ ಉಪಕಾರಕ್ಕೆ ಪ್ರತ್ಯುಪಕಾರವೆಸಗಲು ಆಳ್ವಾರ್‌ರ್ ಒದ್ದಾಡುತ್ತಾರೆ. ದೇವದೇವನ ಅಡಿದಾವರೆಗಳಲ್ಲಿ ಆತ್ಮಸಮರ್ಪಣೆಮಾಡೋಣವೆಂದರೆ ಅದೊಂದು ಕಳ್ಳತನವೇ ಸರಿ. ಶ್ರೀರಂಗನಾಥನ "ರಾಜಮಹೇಂದ್ರಪದಕ" ವನ್ನು ಸನ್ನಿಧಿಮುದ್ರೆಯು ಆದಮೇಲೆ ಅಪಹರಿಸಿ, ಮಾರನೆಯ ದಿನ ವಾದ್ಯಮರ್ಯಾದೆ ಸಮೇತವಾಗಿ ಒಂದು ಪದಕವನ್ನು ಸಮರ್ಪಿಸುವ ವೈಭವಯುತ ಮೆರವಣಿಗೆಯನ್ನು ಏರ್ಪಡಿಸಿದರೆ, ಕಳ್ಳತನವು ಗೊತ್ತಾಗುವುದೊ? ಹೊಸದಾಗಿ ಸಮರ್ಪಿಸಿದುದೆನ್ನುವರೊ? ಕೌಸ್ತುಭರತ್ನದಂತೆ ಈ ಜೀವಾತ್ಮನು ದೇವರ ಆಸ್ತಿ. "ನೀನಿತ್ತು ನೀನೇ ಸ್ವೀಕರಿಸುವೆ" ಈ ಭಾವವು ಆಳ್ವಾರದು. "ರಾಜ್ಯಂ ಚಾಹಂಚ ರಾಮಸ್ಯ" ಎನ್ನುವ ವಾಕ್ಯದಲ್ಲಿಯೂ ಇದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಅಚಿತ್ತು, ಚಿತ್ತು ಎರಡೂ ಸರ್ವೇಶ್ವರನ ವಸ್ತು. ಕಷ್ಟ ನೋಡಿಯಾದರೂ ಬಿಡಬಹುದಾದ ಈ ಮಮತೆಯನ್ನು ತೊರೆಯುವುದು ಆಚಾರ್ಯಸಂಬಂಧದಿಂದ ಅತ್ಯಂತ ಸುಲಭವಾಗುತ್ತದೆ. ಹೀಗೆ

ವಿಷಯವೈರಾಗ್ಯವನ್ನೂ ಭಗವದನುಗ್ರಹವನ್ನೂ ದಯಪಾಲಿಸಬೇಕೆಂದು ರಾಜರು ಪ್ರಾರ್ಥಿಸುತ್ತಾರೆ.

ಹೀಗೆ ಹತ್ತೊಂಬತ್ತನೆಯ ಬಿನ್ನಪದಲ್ಲಿ ಮೋಕ್ಷಕ್ಕೆ ಸಾಧನವಾದ ಭಕ್ತಿಯು ಸರ್ವೇಶ್ವರನ ಕೃಪೆಯಿಂದ ದೊರೆಯುವುದೆಂದೂ, ಇಪ್ಪತ್ತನೆಯ ಬಿನ್ನಪದಲ್ಲಿ ರಾಜಸ ತಾಮಸ ಪುರಾಣಗಳನ್ನು ಬಿಟ್ಟು ಸಾತ್ವಿಕ ಪುರಾಣವೊಂದೇ ಗ್ರಾಹ್ಯವೆಂದೂ, ಇಪ್ಪತ್ತೊಂದನೆಯದರಲ್ಲಿ ಅವನ ಸೇವೆಗೆ ಪಾಂಚರಾತ್ರಾಗಮವು ವೇದಕ್ಕೆ ಸಮನಾದ ಪ್ರಮಾಣವೆಂದೂ, ಇಪ್ಪತ್ತೆರಡನೆಯ ಬಿನ್ನಪದಲ್ಲಿ ಆಚಾರ್ಯಸಂಬಂಧದಿಂದ ವೈರಾಗ್ಯವು ಕಷ್ಟವಲ್ಲವೆಂದೂ ಹೇಳಿದಂತಾಯಿತು.

## ಆರನೆಯ ದಿನದ ಉಪನ್ಯಾಸ

### ೨೩—೨೭ ಬಿನ್ನಪಗಳು.

ಮೊದಲ ಹದಿನೆಂಟು ಬಿನ್ನಪಗಳಲ್ಲಿ, ಈಶ್ವರ, ಚಿತ್, ಅಚಿತ್ ಈ ತತ್ವತ್ರಯಗಳ ಸ್ವರೂಪವನ್ನು ವಿಸ್ತಾರವಾಗಿ ಬಣ್ಣಿಸಿ, ಮೇಲೆ, ಹಿತ, ಪುರುಷಾರ್ಥಗಳನ್ನು ಕುರಿತು ಹೇಳುತ್ತಾರೆ. ವೈರಾಗ್ಯವು ಚೆನ್ನಾಗಿ ಮೂಡಿ ಮೋಕ್ಷಕ್ಕೆ ಅರ್ಹನಾಗಬೇಕಾದರೆ ಆಚಾರ್ಯಸಂಬಂಧವು ಬೇಕೆಂಬುದು ನಿನ್ನೆ ಕೊನೆಯಲ್ಲಿ ಹೇಳಿದ ವಿಷಯ. ಇನ್ನು ಮುಂದೆ 'ಹಿತ' ಅಥವ 'ಸಾಧನೆ' ಯನ್ನು ಕುರಿತು ಪರಿಶೋಧನೆಯು ನಡೆಯುತ್ತದೆ. ಅದಕ್ಕೋಸ್ಕರ ಕರ್ಮಗಳ ಸ್ವರೂಪವನ್ನು ತಿಳಿದುಕೊಳ್ಳಬೇಕು. ಪುಣ್ಯಕರ್ಮ, ಪಾಪಕರ್ಮ ಇವುಗಳ ಸ್ವರೂಪಗಳನ್ನು ತಿಳಿಯುವುದರಿಂದ ಇದು ಗ್ರಾಹ್ಯ. ಇದು ಕೂಡದೆಂದು ಹೇಯೋಪಾದೇಯ ಜ್ಞಾನವು ಉಂಟಾಗುತ್ತದೆ.

ವೇದ ಮುಂತಾದ ಶಾಸ್ತ್ರಗಳಲ್ಲಿ ಮಾಡಬೇಕೆಂದು ಹೇಳಿರುವ ಕೆಲಸಗಳಿಗೆ ವಿಹಿತಕರ್ಮಗಳೆಂದೂ, ಕೂಡದೆಂದು ಹೇಳಿರುವ ಕೆಲಸಗಳಿಗೆ ನಿಷಿದ್ಧಕರ್ಮಗಳೆಂದೂ ಹೆಸರು. ವೇದದಲ್ಲಿ ವಿಧಿಸಿರುವ ಕರ್ಮಗಳು

ಮೂರು ಬಗೆಯಾಗಿರುವುವು. ನಿತ್ಯ, ನೈಮಿತ್ತಿಕ, ಕಾಮ್ಯವೆಂದು, ನಿತ್ಯ ಕರ್ಮವೆನ್ನುವದು ವರ್ಣಕ್ಕೂ ಆಶ್ರಮಕ್ಕೂ ತಕ್ಕಂತೆ ಏರ್ಪಡಿಸಲ್ಪಟ್ಟ ಕೆಲವು ನಿಯಮಗಳು. ಸಂಧ್ಯಾವಂದನಾದಿ ಕರ್ಮಗಳನ್ನು ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈ ಕರ್ಮಗಳನ್ನು ಯಾವಾಗಲೂ ಬಿಡಕೂಡದು ಎನ್ನುವುದನ್ನು ತೋರಿಸುವದಕ್ಕೋಸ್ಕರ ರಾಜರು ಅವುಗಳನ್ನು ಭಗವಂತನು ಸ್ವರುಚಿಯಲ್ಲಿ ಅಪ್ಪಣೆಮಾಡಿರುವನೆಂದು ನಮಗೆ ಕಾಣಿಸಿಕೊಟ್ಟಿದ್ದಾರೆ. ನೈಮಿತ್ತಿಕ ಕರ್ಮವೆನ್ನುವದು ಕೆಲವು ಕಾಲವಿಶೇಷಗಳಿಂದಲೋ ಸಂದರ್ಭವಿಶೇಷಗಳಿಂದಲೋ ಮಾಡಲ್ಪಡ ಬೇಕಾದ ಕರ್ಮ. ಪಿತೃತರ್ಪಣ, ಶ್ರಾದ್ಧ ಮುಂತಾದುವು ನೈಮಿತ್ತಿಕ ಕರ್ಮಗಳು. ಅಭೀಷ್ಟಗಳನ್ನು ನೆರವೇರಿಸಿಕೊಳ್ಳುವುದಕ್ಕಾಗಿ ವೇದಗಳಲ್ಲಿ ಕೆಲವು ಕರ್ಮಗಳನ್ನು ವಿಧಿಸಿದೆ. ಇವುಗಳಿಗೆ ಕಾಮ್ಯಕರ್ಮಗಳೆಂದು ಹೆಸರು. ಸ್ವರ್ಗಕಾಮನಿಗೆ ವಿಧಿಸಲ್ಪಟ್ಟಿರುವ ಜ್ಯೋತಿಷ್ಟೋಮವನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಅಧರ್ಮವಾಗಿಯೂ ದುರಾಚಾರವಾಗಿಯೂ ಇರುವ ಕರ್ಮಗಳನ್ನೆಲ್ಲಾ ವೇದವು ನಿಷೇಧಿಸಿದೆ. ಈ ರೀತಿಯಾಗಿ ನಿಷಿದ್ಧಕರ್ಮಗಳನ್ನು ಮಾಡುವುದು ಎಷ್ಟು ತಪ್ಪೋ ವಿಹಿತಕರ್ಮಗಳನ್ನು ಬಿಡುವುದೂ ಅಷ್ಟೇ ತಪ್ಪು.

ವಿಹಿತಕರ್ಮಗಳನ್ನು ಮಾಡುವುದರಿಂದ ಭಗವಂತನಿಗೆ ಪ್ರೀತಿಯೂ, ಅವುಗಳನ್ನು ಬಿಡುವುದರಿಂದಲೋ ಅಥವಾ ನಿಷಿದ್ಧಕರ್ಮಗಳನ್ನು ಮಾಡುವುದರಿಂದಲೋ ಭಗವಂತನಿಗೆ ಅಪ್ರಿಯವೂ ಉಂಟಾಗುತ್ತದೆ. ಭಗವಂತನಿಗೆ ಪ್ರೀತಿಯನ್ನುಂಟುಮಾಡುವುದೇ ಪುಣ್ಯ. ಅಪ್ರಿಯವನ್ನುಂಟುಮಾಡುವುದೇ ಪಾಪ.

ನಿಷಿದ್ಧಕರ್ಮಗಳನ್ನು ಮಾಡುವುದೂ, ವಿಹಿತಕರ್ಮಗಳನ್ನು ಬಿಡುವುದೂ ಭಗವಂತನಿಗೆ ಇಷ್ಟವಿಲ್ಲವೆನ್ನುವುದು ಸ್ಪಷ್ಟವಾಗಿದೆ. ಈ ರೀತಿಯಾಗಿ ಭಗವದಾಜ್ಞೆಯನ್ನು ಉಲ್ಲಂಘನೆಮಾಡುವವರಿಗೆ ಇಹಪರದಲ್ಲಿ ಅನೇಕ ಕಷ್ಟಗಳು ಬರಬಹುದೆಂದು ಶಾಸ್ತ್ರಗಳು ಘೋಷಿಸುತ್ತವೆ. ಈ ತೆರನಾಗಿ ಸಂಪಾದಿಸಲ್ಪಟ್ಟ ಪಾಪಗಳು ಹೇಗೆ ಭಗವದನುಭವಕ್ಕೆ ವಿರೋ

ಥಿಗಳೋ, ಹಾಗೆಯೇ ಕಾಮ್ಯಕರ್ಮಗಳಿಂದ ಸಂಪಾದಿಸಲ್ಪಟ್ಟ ಪುಣ್ಯವೂ ಎಂದು ರಾಜರು ಇಲ್ಲಿ ಪ್ರತಿಪಾದಿಸಿದ್ದಾರೆ. ಕಾಮ್ಯಕರ್ಮಗಳನ್ನು ಭಗವಂತನು ಉದಾಸೀನಬುದ್ಧಿಯಿಂದ ವಿಧಿಸಿದ್ದಾನೆಂದು ರಾಜರು ವಿಶದಪಡಿಸಿದ್ದಾರೆ. ಭಕ್ತರಿಗೆ ತನ್ನನ್ನೇ ಕೊಡುವುದಕ್ಕೆ ಕಾದಿರುವ ಅವನು ಕ್ಷುದ್ರಪುರುಷಾರ್ಥಗಳನ್ನು ಅನುತಾಪದಿಂದಲೇ ಕೊಡಬೇಕಾಗುವುದು. ಇದರಿಂದ ವಿಹಿತವಾದ ಕಾಮ್ಯಕರ್ಮವು, ದುಷ್ಕರ್ಮದಂತೆಯೇ ಕೊಡದು. ಫಲಾಸಕ್ತಿ ಏರ್ಪಟ್ಟು ಆತ್ಮಕ್ಷೇಮರೂಪವಾದ ಮೋಕ್ಷಕ್ಕೆ ಅಡ್ಡಿಯಾಗುವುದರಿಂದ ಕೆಟ್ಟಕೆಲಸಗಳಂತೆ ಕಾಮ್ಯಕರ್ಮಗಳೂ ತ್ಯಾಜ್ಯಗಳಾಗುತ್ತವೆ. ಕಾಮ್ಯಕರ್ಮಗಳಿಂದ ಈ ಲೋಕದಲ್ಲಿ ರಾಜನಾಗಿದ್ದು ಭೋಗಪಡಬಹುದು. ಅಥವಾ ಪರಲೋಕದಲ್ಲಿ ಬ್ರಹ್ಮನ ಪಟ್ಟವೇ ಸಿಗಬಹುದು. ಈ ರಾಜ್ಯ, ಬ್ರಹ್ಮಪಟ್ಟಗಳು ಅವಕ್ಕಿಂತಲೂ ದೊಡ್ಡದಾದ ಸ್ಥಿರವಾದ ಭಗವದನುಭವಕ್ಕೆ ವಿರೋಧಿಗಳು. ಇದನ್ನು ಸ್ಥಿರೀಕರಿಸುವದಕ್ಕೆ ರಾಜರು ದುಷ್ಕರ್ಮಗಳನ್ನು ಕಬ್ಬಿಣದ ಸಂಕೋಲೆಯಂತೆಯೂ ಕಾಮ್ಯಗಳನ್ನು ಚಿನ್ನದ ಸಂಕೋಲೆಯಂತೆಯೂ ವರ್ಣಿಸಿ ಭಗವಂತನ ಅಡಿಗಳನ್ನು ಸೇರಿಸಲೀನದ ಸಂಸಾರವೆಂಬ ಸೆರೆಮನೆಯಲ್ಲಿ ಕಾಲ್ತೊಡರಾಗಿರುವುದು ಎಂದು ಹೇಳಿದ್ದಾರೆ.

ಭಗವದನುಭವದ ಹೊರತು ಪ್ರಯೋಜನಾಂತರಗಳನ್ನು ಕೇಳುವುದು ದೊಡ್ಡವರ ಚರಿತ್ರೆಗಳಲ್ಲಿ ಇಲ್ಲವೇ ಇಲ್ಲ. ಇದನ್ನು ಕೂರೇಶರ ಚರಿತ್ರದಿಂದ ಉದಹರಿಸಬಹುದು. ಕೂರೇಶರು ವಿಶಿಷ್ಟಾದ್ವೈತ ದರ್ಶನಕ್ಕಾಗಿ ಕಣ್ಣನ್ನು ತ್ಯಾಗಮಾಡಿದರು. ರಾಮಾನುಜರಿಗೆ, ಕಣ್ಣಿಲ್ಲದ ತಮ್ಮ ಪ್ರಾಣವಾದ ಕೂರತ್ತಾಳ್ವಾರನ್ನು ಕಂಡು ಕಷ್ಟವಾಗುತ್ತದೆ. "ದೇವರಾಜನನ್ನು ಕಣ್ಣುಕೊಡುವಂತೆ ಪ್ರಾರ್ಥಿಸಿಕೊ" ಎಂದು ಆಚಾರ್ಯರ ಅಪ್ಪಣೆಯಾದರೂ, "ಈ ಕ್ಷುದ್ರಪುರುಷಾರ್ಥವನ್ನೇ ದೇವರ ಬಳಿ ಕೇಳಿಕೊಳ್ಳುವದು!" ಎಂದು ಉಲ್ಲಂಘಿಸಿದರು. ಕೂರೇಶರು ಕಣ್ಣು ಕೇಳಲಿಲ್ಲ. ಅವರು ನಮ್ಮ ಹಾಗಲ್ಲ. ತಮ್ಮ ಸ್ವರೂಪಕ್ಕೆ 'ಅನನ್ಯಪ್ರಯೋಜನತೆ' ಗೆ ಧಕ್ಕೆ ತರುವುದೆಂದು ಅವರು ಈ ಬಾಹ್ಯಚಕ್ಷುಸ್ಸನ್ನು ಬೇಡಲಿಲ್ಲ.

ಅನನ್ಯಪ್ರಯೋಜನರಾಗಿ ನಾವು ಭಗವಂತನ ಸೇವೆಮಾಡಿದರೆ ಅವನಿಗೆ ತುಂಬಾ ಭೋಗ್ಯವಾಗಿರುವುದೆಂಬುದನ್ನು ಅನೇಕ ಭಕ್ತರ ಚರಿತ್ರೆಗಳಿಂದ ನೋಡಬಹುದು. ಶ್ರೀ ವಿದುರನು, ಶ್ರೀಕೃಷ್ಣನನ್ನು ಪೂಜಿಸಿದ ಕ್ರಮವು ಅತ್ಯಾಶ್ಚರ್ಯವಾಗಿದೆ. " ವಿದುರಾನ್ನಾನಿ ಬುಭುಜೆ ಶುಚೀನಿ ಗುಣವಂತಿಚ." ತಾನು ಅತಿಥಿಸತ್ಕಾರಕ್ಕೆ ಯಾವ ಏರ್ಪಾಡನ್ನೂ ಮಾಡಿರಲಿಲ್ಲ; ಮಾಡಬೇಕೆಂಬ ಯೋಚನೆಯೂ ಇರಲಿಲ್ಲ. ಇದ್ದಕ್ಕಿದ್ದಂತೆಯೇ ಶ್ರೀಕೃಷ್ಣನು ಬಿಜಮಾಡಿಸಲು ಇದ್ದುದನ್ನು ಬಡಿಸಿದನು. ಆ ಅನ್ನವು ಶುಚಿ, ಮತ್ತು ರಸವತ್ ಆಯಿತು. ಬೇರೊಂದು ಪ್ರಯೋಜನವನ್ನು ಬಗೆಯದೆ ಅನ್ನ ಇಡುವುದೇ ಪರಮಪುರುಷಾರ್ಥವೆಂದು ವಿದುರ ಬಗೆದ. ಕೃಷ್ಣಬಲರಾಮರಿಬ್ಬರಿಗೂ ಸಮರ್ಪಣೈಕಪ್ರಯೋಜನಗಳಾಗಿ ' ಗೂನಿ ' ಚಂದನ ಕೊಟ್ಟಳು. ಮಾಲಾಕಾರನೂ ಹೂಮಾಲೆಯನ್ನು ಸ್ವಾಮಿಗೆ ನಿಷ್ಕಾಮನಾಗಿ ಧರಿಸಿದ್ದರಿಂದ ಅದು ಆತನಿಗೆ ಪರಮಭೋಗ್ಯವಾಯಿತು. ಆಂಡಾಳ್ ತಾನು ಅರ್ಪಿಸುವ ಬೆಣ್ಣೆ, ಅಕ್ಕಾರವಡಿಶಲ್ ಒಂದುನೂರು ಸಾವಿರವಾಗಿ ದೇವರಿಗಾಗಲೆಂದು ಭಾವಿಸಿ, ಮತ್ತೂ ಆಳುತನವನ್ನು ಮಾಡುವುದಾಗಿ ಹೇಳಿದುದರಿಂದ ಅದು ದೇವರಿಗೆ ಪರಮಭೋಗ್ಯವಾಯಿತು.

ಈ ಬಿನ್ನಪದಲ್ಲಿ ದೊರೆಗಳು ಒಂದು ತತ್ವವನ್ನು ಹೇಳಿದ್ದಾರೆ. ಬ್ರಾಹ್ಮಣ ಕ್ಷತ್ರಿಯಾದಿಗಳು, ಅವರವರ ವರ್ಣಾಶ್ರಮಗಳಿಗೆ ತಕ್ಕ ಕೆಲಸ ಮಾಡಬೇಕೆಂಬುದು ಭಗವಂತನ ಆಜ್ಞೆ. ಈ ಆಜ್ಞೆಯನ್ನು ಭಗವತ್ಕೈಂಕರ್ಯವೆಂದೇ ನಡೆಸಬೇಕೆಂದು ರಾಜರು ಹೇಳುತ್ತಾರೆ. ಕರ್ಮಯೋಗವೆನ್ನುವುದು ಭಗವತ್ಕೈಂಕರ್ಯರೂಪ. ಈ ಕರ್ಮಯೋಗವನ್ನು ಮತ್ತೊಂದು ದೃಷ್ಟಿಯಿಂದಲೂ ನೋಡಬಹುದು. ಇಂಥ ಕೆಲಸಗಳು ಭಕ್ತಿಗೆ ಅಂಗ. ವರ್ಣಾಶ್ರಮಧರ್ಮಗಳನ್ನು ನಡೆಸುವುದರಿಂದ ಪಾಪವು ಹೋಗಿ ಜ್ಞಾನವು ಉಂಟಾಗಿ, ಭಕ್ತಿಯು ಕೊನರುತ್ತದೆ. ಈ ಕರ್ಮಗಳನ್ನು ಎಸಗುವಾಗ ತಾನು ಮಾಡುವೆನೆಂಬ ಅಹಂಕಾರವಿರಬಾರದು. ಫಲದಲ್ಲಿ ಆಸಕ್ತಿಯೂ ಇರಬಾರದು. ಆತ್ಮಸ್ವರೂಪವನ್ನರಿತು, ಭಗವಂತನ ಮುಖೋಲ್ಲಾಸವಾಗಲೆಂದು ತಮ್ಮ ತಮ್ಮ ಭಾಗದ ಕೆಲಸಮಾಡಿದರೇನೇ ಚಿತ್ತಶುದ್ಧಿಯು ಉಂಟಾಗುವುದು. ಈ ಚಿತ್ತಶುದ್ಧಿಯು ಭಕ್ತಿಗೆ ಉಪಕಾರಕವಾಗುತ್ತದೆ.

ಇದೊಂದು ಮಾರ್ಗ. ಈ ಭಕ್ತಿಸಾಧನವಾದ ಕರ್ಮಾನುಷ್ಠಾನವನ್ನು, ದೊರೆಗಳು ಇಲ್ಲಿ ಹೇಳುವುದಿಲ್ಲ.

ಈ ಬಿನ್ನಪದಲ್ಲಿ ಸಾರವಾಗಿ ಹೇಳಿರುವುದೇನೆಂದರೆ ವಿಹಿತಕರ್ಮಗಳನ್ನು ಮಾಡುವುದರಿಂದಲೇ ಮೋಕ್ಷವು ಲಭಿಸುವುದಿಲ್ಲ. ಗೀತೆ ಮುಂತಾದ ಶಾಸ್ತ್ರಗಳಲ್ಲಿ ಕರ್ಮಮಾರ್ಗವನ್ನು ಮೋಕ್ಷಸಾಧನವಾಗಿ ಹೇಳಿದೆಯಲ್ಲಾ ಎಂದು ಕೇಳಬಹುದು. ಕಾಮ್ಯಕರ್ಮಗಳನ್ನೂ ನಿಷಿದ್ಧಕರ್ಮಗಳನ್ನೂ ಬಿಟ್ಟು ವಿಹಿತವಾದ ನಿತ್ಯನೈಮಿತ್ತಿಕ ಕರ್ಮಗಳನ್ನು ಫಲಾಸಕ್ತಿಯಿಲ್ಲದೆ ಮಾಡುವುದನ್ನು ತಾನೆ ಸಾಧಾರಣವಾಗಿ ಕರ್ಮಯೋಗವೆಂದು ತಿಳಿಯುತ್ತಾರೆ. ಈ ರೀತಿಯಾಗಿ ಮಾಡುವ ಕರ್ಮಯೋಗವನ್ನು ಭಕ್ತಿಯೋಗದ ಅಂಗವೆಂದೇ ಭಾವಿಸಬೇಕು. ಇದು ಸಾಕ್ಷಾತ್ತಾಗಿ ಮೋಕ್ಷವನ್ನು ಕೊಡುವುದಿಲ್ಲ. ಜ್ಞಾನವನ್ನುಂಟುಮಾಡಿ ತದನಂತರ ಭಕ್ತಿಯನ್ನು ಹುಟ್ಟಿಸಿ, ಇದರಿಂದ ಭಗವತ್ಪ್ರೀತಿಯನ್ನು ಸಂಪಾದಿಸಿ ಮೋಕ್ಷವನ್ನು ಪಡೆಯಬಹುದು ಭಗವಂತನನ್ನು ಉಪೇಯವಾಗಿಯೂ, ಉಪಾಯವಾಗಿಯೂ ಭಾವಿಸಿರುವ ಪ್ರಪನ್ನನಿಗೆ ವಿಹಿತಕರ್ಮಗಳೆಲ್ಲವೂ ಕೈಂಕರ್ಯರೂಪವಾಗಿಯೇ ತೋರುವುದು. ಅವನಿಗೂ ಈ ಕರ್ಮಗಳು ಮೋಕ್ಷಸಾಧಕವಾಗುವುದು ಆಗುವದಿಲ್ಲ. ಭಕ್ತನಿಗಂತೆ ಅವುಗಳು ಭಕ್ತಿಯ ಅಂಗಕೋಟಿಗೆ ಸೇರುವುದೂ ಇಲ್ಲ.

ಭಗವದ್ವಿಷಯದಲ್ಲಿ ಪ್ರಪನ್ನನು ಆಚರಿಸುವ ಕೈಂಕರ್ಯವನ್ನು ಸ್ವರೂಪದಾಸ್ಯವೆಂದೂ ಗುಣಕೃತದಾಸ್ಯವೆಂದೂ ಎರಡು ಬಗೆಯಾಗಿ ಹೇಳಿದೆ. ಭಗವಂತನ ಗುಣಗಳನ್ನು ಗಮನಿಸದೆ, ಅವನ ಸ್ವರೂಪವನ್ನು ಅರಿತು, ಅವನಿಗೆ ಕೈಂಕರ್ಯಮಾಡುವುದೇ ತನ್ನ ಸ್ವರೂಪಕ್ಕೆ ತಕ್ಕುದು ಎಂದು ಮಾಡುವ ಸೇವೆಯು ಸ್ವರೂಪದಾಸ್ಯ. "ಗುಣಕೃತದಾಸ್ಯ" ವೆಂಬುದು ದೇವರ ಗುಣವನ್ನು ಕಂಡು ಮೆಚ್ಚಿ ಅದಕ್ಕಾಗಿ ಸೇವೆನಡೆಸುವುದು. ಇಲ್ಲಿ ಚಿಕ್ಕದೇವರಾಜ ಒಡೆಯರು ಹೇಳುವುದು ಈ ಗುಣಕೃತದಾಸ್ಯವನ್ನೇ. ಅಂಥಾ ದಾಸ್ಯವು ಬೇಕೆಂಬುದೇ ಅವರ ಆಸೆ–ಪ್ರಾರ್ಥನೆ. ಈ ಸ್ವರೂಪದಾಸ್ಯದ ಸಾರವನ್ನು ರಾಮಾಯಣದ ಒಂದು ಸಂದರ್ಭದಲ್ಲಿ ನೋಡಬ

ಸುದು. ವನವಾಸಕಾಲದಲ್ಲಿ ಶ್ರೀರಾಮನು ಅತ್ರಿಮಹರ್ಷಿಯ ಆಶ್ರಮಕ್ಕೆ ಹೋದಾಗ ಅನಸೂಯೆಯು ಸೀತೆಗೆ ಕೆಲವು ಹಿತೋಪದೇಶಮಾಡುತ್ತಾಳೆ. ಪಾತಿವ್ರತ್ಯದ ವಿಚಾರವಾಗಿ ಆಕೆಗೆ ಅನಸೂಯೆ ತಿಳಿಸುವುದರಲ್ಲಿ ಒಂದು ಅಂತರಾರ್ಥ-ಸ್ವಾಪದೇಶವು ಅಡಗಿದೆ. ಪರಮಾತ್ಮನ ಹತ್ತಿರ ಜೀವಾತ್ಮನು ಹೇಗಿರಬೇಕೆಂಬುದೇ ಅದು. "ಅಮ್ಮಾ ಸೀತೆ, ವನವಾಸವು ಕಷ್ಟ, ಆದರೂ ರಾಮನ ಗುಣಗಳು ನಿನ್ನನ್ನು ಇಲ್ಲಿಗೆಲ್ಲಾ ಕರೆತಂದಿವೆ. ಇಂಥ ಗುಣಶಾಲಿಯಾದ ಗಂಡನು ಎಲ್ಲಿದ್ದರೆ ಅಲ್ಲಿರುವುದೇ ಹೆಂಡತಿಗೆ ಸುಖ. ಸತಿಗೆ ಪತಿಯೇ ಪರದೈವ, ಶ್ರೀರಾಮನನ್ನು ಚೆನ್ನಾಗಿ ಅನುಸರಿಸು." ಈ ಉಪದೇಶಕ್ಕೆ ಸೀತೆಯು ಕೊಡುವ ಉತ್ತರದಲ್ಲಿ "ಸ್ವರೂಪದಾಸ್ಯ" ಸ್ಫುಟವಾಗಿ, ಒಡೆದು ಕಾಣುತ್ತದೆ. "ರಾಮನು ಒಂದು ವೇಳೆ ವೃತ್ತವರ್ಜಿತನಾಗಿದ್ದಿದ್ದರೂ ವಿರೂಪನಾಗಿದ್ದಿದ್ದರೂ ನಾನು ಅವನನ್ನು ಹಿಂಬಾಲಿಸುತ್ತಿದ್ದೆ, ತಾಯಿ." ಈ ರೀತಿಯಲ್ಲಿ ಸೀತೆಯು ರಾಮನಿಗೆ ಸೇವೆನಡೆಸುವುದು ರಾಮನ ಗುಣದಿಂದ ಬಂದುದಲ್ಲ. ಒಂದುವೇಳೆ ಗುಣಗಳನ್ನೂ ರಾಮನನ್ನೂ ಬೇರ್ಪಡಿಸಲಾಗುವುದಾದರೆ ಆಗ ತನ್ನ ಭಾವವನ್ನು ತಿಳಿಸಬಹುದಾಗಿತ್ತೆಂದು ಸೀತೆಯು ಅಭಿಪ್ರಾಯಪಡುತ್ತಾಳೆ. ಆದರೆ ರಾಮನ ಗುಣವು ಅವನಿಂದ ಪಿರಿಯಲಾಗದುದು.

ಆಳ್ವಾರ್‌ಗಳೂ ಈ ಸ್ವರೂಪದಾಸ್ಯಕ್ಕೆ ಸೇರುವ ಸೇವೆಯನ್ನು ಹಾರೈಸಿದ್ದಾರೆ. "ಕುದಿರಿಯಾಯ್ ಮಡಲೂರುದುಮ್" ಎನ್ನುವ ಸ್ವಸ್ವಾತಂತ್ರ್ಯಭಾವನೆಯಿಂದ ದೇವರನ್ನು ಹೊಂದಬೇಕೆಂದು ಅವರು ಮುಂದಡಿಯಿಟ್ಟಾಗಲೂ ಈ ಸ್ವರೂಪದಾಸ್ಯವು ಅವರ ಎದೆಯಲ್ಲಿ ಊರಿರುತ್ತದೆ. ನಮ್ಮಾಳ್ವಾರ್ರವರು ನಾಯಕಿಯ ದೆಸೆಯನ್ನು ಹೊಂದಿ ವಿರಹವನ್ನು ಅನುಭವಿಸುತ್ತಿರುವಾಗ ಒಂದು ಸಂದರ್ಭದಲ್ಲಿ ಇದನ್ನುವಿಶದವಾಗಿ ನೋಡಬಹುದು. ಭಗವಂತನು ಇನ್ನೂ ನಾಯಕಿಯನ್ನು ಸಂತೈಸಲು ಬಂದಿಲ್ಲ; ಆಗ ಸಖಿಗೆ ನಿರೀಕ್ಷಿಸಿ, ನಿರೀಕ್ಷಿಸಿ ಸಾಕಾಗುತ್ತದೆ. ದೇವರಿಗೆ ದಯೆಬರಲಿಲ್ಲ. ನಾಯಕಿಯ ಶ್ರಮಪರಿಹಾರಕ್ಕಾಗಿ ನಾಯಕನನ್ನು ಸಖಿಯಾದವಳು "ಕಡಿಯನ್" ಎಂದು ಬಯ್ಯುತ್ತಾಳೆ. ಅದಕ್ಕೆ ಆಳ್ವಾರ್ ಆದ ನಾಯಕಿಯು ಹೇಳುತ್ತಾಳೆ. "ನನ್ನ ನಾಯಕನ ದೋಷ ನಿನಗೇನು

ಗೊತ್ತು? ಅವನಷ್ಟನ್ನೂ ನೀನು ಹೇಳಲಾರೆ. ಅವನೊಡನೆ ನನಗಿರುವಷ್ಟು ಪರಿಚಯವೂ ನಿನಗಿಲ್ಲ. ನೀನೆಲ್ಲೋ ಒಂದು ದೋಷವನ್ನುಮಾತ್ರ ಆತ ನಲ್ಲಿ ಹೇಳುತ್ತಿದ್ದೀಯೆ. ನಾನು ಅವನ ದೋಷಗಳಲ್ಲಿ ಪಳಗಿದವಳು. ಅವ ನಲ್ಲಿ ಬೇಕಾದ ದೋಷಗಳಿರಲಿ, ನನ್ನ ಮನಸ್ಸು ಅವನನ್ನೇ ಚಿಂತಿಸುತ್ತಿದೆ, ಬಿಡಲೊಲ್ಲದು. ದೇವರಲ್ಲಿ ತಪ್ಪಿದ್ದರೂ ಅವನನ್ನೇ ಹಿಡಿದು ಕಾರ್ಯವಾಗ ಬೇಕೆಂದಾಗ ದೇವರು ಮೇಲೆ ಬೀಳುವನು. ಅವನು ಬಲಿಚಕ್ರವರ್ತಿಗೆ ಪುಟ್ಟಕಾಲುತೋರಿ, ದೊಡ್ಡ ವಾದದಿಂದ ಲೋಕವನ್ನು ಅಳೆದು ವಂಚನೆ ಮಾಡಿದವನಾದರೂ "ನನ್ನೆದೆ ಅವನನ್ನುಬಿಟ್ಟು ಬೇರೊಂದಕ್ಕೆ ಸ್ಥಳಕೊಡ ದಿದೆ." ಜೀವಾತ್ಮನಿಗೆ ಈ ನಿಷ್ಠೆಯು ಬೇಕು. ತನ್ನ ಯಜಮಾನನು ದೋಷಿಯಾಗಿದ್ದರೂ ಈ ಸ್ವರೂಪದಾಸ್ಯವಿರಬೇಕು.

ಗುಣಕೃತದಾಸ್ಯಕ್ಕೆ ಲಕ್ಷ್ಮಣನು ಒಂದು ಶ್ರೇಷ್ಠ ಉದಾಹರಣೆ. ಋಷ್ಯಮೂಕಪರ್ವತದ ಬಳಿ ಬಂದ ರಾಮಲಕ್ಷ್ಮಣರು ಯಾರೆಂದು ತಿಳಿದು ಕೊಂಡು ಬರುವಂತೆ ಸುಗ್ರೀವನು ಆಂಜನೇಯನನ್ನು ಕಳುಹಿಸಿದಾಗ ನೀನಾರೆಂದು ಲಕ್ಷ್ಮಣನನ್ನು ಆಂಜನೇಯನು ಕೇಳಲು "ಅಹಮಸ್ಯಾವ ರೋಭ್ರಾತಾ ಗುಣೈರ್ದಾಸ್ಯಮುಪಾಗತಃ" ನಾನು ಶ್ರೀರಾಮನ ತಮ್ಮ, ಅವನ ಗುಣಗಳಿಗೆ ಸೋತು ದಾಸ್ಯಮಾಡುತ್ತಿದ್ದೇನೆ.

ಈ ಶ್ಲೋಕಕ್ಕೆ ನಂಬಿಳ್ಳೈಗಳು ವ್ಯಾಖ್ಯಾನಮಾಡುವಾಗ ಅಣ್ಣನ ಹತ್ತಿರ ದಾಯಭಾಗವನ್ನು ಕೇಳಬೇಕಾದ ತಮ್ಮನಿಗೆ ಅವನ ಬಳಿ ದಾಸ್ಯ ಭಾವವು ಹುಟ್ಟುವುದು ಆತ್ಯಾಶ್ಚರ್ಯವೆಂದು ಹೇಳಿ ಈ ವಿರುದ್ಧವಾಗಿ ತೋ ರಬಹುದಾದ ಧರ್ಮಗಳು ಲಕ್ಷ್ಮಣನಲ್ಲಿ ಸೇರಿದ್ದುದಕ್ಕೆ ರಸವಾದ ಸಮಾ ಧಾನವನ್ನು ಅಪ್ಪಣೆ ಕೊಡಿಸಿದ್ದಾರೆ. ಶ್ರೀ ರಾಮನ ದೃಷ್ಟಿಯಲ್ಲಿ ತಾನು ತಮ್ಮನೆಂದು ಇದ್ದರೂ, ತಾನು ಅವನಿಗೆ ದಾಸನೇ ಎಂದು ಲಕ್ಷ್ಮಣನ ಭಾವವನ್ನು ತೋರಿಸಿದ್ದಾರೆ.

ನಮ್ಮ ಸಿದ್ಧಾಂತದಲ್ಲಿ ಸ್ವರೂಪದಾಸ್ಯವು ಪುರುಷಾರ್ಥವಾದರೂ ಭಗವಂತನ ಸ್ವರೂಪಕ್ಕೆ ಅಂಟಿಕೊಂಡೇ ಗುಣಗಳು ಇರುವುದರಿಂದ ಸ್ವರೂಪವನ್ನು ಕಂಡಾಗ ಗುಣಗಳೂ ಭೋಗ್ಯವಾಗಿ ಕಾಣುತ್ತವೆ. ಈ

ಗುಣಾನುಭವದಿಂದ ಉಂಟಾಗುವ ' ಗುಣದಾಸ್ಯ'ವು ಭಕ್ತರಿಗುಂಟು. ಸೀತೆ ಮತ್ತು ಆಳ್ವಾರ್‌ಗಳಂತೆ ಲಕ್ಷ್ಮಣನಿಗೆ "ಸ್ವರೂಪಕೃತದಾಸ್ಯ" ವಿಲ್ಲ ವೆಂದು ಇದರಿಂದ ಅರ್ಥಮಾಡಲಾಗದು. ಗುಣಗಳ ಕಡೆ ವಿಶೇಷಗಮನ ಹೋದಾಗ ಗುಣದಾಸ್ಯವು ಸಹಜ. ನಾರಾಯಣನ ಗುಣಪೂರ್ತಿ ಕಂಡು ಚಿಕ್ಕದೇವರಾಜ ಅರಸರೂ ನನಗೆ ನಿನ್ನಲ್ಲಿ " ಗುಣದಾಸ್ಯವು ಉಂಟಾಗ ಬೇಕು " ಎಂದು ಪ್ರಾರ್ಥಿಸುತ್ತಾರೆ. ಇದರಿಂದ ರಾಜರಿಗೂ ಸ್ವರೂಪ ದಾಸ್ಯವು ಬೇಡವೆನ್ನುವ ಅರ್ಥವಿಲ್ಲ.

ಹೀಗೆ ಈ ಇಪ್ಪತ್ತಮೂರನೆಯ ಬಿನ್ನಪದಲ್ಲಿ ಫಲದ ಆಸೆ ಬಿಡುವದ ರಲ್ಲೇ ಸುಖವು ಅಡಗಿರುವುದರಿಂದ ನಿಷಿದ್ಧಕರ್ಮಗಳಂತೆಯೇ ಆತ್ಮಕ್ಷೇಮ ವಿರೋಧಿಗಳಾದ ಕಾಮ್ಯಕರ್ಮಗಳನ್ನು ಬಿಡಬೇಕೆಂದೂ, ಭಕ್ತಿಯು ಹುಟ್ಟಲು ಮನಶ್ಶುದ್ಧಿ, ಮನಶ್ಶುದ್ಧಿಯು ಹುಟ್ಟಲು ಕರ್ಮಯೋಗ, ಈ ಅಂಗಾಂಗಿಭಾವದಲ್ಲಿ ಮಾತ್ರವಲ್ಲ, ಪ್ರಪನ್ನನ ಈ ಕರ್ಮಯೋಗವೆಂ ಬುದು " ಕೈಂಕರ್ಯ ಕೋಟಿಯಲ್ಲಿ " ಸೇರುವದೆಂದೂ ಹೇಳಿ, ಗುಣಕೃತ ದಾಸ್ಯವನ್ನು ನನಗೂ ಈಯಬೇಕೆಂದು ಪ್ರಾರ್ಥಿಸಿದಾರೆ.

## ಬಿನ್ನಪ ೨೪

ಇಪ್ಪತ್ತನಾಲ್ಕನೆಯ ಬಿನ್ನಹದಲ್ಲಿ, ಸಂಪ್ರದಾಯದಲ್ಲಿ ಪ್ರಸಿದ್ಧ ವಾದ " ಅನನ್ಯ ಪ್ರಯೋಜನ " ವನ್ನು ಹೇಳಿದೆ. ದೇವರೇನೋ ಕೇಳಿ ದ್ದನ್ನೆಲ್ಲಾ ಕೊಡುವವನೇ. ಐಶ್ವರ್ಯ, ಆರೋಗ್ಯ, ಪುತ್ರ ಪಶ್ವಾದಿ ಸಂಪ ತ್ತುಗಳನ್ನು ಕೇಳಿದವರಿಗೆ ಅವನು ಕೊಡುತ್ತಾನೆ. " ಇವೊಂದೂ ಬೇಡ, ನಿನ್ನ ಸೇವೆಯೊಂದನ್ನೇ ಕೊಡು " ಎಂದು ಮೊರೆ ಇಡುವವರಿಗೆ ಅಂಥ ಸೇವೆಯನ್ನೂ ಕೊಡುತ್ತಾನೆ. ಆದರೆ ಈಶ್ವರನಿಗೆ ಈ ಎರಡು ತರದ ಪುರುಷಾರ್ಥ ಕೊಡುವಾಗ ಮನಸ್ಸು ಬೇರೆಯಾಗಿರುತ್ತದೆ. " ಅಯ್ಯೊ? ನಾನು ನನ್ನನ್ನೇ ಕೊಡಬೇಕೆಂದಿದ್ದೆನಲ್ಲಾ ? ಇವರು ಯಾವುದನ್ನೋ

ಕೇಳಿಬಿಟ್ಟರಲ್ಲಾ" ಎಂದು ಅನಾದರದಿಂದ ಪ್ರಯೋಜನಾಂತರಗಳನ್ನು ದಯಪಾಲಿಸುತ್ತಾನೆ. ಆದರೆ ಪರಮಪುರುಷಾರ್ಥವಾದ ತನ್ನನ್ನೇ ತಾನು ಭಕ್ತನಿಗೆ ದಾನಮಾಡಿಕೊಳ್ಳುವಾಗ ಆತನ ಆದರಕ್ಕೆ ಮಿತಿಯೇ ಇರದು.

ದೇವಸ್ಥಾನಕ್ಕೆ ಬರುವವರೆಗೂ, ಏನೇನೋ ದೇವರಲ್ಲಿ ಕೇಳಬೇಕೆಂದಿರುತ್ತೇವೆ. ದಿವ್ಯವಾಗಿ ದೇವರ ದರ್ಶನಮಾಡಿ ಅವನ ರೂಪವನ್ನು ಅನುಭವಿಸಿ ಆನಂದಪರವಶರಾಗಿರುವಾಗ ತಾವು ಹಿಂದೆ ಅಪೇಕ್ಷಿಸಿದ್ದ ಐಶ್ವರ್ಯಾದಿ ಎಲ್ಲಾ ಕ್ಷುದ್ರ ಕೋರಿಕೆಗಳನ್ನು ಮರೆತು, ತಾವು ಜ್ಞಾನಹೊಂದಿ 'ದೇವರೇ ನಮಗಿರಲಿ' ಎನ್ನಬೇಕು. ದೇವರ ಸೇವೆಗೆ ಮುಂಚೆ ಐಶ್ವರ್ಯಾದಿ ಕಲ್ಪನೆಗಳಿರುತ್ತವೆ. ದೇವರ ಸಂದರ್ಶನವಾದಮೇಲೆ ಕ್ಷುದ್ರಗೀಳುಗಳು ತೊಲಗಿ ಅವನನ್ನೇ ಆಸೆಪಡುವಂತಾಗುತ್ತದೆ. ದಂಡಕಾರಣ್ಯವಾಸಿಗಳಾದ ಋಷಿಗಳು ಶ್ರೀರಾಮನ ಬಳಿ ಬರುವುದಕ್ಕೆ ಮುಂಚೆ ರಾಕ್ಷಸರಿಂದ ಉಂಟಾಗುತ್ತಿದ್ದ ತಮ್ಮ ಕಷ್ಟನಿಷ್ಠೂರಗಳನ್ನು ಹೇಳಿಕೊಳ್ಳಬೇಕೆಂದಿದ್ದವರು ರಾಮನನ್ನು ಕಂಡೊಡನೆಯೇ ಅವನಿಗೆ ಮಂಗಳವನ್ನು ಕೋರುತ್ತಾರೆ. "ಮಂಗಳಾನಿ ಪ್ರಯುಂಜಾನಾಃ" ಅವನ ವಿಗ್ರಹಸೌಂದರ್ಯವು ಅಂಥದು! ಹೀಗೆ ಸ್ವಾರ್ಥಕ್ಕಾಗಿ ಬಂದವರು ಪರಾರ್ಥಿಗಳಾಗುತ್ತಾರೆ.

ಆದರೆ ಭಗವಂತನ ಬಳಿ ಹೋದಮೇಲೂ ಕೂಡ ಸ್ವಾರ್ಥಪರರಾಗಿ ಅನೇಕರು ಇರುತ್ತಾರೆ. ಅವರಿಗೆ ತುಂಬ ಕಠಿಣ ಮನಸ್ಸೆಂದು ನಮ್ಮಾಳ್ವಾರ್ರವರು ಅವರನ್ನು ಪರಿಹಾಸ್ಯ ಮಾಡುತ್ತಾರೆ.

ಪಿಱವಿತ್ತುಯರಱ ಞಾನತ್ತುಳ್ ನಿಱು |
ತುಱವಿಚ್ಚುಡರ್ ವಿಳಕ್ಕನ್ನುತಲೈಪ್ಪೆಯ್ವಾರ್ |
ಅಱವನೈಯಾಳ್ಳಿಪ್ಪಡೈಯನ್ದಣನೈ |
ಮಱವಿಯೈ ಇಱಿ ಮನತ್ತುವೈಪ್ಪಾರೇ ||

ಈ ಪಾಶುರದಲ್ಲಿ ಕೈವಲ್ಯಾರ್ಥಿಗಳನ್ನು ನಿಂದಿಸುತ್ತಾರೆ. ಅವರು ಭಗವಂತನ್ನು ಧಾರ್ಮಿಕನೆಂದೂ, ಚಕ್ರಾಯುಧದಿಂದ ವಿರೋಧಿನಿರಸನ ಮಾಡುವನೆಂದೂ ಶುದ್ಧನೆಂದೂ ತಿಳಿದುಕೊಂಡಿರುತ್ತಾರೆ. ಈ ಗುಣ

ಗಳೆಲ್ಲಾ ಅವರಿಗೆ ತಾವುಗಳು ಕೋರುವ ಕ್ಷುದ್ರಪುರುಷಾರ್ಥವನ್ನು ಹೊಂದುವುದಕ್ಕೆ ಸಾಧನಗಳಾಗಿರುವಂತೆ ಮಾತ್ರ ಅವರಿಗೆ ತೋರುತ್ತದೆ. ಆದರೆ ಆಳ್ವಾರ್ರವರಿಗಾದರೂ ಅದೇ ಗುಣಗಳು ಭೋಗ್ಯತಮವಾಗಿರುತ್ತವೆ. "ಅಱವನ್ನೈ" ಎಂದು ಹೇಳುವಾಗ ತಮ್ಮ ಉಪಾಸನಕ್ಕೆ ಫಲವನ್ನು ಕೊಡುವ ಧರ್ಮವನ್ನು ಹೊಂದಿರುವವನು ಎಂದು ತಾನೇ ಕೈವಲ್ಯಾರ್ಥಿಗಳಿಗೆ ತೋರುತ್ತದೆ. ಆಳ್ವಾರ್ರವರಿಗಾದರೋ ಇಂಥ ಕಠಿಣ ಚಿತ್ತವನ್ನು ಹೊಂದಿರುವವರಿಗೂ ಕೂಡ, ಅವರು ಬೇಡುವ ಫಲಗಳನ್ನು ಕೊಡುವ ಉದಾರನಾದ ಧಾರ್ಮಿಕನೆಂದು ತೋರುತ್ತದೆ. ಭಗವಂತನ ಕೈಯಲ್ಲಿರುವ ಚಕ್ರಾಯುಧವು ತಮ್ಮ ಪುರುಷಾರ್ಥವು ನೆರವೇರದಂತೆ ತಡೆಯುವ ವಿರೋಧಿಗಳನ್ನು ನಿರಸನಮಾಡುವುದಕ್ಕೆ ಮಾತ್ರ ಇರುತ್ತದೆ ಎಂದು ಕೈವಲ್ಯಾರ್ಥಿಗಳು ಭಾವಿಸುತ್ತಾರೆ. ಆಳ್ವಾರ್ರವರಿಗಾದರೋ ಸುದರ್ಶನವು ಆಯುಧಮಾತ್ರವಾಗಿಯೂ ಅಲ್ಲ, ಆಭರಣವಾಗಿಯೂ ತೋರುತ್ತದೆ. ತಿರುಮಂಗೈಯಾಳ್ವಾರ್ರವರ ಅನುಭವವನ್ನೂ ಇಲ್ಲಿ ಸ್ಮರಿಸಬಹುದು.

> ಇನ್ನಾರ್ಎಱಿಯೇ್,
> ಅನ್ನೇ ಯೊಳಿಯೊಡುಂ,
> ಪೊನ್ನಾರ್ ಶಾರ್ಙ್ಗಮುಡೈಯವಡಿಗಳೈ
> ಇನ್ನಾರ್ಎಱಿಯೇನ್ ||

ಸುದರ್ಶನದೊಂದಿಗೂ ಶಾರ್ಙ್ಗದೊಡನೆಯೂ ಕೂಡಿ ಇದ್ದ ಭಗವಂತನನ್ನು ಕಂಡು, ಈ ದಿವ್ಯಾಯುಧಗಳಿಂದ ಭೂಷಿತನಾದ ಅವನ ಸೌಂದರ್ಯದಲ್ಲಿ ಮಗ್ನರಾಗಿ, ಅವನನ್ನು ಯಾರು ಎಂದೇ ತಿಳಿಯಲಾಗಲಿಲ್ಲ ಎಂದು ಹೇಳುತ್ತಾರೆ. ಈ ರೀತಿಯಾಗಿ ತನ್ನ ಸ್ವರೂಪವನ್ನೇ ಭಕ್ತರುಗಳು ಕೂಡ ಮರೆಯುವಂತೆ ಭಗವಂತನು ಮಾಡುವುದುಂಟು. ಆದರೆ ಏತಕ್ಕೋಸ್ಕರ ಅವನು ಅನ್ಯಪರರ ಸ್ವಾರ್ಥಕಾಂಕ್ಷೆಯನ್ನು ಮರೆಸುವುದಿಲ್ಲ? ಒಳ್ಳೆಯದನ್ನು ಮರೆಸುವವನು ಕೆಟ್ಟುದನ್ನು ಏಕೆ ಮರೆಸುವುದಿಲ್ಲವೆಂದು ನಮ್ಮಾಳ್ವಾರ್ರವರು ಆಶ್ಚರ್ಯಪಡುತ್ತಾರೆ.

ಈ ರೀತಿಯಾಗಿ ಭಗವಂತನು ತನ್ನನ್ನು ಹೊಂದಬೇಕೆನ್ನುವವರಿಗೆ ತನ್ನನ್ನೇ ಕೊಡುವುದಕ್ಕೆ ಕಾದಿರುವಾಗ ಅಂಥ ಅನುಗ್ರಹವನ್ನು ಅವನ ಬಳಿ ಪಡೆಯುವುದಕ್ಕೆ ಮುಂದೆ ಬರುವವರು ಬಹು ದುರ್ಲಭ. ಲೋಕ ದಲ್ಲಿರುವವರೆಲ್ಲರೂ ದೇಹ, ಆತ್ಮಾಭಿಮಾನಿಗಳಾಗಿಯೋ, ತಾವೇ ಸ್ವತಂ ತ್ರರೆಂದು ಮೋಹಬುದ್ಧಿಗಳಾಗಿರುವವರಾಗಿಯೋ ದೇವತಾಂತರ ಭಜನೆ ಮಾಡುವವರಾಗಿಯೋ, ಭಗವಂತನ ಸಮೀಪಕ್ಕೆ ಬಂದಾಗಲೂ ಕೂಡ ಅನ್ಯಪ್ರಯೋಜನಾಸಕ್ತರಾಗಿಯೋ ಇರುತ್ತಾರೆ.

ದೇಹಾತ್ಮಾಭಿಮಾನಿಗೂ, ತನ್ನನ್ನು ಸ್ವತಂತ್ರನೆಂದು ನೆನಸಿರುವ ವರಿಗೂ, ಮತ್ತು ಅನ್ಯಶೇಷನಿಗೂ, "ಪುನರಪಿಜನನಂ ಪುನರಪಿಮ ರಣಂ" ಉಂಟು. ಭಗವದ್ಭಕ್ತನಾಗಿದ್ದೂ ಪ್ರಯೋಜನಾಂತರದ ಹಂಬ ಲದವನಿಗೂ ಅದೇ ಗತಿ. ದೇಹಾತ್ಮಾಭಿಮಾನಿಗೆ ಈ ಶರೀರವೇ ಆತ್ಮ ವಾಗಿ ಇರುವುದರಿಂದಲೂ, ಅದಕ್ಕಿಂತ ಮೇಲ್ಪಟ್ಟ ಬೇರೊಂದೂ ಅವನ ಕಲ್ಪನೆಗೆ ಬಾರದಿರುವುದರಿಂದಲೂ ಆ ದೇಹದ ವಾಸನೆ, ರುಚಿ* ಇವುಗ ಳಿಗೆ ಅನುಗುಣವಾಗಿ ಮತ್ತೊಂದು ಶರೀರ. ಅಲ್ಲೂ ಈ ದೇಹಾತ್ಮಾಭಿ ಮಾನದಿಂದ ಮಗದೊಂದು ಶರೀರ. ಈ ರೀತಿ ಕರ್ಮಫಲವನ್ನು ಅನು ಭವಿಸಲು ದೇಹಾತ್ಮಾಭಿಮಾನಿಗೆ "ಶರೀರಪರಂಪರೆ ಅನಿವಾರ್ಯವಾಗು ತ್ತದೆ."

ಶರೀರವೇ ಆತ್ಮನೆಂಬ ಭ್ರಮೆ ಇಲ್ಲದಿದ್ದರೂ, ದೇವತಾಂತರಕ್ಕೆ ಈ ಜೀವಾತ್ಮನು ಆಳು ಎಂಬ ಭಾವನೆ ಇದ್ದರೂ, ಜನ್ಮಾಂತರವು ತಪ್ಪದು.

---

* ತಾನು ನಡೆಯಬೇಕೆಂಬುದಕ್ಕೆ ನೆನಪಿಲ್ಲದೆ ಮರೆತಿರುವಾಗಲೂ; ತಾನು ಅರಿಯದಂತೆ ಮುನ್ನಡೆದ ಕರ್ಮದಲ್ಲಿ ಪ್ರವೃತ್ತಿ ಹುಟ್ಟುವುದು. ಇದೇ ವಾಸನೆ ಎನಿಸುವದು. ಮತ್ತೆ ತಾನು ನಡೆದ ಕರ್ಮದಲ್ಲಿ ಮತ್ತೆ ಮತ್ತೆ ನಾನು ಮಾಡುವೆನೆಂಬ ಪ್ರೀತಿಯು ಹುಟ್ಟುತ್ತದೆ. ಇದೇ ರುಚಿ. "ವಾಸನೆಯೂ ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಅಂಟಿಕೊಂಡು ಬರುತ್ತದೆ."

ಈ ವಿಷಯವನ್ನು ಉಪನಿಷತ್ತುಗಳ ಸಾರವಾದ ಗೀತೆಯಲ್ಲೇ ಹೇಳಿದೆ. "ಆ ಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ | ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನವಿದ್ಯತೆ" || ಬ್ರಹ್ಮಾದಿ ದೇವತಾಂತರಗಳನ್ನು ಭಜಿಸುವವನು ಹೋಗುವ ಲೋಕವು ಬ್ರಹ್ಮಾದಿಗಳ ಪಟ್ಟದಂತೆಯೇ ಅಸ್ಥಿರ. ದೇವರು ಹೇಗೆ ನಿತ್ಯನೋ ಅವನ ಸ್ಥಾನವೂ ಪರವೈಕಾಂತಿಗೆ ನಿತ್ಯ. ಹೀಗೆ ದೇಹಾತ್ಮಾಭಿಮಾನಿಗೂ, ದೇವತಾಂತರಭಕ್ತನಿಗೂ, ಶರೀರಪರಂಪರೆಯು ಬರುತ್ತಲೇ ಇರುತ್ತದೆ. ಅಂದಮೇಲೆ ತನ್ನನ್ನೇ ದೊಡ್ಡವನೆಂದು ಬಗೆದಿರುವ ಅವಿನೀತನಿಗೆ ಇನ್ನೆಂಥ ಗತಿ ಇರಬೇಕು? ಪರಮೇಶ್ವರನ ಕೃಪಾಫಲವಾಗಿ ಈ ಮನುಷ್ಯಜನ್ಮವು ಬರುತ್ತದೆ. ಆದರೆ ಮಾನವನಿಗೆ ಅದು ಗೊತ್ತಿರುವುದಿಲ್ಲ. ಬಿಸಲಿನಲ್ಲಿದ್ದಿದ್ದರೆ ನೆರಳಿನ ರುಚಿ ಗೊತ್ತಾಗುತ್ತಿತ್ತು. ಮನುಷ್ಯದೇಹವು ವಿವೇಕವನ್ನು ಪಡೆಯಲು ಒಂದು ಹೆದ್ದಾರಿ. ಈ ಶ್ರೇಷ್ಠತೆಯನ್ನು ಮಾನವನು ತನ್ನ ಇಚ್ಛೆಯಿಂದ ಉಳಿಸಿಕೊಂಡು ಶ್ರೇಷ್ಠದೈವವನ್ನೇ ನಂಬಿ ಶ್ರೇಷ್ಠಪುರುಷಾರ್ಥವನ್ನೇ ಹೊಂದಬೇಕು.

ಇದರಿಂದ ಸಂಸಾರಚಕ್ರದಲ್ಲಿ ಜೀವಾತ್ಮರುಗಳು ಸುತ್ತಿಕೊಂಡು ಇರುವುದಕ್ಕೆ ಕಾರಣ ಭಗವಂತನನ್ನು ಪಡೆಯುವುದಕ್ಕೆ ಆಸೆಪಡದೇ ಇರುವುದೇ. ಭಗವಂತನ ಕೃಪೆಯು ಅವರ ಮೇಲೆ ಇಲ್ಲದೇ ಇಲ್ಲ. ನಿತ್ಯರಿಗೂ ಮುಕ್ತರಿಗೂ ಭಗವಂತನು ಹೇಗೆ ಅನುಗ್ರಹ ಮಾಡುತ್ತಾನೆಯೋ ಹಾಗೆಯೇ ಬದ್ಧಜೀವರಿಗೂ ಅನುಗ್ರಹಮಾಡುತ್ತಲೇ ಇರುತ್ತಾನೆ ಎಂದು ಚಿಕ್ಕದೇವರಾಜರು ಈ ಬಿನ್ನಹದಲ್ಲಿ ಹೇಳಿದ್ದಾರೆ. ಬದ್ಧಜೀವರು ಎರಡು ಬಗೆಯಾಗಿ ಕಾಣುತ್ತಾರೆ—ಮುಮುಕ್ಷುಗಳು, ಇತರರು. ಮುಮುಕ್ಷುಗಳಿಗೆ ಅಜ್ಞಾನ, ಕರ್ಮಬಂಧ ಇವುಗಳನ್ನು ನಿವೃತ್ತಿಮಾಡಿ, ಮೋಕ್ಷವನ್ನು ಕೊಟ್ಟು ಅನುಗ್ರಹ ಮಾಡುತ್ತಾನೆ. ಇತರರಿಗೆ ಅನ್ನಪಾನಾದಿ ದಾನಗಳಿಂದಲೂ ರೋಗಗಳು, ಶತ್ರುಗಳು ಇವರುಗಳ ಪೀಡೆಯನ್ನು ನಿವೃತ್ತಿ ಮಾಡುವುದರಿಂದಲೂ ಕೃಪೆಮಾಡುತ್ತಾನೆ. ನಿತ್ಯರಿಗೂ ಮುಕ್ತರಿಗೂ ನಿರಂತರವಾಗಿ ಭಗವದನುಗ್ರಹವು ದೊರಕಿಕೊಂಡು ಇರುವುದರಿಂದಲೇ ಅವರುಗಳಿಗೆ ಭಗವತ್ಕೃಪೆಯು ಇರುವುದು ಗೋಚರವಾಗುತ್ತದೆ.

ಆದರೆ ಅದನ್ನು ಇನ್ನೂ ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಬೇಕು. ಅವರಿಗೆ ಆನಂದಾನುಭವವು ಏರ್ಪಡುವಾಗ ಆ ಆನಂದವು ನನಗೆ ನನಗೆ ಎಂಬ ಭಾವನೆಯು ಹುಟ್ಟದಂತೆ ಭಗವಂತನು ತಡೆದು ಅವರಿಗೆ ಹಿರಿದಾದ ಕೃಪೆಯನ್ನು ಮಾಡುತ್ತಾನೆ. ಅವರುಗಳ ಭೋಗವು ಭಗವಂತನ ಭೋಗಕ್ಕೆ ಅಂಗವಾಗಿರುವಂತೆ ಭಗವತ್ಕೃಪೆಯು ಅವರುಗಳ ವಿಷಯದಲ್ಲಿ ಪ್ರವರ್ತಿಸುತ್ತದೆ. ಇದನ್ನು ತಾನೇ ಆಳ್ವಾರ್‌ರವರು "ಮಱಂದೇ ನಙ್ಗಳ್ ಭೋಗಮಹಿಳ್ ಚಿಕ್ಕೆ" ಎಂದು ಹೇಳಿದ್ದಾರೆ. ಅದು ನಿತ್ಯರೂ ಮುಕ್ತರೂ ಅನುಭವಿಸುವ ಆನಂದದಲ್ಲಿ ಬರಬಹುದಾದ ಮಮತಾಬುದ್ಧಿಗೆ ಭಗವತ್ಕೃಪೆ ಔಷಧವಾಗಿರುವುದು. ಹೀಗೆ ಭಗವಂತನು ತನ್ನ ಕೃಪೆಯನ್ನು ತೋರಿಸುವ ವಿಷಯದಲ್ಲಿ ಎಲ್ಲಾ ಬಗೆಯ ಚೇತನರುಗಳಲ್ಲಿ ಸರ್ವಸಮನು ಎಂದು ರಾಜರು ಸೊಗಸಾಗಿ ಪ್ರತಿಪಾದಿಸಿರುವರು.

## ಬಿನ್ನಪ ೨೫

ಇಪ್ಪತ್ತೈದನೆಯ ಬಿನ್ನಹದಲ್ಲಿ ಈಗಿನ ಭಾಷೆಗಳ ಪರಿಚಯವುಳ್ಳವರು ಕೇಳಬಹುದಾದ ಶಂಕೆಗಳಿಗೆ ಸಮಾಧಾನವಿದೆ. ದೇವರೆಂದರೇನು ? ದೇವರನ್ನೇಕೆ ಒಪ್ಪಬೇಕು ? ಈ ಪಕ್ಷವು ಇಂದು ಜಗತ್ತಿನಲ್ಲೇ ಪ್ರಬಲವಾಗಿದೆ. ನಂಬಿಳ್ಳೈ ಎಂಬ ಆಚಾರ್ಯರು ಹೇಳುತ್ತಾರೆ. "ಯಾರೋ ಕೆಲವರು ಗುಂಪು ಕಟ್ಟಿಕೊಂಡು ದೇವರು ದೇವರು ಎನ್ನುವದಷ್ಟೆ. ದೇವರಿಲ್ಲ, ಪರಲೋಕವಿಲ್ಲ ಎಂಬ ವಾದವೇ ದೊಡ್ಡದು. ಭಗವಾನ್ ಎಂದು ಹೇಳಿದಾಗ ಆ ದೇವರ ವಿಷಯದಲ್ಲಿ ದ್ವೇಷಪಡದಿದ್ದರೆ ಸಾಕು. ಅದೊಂದು ಮಹಾಸುಕೃತ." ನಾಸ್ತಿಕರ ಪೂರ್ವಪಕ್ಷಗಳು ಎಂಥವರನ್ನೂ ಆ ಕಡೆಗೇ ವಾಲಿಸಿಬಿಡುತ್ತವೆ. "ಆಯಾಯ ಕಾಲ ಬಂದರೆ ಆಯಾಯ ಕೆಲಸವಾಗುತ್ತದೆ. ದೇವರು ಯಾಕೆ ? ಸೂರ್ಯ, ಚಂದ್ರ ಇವರಿಂದಲ್ಲೇ ಪ್ರಪಂಚದಲ್ಲಿ ಅನೇಕ ಫಲಗಳು ಕೈಗೂಡುತ್ತಿರು

ವುದು ಕಣ್ಣಿಗೆ ಕಾಣಬರುತ್ತಿರುವಾಗ ದೇವರೆಂದರೆ ಯಾರು ? ಆಯಾಯ ವಸ್ತುಸ್ವಭಾವಗಳಿಂದಲೇ ಆಯಾಯ ಫಲಗಳು ದೊರಕುತ್ತವೆ " ಎನ್ನುವುದೇ ಅವರ ವಾದ. ಆದರೆ ಚಿಕ್ಕದೇವರಾಜ ಒಡೆಯರು ಈ ವಾದಗಳಿಗೆಲ್ಲಾ ಮರುಳಾಗದೆ ಈ ದೇವರೊಬ್ಬನೇ ಸಕಲ ಫಲಪ್ರದನೆಂದು ಹೇಳಿದ್ದಾರೆ.

ಉದಯನಾಚಾರ್ಯರೆಂಬುವರು ಆಸ್ತಿಕಮತಕ್ಕೆ ಬಲು ಉಪಕಾರ ಮಾಡಿದ ಪ್ರಾಚೀನ ನೈಯಾಯಿಕರಲ್ಲೊಬ್ಬ ಮಹನೀಯರು. ನ್ಯಾಯಕುಸುಮಾಂಜಲಿ ಎಂಬುದು ಅವರು ಬರೆದಿರುವ ಗ್ರಂಥ. ಪಂಡಿತನಿಂದಲೇ ಅದರ ಪೂರ್ಣ ರಸಾನುಭವವು ಆಗುತ್ತದೆ.

" ಕಣ್ಣಿಗೆ ಯಾವದೊಂದು ತಿಳಿದುಬರುವುದೋ ಅದೊಂದೇ ಪ್ರಮಾಣ "ವೆಂಬುದು ಚಾರ್ವಾಕ ಸಿದ್ಧಾಂತ. ಇದು ಬಲು ಜನರನ್ನು ಕದಲಿಸಿಬಿಡುತ್ತದೆ. ಎಂಥವರೂ ಈ ವಾದಕ್ಕೆ ಪರಿಹಾರವನ್ನು ಹೇಳಲು ಸಾಹಸಪಡಬೇಕಾಗುತ್ತದೆ. ಆದರೆ ಉದಯನಾಚಾರ್ಯರು ನಾಸ್ತಿಕನನ್ನು ಕುರಿತು, "ಕಣ್ಣು ಎಂದು ಹೇಳುವಿಯಲ್ಲಾ ಆ ಇಂದ್ರಿಯವು ಅದೇ ಕಣ್ಣಿಗೆ ಗೋಚರವಾಗುವುದೆ ? ನಿನ್ನ ಕಣ್ಣು ನಿನಗೆ ಕಾಣುವುದಿಲ್ಲ ಎನ್ನುವದೇ ಅಲ್ಲದೆ ಇತರರ ಕಣ್ಣನ್ನು ನೀನು ನೋಡುತ್ತೀಯೆ ಎಂದು ನೀನು ತಿಳಿದುಕೊಂಡಿರುವುದು ಕೂಡ ಬರಿ ಭ್ರಮೆ. ಏಕೆಂದರೆ ಕಣ್ಣೆಂಬ ಇಂದ್ರಿಯವು ಅತಿ ಸೂಕ್ಷ್ಮವಾಗಿರುವುದರಿಂದ ದೃಷ್ಟಿಗೆ ಗೋಚರವಾಗುವುದಿಲ್ಲ. ಅದನ್ನು ಉಪಯೋಗಿಸತಕ್ಕ ಸಾಧನಗಳಾದ ಗೋಳಗಳನ್ನು ಮಾತ್ರ ನಾವು ನೋಡುತ್ತೇವೆ. ಹೀಗೆ ದೃಷ್ಟಿಗೆ ಅಗೋಚರವಾದ ಚಕ್ಷುರಿಂದ್ರಿಯವನ್ನು ನೀನು ಹೇಗೆ ಒಪ್ಪಿಕೊಳ್ಳುತ್ತೀಯೆ ? ಹಾಗಾದರೆ ನಿನ್ನ ಕಣ್ಣು ನಿನಗೆ ಕಾಣದುದರಿಂದ ನಿನಗೆ ಕಣ್ಣೇ ಇಲ್ಲವೆನ್ನುವಿಯಾ ? ಇಂದ್ರಿಯಗಳನ್ನು ಊಹಿಸಿಕೊಂಡೇ ತಿಳಿದುಕೊಳ್ಳಬೇಕು. ಪ್ರತ್ಯಕ್ಷವನ್ನು ಬಿಟ್ಟು ಅನುಮಾನದಿಂದಲೇ ಇಂದ್ರಿಯವು ಉಂಟೆಂಬುದನ್ನು ಸಾಧಿಸಬೇಕಾಗುತ್ತದೆ." ಇಂಥ ವೇದಾಂತದ ಅನೇಕ ಸಾರವಾದ ತತ್ವಗಳನ್ನು ಕುಶಲಮತಿಗಳಾದ ಉದಯನಾಚಾರ್ಯರು ಹೇಳಿ ಚಾರ್ವಾಕರ ಬಾಯಿ ಮುಚ್ಚಿಸಿದಾರೆ.

ದೇವತಾಂತರಗಳಿಗೂ ಅಂತರ್ಯಾಮಿಯಾಗಿದ್ದು ದೇವರೇ ಫಲ ಪ್ರದಾನ ಮಾಡುವುದನ್ನು ಗೀತಾಚಾರ್ಯರು ಹೇಳಿದ್ದಾರೆ.

ಯೋಯೋ ಯಾಂಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।
ತಸ್ಯತಸ್ಯಾಚಲಾಂಶ್ರದ್ಧಾಂ ತಾಮೇವ ವಿದಧಾಮ್ಯಹಂ ||

ಸಕಲ ದೇವತೆಗಳೂ ಭಗವಂತನಿಗೆ ಶರೀರಭೂತರಾಗಿರುವರು. ಭಗವಂತನು ಅವರಲ್ಲಿ ಅಂತರ್ಯಾಮಿಯಾಗಿದ್ದು ಅವರುಗಳು ಮಾಡ ತಕ್ಕ ಪೂಜೆಯನ್ನು ಸ್ವೀಕರಿಸಿ ಆ ಪೂಜೆಗೆ ತಕ್ಕ ಫಲವನ್ನು ಅವರ ಮೂಲಕವಾಗಿಯೇ ದಯಪಾಲಿಸುತ್ತಾನೆ. ಈ ತತ್ವವನ್ನು ತಿಳಿದು ಕೊಳ್ಳದೆ ದೇವತಾಂತರಗಳು ಒಂದೊಂದನ್ನೂ ಪರವಸ್ತುವೆಂದು ಭಾವಿಸಿ ಕೊಂಡು ಅನೇಕ ಜನರು ಭಜನೆ ಮಾಡುತ್ತಾರೆ. ಅವರುಗಳ ಶ್ರದ್ಧೆ ಯೂ ಕೂಡ, ಸ್ಥಿರೀಕರಿಸುವುದು ತಾನೇ ಎಂಬ ಶ್ರೀಕೃಷ್ಣಭಗವಾನರು ಅಪ್ಪಣೆಕೊಡಿಸಿದ್ದಾರೆ. ನಮ್ಮಾಳ್ವಾರ್ರೂ ಈ ಅಭಿಪ್ರಾಯವನ್ನೇ ಪುಷ್ಟೀ ಕರಿಸಿದ್ದಾರೆ. "ಅವರವರ್ ತಮತಮದಱಿವಱಿ ವಗೈ ವಗೈ" ಅವ ರವರು ತಮ್ಮ ತಮ್ಮ ದೇವರೆಂದು ಬೇರೆ ಬೇರೆಯವರನ್ನು ಹೇಳುವು ದೇನೋ ಸರಿ. ಆದರೆ ಆ ದೇವತಾಂತರಗಳು ಅವರವರಿಗೆ ಈಯುವ ಫಲಗಳು, ಸರ್ವಸ್ವಾಮಿಯೊಬ್ಬನು ಅವರಲ್ಲಿ ಅಂತರ್ಯಾಮಿಯಾಗಿರುವುದ ರಿಂದಲೇ. ಐಯ್ಯನಾರ್ ದೇಗುಲದ ಬಾಗಿಲಲ್ಲಿ ಇರುವ ಬಣ್ಣದ ಆನೆ ಕುದುರೆಗಳು ಹೇಗೆ ಯುದ್ಧಕ್ಕೆ ಬಾರವೋ ಅಂತೆಯೇ ದೇವತಾಂತರಗಳು ಅವನು ಅಂತರ್ಯಾಮಿಯಾಗಿ ಇಲ್ಲದೇಹೋಗಲು ಫಲವನ್ನು ಕೊಡಲಾರವು. "ತಾಮೇವ ವಿದಧಾಮ್ಯಹಂ" ಈ ದೇವತಾಂತರ ಶ್ರದ್ಧೆಯೂ ಕೃಷ್ಣನಿಂ ದಲೇ ಎನ್ನುವುದು ಗೀತೆಯಲ್ಲಿ ಸ್ಪಷ್ಟಪಟ್ಟಿದೆ.

ಕ್ರಿಯೆ ಎನ್ನುವುದು ಜಡವಸ್ತು. ಅಚೇತನವಾದ ಕರ್ಮಕ್ಕೆ ಫಲ ವನ್ನು ಕೊಡುವ ಶಕ್ತಿಯಿಲ್ಲ. ಈ ವಿಚಾರವನ್ನು ವ್ಯಾಸರು ಚೆನ್ನಾಗಿ "ಫಲಮತ ಉಪಪತ್ತೇಃ" ಎನ್ನುವ ಸೂತ್ರದಲ್ಲಿ "ಫಲಕೊಡುವ ಶಕ್ತಿ ಯಾರಿಗೆ ? ಚೇತನನಿಗೆ–ಜ್ಞಾನ ಇರುವವನಿಗೆ. ಫಲವನ್ನು ಸ್ವೀಕರಿಸುವ

ವನ ಬಯಕೆಯೇನೆಂಬುದನ್ನು ಅಚೇತನವಾದ ಕ್ರಿಯೆ ಹೇಗೆ ತಿಳಿದುಕೊಳ್ಳುವುದು ? ಅವನ ಬಯಕೆಯನ್ನು ಪೂರೈಸುವ ಶಕ್ತಿ ತಾನೆ ಬೇಡವೆ ? ಆದುದರಿಂದ ಫಲ ಕೊಡತಕ್ಕುದು ಎಲ್ಲವನ್ನೂ ಅರಿತುಕೊಂಡು ಎಲ್ಲವನ್ನೂ ಕೊಡುವ ಶಕ್ತಿಹೊಂದಿರಬೇಕು. ಆದುದರಿಂದ ಫಲಪ್ರದನು ಸರ್ವಜ್ಞನೂ ಸರ್ವಶಕ್ತಿಯೂ ಆಗಿರುವ ದೇವರೇ.

ಲೋಕದಲ್ಲಿ ಯೋಗಕ್ಷೇಮವು ನಡೆದುಕೊಂಡು ಬರುವುದಕ್ಕೆ ಕಾರಣಗಳು ಅನೇಕ ವಿಧವಾಗಿ ತಿಳಿದುಕೊಳ್ಳಲ್ಪಟ್ಟಿದೆ. ನಾಸ್ತಿಕರು ತಾನಾಗಿಯೇ ಯೋಗಕ್ಷೇಮಗಳು ಎಂದು ಹೇಳುವುದು ಎನ್ನುವುದು ಅಸಂಗತವೆನ್ನುವುದನ್ನು ಹಿಂದೆ ತಿಳಿಸಲಾಯಿತು. ಅದೇ ರೀತಿಯಾಗಿ ದೇವತಾಂತರಗಳಿಂದಲೂ ಕರ್ಮದಿಂದ ಫಲವು ನಿಜವಾಗಿ ಲಭಿಸುವುದಿಲ್ಲವೆನ್ನುವುದನ್ನು ತಿಳಿದುಕೊಂಡೆವು. ಇನ್ನು ಕೆಲವು ಪ್ರಮಾಣವಿರುದ್ಧಗಳಾದ ಪಕ್ಷಗಳನ್ನು ಚಿಕ್ಕದೇವರಾಜರು ಇಲ್ಲಿ ನಿರಸನಮಾಡಿದ್ದಾರೆ.

ಕೆಲವರು ಕಾಲದಿಂದಲೇ ಎಲ್ಲವೂ ನಡೆಯುತ್ತಿದೆಯೆಂದೂ ಅಭಿಪ್ರಾಯಪಡುತ್ತಾರೆ. ಇದಕ್ಕೆ ಅನುಕೂಲವಾಗಿ ಕೆಲವು ಯುಕ್ತಿಗಳನ್ನು ಹೇಳುವುದುಂಟು. ಋತುಗಳಿಗೆ ಅನುರೂಪವಾಗಿ ಫಲಗಳೂ ಪುಷ್ಪಗಳೂ ದೊರೆಯುತ್ತವೆ. ಕಾಲಕ್ರಮದಿಂದಲೇ ಚಿಕ್ಕವರೂ ದೊಡ್ಡವರಾಗುತ್ತಾರೆ. ಈ ರೀತಿಯಾದ ವಾದಗಳನ್ನು ಮಾಡಿ, ಮೇಲೂ, ಈಶ್ವರನೂ ಒಬ್ಬನಿದ್ದಿದ್ದರೆ, ಅವನೂ ಕಾಲಾನುವರ್ತಿಯಾಗಿಯೇ ಸೃಷ್ಟಿ, ಸ್ಥಿತಿ ಸಂಹಾರಗಳನ್ನು ಮಾಡುತ್ತಾನೆ ಎಂದು ಅವರು ಹೇಳುತ್ತಾರೆ. ಇದಕ್ಕೆ ವೇದಾಂತಿಗಳು ಕಾಲತತ್ತ್ವವು ಅಚೇತನವಾಗಿಯೂ, ಜ್ಞಾನಶಕ್ತಿವಿಹೀನವಾಗಿಯೂ, ಇರುವುದರಿಂದ, ಅದರಿಂದ ಫಲಗಳು ದೊರೆಯಲಾರವೆಂದು ಬದಲು ಹೇಳುತ್ತಾರೆ. ಅವರ ಅಭಿಪ್ರಾಯದಲ್ಲಿ ಕಾಲತತ್ತ್ವವು ಭಗವಚ್ಛರೀರವಾಗಿ, ಅವನಿಗೆ ಸರ್ವವಿಧದಲ್ಲಿಯೂ ಅಧೀನವಾಗಿರುತ್ತದೆ.

ಮತ್ತೆ ಕೆಲವರು ಪುರುಷಪ್ರಯತ್ನದಿಂದಲೇ ಎಲ್ಲವೂ ನೆರವೇರುವುದೆಂದು ಭಾವಿಸುತ್ತಾರೆ. ಇದು ನಿಜವಾಗಿದ್ದಿದ್ದರೆ ಎಲ್ಲರ ಅಭೀಷ್ಟ

ಗಳೂ ಸರ್ವದಾ ನೆರವೇರುತ್ತಲೇ ಇರಬೇಕು. ಅದನ್ನು ನಾವು ಅನುಭವದಿಂದ ಕಂಡುಕೊಳ್ಳುವುದಿಲ್ಲವಾದುದರಿಂದ ಪುರುಷಪ್ರಯತ್ನವು ನಿಷ್ಫಲವಾಗಬಹುದೆಂದು ನಮಗೆ ತಿಳಿಯಬರುತ್ತದೆ.

ಈ ವಿಚಾರಗಳಿಂದ ನಾವು ಸಾರವಾಗಿ ತಿಳಿದುಕೊಳ್ಳಬಹುದಾದ ಅಂಶವೇನೆಂದರೆ, ಲೋಕದಲ್ಲಿ ಎಲ್ಲರ ಯೋಗಕ್ಷೇಮಕ್ಕೂ ಭಗವಂತನೊಬ್ಬನೇ ಸ್ವತಂತ್ರಕರ್ತೃ, ಬೇರೆ ಕಾರಣಗಳನ್ನು ಹೇಳುವುದೆಲ್ಲಾ ಅವನು ಉಪಯೋಗಿಸಿಕೊಳ್ಳುವ ಉಪಕರಣಗಳು. ಇದನ್ನು ರಾಜರು ತಮ್ಮ ಸ್ಥಾನಕ್ಕೆ ತಕ್ಕ ಉದಾಹರಣೆಯಿಂದ ನಿರೂಪಿಸಿದ್ದಾರೆ. ಸಕಲ ಜೀವಾತ್ಮರುಗಳನ್ನೂ ಭಗವಾನಾಗಿರತಕ್ಕ ರಾಜನಿಗೆ, ಜೀತಮಾಡುವವರಂತೆಯೂ, ಅವರುಗಳಿಗೆ ಲಭಿಸುವ ಯೋಗಕ್ಷೇಮಗಳನ್ನು ರಾಜನ ಬಳಿಯಿಂದ ಪಡೆಯುವ ಸಂಬಳದಂತೆ ಹೋಲಿಸಿ ಪ್ರಮಾಣವಿರುದ್ಧಗಳಾದ ಮತಗಳನ್ನು ನಿರಸನಮಾಡಿದ್ದಾರೆ. ತಾವುಗಳು ಮಾಡುವ ಊಳಿಗದಿಂದಲೇ ಬದುಕುವೆವು ಎಂದೂ, ಸಂಬಳವನ್ನು ಕೊಡುವುದಕ್ಕಾಗಿ ರಾಜರಿಂದ ನಿಯಮಿತರಾದ ಅಧಿಕಾರಿಗಳಿಂದಲೇ ಬಾಳುವೆವು ಎಂದೂ, ನಿಯಮಿತ ದಿನವು ಬಂದೊಡನೆಯೇ ಕೈಗೆ ಸಂಬಳವು ಬರುವುದೆಂದೂ, ತನ್ನ ಬೆವರ ಸೊಮ್ಮಿಂದಲೇ ತಾನು ಅಭಿವೃದ್ಧಿಹೊಂದುವೆನೆಂದೂ, ಆಕಸ್ಮಿಕವಾಗಿ ಪೆಂಪು ಪಡೆದಿರುವೆನೆಂದೂ, ಎಣಿಸತಕ್ಕವರು ಆ ಯಜಮಾನನ ಸೇವೆಯಲ್ಲಿ ಸ್ಥಿರವಾಗಿ ನಿಂತು, ಅದರ ನಿಜವಾದ ತತ್ತ್ವವನ್ನು ಅರಿಯಲೂ ಶಕ್ತರಾಗುವುದಿಲ್ಲ. ಅದರಿಂದ ಈ ಭ್ರಾಂತಿಯನ್ನು ಬಿಟ್ಟು ನಿನ್ನನ್ನೇ ನಂಬಿದವರು ಎಂಥವರಾಗಲೀ ಅವರ ಯೋಗಕ್ಷೇಮಗಳನ್ನು ನೀನೇ ನೋಡಿಕೊಳ್ಳುವವನು ಎಂದು ರಾಜರು ನಿರಸನಮಾಡಿದ್ದಾರೆ.

## ಬಿನ್ನಪ ೨೬

ಪಿಳ್ಳೈಲೋಕಾಚಾರ್ಯರು "ಪ್ರಪನ್ನಪರಿತ್ರಾಣ" ವೆಂಬ ಗ್ರಂಥವನ್ನು ಬರೆದಿದ್ದಾರೆ. ಆ ಪುಸ್ತಕದ ನಿರೂಪಣಕ್ರಮದಂತೆಯೇ ಚಿಕ್ಕ

ದೇವರಾಜರು ಈ ಇಪ್ಪತ್ತಾ ರನೆಯ ಬಿನ್ನಪದಲ್ಲಿ " ನಾರಾಯಣನೊಬ್ಬನೇ ಸರಿಯಾದ ರಕ್ಷಕ " ಎನ್ನುವುದನ್ನು ಖಚಿತಪಡಿಸಿದ್ದಾರೆ. ಚತುರ್ಮುಖ ಬ್ರಹ್ಮ, ಶಿವ, ಸೂರ್ಯ, ಚಂದ್ರ, ಇಂದ್ರ, ತಂದೆತಾಯಿಗಳು, ಗಂಡ, ಅಣ್ಣ, ತಮ್ಮ, ಹಣ, ಕಾಸು ಇವು ಯಾವುವೂ ನಮಗೆ ರಕ್ಷಕಗಳಲ್ಲ ವೆಂಬುದು ದೃಢಪಟ್ಟ ಹೊರತು, ನಾರಾಯಣನು ರಕ್ಷಕನೆನ್ನುವುದು ದೃಢಪಡದು.

ನಾರಾಯಣನೇ ಪರತತ್ವವೆನ್ನುವುದನ್ನು ನಮ್ಮಾಳ್ವಾರ್ರವರು ಎಲ್ಲರೂ ಒಪ್ಪಿಕೊಳ್ಳುವಂತೆ ಪ್ರತಿಪಾದಿಸಿದ್ದಾರೆ. " ತಿರುಮಳಿಶೈಪ್ಪಿರಾನ್ " ಎಂಬುವರಂತೆ ಉದ್ವೇಗದಿಂದ ಅವರು ಮಾತನಾಡುವವರಲ್ಲ. ಅವರು ನಾರಾಯಣಪರತ್ವವನ್ನು ಹೇಳುವಾಗ ತಮ್ಮ ಸ್ವಂತ ಮಾತಿನಿಂದ ಆ ವಿಚಾರವನ್ನು ಪ್ರಸ್ತಾಪಿಸುವುದೇ ಇಲ್ಲ. ಭಗವಾನ್, ಭಕ್ತಜನ, ಇವರ ವಾಕ್ಯದಿಂದಲೂ ನಿರೂಪಣಮಾಡುವುದಿಲ್ಲ. ನಡೆದ ಕೆಲವು ಚರಿತ್ರಗಳನ್ನು ಉದಹರಿಸಿ, ಅವುಗಳಿಂದ ಯಾರು ಪರದೈವವೆನ್ನುವದನ್ನು ನೀವು ನೀವೇ ತೀರ್ಮಾನಮಾಡಿಕೊಳ್ಳಿ ಎಂದು ಲೋಕದವರಿಗೇ ಬಿಟ್ಟುಬಿಡುತ್ತಾರೆ. " ಪೇಶನಿನ್ನಶಿವನುಕ್ಕುಂ ಪಿರಮನ್ ತನಕ್ಕುಂ ಪಿಱರ್ಕುಂ ನಾಯಹನವನೇ, ಕಪಾಲನನ್ಮೋಕ್ಕತ್ತು ಕಂಡುಕೊಳ್ಮಿನ್ " ಎನ್ನುವ ಅವರ ಪಾಶುರವನ್ನು ಗಮನಿಸಿ. ವೇದದಲ್ಲಿ ಕೆಲವು ಕಡೆಗಳಲ್ಲಿ ಶಿವನನ್ನು ಪರದೇವತೆಯೆಂದು ಕಾಣಬರುವಂತೆ ಇರುವ ಕೆಲವು ವಾಕ್ಯಗಳು ಬರುತ್ತವೆ. ಯಜುರ್ವೇದದಲ್ಲಿ ರುದ್ರ ಚಮಕಾದಿಗಳಲ್ಲಿ ಇವುಗಳನ್ನು ನೋಡಬಹುದು. ಚತುರ್ಮುಖಬ್ರಹ್ಮನ ಪರತತ್ವವು ವೇದದಲ್ಲಿ ಎಲ್ಲಿಯೂ ವ್ಯಕ್ತವಾಗಿ ಹೇಳಲ್ಪಟ್ಟಿಲ್ಲ. ಆದರೂ ಅವನನ್ನು ಶಿವನ ತಂದೆಯೆಂದು ಸಾಮವೇದವು ಸ್ತುತಿಸುತ್ತದೆ, ಈ ರೀತಿಯಾಗಿ ವೇದೋಕ್ತನಾದ ಶಿವನಿಗೂ, ಅವನಿಗಿಂತ ಅಧಿಕನಾಗಿ ಭಾವಿಸಲ್ಪಟ್ಟ ಚತುರ್ಮುಖ ಬ್ರಹ್ಮನಿಗೂ, ಇತರರಿಗೂ ನಾಯಕನು ನಾರಾಯಣನೇ. ಈ ವಿಚಾರವನ್ನು ಕಪಾಲಮೋಕ್ಷದಲ್ಲಿ ಕಂಡುಕೊಳ್ಳಿ ಎಂಬುದಾಗಿ ನಮ್ಮಾಳ್ವಾರ್ರವರು ಇಲ್ಲಿ ತಿಳಿಸಿದ್ದಾರೆ.

ಬ್ರಹ್ಮನ ಐದು ತಲೆಗಳಲ್ಲಿ ಒಂದನ್ನು ಶಿವನು ಚಿಗುಟಿಬಿಡುತ್ತಾನೆ. ಆ ಬ್ರಹ್ಮಕಪಾಲವು ಶಿವನ ಕೈಯ್ಯಲ್ಲಿ ಅಂಟಿಕೊಂಡುಬಿಡುತ್ತದೆ. ಕೊನೆಗೆ ನಾರಾಯಣನ ಕೃಪೆಯಿಂದ ಆ ಬ್ರಹ್ಮಹತ್ಯಾದೋಷವು ಶಿವನಿಗೆ ಹೋಗುತ್ತದೆ. ಇದು ಚರಿತ್ರೆಗಳಲ್ಲೇ ಪ್ರಸಿದ್ಧವಾಗಿರುವ ವಿಷಯ. "ದೇವರು ಹೇಳಿದ್ದಾದರೆ, ಅವನೇನು ತನ್ನ ಮಹಿಮೆ ಹೇಳಿಕೊಳ್ಳುತ್ತಾನೆ, ಎಂದು ನೀವು ಸಬೂಬು ಹೇಳಬಹುದು. ನನ್ನ ಮಾತನ್ನಂತೂ ಬಿಡಿ! ನಾನು ದೇವರ ಪಕ್ಷಪಾತಿ. ಅವನ ದೊಡ್ಡಸ್ತಿಕೆಗೆ ವೇದ, ಸ್ಮೃತಿ, ಇತಿಹಾಸ, ಪುರಾಣಗಳೇ ಆಧಾರ. ಪುರಾಣೋಕ್ತವಾದ ಕಪಾಲಮೋಕ್ಷದಲ್ಲಿ ನಾರಾಯಣಪರತ್ವವು ಸ್ಪಷ್ಟವಾಗಿ ಕಾಣುತ್ತದೆ." ಎಂದು ನಮ್ಮಾಳ್ವಾರ್ರವರು ತಿಳಿಯಪಡಿಸಿದ್ದಾರೆ.

ಯಜುರ್ವೇದದಲ್ಲಿ ಶಿವನಿಗೆ ಪ್ರಾಧಾನ್ಯತೆಯಿರುವಷ್ಟು ಚತುರ್ಮುಖನಿಗಿಲ್ಲ. ಸಾಮವೇದದಲ್ಲಿ ಬ್ರಹ್ಮನಿಂದ ರುದ್ರನು ಹುಟ್ಟಿದನೆಂದು ಹೇಳುತ್ತದೆ. ಚಿದಂಬರಕ್ಷೇತ್ರದಲ್ಲಿದ್ದ ಶಿವಭಕ್ತರಾದ ಅಪ್ಪಯ್ಯದೀಕ್ಷಿತರು ಸಾಮವೇದಿಗಳು; ರುದ್ರನಿಗೆ ಪರತ್ವವನ್ನು ಹೇಳುವ ಯಜುಶ್ಶಾಖೆಯಲ್ಲಿ ತಾವು ಜನಿಸಲಿಲ್ಲವಲ್ಲಾ ಎಂದು ಬಲು ಕೊರಗುತ್ತಿದ್ದರಂತೆ! ಅದೂ ಅಲ್ಲದೆ ದ್ರಾವಿಡ ದೇಶದಲ್ಲಿ ಎಲ್ಲಾ ಪಂಥದವರೂ ಅಷ್ಟಾಕ್ಷರಿಯನ್ನೇ ಒಂದಲ್ಲ ಒಂದು ರೀತಿ ಹೇಳಿ, ಅಕ್ಷರಾಭ್ಯಾಸಮಾಡಿಸಬೇಕು. ಇದು ಆ ದೇಶಾಚಾರ. ಆದರೆ ಆಂಧ್ರರಲ್ಲಿ ಪಂಚಾಕ್ಷರಿಯೇ ಅಕ್ಷರಾಭ್ಯಾಸಕಾಲದಲ್ಲಿ ಉಪಯೋಗಿಸಲ್ಪಡುವ ರೂಢಿ. ತಾವು ಆಂಧ್ರದೇಶದಲ್ಲಿ ಹುಟ್ಟದೇ ಇದ್ದುದಕ್ಕಾಗಿಯೂ, ಅಪ್ಪಯ್ಯದೀಕ್ಷಿತರು ಪರಿತಪಿಸುತ್ತಾರೆ. ವೈದಿಕವಾದ ಎಲ್ಲ ಶಬ್ದಗಳನ್ನೂ ಶಿವಪರವಾಗಿ ನಯನಮಾಡಿದಾಗ ಅಪ್ಪಯ್ಯದೀಕ್ಷಿತರಿಗೆ ನಾರಾಯಣ ಶಬ್ದವನ್ನು ಮಾತ್ರ ಶಿವನಿಗೆ ಬಳಸಲು ಸಾಧ್ಯವಾಗಲಿಲ್ಲ. ಅವಯವಾರ್ಥದಿಂದ ಶಿವನಿಗೆ ನಾರಾಯಣತ್ವವನ್ನು ಸಾಧಿಸುವಾಗ "ಣತ್ವಂ ಪರಂ ಬಾಧತೇ". ಈ 'ಣ' ಕಾರವು ಬಾಧಿಸುತ್ತದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ.

ಹಿಂದೆ ಹೇಳಿದ ನಮ್ಮಾಳ್ವಾರ್ರ ವಚನದಲ್ಲಿ "ಪಿರಮನ್ ತನಕ್ಕುಂ" ಎಂದಿದೆ. 'ಪಿರಮನುಕ್ಕುಂ' ಎಂದಿದ್ದರೆ ಸಾಕಾಗಿತ್ತು. 'ಬ್ರಹ್ಮನಿಗೂ' ಎಂಬ ಅರ್ಥವು ಬರುತ್ತದೆ. ತಮಿಳಿನಲ್ಲಿ ತನಕ್ಕುಂ ಎಂಬ ಪದವು ಅದು ಯಾವ ಪದದೊಡನೆ ಸೇರಿದೆಯೋ ಆ ಪದದ ಅರ್ಥಕ್ಕೆ ಒಂದು ಪ್ರಾಧಾನ್ಯವನ್ನು ತೋರಿಸಿಕೊಡುವುದಾಗಿದೆ. ಶಿವನಿಗಿಂತಲೂ ಅವನ ತಂದೆಯಾದ ಬ್ರಹ್ಮನು ಪ್ರಧಾನನೆಂಬುದು ಇದರ ಅರ್ಥ. ಹೀಗೆಯೇ ನಮ್ಮಾಳ್ವಾರ್ರು ಬೇರೊಂದೆಡೆಯಲ್ಲಿಯೂ ಪ್ರಯೋಗಿಸಿದ್ದಾರೆ. "ತಯರದರ್‌ಕ್ಕು ಮಹನ್ ತನ್ನೈ ಅನ್ರಿ ಮಟ್ರಿಲೇ‌ೕ ತಂಜಮಾಹವೇ". ದಶರಥನ ಮಗನಿಗಿಂತಲೂ ಬೇರೊಬ್ಬ ರಕ್ಷಕನು ನನಗಿಲ್ಲ. ಇಲ್ಲೂ "ಮಹನ್ನೈ" ಎಂದು ಹೇಳಬಹುದಿತ್ತು. ಆದರೆ ಕೃಷ್ಣನಿಗಿಂತಲೂ ರಾಮನಿಗೆ ಪ್ರಾಧಾನ್ಯತೆಯು ನಮ್ಮಾಳ್ವಾರ್ರ ಇಚ್ಛೆಯಲ್ಲಿದೆ.

ಒಮ್ಮೆ ರಾಮಾನುಜರು ಕೃಷ್ಣನ ಪೂಜೆಮಾಡಿ ಹೊರಡುವುದರಲ್ಲಿದ್ದಾಗ ಶ್ರೀರಾಮನ ವಿಗ್ರಹವೊಂದನ್ನು ಒಬ್ಬರು ತಂದುಕೊಡುತ್ತಾರೆ. ಆಗ ಆಚಾರ್ಯರು "ಇನ್ನು ತೇವೈಯಿಡಾದಾರ್ ವಂದಾರ್" "ಇದು ಮಾಡು ಅದು ಮಾಡು ಎಂದು ಶ್ರಮದ ಕಾರ್ಯವನ್ನು ಹೇಳದ ದೇವರು ಬಂದರು" ಎಂದರಂತೆ. ಗೀತೆಯಲ್ಲಿ ಕೃಷ್ಣನು ನಮ್ಮ ತಲೆಯ ಮೇಲೆ ಜವಾಬ್ದಾರಿಯನ್ನು ಹಾಕಿ "ತಸ್ಮಾದ್‌ಯುಧ್ಯಸ್ವ" "ಶರಣಂವ್ರಜ" "ಮನ್ಮನಾಭವ, ಅವ್ಯಾಜೀಭವ" ಮುಂತಾದ ಕಾರ್ಯಗಳನ್ನು ಹೇರಿದ್ದಾನೆ. ಆದರೆ ಶ್ರೀರಾಮನು ಎಲ್ಲಾ ಭಾರವನ್ನೂ ತಾನೇ ಹೊತ್ತು ನಮಗೆ ಹಗುರ ಮಾಡಿಕೊಟ್ಟಿದ್ದಾನೆ. "ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್‌ವ್ರತಂ ಮಮ". ನಮ್ಮಗಳೆಲ್ಲರ ನಲ್ಮೆಸಾಧಿಸುವುದು, ಶ್ರೀರಾಮನ ತಲೆಗೇ ಕಟ್ಟಿದ ವ್ರತ!

"ಬ್ರಹ್ಮಶಿವಾದಿಗಳೂ ಹುಟ್ಟುವಂತೆ, ಶ್ರೀಮನ್ನಾರಾಯಣನೂ ರಾಮನಾಗಿ, ಕೃಷ್ಣನಾಗಿ, ಹುಟ್ಟಿದ್ದಾನೆ. ದೇವತಾಂತರಗಳಂತೆಯೇ ಇವನೂ ತಂದೆತಾಯಿಗಳಿಗೆ ರಕ್ಷ್ಯನಾಗಿಯೇ ಇದ್ದನು. ಇವನೂ ಅವರಂತೆಯೇ ಒಬ್ಬ ಗುರುವಿನ ಹತ್ತಿರ ವಿದ್ಯಾಭ್ಯಾಸಮಾಡಿದ್ದಾನೆ." ಹೀಗಿ

ರುವವನು ಹೇಗೆ ಪರದೇವತೆಯಾದಾನು ಎನ್ನುವ ಪೂರ್ವಪಕ್ಷಗಳಿಗೆ ಶ್ರುತಪ್ರಕಾಶಿಕೆಯಲ್ಲಿ ಉತ್ತರ ಹೇಳಿದೆ. ಶ್ರೀಮನ್ನಾರಾಯಣನ ಜನ್ಮವು ಲೋಕರೀತ್ಯಾ ಅಲ್ಲ, ಅವನ ಇಚ್ಛೆಯಿಂದಲೇ; ಬ್ರಹ್ಮ, ಶಿವ, ಇವರ ಉತ್ಪತ್ತಿಯನ್ನು ಹೇಳುವಾಗ, ಅವರ ಇಚ್ಛೆಯ ಪ್ರಕಾರ ಎಂದು ಎಲ್ಲೂ ಕಂಡು ಬರುವುದಿಲ್ಲ. ಶ್ರೀರಾಮನು ವಸಿಷ್ಠ ವಿಶ್ವಾಮಿತ್ರರ ಹತ್ತಿರವೂ, ಶ್ರೀಕೃಷ್ಣನು ಸಾಂದೀಪನಿಯ ಹತ್ತಿರವೂ ಓದಿದುದು ಲೋಕದವರಿಗೆ ಶಿಷ್ಟಾಚಾರಭಾವನೆಯನ್ನು ತಿಳಿಸುವುದಕ್ಕೋಸ್ಕರವೇ ಹೊರತು ತಮ್ಮ ಜ್ಞಾನಾರ್ಜನೆಗಾಗಲ್ಲ. ಶ್ರೀ ಕೃಷ್ಣನು ೬೪ ದಿನಗಳಲ್ಲಿ ೬೪ ಕಲೆಗಳನ್ನು ಕಲಿತನೆಂದರೇನರ್ಥ? " ಯೋಬ್ರಹ್ಮಾಣಂ ವಿದಧಾತಿ ಪೂರ್ವಂ ಯೋವೈ ವೇದಾಂಶ್ಚಪ್ರಹಿಣೋತಿತಸ್ಮೈ." ದೇವರು ವೇದ ಉಪದೇಶಿಸುವುದಕ್ಕೆ ಮುಂಚೆ ಬ್ರಹ್ಮನಿಗೆ ಜ್ಞಾನವಿರಲಿಲ್ಲ. ಅಂತೆಯೇ ಶ್ರೀಮನ್ನಾರಾಯಣನು ಬ್ರಹ್ಮನಿಗೆ ಆಚಾರ್ಯನಾದನು. ನಾಲ್ಕು ವೇದಗಳನ್ನು ತನ್ನ ನಾಲ್ಕು ಬಾಯಿಗಳಿಂದ ಬ್ರಹ್ಮನು ಉಚ್ಚರಿಸುತ್ತಿರುವಾಗ, ಅವನ ಸುತ್ತಲೂ ಸಂಚರಿಸುತ್ತಿದ್ದ ವೇದಾಭಿಮಾನಿಪುರುಷನನ್ನು ಅಸುರರು ಕೊಂಡೊಯ್ಯುತ್ತಾರೆ. ಹೀಗೆ ವೇದಾಪಹಾರವು ಆದಾಗ ಮತ್ತೆ ಶ್ರೀಮನ್ನಾರಾಯಣನು ಚತುರ್ಮುಖನಿಗೆ ಆ ಪುರುಷನನ್ನು ತಂದುಕೊಡುತ್ತಾನೆ.

ಬಾಣಾಸುರನ ಕಥೆಯಿಂದ ಶ್ರೀಕೃಷ್ಣನ ಪರತ್ವವು ಗೊತ್ತಾಗುತ್ತದೆ. ಅನಿರುದ್ಧ, ಉಷೆ, ಇವರ ವಿವಾಹಸಂಬಂಧದಲ್ಲಿ ಯುದ್ಧವಾದಾಗ, ಮೊಮ್ಮಗನ ಹೆಂಡತಿಯಾದ ಉಷೆಯ ಪಿತೃಪ್ರಾಣಹರಣವನ್ನು ಮಾಡಬಾರದೆಂದು, ಶ್ರೀಕೃಷ್ಣನು ಬಾಣಾಸುರನ ೯೯೮ ತೋಳುಗಳನ್ನೂ ಕತ್ತರಿಸಿ ಎರಡನ್ನು ಮಟ್ಟಿಗೆ ಉಳಿಸುತ್ತಾನೆ. ಆ ಸಂದರ್ಭದಲ್ಲಿ ತನ್ನ ಭಕ್ತನಾದ ಬಾಣಾಸುರನ ಸಹಾಯಕ್ಕೆ ಬಂದಿದ್ದ ಶಿವನಿಗೂ ಸ್ವಾಮಿಯ ಚುರುಕು ತಟ್ಟುತ್ತದೆ. " ಕೃಷ್ಣಕೃಷ್ಣ ಮಹಾಬಾಹೋ ಜಾನೇತ್ವಾಂ ಪುರುಷೋತ್ತಮಂ" ನೀನು ಪುರುಷೋತ್ತಮನೆಂದು ನಾನು ತಿಳಿದುಕೊಂಡೆ ಎನ್ನುತ್ತಾನೆ ಶಿವ. ಇವೇ ಮುಂತಾದ ಚರಿತ್ರೆಗಳನ್ನು ನೋಡಿದರೆ ಯಾರಿಗೆ ರಕ್ಷಕತ್ವವನ್ನು ಹೇಳೋಣ? ಪಾರಿಜಾತಾಪಹರಣ

ಚರಿತ್ರದಲ್ಲಿ ಇಂದ್ರನು ರಕ್ಷಕನಲ್ಲವೆನ್ನುವುದು ಸ್ಪಷ್ಟವಾಗಿ ತಿಳಿಯಬರುತ್ತದೆ. ನರಕನೆನ್ನುವ ಅಸುರನ ದೆಸೆಯಿಂದ ಇಂದ್ರನು ಅನೇಕ ಕಷ್ಟಗಳನ್ನು ಅನುಭವಿಸುತ್ತಾನೆ. ಅವನ ತಾಯಿಯಾದ ಅದಿತಿದೇವಿಯ ಕುಂಡಲಗಳು ನರಕಾಸುರನಿಂದ ಅಪಹರಿಸಲ್ಪಡುವುವು. ಅದನ್ನು ತಂದು ಕೊಡುವುದಕ್ಕೆ ಇಂದ್ರನಿಗೆ ಶಕ್ತಿಯು ಇಲ್ಲ. ಈ ಸಂದರ್ಭದಲ್ಲಿ ನರಕಾಸುರನನ್ನು ಸಂಹಾರಮಾಡುವಂತೆ ಕೃಷ್ಣನನ್ನು ಬೇಡಿಕೊಳ್ಳುತ್ತಾನೆ. ಆ ಪ್ರಾರ್ಥನೆಯನ್ನು ಮನ್ನಿಸಿ, ಕೃಷ್ಣನು ಸತ್ಯಭಾಮಾಸಮೇತನಾಗಿ ಹೊರಟು ನರಕಾಸುರನ ಊರಿಗೆ ಹೋಗಿ, ಅವನ ಸಂಗಡ ಯುದ್ಧಮಾಡಿ ಅವನನ್ನು ಧ್ವಂಸಮಾಡುತ್ತಾನೆ. ಅವನಿಂದ ಅಪಹರಿಸಲ್ಪಟ್ಟ ಕುಂಡಲಗಳನ್ನು ತೆಗೆದುಕೊಂಡು ಬಂದು ಅದಿತಿದೇವಿಯ ಬಳಿಗೆ ಸೇರಿಸುವುದಕ್ಕೋಸ್ಕರ ಇಂದ್ರಲೋಕಕ್ಕೆ ಹೋಗುತ್ತಾನೆ. ಅಲ್ಲಿ ಇಂದ್ರಾಣಿಯು ಮುಡಿದುಕೊಂಡಿದ್ದ ಪಾರಿಜಾತಪುಷ್ಪವನ್ನು ನೋಡಿ, ಸತ್ಯಭಾಮೆಯು ಆಸೆಪಡುತ್ತಾಳೆ. ಆದರೆ ಅವಳು ಮನುಷ್ಯನೊಬ್ಬನ ಮಡದಿಯಾದುದರಿಂದ, ದೇವತೆಗಳಿಂದಲೇ ಧರಿಸಲು ಅರ್ಹವಾದ ಪುಷ್ಪವನ್ನು ಕೊಡುವುದಕ್ಕಾಗುವುದಿಲ್ಲವೆಂದು ಇಂದ್ರಾಣಿಯು ಹೇಳುತ್ತಾಳೆ. ಈ ರೀತಿ ದೇವತೆಗಳಿಂದ ಪರಿಭವವಾಯಿತೆಂದು ಕೃಷ್ಣನಿಗೆ ಆಕೆಯು ತಿಳಿಸಿದಾಗ, ಅವನು ಇಂದ್ರನ ತೋಟದಿಂದ ಪಾರಿಜಾತವೃಕ್ಷವನ್ನೇ ಬೇರುಸಹಿತ ಕಿತ್ತು ತಂದುಬಿಡುತ್ತಾನೆ. ಇಂದ್ರನು ವಜ್ರಾಯುಧವನ್ನು ತೆಗೆದುಕೊಂಡು, ತನ್ನ ಆಪತ್ಕಾಲಗಳಲ್ಲಿ ಬೇಕಾದಷ್ಟು ಉಪಕಾರಮಾಡಿರುವ ಕೃಷ್ಣನ ಮೇಲೆ ಯುದ್ಧಕ್ಕೆ ಹೋಗುತ್ತಾನೆ. ಅಂಥ ರಜೋಗುಣವು ಇಂದ್ರನದು ! ಎಲ್ಲವೂ ಕೃಷ್ಣನಿಗೆ ಸೇರಿದ್ದು. ನಾನೇ ಕೈಯೆತ್ತಿ ಕೊಡಬೇಕು. ಹಾಗಿರುವಲ್ಲಿ ಅವನೇ ಕೊಂಡೊಯ್ಯುತ್ತಿರುವಾಗ ತಾನು ಸುಮ್ಮನಿರಬೇಕೆಂಬುದನ್ನು ಅರಿಯದ ಮಂಕು ! ಕೃತಘ್ನ ಇಂದ್ರ ! ಪುರಾಣ ಇತಿಹಾಸಗಳಲ್ಲಿ ಬರತಕ್ಕ ಇಂಥ ಚರಿತ್ರಗಳಲ್ಲದೆ, ಶ್ರುತಿಯಲ್ಲೂ, ಇಂದ್ರನು ರಕ್ಷಕನಲ್ಲ, ರಕ್ಷ್ಯನು ಎನ್ನುವುದು ಚೆನ್ನಾಗಿ ಕಾಣಬರುತ್ತದೆ. ಇಂದ್ರನನ್ನು ಬ್ರಹ್ಮವಿದ್ಯಾಪ್ರವರ್ತಕನೆಂದು ಹೇಳಿದೆ. ಕೌಶೀತಕೀ ಉಪನಿಷತ್ತಿನಲ್ಲಿ "ಪ್ರತರ್ದನವಿದ್ಯೆ" ಯಲ್ಲಿ ತನ್ನನ್ನೇ ಉಪಾಸಿಸುವಂತೆ ಪ್ರತರ್ದನನಿಗೆ ಇಂದ್ರನು

ಉಪದೇಶಿಸುತ್ತಾನೆ. ವ್ಯಾಸರು ಅಲ್ಲಿ ಇಂದ್ರನೆಂದರೆ ಇಂದ್ರಾಂತರ್ಯಾಮಿಯಾದ ದೇವರೆಂಬುದನ್ನು ಶಾಸ್ತ್ರದೃಷ್ಟ್ಯಾ ಸ್ಥಾಪಿಸಿದ್ದಾರೆ. ಇದರಿಂದ ಇಂದ್ರನು ಅಂತರ್ಯಾಮಿಯಾದ ಭಗವಂತನಿಗೆ ಶರೀರವಾಗಿರುವ ಒಂದು ತತ್ವವೆಂದೂ, ಅವನು ಪರದೇವತೆಯಲ್ಲವೆಂದೂ ತಿಳಿಯಬರುವುದಿಲ್ಲವೇ?

ಇಂತಹ ದೇವಾದಿ ದೇವತೆಗಳೇ ರಕ್ಷಕರಲ್ಲದಿರುವಾಗ, ಯಃಕಶ್ಚಿತ್ ರಾಜನು ರಕ್ಷಕನಾಗಬಲ್ಲನೆ? ದೊರೆಯಾದವನಿಂದ ಆತ್ಮರಕ್ಷಣವಂತೂ ಇಲ್ಲ ಎನ್ನುವುದು ಇರಲಿ. ಪ್ರಜೆಗಳ ಶರೀರರಕ್ಷಣವನ್ನಾದರೂ ಸರಿಯಾಗಿ ಅವರು ಮಾಡುತ್ತಾರೆಯೆ? ತಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಮಾಡಲಾಗುವುದೆಂದು ಸರಕಾರವು ಹೇಳುವುದನ್ನು ನಾವು ಅಡಿಗಡಿಗೆ ಕೇಳುತ್ತಿರುತ್ತೇವೆ. ಮಾತಾಪಿತೃಗಳು, ಕೈಹಿಡಿದ ಗಂಡ, ಜೊತೆಯಲ್ಲೇ ಹುಟ್ಟಿದ ಅಣ್ಣತಮ್ಮಂದಿರು ಯಾರೂ ರಕ್ಷಕರಾಗುವುದಿಲ್ಲ. "ತಂಜಮಾಹಿಯ ತಂದೈತಾಯೊಡು ತಾನುಮಾಯ್ ಅವ್ವೈ ಅಲ್ಲನಾಯ್" ಎಂದು ನಮ್ಮಾಳ್ವಾರ್ರು ಹೇಳಿರುವ ಸಂದರ್ಭದಲ್ಲಿ "ತಂಜಮಾಹಿಯ" ಎನ್ನುವ ವಿಶೇಷಣಕ್ಕೆ ಭಾವವೇನೆಂದರೆ, ರಕ್ಷಕರಲ್ಲದ ತಂದೆತಾಯಿಗಳೂ ಉಂಟು, ಎಂಬುದೇ. ಭೃಗುಮಹರ್ಷಿಯ ಸಂತತಿಯಲ್ಲಿ ತಿರುಮಳಿಶೈಯಾಳ್ವಾರ್ರು ಅಂಗಗಳು ಕಾಣದಂತೆ ಪಿಂಡಾಕಾರದಲ್ಲಿ ಹುಟ್ಟುತ್ತಾರೆ. ತಂದೆತಾಯಿಗಳಿಗೇ ಅದು ಬೇಡವಾಗಿ, ಬೆತ್ತದ ಪೊದರಿನಲ್ಲಿ ಬಿಸಾಡುತ್ತಾರೆ. ಮೇನಕೆಯು ವಿಶ್ವಾಮಿತ್ರನಿಂದ ಶಕುಂತಳೆಯನ್ನು ಹಡೆದು ಮರದ ಕೆಳಗೆ ಬಿಟ್ಟು ಹೊರಟುಹೋಗುತ್ತಾಳೆ. ಸಾಕ್ಷಾತ್ ತಂದೆಯಾದ ಹಿರಣ್ಯಕಶಿಪುವು ಪ್ರಹ್ಲಾದನಲ್ಲಿ ಪ್ರೀತಿಯನ್ನು ಇಟ್ಟಿದ್ದನೇ? ಎಂಬುದಿರಲಿ. ಪ್ರಹ್ಲಾದನೇನು ಇತರ ಸಾಮಾನ್ಯ ಮಕ್ಕಳಂತೆಯೇ! ಗುಣಶಾಲಿಯಾದ ಮಗ! ಅಂಥದರಲ್ಲೂ ಮಗನಿಗೆ ತಂದೆಯು ಶತ್ರುವಾದನು. ಅದೂ ಎಲ್ಲಿಯವರೆಗೆ ಹೋಯಿತು? ಪ್ರಾಣವನ್ನೇ ತೆಗೆದುಬಿಡಬೇಕೆನ್ನುವವರಿಗೂ! ಪ್ರಹ್ಲಾದನ ಗುಣಗಳನ್ನು ಹೇಳಹೊರಟರೆ ನಾಲಿಗೆಯು ಸಾಲದು ಅವನು ವಿದ್ಯಾಭ್ಯಾಸಮಾಡುತ್ತಿದ್ದ ಕಾಲದಲ್ಲಿ ರಾಜನೀತಿಯಲ್ಲಿ ಶತ್ರುಮಿತ್ರರ ಬಗ್ಗೆ ತಂದೆಯು ಪ್ರಶ್ನೆಯನ್ನು

ಹಾಕಿದಾಗ ಎಲ್ಲದರಲ್ಲಿಯೂ ದೇವರನ್ನು ಕಾಣುವ ಪ್ರಹ್ಲಾದನು "ಮಿತ್ರಾ ಮಿತ್ರಕಥಾ ಕುತಃ?" ಎನ್ನುತ್ತಾನೆ. ಎಲ್ಲರೂ ಭಗವಂತನ ಶರೀರ ವಾಗಿರುವುದರಿಂದ ಶತ್ರುಗಳು ಮಿತ್ರರು ಎಂದು ಹೇಗೆ ವಿಭಾಗಿಸಲಾಗು ವುದು ಎಂದು ಪ್ರಹ್ಲಾದನು ಕೇಳುತ್ತಾನೆ. ಬಾಲ್ಯದಲ್ಲಿಯೇ ಅಂಥ ಜ್ಞಾನವನ್ನು ಹೊಂದಿದ್ದ ಮಹಾನುಭಾವನು ಅವನು. ಅಂಥವನಿಗೆ ತಂದೆಯೂ ರಕ್ಷಕನಾಗಲಿಲ್ಲ. ಭಗವಂತನೇ ರಕ್ಷಕನಾದನು. ಆದುದ ರಿಂದ ಈ ಪ್ರಾಕೃತ ತಂದೆತಾಯಿಗಳು ಅಲ್ಲದೆ ಎಲ್ಲಾ ಪ್ರಾಣಿಗಳಿಗೂ ಅವ್ಯಯನಾದ ತಂದೆಯೇ ಶ್ರೀಮನ್ನಾರಾಯಣ. ನಮ್ಮ ತಂದೆತಾಯಿ ಗಳು ಸತ್ತರೆ ಕಣ್ಣೀರುಬಿಡುವಂತೆ ದೇವರೆಂಬ ತಂದೆಗೆ ಎಂದಿಗೂ ಕಣ್ಣೀ ರುಬಿಡಬೇಕಾಗಿಲ್ಲ. ಇದಕ್ಕೆ ಕಾರಣ, ಆತನು ಅವ್ಯಯ, ನಿತ್ಯ.

ಕೈ ಹಿಡಿದ ಗಂಡನೂ ಕಾಪಾಡಲಾರನು ಎನ್ನುವುದಕ್ಕೆ ದ್ರೌಪದಿ ಯ ವಸ್ತ್ರಾಪಹರಣಕ್ಕಿಂತಲೂ ಶ್ರೇಷ್ಠವಾದ ಉದಾಹರಣೆ ಇನ್ನೇನಿದೆ?

ಧನವು, ನಮ್ಮನ್ನು ಕಾಪಾಡುವುದಿಲ್ಲವೇ? ಎಂದರೆ ಅದಕ್ಕೆ ನಾಶ ವೆಂಬುದು ಇತರ ಪದಾರ್ಥಗಳಂತೆ ಒಂದು ಬಗೆಯದಲ್ಲ. ಹಣ ಹೋ ಗಲು ಬಹಳ ದಾರಿಗಳಿವೆ. ದಾಯಾದಿಗಳಿಂದ ಭಯ, ಕಳ್ಳಕಾಕರಿಂದ ಹೆದರಿಕೆ, ಬೆಂಕಿಯಿಂದ ಭೀತಿ, ಸರಕಾರದ ಕಾಟ. ನಮ್ಮನ್ನು ರಕ್ಷಿಸ ತಕ್ಕದ್ದು ಸ್ಥಿರವಾಗಿದ್ದರಲ್ಲವೆ ರಕ್ಷಣೆ ಸರಿಹೋದೀತು! ಗೀತಾಭಾಷ್ಯ ತಾತ್ಪರ್ಯಚಂದ್ರಿಕೆಯಲ್ಲಿ ಶ್ರೀವೇದಾನ್ತದೇಶಿಕರು, ಸಂಪಾದಿಸುವಾಗಲೂ ಹಣ ಕಷ್ಟಕೊಡುತ್ತದೆ. ಹೀಗೆ ಆರ್ಜನದೋಷವೊಂದೇ ಅಲ್ಲದೆ, ರಕ್ಷ ಣದೋಷ, ಭೋಗದೋಷ ಮುಂತಾಗಿ ಐದು ದೋಷಗಳನ್ನು ಹಣಕ್ಕೆ ಹೇಳಿದ್ದಾರೆ. ಇನ್ನೊಬ್ಬರನ್ನು ಹಿಂಸೆಮಾಡದೆ ಹಣಸಂಪಾದಿಸುವುದಕ್ಕಾ ಗುವುದೇ ಇಲ್ಲ. ಶ್ರೀರಂಗನಾಥನಿಗೆ ಸಪ್ತಪ್ರಾಕಾರಗಳನ್ನು ಕಟ್ಟಿಸಿರು ವಂತೆ ಕಳ್ಳಕಾಕರ ಭಯದಿಂದ ಭದ್ರವಾಗಿ ಬ್ಯಾಂಕಿನ ಕಟ್ಟಡವನ್ನು ಕಟ್ಟಿ ಸಿದರೂ ಹೆಗ್ಗಣ ಕೊರೆದುಬಿಡುತ್ತದೆ. ಹೀಗೆ ಧನಕ್ಕೆ ಅನೇಕ ದೋಷ ಗಳು ಇರುವುದರಿಂದ, ವೈರಾಗ್ಯನಿಧಿಗಳಾದ ವೇದಾನ್ತದೇಶಿಕರು "ಕರಿ

ಶೈಲ" ದ ವಸ್ತುವಾದ ವರದರಾಜನೇ ಅವರ ಒಂದೇ ಆಸ್ತಿಯೆಂದು ಹೇಳಿದ್ದಾರೆ. ಆದುದರಿಂದ ಮೇಲೆ ಹೇಳಿದ ಯಾವ ವಸ್ತುವೂ ನಮ್ಮನ್ನು ರಕ್ಷಿಸದು. ರಕ್ಷಿಸುವ ಸಾಮರ್ಥ್ಯವು ಸರ್ವೇಶ್ವರನೊಬ್ಬನಿಗೇ. "ನಹಿ ಪಾಲನಸಾಮರ್ಥ್ಯಮೃತೇ ಸರ್ವೇಶ್ವರಂ ಹರಿಂ".

ಸೃಷ್ಟಿಗೆ ಬ್ರಹ್ಮನನ್ನೂ, ಸಂಹಾರಕ್ಕೆ ರುದ್ರನನ್ನೂ ನೇಮಿಸಿ ತಾನು ಸಾಕ್ಷಾತ್ತಾಗಿ ರಕ್ಷಣೆಯ ಭಾರವನ್ನು ಸ್ವಾಮಿಯು ವಹಿಸಿಕೊಂಡಿದ್ದಾನೆ. "ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಳಯಸ್ತಥಾ" ಈ ಗೀತಾವಚನವನ್ನು ನೋಡಿದರೆ ಶ್ರೀಮನ್ನಾರಾಯಣನೇ ಅವರ ಮೂಲಕ ಸೃಷ್ಟಿ ಸಂಹಾರಗಳನ್ನು ನಡೆಸುವನೆಂಬುದು ತಿಳಿದುಬರುತ್ತದೆ. ಸೃಷ್ಟಿಕರ್ತನಿಗೂ ಆತ ಸೃಷ್ಟಿಕರ್ತ. ಸಂಹಾರಕನಿಗೂ ಆತ ಸಂಹಾರಕ. ಸೃಷ್ಟಿಯೂ ಸಂಹಾರವೂ ರಕ್ಷಣೆಯಲ್ಲಿಯೇ ಸೇರುತ್ತದೆ. ರೈತನು ಬೀಜವನ್ನು ಬಿತ್ತುವುದರಿಂದ ಹಿಡಿದು ಪೈರನ್ನು ಕಟಾವುಮಾಡುವವರೆಗೂ ಅದು ರಕ್ಷಣೆಯಾಗುವಂತೆ ಶರೀರೇಂದ್ರಿಯಗಳು ಇಲ್ಲದ ಕಾಲದಲ್ಲಿ ಅವನ್ನು ಕೊಡುವುದೂ ಒಂದು ರಕ್ಷಣೆಯೇ. ಜ್ಞಾನವಿಕಾಸವನ್ನು ಆತನು ಉಂಟುಮಾಡುವುದು ಅದೆಂತಹ "ಆತ್ಮರಕ್ಷಣೆ" ನೋಡಿ. ಅರಣಿಯಲ್ಲೇ ಅಗ್ನಿಯು ಹುಟ್ಟಿ ಅರಣಿಯನ್ನೇ ನಾಶಮಾಡುವಂತೆ, ಶರೀರಸಂಬಂಧದಿಂದಲೇ ಆತ್ಮನಿಗೆ ಜ್ಞಾನವು ಉಂಟಾಗಿ, ಆ ಜ್ಞಾನದಿಂದಲೇ ಶರೀರವನ್ನು ಕಳೆದುಕೊಳ್ಳಬೇಕು. ಆತ್ಮಜ್ಞಾನ, ವಿಕಾಸ; ಶರೀರಕ್ಷಯ, ಆದರೆ ನಾವು ತಿರುಗು ಮುರುಗುಮಾಡುತ್ತೇವೆ. ನಾವು ಶರೀರವನ್ನೇ ಬೆಳಸಿಕೊಂಡು ಆತ್ಮಕ್ಷಯದ ಹಾದಿಯಲ್ಲಿ ಪಯಣಹೊರಟಿದ್ದೇವೆ. ಅತಿ ತುಂಟಾಟಮಾಡುವ ಹುಡುಗರನ್ನು ಕೈಕಾಲುಕಟ್ಟಿ ಕೊಠಡಿಯಲ್ಲಿ ಕೂಡುವಂತೆ ನಮ್ಮಗಳ ಚಾಳಿಯನ್ನು ಕಂಡು ಕೆಟ್ಟವಾಸನೆಯು ತೊಲಗಲೆಂದು ತನ್ನೊಳಗೆ ಬಹುಕಾಲ ದೇವರು ಇಟ್ಟುಕೊಳ್ಳುವ ಪ್ರಳಯವೂ ನಮ್ಮನ್ನು ರಕ್ಷಿಸುವುದಕ್ಕಾಗಿಯೇ. ಹೀಗೆ ಸೃಷ್ಟಿ, ಸ್ಥಿತಿ, ಸಂಹಾರರೂಪವಾದ ರಕ್ಷಣೆಯೇ ಭಗವಂತನ ಧರ್ಮವು.

# ಏಳನೆಯ ದಿನದ ಉಪನ್ಯಾಸ

## ೨೭–೩೦ ಬಿನ್ನಪಗಳು.

ನೆನ್ನೆಯ ದಿನ ಇಪ್ಪತ್ತಾರನೆಯ ಬಿನ್ನಪದ ವಿಷಯವನ್ನು ಹೇಳಿ ಮುಗಿಸಲಾಯಿತು. ಉಳಿದ ಈ ಕೊನೆಯ ನಾಲ್ಕು ಬಿನ್ನಪಗಳಲ್ಲಿ ಬಹಳ ಸಾರವಾದ ಅರ್ಥಗಳನ್ನು ಚಿಕ್ಕದೇವರಾಜರು ಚೆಲುವಾಗಿ ನಿರೂಪಿಸುತ್ತಾರೆ. ಮೊದಲು ಇಪ್ಪತ್ತೇಳನೆಯ ಬಿನ್ನಪದಲ್ಲಿ ಸ್ವಾಮಿಯ ಚರಣಕಮಲಗಳಲ್ಲಿ ಶರಣಾಗತಿಯನ್ನು ಆಚರಿಸುತ್ತಾರೆ. ದೇವರಿಂದಲೇ ದೇವರು ಸಿಗುವನೆಂಬ ಪ್ರಪತ್ತಿಧರ್ಮವೇ ಮುಖ್ಯವೆಂದು ಇದರಿಂದ ತಿಳಿಸುತ್ತಾರೆ. ಬೇರೆ ವಿಷಯವನ್ನು ಕಲೆಸದೆ ಪ್ರೀತಿಯಿಂದ ದೇವರನ್ನೇ ಕುರಿತು ಚಿಂತಿಸುವ ಭಕ್ತಿಯೇ ಮೋಕ್ಷಸಾಧನವೆಂದು ಉಪನಿಷತ್ತುಗಳು ಹೇಳಿವೆ. ಆದರೆ ರಹಸ್ಯಶಾಸ್ತ್ರಗಳಲ್ಲಿ ದೇವರೇ ಸಿದ್ಧೋಪಾಯ ಎಂಬುದನ್ನು ಚೆನ್ನಾಗಿ ವಿವರಿಸಿದೆ. ಇದರಿಂದ ಭಕ್ತಿಯು ಕೂಡದೆಂದು ಅರ್ಥವಲ್ಲ. ಈ "ದೇಹಿ ಮೇ ದದಾಮಿ ತೇ" ನ್ಯಾಯವು ಜೀವಾತ್ಮನ ಸಾರವತ್ತಾದ ಸ್ವರೂಪಕ್ಕೆ ಸೇರದು.

ಜೀವಾತ್ಮನು ಪರಮಾತ್ಮನಲ್ಲಿ ನಡೆದುಕೊಳ್ಳಬೇಕಾದ ಮಾರ್ಗವನ್ನು ಪತ್ನಿಯು ಪತಿಯ ವಿಷಯದಲ್ಲಿ ನಡೆದುಕೊಳ್ಳುವ ರೀತಿಯಿಂದ ಒಂದು ವಿಧವಾಗಿ ಉದಹರಿಸಬಹುದು. ಪತಿವ್ರತೆಯಾದವಳು ಪತಿಯಲ್ಲಿ ಪ್ರೇಮದಿಂದ ಶುಶ್ರೂಷೆ ಮಾಡುತ್ತಾಳೆ. ಆದರೆ ಆಕೆಗೆ ಆ ಪ್ರೇಮಮಯ ಉಪಚಾರವೇ ಪ್ರಯೋಜನ. ಆ ಸೇವೆಯೊಂದರಿಂದಲೇ ಆಕೆಯು ತೃಪ್ತಿಪಟ್ಟುಕೊಂಡಾಳು. ಅಂದರೆ ತಾನು ಮಾಡಿದ ಸೇವೆಗೆ ಬೇರೊಂದು ಫಲವನ್ನು ಎಳಸಳು. ಗಂಡನಿಗೆ ವಿಧೇಯಳಾಗಿದ್ದು ಉಪಚಾರ ನಡೆಸಿದರೆ ಒಳ್ಳೆಯ ಸೀರೆ, ಒಡವೆ ಸಿಕ್ಕೀತೆಂಬ ಭಾವನೆಯು ಅವಳಲ್ಲಿ ಸುಳಿಯದು. ಗಂಡನು ಹೇಗಿದ್ದರೂ ಸರಿಯೆ, ತಾನು ಅವನ ಸೇವಕಳು; ಇದಿಷ್ಟೇ ಅವಳ ಭಾವ. ತಾನು ಗಂಡನಲ್ಲಿ ತೋರುವ ಪ್ರೀತಿಯು ಆಕೆಗೆ ಸಾಧನವೆನಿಸದು. ಹಾಗೆಯೇ ಜೀವಾತ್ಮನಿಗೆ ಭಕ್ತಿಯು ಸಾಧನವಾಗಕೂಡದು.

ಇದನ್ನು ಹಿರಿಯರ ಅನುಷ್ಠಾನದಲ್ಲಿ ಚೆನ್ನಾಗಿ ನೋಡಬಹುದು. ಯಾಮುನಾಚಾರ್ಯರು "ನಧರ್ಮನಿಷ್ಠೋಽಸ್ಮಿ ನ ಚಾತ್ಮವೇದೀ ನಭಕ್ತಿ ಮಾಂಸ್ತ್ವಚ್ಚರಣಾರವಿಂದೇ" ಎಂದು ಹೇಳುವ ಸ್ಥಳದಲ್ಲಿ "ಕರ್ಮ ಯೋಗ, ಆತ್ಮಜ್ಞಾನ, ಭಕ್ತಿಯೋಗ" ಈ ಸಾಧನವಾವುದೂ ನನ್ನಲ್ಲಿಲ್ಲ ಎನ್ನುತ್ತಾರೆ. ಹೀಗೆ ಭಕ್ತಿಯು ತಮಗಿಲ್ಲವೆನ್ನುವ ಆಚಾರ್ಯರು ಮುಂದೆ "ಕದಾ ಪುನಃ ಶಂಖರಥಾಂಗ ಕಲ್ಪಕ ಧ್ವಜಾರವಿಂದಾಂಕುಶ ವಜ್ರಲಾಂ ಛನಂ। ತ್ರಿವಿಕ್ರಮ ತ್ವಚ್ಚರಣಾಂಬುಜದ್ವಯಂ ಮದೀಯಮೂರ್ಧಾನ ಮಲಂಕರಿಷ್ಯತಿ ||" ಎಂದು ದೇವರ ಪಾದಾರವಿಂದಗಳನ್ನು ಕುರಿತು ಹಂಬಲಿಸುತ್ತಾರೆ. ಈ 'ಕದಾ' ಎನ್ನುವ ಕಾತರಕ್ಕೂ 'ನಭಕ್ತಿಮಾನ್' ಎನ್ನುವುದಕ್ಕೂ ಹೇಗೆ ಸರಿಹೋಗುವುದು? ಎಂದು ಕೇಳಬಹುದು.

ಯಾಮುನಾಚಾರ್ಯರಿಗೆ 'ಸಾಧನವಾದ ಭಕ್ತಿ' ಇಲ್ಲ. ಆದರೆ ಶೇಷಭೂತನಾದ ತನ್ನ ಸ್ವರೂಪಕ್ಕೆ ಅನುರೂಪವಾಗಿ ಶೇಷಿಯಾದ ಭಗ ವಂತನಲ್ಲಿ ಏರ್ಪಡುವ ಪ್ರೀತಿಯಾದ ಭಕ್ತಿಯೂ, ಆ ಭಗವಂತನನ್ನು ಹೊಂದಬೇಕೆನ್ನುವ ಕಾತುರವೂ ಇದ್ದೇ ಇದ್ದಿತು. ಇದೇ ರೀತಿಯಾದ ಭಕ್ತಿಯನ್ನು ಶ್ರೀ ಆಂಡಾಳ್ ಅವರಲ್ಲಿಯೂ ನೋಡಬಹುದು. ಭಗವಂ ತನ ಪಾದಗಳನ್ನು ಅನನ್ಯಶರಣಳಾಗಿ ಹೊಂದುವಾಗ "ಉನ್‌ಪೊಱ್‌ಱಾ ಮರೈ ಅಡಿಯೇ ಪೋಱ್‌ಱುಂ ಪೊರುಳ್‌ಕೇಳಾಯ್" ಎಂದು ಹೇಳು ತ್ತಾರೆ. ಹೆಂಗಸರಿಗೆ ಹೊನ್ನಿನಲ್ಲಿಯೂ ಹೂವಿನಲ್ಲಿಯೂ ಸಹಜವಾಗಿರ ತಕ್ಕ ಪ್ರೀತಿಯು ಆಂಡಾಳ್ ಅವರಿಗೆ ಭಗವಂತನ ಚರಣಕಮಲಗಳಲ್ಲಿ ಉಂಟಾಗಿದೆ. ಅವು ಸ್ವರ್ಣಕಮಲಗಳಾಗಿರುವುದರಿಂದ, ಅವರು ಹೊ ನ್ನಿಗೂ, ಹೂವಿಗೂ ಬೇರೆಡೆಗೆ ಹೋಗುವ ಅವಶ್ಯಕತೆಯೇ ಇಲ್ಲ.

ಜೀವಾತ್ಮನ ಸ್ವರೂಪಕ್ಕೆ ಉಚಿತವಾದ ಈ ತೆರದ ಭಕ್ತಿಯು, ಸಿದ್ಧ ಸಾಧನವೆನಿಸಿದ ದೇವರ ದಯೆಯಿಂದ ಬರತಕ್ಕದ್ದು. ಪ್ರವೃತ್ತಿಶಾಸ್ತ್ರ ಗಳಲ್ಲಿ ಹೇಳಿರುವ ಸಾಧನಭಕ್ತಿಯು ಜೀವಾತ್ಮನ ಪ್ರಯತ್ನದಿಂದ ಬರ ತಕ್ಕದ್ದು. ಅಂತೆಯೇ ಆ ಭಕ್ತಿಯು ಜೀವಾತ್ಮನ ನಿಷ್ಕೃಷ್ಟಸ್ವರೂಪವಾದ

ಅತ್ಯಂತ ಪಾರತಂತ್ರ್ಯಕ್ಕೆ ವಿರೋಧಿ. ಆದುದರಿಂದ ದೇವರನ್ನು ಹೊಂದಲು ದೇವರೇ ಉಪಾಯ.

ಹೀಗೆ ದೇವರೇ ಉಪಾಯವೆಂದಮೇಲೆ, ದೋಷಭೂಯಿಷ್ಠರಾದ ನಾವು ಭಗವಂತನನ್ನೇ ನೇರವಾಗಿ ಹೇಗೆ ಉಪಾಯವಾಗಿ ಹೊಂದಬಹುದು ಎನ್ನುವ ಅತಿಶಂಕೆಯು ಏರ್ಪಡುತ್ತದೆ. ದೇವರಿಗಿರುವ ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯ ಈ ನಾಲ್ಕು ಗುಣಗಳು ನಮಗೆ ಈ ವಿಷಯದಲ್ಲಿ ಧೈರ್ಯವನ್ನು ಕೊಡಬೇಕು.

ವಾತ್ಸಲ್ಯ :—

ವಾತ್ಸಲ್ಯವೆಂಬುವುದು ಭಗವಂತನನ್ನು ಮೊಟ್ಟಮೊದಲು ಆಶ್ರಯಿಸುವ ಚೇತನನಿಗೆ ಅತಿ ಮುಖ್ಯ. ತಂದೆತಾಯಿಗಳಿಗೆ ಮಕ್ಕಳಲ್ಲಿರುವ ಪ್ರೀತಿಗೆ ಸಾಧಾರಣವಾಗಿ ವಾತ್ಸಲ್ಯವೆನ್ನುವರು. ದೋಷವನ್ನು ನೋಡದೆ ಪ್ರೀತಿಮಾಡುವುದೇ ಅದರ ಸ್ವರೂಪ. ನಮ್ಮ ದೋಷಗಳನ್ನು ಕಂಡು ದೇವರು ಏನು ಮಾಡಿಬಿಡುವನೋ ಎನ್ನುವ ಭೀತಿಯು ಇದ್ದರೆ ಹೇಗಾಗುತ್ತದೆ? ನಮ್ಮ ಅಪರಾಧವೋ ಬಹಳ ದೊಡ್ಡದು. ನಾವು ಅಪರಾಧ ಮಾಡಿದ್ದೇವೆ. ನಮ್ಮಲ್ಲಿ ಅಪರಾಧವಿದೆ ಎಂದು ಹೇಳುವ ಹಾಗೆಯೂ ಇಲ್ಲ. ಅಂದರೆ ನಾವು ಬೇರೆ, ನಮ್ಮ ಅಪರಾಧ ಬೇರೆಯಲ್ಲ. ನಾವೇ ಅಪರಾಧಗಳ ಮೊಟ್ಟೆಯಾಗಿದ್ದೇವೆ. ಇಂಥ ನಮ್ಮಗಳಲ್ಲಿರುವ ದೋಷಗಳನ್ನು ಗಮನಿಸದೆ ನಮಗೆ ಅನುಗ್ರಹಮಾಡುವುದರಿಂದ ಭಗವಂತನನ್ನು ನಮ್ಮಾಳ್ವಾರ್ರು "ನಿಹರಿಲ್ ಪುಹಳಾಯ್" (ಅದ್ವಿತೀಯವಾದ ಯಶಸ್ಸು ಪಡೆದವನೇ) ಎಂದು ಸ್ತುತಿಸಿದ್ದಾರೆ. ಈ ಗುಣವೇ ವಾತ್ಸಲ್ಯ.

ಈ ವಾತ್ಸಲ್ಯವೆಂಬ ಗುಣಕ್ಕೆ ಅರ್ಥವನ್ನು ಹೇಳುವಾಗ ಲೋಕಾಚಾರ್ಯ ಸಂಪ್ರದಾಯಕ್ಕೂ, ವೇದಾನ್ತದೇಶಿಕ ಸಂಪ್ರದಾಯಕ್ಕೂ ಭಿನ್ನಾಭಿಪ್ರಾಯವಿರುವುದಾಗಿ ಅನೇಕರು ಬಗೆದಿದ್ದಾರೆ. "ದೋಷಾದರ್ಶನಹೇತುಃ ಸ್ನೇಹಃ ವಾತ್ಸಲ್ಯಂ" ಎಂದು ವೇದಾನ್ತದೇಶಿಕರೂ, "ದೋಷಭೋಗ್ಯತಾಹೇತುಃ ಸ್ನೇಹಃ ವಾತ್ಸಲ್ಯಂ" ಎಂದು ಪಿಳ್ಳೈಲೋಕಾಚಾರ್ಯರೂ ಬೇರೆಬೇರೆಯಾಗಿ ಹೇಳಿದ್ದಾರೆಂಬುದು ಅವರ ವಾದ.

"ಶ್ರುತಪ್ರಕಾಶಿಕೆ" ಗ್ರಂಥದಲ್ಲಿ 'ದೋಷವು ಕಾಣದಿರುವಂತಹ ಪ್ರೀತಿಯೇ ವಾತ್ಸಲ್ಯ' ಎನ್ನುವುದು ವಾತ್ಸಲ್ಯಗುಣದ ಮೊದಲ ಮೆಟ್ಟಲೆಂದೂ, "ದೋಷವನ್ನು ಕಂಡರೂ ಅದು ದೇವರಿಗೆ ಭೋಗ್ಯವಾಗಿಯೇ ಇರುತ್ತದೆ" ಎಂಬುದು ವಾತ್ಸಲ್ಯದ ಪಕ್ವದೆಶೆಯೆಂದೂ ಅಭಿಪ್ರಾಯಪಟ್ಟಿದ್ದಾರೆ.

ಮಣವಾಳಮಾಮುನಿಗಳು "ವಿದಿತಃ ಸಹಿ ಧರ್ಮಜ್ಞಃ ಶರಣಾಗತ ವತ್ಸಲಃ | ಮಿತ್ರಮೌಪಯಿಕಂ ಕರ್ತುಂ" ಎಂದು ಸೀತೆಯು ರಾಮ ನೊಡನೆ ಸ್ನೇಹಮಾಡಿಕೊಳ್ಳುವಂತೆ ಅಶೋಕವನದಲ್ಲಿ ರಾವಣನಿಗೆ ಉಪ ದೇಶಿಸುವ ಈ ಶ್ಲೋಕದಲ್ಲಿರುವ 'ಶರಣಾಗತವತ್ಸಲಃ' "ಪಿಳ್ಳೈಯರಿ ಯಾದ ಪೆರುಮಾಳ್" (ದೋಷವರಿಯದ ದೇವರು) ಎಂದಿದ್ದಾರೆ. "ಅವಿಜ್ಞಾತಾ" ಎಂಬ ಸಹಸ್ರನಾಮದ ಸಿರಿನಾಮದಂತೆ ದೇವರು ಆಶ್ರಿ ತರ ದೋಷವನ್ನು ತಿಳಿಯದವನೇ ಹೌದು. ಈ ಕಡೆ "ಅರುಂಬದ" ದಲ್ಲಿ (ವ್ಯಾಖ್ಯಾನ) ರಾವಣನ ಪಾಪವು ಬಲುಕ್ರೂರ. ಅದನ್ನು ಭೋಗ್ಯ ವೆಂದು ಹೇಳುವುದು ಅನುಚಿತ. ಆದುದರಿಂದ ರಾಮನಿಗೆ ರಾವಣನ ಕ್ರೂರಪಾಪವು ಮನಸ್ಸಿಗೇ ಹತ್ತಿರಲಿಲ್ಲ, ಎಂದು ಮಾತ್ರ ಹೇಳಬಹುದು. ಆದುದರಿಂದ ಇಲ್ಲಿ "ದೋಷಾದರ್ಶನಹೇತುಃ ಸ್ನೇಹಃ" ಎಂಬ ವಾತ್ಸಲ್ಯ ವನ್ನೇ ಹೇಳಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

'ದೋಷಭೋಗ್ಯತ್ವವು' ವಾತ್ಸಲ್ಯವಾಗುವುದೆಂಬುದನ್ನು ವೇದಾಂತ ದೇಶಿಕರು ಅಂಗೀಕರಿಸಿದ್ದಾರೆ. ಒಮ್ಮೆ ಅವರು ದೇವರ ದರ್ಶನಕ್ಕೆ ಬರೀ ಕೈಯಲ್ಲಿ ಹೋಗುತ್ತಾರೆ. ಆಗ 'ಸ್ವಾಮಿ! ನಾನೇನೂ ತಂದಿಲ್ಲವೆಂದೆ ಣಿಸಬೇಡ. ಇದೋ ನನ್ನ ಅಪರಾಧಗಳೇ ನಿನ್ನ ಉಪಹಾರ' ಎನ್ನು ತ್ತಾರೆ. "ಔತ್ಸುಕ್ಯಪೂರ್ವಮುಪಹೃತ್ಯ ಮಮಾಪರಾಧಾನ್" ಎನ್ನು ವುದೇ ಅವರ ವಾಕ್ಯ.

ಹೀಗೆ ಪೂರ್ವ, ಪಕ್ವ ದಶಾಭೇದೇನ ಇಬ್ಬರು ಆಚಾರ್ಯರೂ ವಾತ್ಸ ಲ್ಯವನ್ನು ಒಂದೇ ಬಗೆಯಾಗಿ ವರ್ಣಿಸಿದ್ದಾರೆ. ಸಮುದ್ರದಲ್ಲಿ ಎಂದಾ ದರೂ ಅಲೆಗಳು ನಿಂತಲ್ಲಿ ನಮ್ಮಲ್ಲೂ ದೋಷಗಳು ನಿಂತಾವು! ಆದುದ ರಿಂದ ಆ ಸ್ವಾಮಿಯು ವಾತ್ಸಲ್ಯದಿಂದ ನಮ್ಮ ತಪ್ಪುಗಳನ್ನು ಎಣಿಸದೆಯೇ,

ಅಥವಾ ಎಣಿಸಿದರೂ ಭೋಗ್ಯವಾಗಿಯೇ ತಿಳಿದುಕೊಂಡು ನಮ್ಮನ್ನು ರಕ್ಷಿಸುತ್ತಾನೆ. ಹೀಗೆ ಈ ವಾತ್ಸಲ್ಯವೆಂಬ ಭಗವದ್‌ಗುಣವು ಆಶ್ರಯಣ ಸೌಕರ್ಯಾಪಾದಕವಾಗಿದೆ.

### ಸ್ವಾಮಿತ್ವ :

ಇನ್ನು ಸ್ವಾಮಿತ್ವ—ಯಜಮಾನಿಕೆ. ನಾವು ಅವನ ಆಳು. ಅತನು ನಮಗೆ ಸ್ವಾಮಿ. ನಾವೋ ಯಜಮಾನನ ಮಾತನ್ನು ಕೊಂಚವೂ ನಡೆಸುವುದಿಲ್ಲ. ಸೂರ್ಯೋದಯಕ್ಕೆ ಐದು ಘಳಿಗೆ ಮುಂಚೆ, ಪಂಚಪಂಚ ಉಷಃಕಾಲದಲ್ಲಿ ಎದ್ದು ಅವನ ಆಜ್ಞಾರೂಪವಾದ ವಿಧಿಗಳನ್ನು ನಾವೆಷ್ಟ ರಮಟ್ಟಿಗೆ ಪರಿಪಾಲಿಸುತ್ತೇವೆ? ಇಂಥ ಅವಿನೀತರಾದ ನಮ್ಮನ್ನು ಸ್ವಾಮಿ ಯಾದ ಅವನು ಹೇಗೆ ರಕ್ಷಿಸುವನು ಎಂಬ ಪ್ರಶ್ನೆಗೆ "ತನ್ನ ಸ್ವತ್ತನ್ನು ರಕ್ಷಿಸಿಕೊಳ್ಳುವುದು ಸ್ವಾಮಿಯ ಕೆಲಸವೇ. ಸ್ವತ್ತು ತನ್ನನ್ನು ತಾನು ರಕ್ಷಿಸಿಕೊಳ್ಳಬಲ್ಲದೇ?" ಆಜ್ಞಾಭಂಗವನ್ನು ಮಾಡುವ ನಮ್ಮನ್ನು ಸ್ವತ್ತಾಗಿ ಉಳ್ಳ ಭಗವಂತನನ್ನು ಬಂಜರುಭೂಮಿಯ ಯಜಮಾನನ ದೃಷ್ಟಿಯಿಂದ ನೋಡಬಹುದು. ಏನೂ ಬೆಳೆಯದ ಬಂಜರುಪ್ರದೇಶ ವನ್ನು ರೈತನಾದವನು ಬಲು ಕಷ್ಟಪಟ್ಟು ಸಾಗುವಳಿ ಮಾಡಿ, ಪೈರು ಬೆಳೆದು ಮನೆಗೆ ಧಾನ್ಯ ತುಂಬಿಕೊಳ್ಳುತ್ತಾನೆ. ಹೀಗೆಯೇ ಆಜ್ಞಾಭಂಗ ಮಾಡುವ ನಮ್ಮನ್ನು ಭಗವಂತನು ಇನ್ನೂ ವಿಶೇಷ ಗಮನ ಕೊಟ್ಟು ಸರಿಪಡಿಸಿ ಅನುಭವಿಸುತ್ತಾನೆ.

### ಸೌಶೀಲ್ಯ :

ದೇವರು ಯಾವ ಬಗೆಯ ಹೊಲಸನ್ನೂ ಅಂಟಿಸಿಕೊಳ್ಳದೆ ಕಲ್ಯಾಣ ನಿಧಿಯಾಗಿರುವಂಥವನು. ನಾವೋ ಕಶ್ಮಲದ ಗಣಿಯಾಗಿರುವಂಥ ವರು. ತಾನು ದೊಡ್ಡವನಾಗಿ ಉತ್ತಮಸ್ಥಾನದಲ್ಲಿದ್ದರೂ ಎಂಥ ನೀಚರ ಜೊತೆಯಲ್ಲೂ ಸಲೀಸಾಗಿ ಕೂಡಿಯಾಡುವ ಗುಣವು ಅವನಲ್ಲಿರುವುದ ರಿಂದಲೇ ನಾವು ಅವನನ್ನು ಆಶ್ರಯಿಸಲು ಸಾಧ್ಯ. ಈ ಗುಣವೇ ಸೌಶೀಲ್ಯ. ಬೇಡರವನಾದ ಗುಹನಲ್ಲಿ ಶ್ರೀರಾಮನು ನಡೆದುಕೊಂಡ

ಬಗೆಯು ಸೌಶೀಲ್ಯವನ್ನು ಪ್ರಕಾಶಪಡಿಸುತ್ತದೆ. ಈ ಸಂದರ್ಭವನ್ನು ತಿರುಮಂಗೈಯಾಳ್ವಾರ್ರು ವರ್ಣಿಸುವಾಗ ಶ್ರೀರಾಮನು ಗುಹನನ್ನು ನೋಡಿ "ಉಂಬಿ ಎಂಬಿ" ಎಂದು ಹೇಳಿದುದಾಗಿ ಹಾಡಿದ್ದಾರೆ. "ನಿನ್ನ ತಮ್ಮನಾದ ಲಕ್ಷ್ಮಣನು ನನ್ನ ತಮ್ಮ" ಎನ್ನುವುದೇ ಈ ಪಾಶುರದ ಅರ್ಥ. 'ಗುಹನ ಸಂಬಂಧದಿಂದಲೇ ಲಕ್ಷ್ಮಣನ ಸಂಬಂಧವು ರಾಮನಿಗೆ ಏರ್ಪಟ್ಟಿದೆ' ಎನ್ನುವವರೆಗೂ ಈ ಭಾವವು ಹರಿಯುತ್ತದೆ. ಸ್ವಾಮಿತ್ವದ ತೇಜಸ್ಸನ್ನು ಕಂಡು ಭಯಪಡುವ ನಮಗೆ ಈ ಸೌಶೀಲ್ಯವು ವಿಶ್ವಾಸವನ್ನುಂಟುಮಾಡುತ್ತದೆ.

## ಸೌಲಭ್ಯ :

ಪರಾತ್ಪರ ವಸ್ತುವಾದ ಅವನ ಸೌಲಭ್ಯವನ್ನು ಈಗ ಗಮನಿಸೋಣ. ಬ್ರಹ್ಮಾದಿಗಳಿಗೂ ಅವಾಙ್ಮನಸ ಗೋಚರನಾದವನು ಇಲ್ಲಿ ಅರ್ಚಾವತಾರದಲ್ಲಿ ಎಲ್ಲರಿಗೂ ಸುಲಭನಾಗಿ ದರ್ಶನವನ್ನು ಕೊಡುವುದೇ ಅವನ ಸೌಲಭ್ಯಗುಣಕ್ಕೆ ನಿದರ್ಶನ. ಶ್ರೀರಂಗಮಾಹಾತ್ಮ್ಯದಲ್ಲಿ ಒಂದು ಚರಿತ್ರೆಯು ಬರುತ್ತದೆ. ದೇವರ ನಾಭಿಕಮಲದಲ್ಲಿ ಹುಟ್ಟಿದ ಬ್ರಹ್ಮನು ತಾನು ಎಲ್ಲಿ ಹುಟ್ಟಿದೆನೆಂಬುವನ್ನು ತಿಳಿದುಕೊಳ್ಳಲು ಅದೇ ತಾವರೆ ನಾಳದಲ್ಲಿ ಕೆಳಕೆಳಗೆ ಇಳಿಯುತ್ತಾ ಹೋದಾಗ ತಾವರೆಯ ಉದ್ಭವಸ್ಥಾನವು ಸಿಗಲೇ ಇಲ್ಲವಂತೆ! ಇದನ್ನೇ ಪೊಯ್‌ಹೈ ಆಳ್ವಾರ್‌ರವರು "........ ನೇರೆ ಕಡಿ ಕ್ಕಮಲತ್ತುಳ್ಳಿರುನ್ದುಂ ಕಾಣ್‌ಗಿಲಾ್ರ್‌, ಕಣ್ಣನಡಿಕ್ಕಮಲನ್ ತನ್ನೈ ಅಯನ್" ಎನ್ನುವ ಪಾಶುರದಲ್ಲಿ ಹೇಳಿದ್ದಾರೆ. "ಭಗವಂತನ ನಾಭಿಕಮಲದೊಳಗೆ ಇರುವ ಬ್ರಹ್ಮನಿಗೇ ಅವನ ಪಾದಕಮಲಗಳು ಗೋಚರವಾಗಲಿಲ್ಲ" ಎನ್ನುವುದೇ ಇದರ ಅರ್ಥ. ಹೀಗೆ ಅವ್ಯವಧಾನೇನ ಹುಟ್ಟಿದ ದೇವರ ಜ್ಯೇಷ್ಠಪುತ್ರನಿಗೇ ಸ್ವಾಮಿಯು ದುರ್ಲಭನಾಗಿರುವಾಗ ನಮ್ಮಂಥವರಿಗೇನು ಸುಲಭನೆ? ಈ ಪ್ರಶ್ನೆಗೆ ಉತ್ತರವನ್ನು ದೇವರು ಬಾಯಾರ ಹೇಳದೆ, ಅರ್ಚಾಸ್ಥಳಗಳಲ್ಲಿ ಇದೋ ಯದುಶೈಲವಲ್ಲಭನಾಗಿ ಗುಣಪೂರ್ತಿಯೊಡನೆ ಅತ್ಯಂತ ಸುಲಭನಾಗಿ ನಾವೆಲ್ಲರೂ ಆಶ್ರಯಿಸಲು ಕಾದು ನಿಂತಿದ್ದಾನೆ!

ಹೀಗೆ ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯಗಳೆಂಬ ಭಗವಂತನ ಗುಣಗಳು ಆಶ್ರಯಣ ಸೌಕರ್ಯಾಪಾದಕಗಳೆಂದು ತಿಳಿದಂತಾಯಿತು.


## ಬಿನ್ನಪ ೨೮

ಇಪ್ಪತ್ತೆಂಟನೆಯ ಬಿನ್ನಪದಲ್ಲಿ ನಮಗೆ ತಡೆಯಾಗಿರುವ ವಿರೋಧಿಸ್ವರೂಪವನ್ನು ಹೇಳಿದೆ. ಈ ವಿರೋಧಿಸ್ವರೂಪವು ನಾಲ್ಕು ಬಗೆಯಾಗಿರುತ್ತದೆ. ಜ್ಞಾನವಿರೋಧಿ, ರುಚಿವಿರೋಧಿ, ವರಣವಿರೋಧಿ ಮತ್ತು ಪ್ರಾಪ್ತಿವಿರೋಧಿ. ಗಿಣಿಗೆ ಹೇಳುವಂತೆ ಹೇಳಿದರೂ ಕೆಲವರಿಗೆ ಜ್ಞಾನವೇ ಹುಟ್ಟುವುದಿಲ್ಲ. ಮತ್ತೆ ಕೆಲವರು ಹೀಗೆ ಹೇಳಿದುದನ್ನು ಹಾಗೆ ತಿಳಿದುಕೊಳ್ಳುತ್ತಾರೆ. ಅಂಥವರಿಗೆ ಜ್ಞಾನವಿರೋಧಿಯಾದ ಪಾಪವಿರುತ್ತದೆ. ಆದರೆ ಕೆಲವರು ಬುದ್ಧಿವಂತರಾಗಿ ವಿಷಯಜ್ಞಾನವುಳ್ಳವರಾದರೂ ದೇವಸ್ಥಾನದ ಕಡೆಗೇ ತಲೆಹಾಕುವುದಿಲ್ಲ. ಭಗವದ್ವಿಷಯದಲ್ಲಿ ಅವರಿಗೆ 'ರುಚಿ' ಹುಟ್ಟದು. ಇವರುಗಳನ್ನು ರುಚಿವಿರೋಧಿಯಾದ ಪಾಪವು ಬಾಧಿಸುತ್ತದೆ. ಕೆಲವರು ಪಾಂಡಿತ್ಯವನ್ನು ಪಡೆದು ಬೇಕಾದಷ್ಟು ಪುಸ್ತಕ ವ್ಯಾಖ್ಯಾನವನ್ನು ನಡೆಸುತ್ತಾರೆ. ಆದರೆ "ಕೇಶವಾಯ ನಮಃ" ಎಂದು ಒಂದು ಬಾರಿಯಾದರೂ ಹೇಳುವುದಿಲ್ಲ. ಇಂಥವರು ಜ್ಞಾನ, ರುಚಿ, ಇದ್ದರೂ ದೇವರನ್ನು ವರಿಸರು. ಇಂಥವರಲ್ಲಿ ವರಣವಿರೋಧಿಯಾದ ಪಾಪವು ಇರುತ್ತದೆ. ಈ ಜ್ಞಾನ, ರುಚಿ, ವರಣವಿರೋಧಿಗಳಾದ ಪಾಪಗಳಿರುವವರೆಗೂ ದೇವರನ್ನು ಆಶ್ರಯಿಸಲು ಆಗುವುದೇ ಇಲ್ಲ. ಆಶ್ರಯಣಮಾಡಿದ ಮೇಲೂ ಭಗವಂತನನ್ನು ಹೊಂದಲು ಪ್ರಾಪ್ತಿವಿರೋಧಿಯಾದ ಪಾಪವು ಅಡ್ಡಿಮಾಡುತ್ತದೆ. "ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎನ್ನುವ ಗೀತಾವಾಕ್ಯದಲ್ಲಿ, ಆಶ್ರಯಣಮಾಡಿರುವವರ ವಿಷಯವಾಗಿ ಪ್ರಸ್ತಾಪಮಾಡಿರುವುದರಿಂದ ದೇವರನ್ನು ಹೊಂದಲಿರುವ ಪ್ರಾಪ್ತಿವಿರೋಧಿಯಾದ ಪಾಪವನ್ನೇ ಹೇಳಿದೆ.

ಹಿಂದಿನ ಇಪ್ಪತ್ತೆಳನೆಯ ಬಿನ್ನಪದಲ್ಲಿ ರಾಜರು ತಿರುನಾರಾಯಣ ನಲ್ಲಿ ಶರಣುಮಾಡಿರುವುದರಿಂದಲೇ ಅವರಿಗೆ ಭಗವದನುಗ್ರಹದಿಂದ, ಜ್ಞಾನ, ರುಚಿ, ವರಣವಿರೋಧಿಗಳಾದ ಪಾಪಗಳು ತೊಲಗಿಹೋದುವೆಂದು ತಿಳಿಯುತ್ತದೆ. ಆದರೆ ಪ್ರಾಪ್ತಿವಿರೋಧಿಯು ಇನ್ನೂ ನಿಂತು ಎಲ್ಲಿ ಅಡ್ಡಿ ತರುತ್ತದೋ ಎನ್ನುವ ಶಂಕೆ ಇದೆ. ಅದರಿಂದ ಈ ಬಿನ್ನಪದ ಪ್ರಾರಂಭ ದಲ್ಲಿ ಮಾಯೆಯಿಂದಲೂ ಅದರ ಕಾರ್ಯಗಳಿಂದಲೂ ತನ್ನನ್ನು ಬಿಡು ಗಡೆ ಮಾಡಿಕೊಡಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತಾರೆ.

ನಿತ್ಯ, ಮುಕ್ತ, ಬದ್ಧರೆಂಬ ತ್ರಿವಿಧಚೇತನರುಗಳ ವಿಷಯದಲ್ಲಿ ಭಗವದನುಗ್ರಹವು "ಪ್ರಾಪ್ತಿವಿರೋಧಿ" ಯನ್ನು ಹೇಗೆ ತಡೆಗಟ್ಟುವು ದೆಂಬುದನ್ನು ಸ್ವಲ್ಪ ಗಮನಿಸೋಣ. ನಿತ್ಯರಾದವರಿಗೆ ಭಗವಂತನ ಕೃಪೆಯಿರುವುದರಿಂದ ಸಂಸಾರಗಂಧವೇ ಏರ್ಪಡುವುದಿಲ್ಲ. ಹೀಗೆ ಯಾ ವೊಂದು ಪಾಪವೂ ಇಲ್ಲದಿರುವಾಗ ನಿತ್ಯರಾದವರಿಗೇಕೆ ಭಗವಂತನ ದಯೆ ಎಂದರೆ; ಅವರಿಗೆ ಭಗವಂತನ ನಿತ್ಯೇಚ್ಛೆಯಿಂದ ಲಬ್ಧವಾಗಿರುವ ನಿತ್ಯಕೈಂಕರ್ಯರೂಪ ಪುರುಷಾರ್ಥವು ಎಂದೂ ತಪ್ಪದೆ ನಿರ್ವಾಹವಾಗುವ ಸಲುವಾಗಿ ದೇವರ ಕೃಪೆಯು ಬೇಕು.

ಸಂಸಾರಿಗಳಾಗಿದ್ದು ಭಗವಂತನ ದಯೆಯಿಂದ ಎಲ್ಲ ಪಾಪವೂ ಹೋಗಿ ಕೆಲವರು ಮುಕ್ತರಾಗುತ್ತಾರೆ. ಹುಟ್ಟುವಾಗ ದೇವರು ಯಾರ ನ್ನು ಕಟಾಕ್ಷಿಸುತ್ತಾನೆಯೋ ಅಂಥವರೇ ಮುಕ್ತರಾಗಲು ಅರ್ಹರು. ಇವರಿಗೆ ಮುಕ್ತಿಯು ದೊರೆತ ಬಳಿಕ ನಿತ್ಯರಂತೆಯೇ ಅನುಭವವುಂಟು. ಈ ನಿತ್ಯಮುಕ್ತರಿಗೂ ಕೂಡ ಪರಮಪದದಲ್ಲಿ ಉಂಟಾಗುವ ಆನಂದವು ತಮಗೆ ಎಂದು, ಒಂದು ವೇಳೆ ತೋರಬಹುದೆಂದು ಹಿಂದೆಯೇ ಹೇಳಿದೆ. ಭಗವದ್ವಿಷಯದ ರಹಸ್ಯತೆಯು ಅಂಥವರಿಗೂ ಕೂಡ ಭೋಗದಲ್ಲಿ ಮಮ ತೆಯನ್ನು ಹುಟ್ಟಿಸುವಂಥದು! ಆದರೆ ಆ ಮಮತೆಯು ತಪ್ಪು. ಈ ವಿಷಯವನ್ನು ನಮ್ಮಾಳ್ವಾರ್ರು 'ಎಮ್ಮಾವೀಟ್ಟು' ಎನ್ನುವ ತಿರುವಾಯ್ ಮೊಳಿಯಲ್ಲಿ ತಿಳಿಸಿದ್ದಾರೆ. "ತನಕ್ಕೇಯಾಹ ವೆನ್ನೈಕ್ಕೊಳ್ಳುಮಾದೇ, ಎನಕ್ಕೇ ಕಣ್ಣನೈಯಾನ್‌ಗೊಳ್‌ಶಿಱಪ್ಪೇ." ಭಗವಂತನು ಆಳ್ವಾರ್ರವರಿಗೆ



ನ್ಯಾಯವೇದಾನ್ತವಿದ್ವಾನ್

ಶ್ರೀ. ಉ. ವೇ. ಕಾರ್ಪಂಕಾಡು ವೆಂಕಟಾಚಾರಿಯಾರ್‌ಸ್ವಾಮಿ.

ಮೇಲುಕೋಟೆಯಲ್ಲಿ ಎರಡನೆಯ ವರುಷದ ಚಿಕದೇವರಾಜಬಿನ್ನಪ
ಸಪ್ತಾಹದಲ್ಲಿ ಏಳು ದಿವಸಗಳು ಬಿನ್ನಪಗಳ ವಿಷಯವಾಗಿ
ತಮಿಳಿನಲ್ಲಿ ಉಪನ್ಯಾಸ ಮಾಡಿದರು.

ಮೋಕ್ಷವನ್ನು 'ಇದೋ ನಿಮಗೆ ಮೋಕ್ಷವನ್ನು ತೆಗೆದುಕೊಳ್ಳಿ' ಎನ್ನದೆ, 'ಇದೋ, ನನಗಾಗಿ ತೆಗೆದುಕೊಳ್ಳಿ' ಎಂದು ಕೊಡಬೇಕೆಂದು ಪ್ರಾರ್ಥಿಸುತ್ತಾರೆ! ದೇವರು ತನಗಾಗಿ, ತನ್ನ ಆನಂದಕ್ಕಾಗಿ ನಿತ್ಯಮುಕ್ತರನ್ನು ಆನಂದದಿಂದಿರಿಸುವುದೇ ಹೊರತು ಅವರ ಹರ್ಷಕ್ಕಾಗಿ ಅಲ್ಲ, ಎನ್ನುವ ಭಾವವು ನಿತ್ಯಮುಕ್ತರಿಗೆ ಇರಬೇಕು.

ವೇದಾನ್ತದೇಶಿಕರೂ "ಭುಙ್ಕ್ತೇ ಸ್ವಭೋಗಮಖಿಲಂ ಪತಿಭೋಗಶೇಷಂ" ಎಂದಿದ್ದಾರೆ. ಎಂದರೆ ಹೆಂಡತಿಯಾದವಳಿಗೆ ಗಂಡನಿಂದ ಸುಖಸಂತೋಷಗಳುಂಟಾದರೂ, ಅದು ತನ್ನ ಗಂಡನ ಭೋಗಕ್ಕೇ ಎಂದು ತಿಳಿಯುವುದು ಒಳಿತು. 'ನನ್ನ ಹೆಂಡತಿಯು ಸುಖವಾಗಿದ್ದಾಳೆ ಚೆನ್ನಾಗಿದ್ದಾಳೆ' ಎಂದು ಗಂಡನಿಗೆ ಉಂಟಾಗುವ ಆನಂದಕ್ಕಾಗಿ ತನ್ನ ಸುಖವನ್ನು ಅವಳು ಭೋಗಿಸುವುದು. ಆಳಾಗಿರುವವನು ತನ್ನ ಸ್ವಾಮಿಗೆ ಹೆಚ್ಚಳವನ್ನು ತರಬೇಕು. ಈ ರೀತಿಯಾಗಿ 'ಭಗವದತಿಶಯಾಧಾಯಕತ್ವ' ವೆಂಬ ಶೇಷತ್ವವು ಎಲ್ಲಾ ಜೀವಾತ್ಮರಿಗೂ ಇರಬೇಕಾದುದೇ. ನಿತ್ಯಮುಕ್ತರೂ ಭಗವಂತನ ಅತಿಶಯಕ್ಕಾಗಿಯೇ. ದೇವರೊಡನೆ ಭೋಗಿಸುವಾಗ ಸುಮ್ಮನೆ ಅವರು ಅಚೇತನದಂತಿದ್ದುಬಿಟ್ಟರೆ ದೇವರಿಗೆ ಸಂತಸವಾಗದು. ದೇವರ ಮುಖೋಲ್ಲಾಸಕ್ಕಾಗಿ ಜೀವಾತ್ಮನು ತನ್ನ ಸಂತೋಷವನ್ನು ತೋರ್ಪಡಿಸಬೇಕು. ಆಚಾರ್ಯರ ಪ್ರವಚನವನ್ನು ಕೇಳುತ್ತಾ, ಶಿಷ್ಯರಾದವರು ನಗುನಗುತ್ತಾ ತಲೆಯಲ್ಲಾಡಿಸಿ ಗುರುಗಳಿಗೆ ಪ್ರೋತ್ಸಾಹವನ್ನು ಕೊಡಬೇಕು. ಇಲ್ಲದೆ ಕಂಬದಂತೆ ಶಿಷ್ಯರು ಕುಳಿತಿದ್ದರೆ ಆಚಾರ್ಯರಿಗೆ ಸ್ಫೂರ್ತಿಯು ಬಾರದು.

ಭಗವಂತನ ಆನಂದಕ್ಕೆ ರಸಪೂರ್ತಿಯನ್ನು ಉಂಟುಮಾಡುವುದಕ್ಕೋಸ್ಕರವೇ ನಿತ್ಯಮುಕ್ತರು ಆನಂದಪಡಬೇಕೆಂದು ಇದರಿಂದ ತಿಳಿಯುತ್ತದೆ. ಅವರುಗಳಿಗೆ ಪ್ರಾಪ್ಯವಾದ ಭಗವತ್ಕೈಂಕರ್ಯವು ಅವರಿಗೆ ಆನಂದಾತಿಶಯವನ್ನು ಬೆಳೆಸಿಕೊಡುತ್ತದೆ. ಈ ಆನಂದದ ಸಲುವಾಗಿಯೇ ಕೈಂಕರ್ಯಮಾಡಿದರೆ, ಅವರ ಶೇಷತ್ವಕ್ಕೆ ಭಂಗವೇರ್ಪಡುವ ಪ್ರಸಕ್ತಿ ಬರುವುದರಿಂದ ಭಗವದನುಗ್ರಹವು ಅವರಿಗೆ ನಿತ್ಯವೂ ಬೇಕು.

ಬದ್ಧ ಚೇತನರನ್ನು ಎರಡು ಬಗೆಯೆಂದು ಮೊದಲೇ ವಿವರಿಸಿದೆ. ಮೋಕ್ಷದಲ್ಲಿ ಆಸೆಪಡುವವರು ಮುಮುಕ್ಷುಗಳು. ಮಿಕ್ಕವರು ಇಂತಹ ಉತ್ತಮವಾದ ಪುರುಷಾರ್ಥವನ್ನು ಅರಿಯದವರು.

ಸಂಸಾರಕ್ಕೆ ಮೂಲವಾದ ಅವಿದ್ಯಾ, ಕರ್ಮ, ವಾಸನಾ, ರುಚಿ ಗಳನ್ನು ಭಗವಂತನ ನಿರ್ಹೇತುಕ ಕೃಪೆಯಿಂದಲೇ ತೊಲಗಿಸಿಕೊಳ್ಳ ಬೇಕು. ಈ ರೀತಿಯಾಗಿ ಅನುಗ್ರಹಮಾಡುವುದಕ್ಕಾಗಿ ಮೋಕ್ಷದಲ್ಲಿ ಇಚ್ಛೆಯನ್ನು ಹುಟ್ಟಿಸುತ್ತಾನೆ. ಮುಮುಕ್ಷುವಾದ ಮೇಲೆಯೂ ಪ್ರಾಪ್ತಿ ವಿರೋಧಿಯಾದ ಪಾಪವು ನಿಂತಿರುತ್ತದೆ. ಅದೂ ಭಗವದನುಗ್ರಹದಿಂ ದಲೇ ತೊಲಗಬೇಕು.

ಚಿಕ್ಕದೇವರಾಜರು ಇಪ್ಪತ್ತೇಳನೆಯ ಬಿನ್ನಪದಲ್ಲಿ, ಭಗವಂತನ ಅನುಗ್ರಹದಿಂದ, ಅವನ ವಾತ್ಸಲ್ಯಾದಿ ಗುಣಗಳಿಂದ ತಮಗೆ ಏರ್ಪಟ್ಟ ವಿಶ್ವಾಸದಿಂದ ಅವನಲ್ಲಿ ಅಕಿಂಚನರಾಗಿ, ಅನನ್ಯಗತಿಕರಾಗಿ ಶರಣು ಹೊಂದುತ್ತಾರೆ. ಇಷ್ಟು ದೂರ ತನಗೆ ಅನುಗ್ರಹಮಾಡಿದ ಭಗವಂತನು ಉತ್ತಮ ಪುರುಷಾರ್ಥವನ್ನೂ ತನಗೀಯುವನೆಂದು ಅವನ ಕೃಪೆಯನ್ನವ ಲಂಬಿಸಿದ್ದರೂ, ಮಾಯಾಬಂಧದಿಂದ ತನ್ನ ಬಿಡುಗಡೆಮಾಡಿಕೊಡಬೇ ಕೆಂದು ಆಸೆಯೂ, ಆತುರವೂ ಏರ್ಪಡುತ್ತದೆ. ಇದು ಚಾಪಲ್ಯವೆಂದು ತೋರಿದರೂ ಅದನ್ನು ಮನ್ನಿಸಬೇಕೆಂದು ರಾಜರು ಬೇಡಿಕೊಳ್ಳುತ್ತಾರೆ. 'ಪ್ರಾಪ್ಯ ರುಚಿ' ಅವರನ್ನು ಹೀಗೆ ಪ್ರಾರ್ಥಿಸುವಂತೆ ಮಾಡುತ್ತದೆ.

## ಬಿನ್ನಪ ೨೯

ಇಪ್ಪತ್ತೊಂಬತ್ತನೆಯ ಬಿನ್ನಪದಲ್ಲಿ ದೇವರ ಅಪ್ರಾಕೃತ ದಿವ್ಯ ಮಂಗಳ ವಿಗ್ರಹವು ಪರಮಪದದಲ್ಲಿ ದಿವ್ಯಮಹಿಷಿಗಳಿಗೂ, ನಿತ್ಯಮುಕ್ತ ರಿಗೂ, ಪರಮಭೋಗ್ಯವಾಗಿರುವ ವಿಚಾರವನ್ನು ಹೇಳಿದೆ.

ಈ ವಿಚಾರದಲ್ಲಿ ಭಗವಂತನ ಅಪ್ರಾಕೃತ ದಿವ್ಯಮಂಗಳ ವಿಗ್ರಹವು ಜ್ಞಾನಿಗಳಿಗೂ, ಜ್ಞಾನಿಗಳ ಪ್ರಾಕೃತವಿಗ್ರಹಗಳು ಭಗವಂತನಿಗೂ ಹೇಗೆ ರಸಾರ್ಹಗಳಾಗಿರುವುದೆಂಬುದನ್ನು ಸ್ವಲ್ಪ ಗಮನಿಸೋಣ. ಜ್ಞಾನಿಗಳು ದೇವರೊಡನೆಯೂ, ದೇವರು ಜ್ಞಾನಿಗಳೊಡನೆಯೂ ಸೇರಲು ಹಾತೊರೆಯುತ್ತಾರೆ. ನಮ್ಮಾಳ್ವಾರ್ರಿಗೆ ದೇವರು ಸಿಕ್ಕಿದ ಆನಂದವಿರಲಿ! ದೇವರಿಗೆ "ಆಳ್ವಾರ್ ಸಿಕ್ಕಿದರಲ್ಲಾ!" ಎಂಬ ಆನಂದ. ಇದನ್ನೇ ನಂಬಿಳ್ಳೈ ಎನ್ನುವ ಆಚಾರ್ಯರು 'ಇರುದಲೈಕ್ಕಾದಲ್' (ಇಬ್ಬರಿಗೆ ಪರಸ್ಪರ ಪ್ರೇಮ) ಎಂದು ಹೇಳುತ್ತಾರೆ. ಪ್ರೇಮವು ರುಚಿಸಬೇಕಾದರೆ ಇಬ್ಬರಲ್ಲೂ ಅದಿರಬೇಕು. ಇಬ್ಬರಲ್ಲಿ ಒಬ್ಬನಿಗೇ ಪ್ರೇಮವಿದ್ದರೆ ಅದು ಸುಖವಿಲ್ಲದ್ದು. "ದೇವರು ನನಗೆ ಸಿಗುವನೇ?" ಎಂದು ಆಳ್ವಾರ್ರಿಗೆ ಇದ್ದ ಉತ್ಕಂಠೆಯಂತೆಯೇ, ದೇವರೂ ಆಳ್ವಾರ್ರ ವಿಷಯದಲ್ಲಿ 'ಅತಿಶಂಕೆ' ಮಾಡುತ್ತಾನೆ, "ನಾನು ಆಳ್ವಾರನ್ನು ಕರೆದರೆ, ಅವರು 'ನಾನೊಲ್ಲೆ' ಎಂದರೇನು ಮಾಡಲಿ?" ಅದಕ್ಕಾಗಿ ಆಳ್ವಾರ್ರು ದೇವರಿಗೆ ಸಮಾಧಾನ ಮಾಡುತ್ತಾರೆ; "ಉನ್ನೈ ನಾನ್ ಪಿಡಿತ್ತೇನ್ ಗೊಲ್‌ಶಿಕ್ಕೆನ" (ದೃಢವಾಗಿ ನಿನ್ನನ್ನು ಹಿಡಿದಿದ್ದೇನೆ ದೇವರೆ! ನೀನೇನೂ ದಿಗಿಲು ಪಡಬೇಡ.) ಈಗ ನಾನು 'ವಳವೇಳುಲಹು' ಹಾಡಿ* ಹಿಂದೆ ಸರಿಯುವುದಿಲ್ಲ. ಅರ್ಜುನನಿಗೆ "ಮಾಶುಚಃ" ಹೇಳಿದ ಸ್ವಾಮಿಗೇ "ಮಾಶುಚಃ" ಹೇಳುತ್ತಾರೆ ಆಳ್ವಾರ್ರು! ಗೀತೋಪದೇಶವನ್ನು ಮಾಡಿದ ಮೇಲೆಯೂ 'ಭಗವಂತನನ್ನು ಹೊಂದುವ ಬಗೆ ಹೇಗೆ?' ಎಂದು ತನ್ನ ಪಾಪಗಳ ದೆಸೆಯಿಂದ ಶೋಕಗೊಂಡಿದ್ದ ಅರ್ಜುನನಿಗೆ ಶ್ರೀಕೃಷ್ಣನು 'ನೀನು ವ್ಯಾಕುಲನಾಗಬೇಡ. ನಾನು ನಿನ್ನ ಕೈ ಬಿಡುವುದಿಲ್ಲ' ಎಂದು ಆಶ್ವಾಸನ ಕೊಟ್ಟ ರೀತಿಯಲ್ಲಿ ಆಳ್ವಾರ್‌ರವರೂ ಭಗವಂತನನ್ನು, ತಾನು ಅವನನ್ನು ಬಿಟ್ಟು ಹೋಗುವುದಿಲ್ಲವೆಂದು ಆಶ್ವಾಸಪಡಿಸುತ್ತಾರೆ.

'ಜ್ಞಾನೀ ತ್ವಾತ್ಮೈವ ಮೇ ಮತಂ' (ಜ್ಞಾನಿಯನ್ನು ನನ್ನ ಆತ್ಮವೆಂದೇ ಭಾವಿಸಿಕೊಳ್ಳುತ್ತೇನೆ) ಎಂದು ಗೀತೆಯಲ್ಲಿ ಶ್ರೀ ಕೃಷ್ಣನು ಶ್ಲಾಘಿ

---

* ಇದರ ತಾತ್ಪರ್ಯವನ್ನು ಹಿಂದೆಯೇ ಹೇಳಿದೆ.

ಸಿರುವುದರಿಂದ, ಭಗವಂತನಿಗೆ, ಚೇತನನ ಸ್ವರೂಪವು ಮಾತ್ರ ಆದರಣೀಯವೆಂದು ತೋರಬಹುದು. ಆದರೆ ಜ್ಞಾನ, ಭಕ್ತಿ, ವೈರಾಗ್ಯ ಮುಂತಾದ ಗುಣಗಳನ್ನು ಪ್ರಕಾಶಪಡಿಸುವ ಜ್ಞಾನಿಯ ವಿಗ್ರಹದಲ್ಲಿಯೂ ಸ್ವಾಮಿಗೆ ಸ್ನೇಹವು ಹೆಚ್ಚು. ಅವನು ಆಳ್ವಾರನ್ನು ಶರೀರದೊಡನೆಯೇ ವೈಕುಂಠಕ್ಕೆ ಕರೆದೊಯ್ಯುವ ಆಸೆ ತೋರುತ್ತಾನೆ. ಕಾರಣ, ತನ್ನ ಮೇಲಿನ ಜ್ಞಾನ ಭಕ್ತಿ ವೈರಾಗ್ಯಗಳಿಗೆ ದ್ಯೋತಕವಾದುದು ಈ ಆಳ್ವಾರರ ಶರೀರ! ದೇವರಿಗಾಗಿ ಈ ಭಕ್ತನ ಶರೀರವು ಕಣ್ಣೀರು ಸುರಿಸಿದೆ! ದೇವರನ್ನು ದರ್ಶನಮಾಡಿ ಬಳಲಿ ಬೆಂಡಾಗಿ ಶೈಥಿಲ್ಯಹೊಂದಿರುವುದು ಈ ಶರೀರವೇ. ಹೀಗೆ ಭಕ್ತರ ಚರಮಶರೀರದ ವಿಷಯದಲ್ಲಿ ದೇವರಿಗೂ ಹೆಚ್ಚು ಮಮತೆ ಅದಕ್ಕಾಗಿಯೇ, ಅವನು ವಿಗ್ರಹದೊಡನೆಯೇ ಜ್ಞಾನಿಯನ್ನಾದರಿಸುವುದು. ಆಳ್ವಾರ್ರ ತಿರುಮೇನಿಯನ್ನು ಆಳ್ವಾರ್‌ತಿರುನಗರಿಯಲ್ಲಿ ದೇವರು ಆದರದಿಂದ ಇಂದಿಗೂ ಇಟ್ಟುಕೊಂಡಿರುವನು. ಹಾಗೆಯೇ 'ತಿರುಕ್ಕುಡಂದೈ'ಯ ಸ್ವಾಮಿಯು "ತಿರುಮಳಿಶೈಪ್ಪಿರಾನ್" ರವರ ದೇಹವನ್ನು ಜೋಪಾನವಾಗಿ ಕಾದಿರಿಸಿದ್ದಾನೆ. ರಾಮಾನುಜರ ಚರಮ ವಿಗ್ರಹವನ್ನು ಶ್ರೀರಂಗನಾಥ ತನಗೆ ಹತ್ತಿರದಲ್ಲಿಯೇ ಇಟ್ಟುಕೊಂಡಿದ್ದಾನೆ. ತಿರುಮಲೆಯ ಶ್ರೀನಿವಾಸನೂ ಅನಂದಾಳ್ವಾರ್‌ರವರ ಚರಮವಿಗ್ರಹವನ್ನು 'ಮಹಿಳ' ಮರದ ಬಳಿಯೇ ಅನುಭವಿಸುತ್ತಿದ್ದಾನೆ. ಹೀಗೆ ಭಕ್ತಿಮಾಡಲು ಸಹಾಯಕವಾದ ಈ "ತಿರುಮೇನಿ" ಗೆ ಸಂಪ್ರದಾಯದಲ್ಲಿ ಬಲು ಮಹತ್ವವಿದೆ.

ಈ ಚೇತನನಿಗಾದರೂ ಅಷ್ಟೆ. ಭಗವಂತನ ದಿವ್ಯಮಂಗಳ ವಿಗ್ರಹಾನುಭವವೇ ಪರಮಪುರುಷಾರ್ಥ. ಭಕ್ತನೂ ಸಹ ದೇವರ ವಿಗ್ರಹವನ್ನೇ ಅಪ್ಪಿಕೊಳ್ಳಲು ಹಾತೊರೆಯುತ್ತಾನೆ. "ಕೂರಾರಾಳಿ ವಣ್ ಶಙ್ಗೇನ್ದಿವಾರಾಯ್" 'ಶಂಖ ಚಕ್ರ ಧರಿಸಿ ಬಾರೋ' ಇದೇ ಅವರ ಕನಸು. ಹನ್ನೊಂದು ಸಾವಿರ ವರುಷ ಶ್ರೀರಾಮನು ರಾಜ್ಯ ನಡೆಸಿ ಅಂದಿನ ಎಲ್ಲಾ ಚರಾಚರ ವಸ್ತುಗಳೊಡನೆ ತನ್ನ ಜ್ಯೋತಿಗೆ ತೆರಳುವಾಗ, ಆಂಜನೇಯನನ್ನೂ ಬರುವಂತೆ ಕರೆಯುತ್ತಾನೆ. ಆದರೆ ರಾಮಭಂಟನು "ಅಲ್ಲಿ

ಶಾಮನಿಲ್ಲ, ನಾನೊಲ್ಲೆ " ಎನ್ನುತ್ತಾನೆ. " ಇಲ್ಲೂ ರಾಮನಿಲ್ಲ " ಎಂದು ನೀನು ಕೇಳಬಹುದು. ನೀನು ಸ್ವಸ್ಥಾನಕ್ಕೆ ಹೋದಮೇಲೆಯೂ ಇಲ್ಲೊಂದು ವಿಶೇಷವಿದೆ. ಶ್ರೀರಂಗನಾಥನೂ, ಶ್ರೀ ರಾಮಾಯಣವೂ, ರಾಮ ಸಂಬಂಧ ಹೊಂದಿ ಇಲ್ಲೇ ಇರುವುವು. ಅಂತೆಯೇ ಈ ನನ್ನ ದೇಹವೂ, ಆ ಸಂಬಂಧ ಹೊಂದಿರುವುದು. ನೀನು ನನಗೆ ನಿನ್ನ ಸರ್ವಸ್ವವಾದ ಆಲಿಂಗನ ಇತ್ತಿದ್ದೀಯೆ. ನೀನಾದರೂ ನಿನ್ನ ತಿರುಮೇನಿಸಂಬಂಧ ಹೊಂದಿರುವ ನನ್ನೀ ಶ್ರೇಷ್ಠ ದೇಹವನ್ನು ಕಳೆದು ಮುಕ್ತಿಕೊಡುತ್ತೀಯೆ. ಅಂಥ ಮೋಕ್ಷವು ನನಗೆ ಬೇಡ ! ಈ ನಾಡಿನಲ್ಲಿ ' ರಾಮಗಂಧ ' ಇರುತ್ತದೆ. ಆ ನಾಡಿನಲ್ಲಿ ಅದಿರದು." ಈ ದಿವ್ಯಮಂಗಳವಿಗ್ರಹಕ್ಕೆ ಇತ್ತಿರುವ ಒಂದು ಪ್ರಾಧಾನ್ಯವೇ ವಿಶಿಷ್ಟಾದ್ವೈತದ ಸಾರ.

ಆದರೆ ಕೇಳಬಹುದು. "ಶರೀರವೆನ್ನುವುದು ಕರ್ಮದಿಂದ ಉಂಟಾಗತಕ್ಕುದು. ದೇವರಿಗೆ ಶರೀರವು ಒಪ್ಪುವುದಾದರೆ ಕರ್ಮಸಂಬಂಧದಿಂದ ಸರ್ವಜ್ಞತ್ವ ಇರಲಾರದು. ಅಂತೆಯೇ ಈ ಶರೀರವೆನ್ನುವುದು ದೇವರ ಸರ್ವಶಕ್ತಿತ್ವವನ್ನೂ ಮೊಟಕುಮಾಡಿಬಿಡುವುದು. ಆದರೆ ನಾವು ಹಿಂದೆಯೇ ನೋಡಿದಂತೆ ಭಗವಂತನ ಅಸಾಧಾರಣವಾದ ಶರೀರವು ಕರ್ಮದಿಂದ ಏರ್ಪಟ್ಟುದುದಲ್ಲ. ಆ ಶರೀರದಿಂದ ಅವನ ಜ್ಞಾನ ಶಕ್ತ್ಯಾದಿಗಳಿಗೆ ಯಾವ ಕೊರತೆಯೂ ಇಲ್ಲ. ಭಗವಂತನು ಸರ್ವಾಂತರ್ಯಾಮಿಯಾದುದರಿಂದ ಅವನಿಗೆ ಈ ತೆರದ ಅಪ್ರಾಕೃತಶರೀರಸಂಬಂಧವು ಮಾತ್ರ ಇಲ್ಲ. ಪ್ರಾಕೃತಶರೀರಗಳಲ್ಲಿಯೂ ಅವುಗಳಲ್ಲಿ ವರ್ತಿಸುವ ಜೀವಾತ್ಮಗಳಲ್ಲಿಯೂ ಅಂತರ್ಯಾಮಿಯಾಗಿರುವುದರಿಂದ ಪ್ರಾಕೃತಶರೀರಸಂಬಂಧವೂ ಅವನಿಗುಂಟು. ಹಾಗಿರುವುದರಿಂದ ಅವನಿಗೆ ಕರ್ಮಫಲಾನುಭವವೋ, ಜ್ಞಾನ, ಶಕ್ತಿಹಾನಿಯೋ ಏರ್ಪಡಬಹುದೆಂಬ ಶಂಕೆಯು ತೋರಬಹುದು. ಈ ಪೂರ್ವಪಕ್ಷವನ್ನು ವ್ಯಾಸರೇ ಬ್ರಹ್ಮಸೂತ್ರದಲ್ಲಿ ತೋರಿ ಅದಕ್ಕೆ ಸಮಾಧಾನವನ್ನು ಇತ್ತಿದ್ದಾರೆ. " ಸಂಭೋಗಪ್ರಾಪ್ತಿರಿತಿ ಚೇನ್ನ, ವೈಶೇಷ್ಯಾತ್ " " ನಮ್ಮ ಶರೀರದ ಹೃದಯಭಾಗದಲ್ಲಿ ಪರಮಾತ್ಮನಿದ್ದಾನೆ. ಆದುದರಿಂದ ನಮ್ಮ ಸುಖದುಃಖಗಳೂ ಅವನಿಗೆ

ಬಂದಾವು!" ಇದು ಶಂಕೆ. "ಆದರೆ ಒಂದು ವ್ಯತ್ಯಾಸವಿದೆ." ಇದು ಸಮಾಧಾನ. ಅಂದರೆ ಜೀವಾತ್ಮನು ಈ ಶರೀರದಲ್ಲಿರಲು ಕಾರಣ ಬೇರೆ. ಪರಮಾತ್ಮನು ಇರಲು ಕಾರಣ ಬೇರೆ. ಜೀವನು ತನ್ನ ಕರ್ಮಭೋಗ ಕಳೆಯುವುದಕ್ಕಾಗಿ ಈ ಶರೀರದಲ್ಲಿರುತ್ತಾನೆ. ಆ ಕರ್ಮಫಲಗಳನ್ನು ಅನುಭವಿಸುವಂತೆ ಮಾಡುವುದಕ್ಕಾಗಿ ಪರಮಾತ್ಮನು ಈ ಶರೀರದಲ್ಲಿರುತ್ತಾನೆ.

ಬ್ರಹ್ಮಸೂತ್ರದಲ್ಲಿ ಹೇಳುವ ಈ ಅರ್ಥಕ್ಕೆ ನಂಬಿಳ್ಳೈಗಳು ಒಂದು ಸುಲಭವಾದ ಉದಾಹರಣೆ ಕೊಟ್ಟಿದ್ದಾರೆ. ಕಾರಾಗೃಹದಲ್ಲಿ ಬಂದಿಗಳಾಗಿರುವವರನ್ನು ವಿಚಾರಿಸುವುದಕ್ಕಾಗಿ ರಾಜನು ಅಲ್ಲಿಗೆ ಬರುತ್ತಾನೆ. ಅದೇ ಕಾರಾಗೃಹದಲ್ಲಿ ಅನೇಕ ಬಂದಿಗಳು ಶಿಕ್ಷೆ ಅನುಭವಿಸುತ್ತಿರುತ್ತಾರೆ. ಅಂದರೆ ದೊರೆಗೂ ಅವರಿಗೂ ವ್ಯತ್ಯಾಸವಿಲ್ಲವೆ! ಇನ್ನೂ ಕಾರಾಗೃಹದಲ್ಲಿರುವ ಬಂದಿಗಳನ್ನು ದೊರೆಯು ವಿಚಾರಿಸಿದನೆಂದು ಅದೊಂದು ದೊಡ್ಡಸ್ತಿಕೆಯೇ ಆದೀತು! ಹಾಗೆಯೇ ದೇವರು ನಮ್ಮ ಹೃತ್‌ಪ್ರದೇಶದಲ್ಲಿರುವುದು ಅವನಿಗೊಂದು ವಿಭವ. ಈ ತೆರದ ಕಾರಾಗೃಹವಾದ ಪ್ರಾಕೃತಶರೀರದಲ್ಲೇ ಅದರ ನಿರ್ವಾಹಕ್ಕಾಗಿ ಇದ್ದು ದೋಷವು ಇಲ್ಲದಿರುವಾಗ, ಇನ್ನು ಅಪ್ರಾಕೃತಶರೀರದ ವಿಚಾರದಲ್ಲಿ ಹೇಳಬೇಕಾದುದೇನಿದೆ ?

ಈ ಅಪ್ರಾಕೃತ ದಿವ್ಯಮಂಗಳ ವಿಗ್ರಹವನ್ನು ರಾಜರು ಸೊಗಸಾಗಿ ವರ್ಣಿಸಿದ್ದಾರೆ. ಆ ವಿಗ್ರಹವು ಅವನ ಮಹಿಮೆಗೆ ತಕ್ಕುದಾದ ಸುಗಂಧ, ಕಾಂತಿ ಮೊದಲಾದುವುಗಳನ್ನು ಹೊಂದಿದೆ. ಅವನ ಜ್ಞಾನ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು, ಸೌಶೀಲ್ಯಾದಿ ಸ್ವರೂಪಗುಣಗಳಿಗೆ ಪ್ರಕಾಶಕವಾಗಿದೆ. ಜೀವಾತ್ಮನ ಪ್ರಾಕೃತಶರೀರವು ಆತನ ಗುಣಗಳನ್ನು ಮರೆಸುತ್ತದೆ. ಭಗವಂತನ ಶರೀರವೋ ಅವನ ಗುಣಗಳ ಜ್ಯೋತಿಯನ್ನು ಹೊರಗೆಡವುತ್ತದೆ. ಭಗವಂತನಿಗೂ ಲಕ್ಷ್ಮಿಗೂ ಎಂಥ ನಿಕಟ ಆತ್ಮೀಯ ಸಂಬಂಧವುಂಟೋ ಹಾಗೆಯೇ ಅವನ ವಿಗ್ರಹವೂ ಲಕ್ಷ್ಮಿಗೆ ನಿವಾಸಸ್ಥಾನವಾಗಿದೆ. ಈ ದಿವ್ಯಮಂಗಳ ವಿಗ್ರಹವು ಭಗವಂತನ ಇಚ್ಛೆಯಂತೆ ಇರುವುದರಿಂದಲೂ ನಿತ್ಯಮುಕ್ತರಿಗೂ ಲಕ್ಷ್ಮಿಗೂ ಪರಮಭೋಗ್ಯವಾಗಿ, ಇರು

ವುದರಿಂದಲೂ ಭಗವಂತನಿಗೆ ಅತಿಶಯಾವಹವಾಗಿದೆ. ಇಂತಹ ಅಪ್ರಾಕೃತ ದಿವ್ಯಮಂಗಳವಿಗ್ರಹವನ್ನು ತಾನು ಸಾಕ್ಷಾತ್ಕರಿಸಬೇಕೆಂದು ರಾಜರು ಪ್ರಾರ್ಥಿಸಿಕೊಂಡು ಈ ಬಿನ್ನಹವನ್ನು ಮುಗಿಸುತ್ತಾರೆ.

## ಬಿನ್ನಪ ೩೦

ಕಡೆಯದೇ ಮೂವತ್ತನೆಯ ಬಿನ್ನಹ. ಆಂಡಾಳ್ ತಿರುಪ್ಪಾವೈ ಪ್ರಬಂಧದ ಇಪ್ಪತ್ತೊಂಭತ್ತನೆಯ ಹಾಡಿನಲ್ಲಿ ಹೇಳಿರುವ ಅಂಶವನ್ನೇ ಚಿಕ್ಕದೇವರಾಜ ಒಡೆಯರು ಈ ಮೂವತ್ತನೆಯ ಬಿನ್ನಪದಲ್ಲಿ ತಿಳಿಸಿದ್ದಾರೆ. "ಎತ್ತೈಕ್ಕುಮೇಳೇಳುಪಿರವಿಕ್ಕುಂ.... .. ಉನಕ್ಕೇ ನಾಮಾಳ್ ಶೈವೋಂ ಮತ್ತೈನಙ್ಗಾಮಙ್ಗಳ್ ಮಾತ್ತು"—(ಏಳೇಳು ಜನ್ಮಗಳಿಗೂ ನಿನ್ನ ಸೇವೆಯೊಂದೇ ನಮಗೆ ಬೇಕಾದುದು, ಇನ್ನು ಯಾವ ಕಾಮಗಳೂ ನಮಗೆ ಬೇಡ.) ಈ ನಿಸ್ವಾರ್ಥಸೇವಾಭಾವವು ಅತ್ಯಾಶ್ಚರ್ಯಕರವಾದುದು. ಆಂಡಾಳ್ ಗೋಪಿಯರ ಭಾವ ತಾಳಿ ಆ ಮಾತು ಹೇಳಿದ್ದಾಳೆ. ಆಳ್ವಾರುಗಳೂ ಅದೇ ಭಾವವನ್ನು ಅನೇಕವೇಳೆ ತಳೆದಿದ್ದಾರೆ. ಆ ಗೋಪಿಯರ ಭಾಗ್ಯವೆಷ್ಟು ?

ಶ್ರೀಕೃಷ್ಣನ ಬಳಿ ಗೋಪಿಯರಿಗೆ ಇರುವ ಅತ್ಯಾಶ್ಚರ್ಯಕರವಾದ ಭಾವಬಂಧವನ್ನು ನೋಡಿ ಅವರ ಪಾದಧೂಳಿಯ ಸಂಬಂಧಕ್ಕೆ ಆಸೆಪಟ್ಟು ಶುಕರು ಅವರ ಪ್ರಭಾವವನ್ನು ಹೊರಗೆಡವಿದ್ದಾರೆ. ತಂದೆಯಾದ ವ್ಯಾಸಮಹರ್ಷಿಗಿಂತ ಶುಕರಿಗೆ ಮರ್ಯಾದೆ ಹೆಚ್ಚು. ಮುದುಕರಾದ ವ್ಯಾಸರು ಬಂದರೆ ಜಲಕ್ರೀಡೆಯಾಡುತ್ತಿದ್ದ ಪೆಣ್ಗಳು ಸಂಕೋಚಪಟ್ಟುಕೊಂಡರು. ಆದರೆ ಹರಯದ ಮಗ ಶುಕನು ಬಂದರೆ ಸ್ನಾನಮಾಡುತ್ತಲೇ ಇದ್ದರು. ಉದ್ಧವನೂ ಹೇಳುತ್ತಾನೆ. "ಗೋಪಿಯರ ಭಕ್ತಿ ಋಷಿಗಳಿಗಿಲ್ಲ, ಗೋಪಿಯರಿಗೇನು ಶಾಸ್ತ್ರಕ್ರಮದಲ್ಲಿ ಉಪನಯನವೆ ? ವೇದಾಭ್ಯಾಸವೇ ? ಆದರೂ ಅದೆಂತಹ ಭಕ್ತಿ !"

ಈ ಬಗೆಯಾಗಿ ಅಗಾಧವಾದ ಭಕ್ತಿಸಾಗರದಲ್ಲಿ ಮುಳುಗಿರುವ ಗೋಪಿಯರ ಭಾವವನ್ನು ಪ್ರಕಟಿಸುವ ರೀತಿಯಿಂದ ಆಂಡಾಳ್ ನಿತ್ಯ ಕೈಂಕರ್ಯವನ್ನು ಬೇಡುತ್ತಾಳೆ. ಆಕೆಗೆ ಏಳೇಳು ಜನ್ಮಗಳಿಗೂ ದೇವರ ಸೇವೆ ಬೇಕಂತೆ. "ಬಹೂನಿ ಮೇ ವ್ಯತೀತಾನಿ" ಎಂದು ದೇವರು ಹೇಳಿಕೊಂಡಿರುವಂತೆ ಅವನ ಸೇವೆಗಾಗಿ ಗೋಪಿಯರೂ ಬಹುಜನ್ಮ ಗಳನ್ನು ಆಸೆಪಡುತ್ತಾರೆ.

ಅಂತೆಯೇ ರಾಮಾನುಜರ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುವ ಈ ಚಿಕ್ಕದೇವರಾಜಒಡೆಯರು ಈ ಕಡೆಯ ಬಿನ್ನಪವನ್ನು ಅರ್ಪಿಸುವಾಗ ಶಿಥಿ ಲಾಂತಃಕರಣರಾಗಿದ್ದಾರೆ. ಅವರ ಹೃದಯವು ದೇವದೇವನ ನಿತ್ಯಸೇವೆ ಗಾಗಿ ತುಡಿದು ಮಿಡಿಯುತ್ತದೆ. ನಮ್ಮನ್ನು ರಕ್ಷಿಸಲು ಬೇಕಾದ ಈಶ್ವರನ ಗುಣಗಣಾನುಭವವನ್ನು ದೊರೆಗಳು ಅನೇಕ ಚರಿತ್ರೆಗಳಿಂದ ನೆನೆದು ಕೊಂಡಿದ್ದಾರೆ. ತನ್ನ ಕೈಕೆಳಗಿನ ಆಳುಗಳನ್ನು ದುಡಿಸಿ ಅವರನ್ನೇ ಶೋಷಿ ಸುವ ಯಜಮಾನನಂತಲ್ಲ ನಮ್ಮ ಸರ್ವೇಶ್ವರ ! ತಾನು ಸ್ವಾಮಿಯೆಂದೇ ಆತನು ಬಗೆಯನು. ಕೈಂಕರ್ಯಗಳಿಗೆ ಲೋಪಬಂದರೂ ಆತನು ಸಹಿಸಿ ಕೊಳ್ಳುವವನಾದುದರಿಂದ ಈ ಸೇವಾರೂಪ ಕೈಂಕರ್ಯ ನಡೆಸಲು ಎಂಥ ಪಾಪಿಯೂ ಹಿಂತೆಗೆಯಬೇಕಾಗಿಲ್ಲ. ಈ ರೀತಿ ದೇವರು ತನ್ನ ಸೇವೆ ಗಾಗಿ ನಮಗೆ ನೀಡುವ ಸ್ವಾಗತವು ಅದ್ಭುತವಾಗಿದೆ.

ಭಗವಂತನು ಶರಣುಹೊಗುವವರಿಗೆ ಅತ್ಯಂತ ಸುಲಭನೆನ್ನುವು ದನ್ನು ರಾಜರು ಬಹು ಆಶ್ಚರ್ಯಕರವಾದ ರೀತಿಯಲ್ಲಿ ಅನುಭವಿಸಿದ್ದಾರೆ. ಯಜಮಾನನಾದವನು ಕಿಂಕರರಲ್ಲಿ ಕೃಪೆ ತೋರಿಸುವುದು ಅಪರೂಪ. ಆದರೆ ಭಗವಂತನಾದ ಯಜಮಾನನು ತನ್ನ ಭಕ್ತರಿಗೆ ದಾಸ್ಯಮಾಡು ವುದಕ್ಕೂ ಹಿಂಜರಿಯನು. ಪಾಂಡವರ ದೂತನಾಗಿ ಹೋಗಿಯೂ, ಅರ್ಜುನನ ಸಾರಥ್ಯಮಾಡಿಯೂ ತೋರಿದ ಸೌಶೀಲ್ಯ ಎಂಥದು ! ಭಕ್ತರು ಮಾಡಿದ ಅಪರಾಧಗಳನ್ನು ಸಹಿಸುವುದು ಮಾತ್ರವೇ ಅಲ್ಲ, ಅವರ ಮನಸ್ಸು ನೋಯದಂತೆ ತನ್ನ ಮೇಲೆಯೇ ಒಂದು ಅಪರಾಧವನ್ನು

ಕಲ್ಪನೆಮಾಡಿಕೊಂಡು ಆರೋಪಿಸಿಕೊಳ್ಳುತ್ತಾನೆ. ಭೃಗು ಮಹರ್ಷಿಗಳು ಭಗವಂತನ ಸತ್ವಗುಣವನ್ನು ಪರೀಕ್ಷಿಸುವುದಕ್ಕೋಸ್ಕರ ಅವನನ್ನು ಕಾಲಿನಿಂದ ಒದೆಯುತ್ತಾರೆ. ಅವರ ಕಾಲಿಗೆ ಎಷ್ಟು ನೋವಾಯಿತೋ ಎಂದು ಅವರನ್ನೇ ಸ್ವಾಮಿಯು ಸಮಾಧಾನಪಡಿಸುತ್ತಾನೆ. ಭಕ್ತರಿಗೆ ಒದಗುವ ಕಷ್ಟನಿವಾರಣೆಯ ತ್ವರೆಯನ್ನು ಎಷ್ಟೆಂದು ಹೇಳಲಾಗುವುದಿಲ್ಲ. ಗಜೇಂದ್ರನು ಮೊಸಳೆಯ ಬಾಯಿಗೆ ಸಿಕ್ಕಿಕೊಂಡು ಭಗವಂತನನ್ನು ಮೊರೆಯಿಟ್ಟಾಗ ಸಂಕಲ್ಪಮಾತ್ರದಿಂದಲೇ ಇದ್ದ ಸ್ಥಳದಿಂದಲೇ ಮೊಸಳೆಯನ್ನು ಸಂಹಾರಮಾಡಬಹುದಿತ್ತು. ಆದರೂ ಸ್ವಾಮಿಯು ತಾನೇ ಓಡಿಬಂದುದು ಭಕ್ತನ ಮೇಲಿನ ಪ್ರೇಮಾತಿಶಯದಿಂದ. ಅವನು ಬಂದ ವೇಗವನ್ನೂ ಸ್ಮರಿಸಿಕೊಂಡು ಪರಾಶರಭಟ್ಟರು "ಭಗವತಸ್ತ್ವರಾಯೈನಮಃ" ಎಂದು ಕೊಂಡಾಡಿದರು. ಭಗವಂತನು ಸತ್ಯಸಂಕಲ್ಪನಾಗಿದ್ದರೂ ಕೂಡ ತಾನು ಮಾಡಿದ ಪ್ರತಿಜ್ಞೆಯನ್ನೇ ಭಕ್ತನಿಗಾಗಿ ಬಿಟ್ಟುಕೊಡುವುದನ್ನು ಭೀಷ್ಮಾಚಾರ್ಯರ ವಿಷಯದಲ್ಲಿ ನೋಡಬಹುದು. ಭಾರತಯುದ್ಧದಲ್ಲಿ ಆಯುಧವನ್ನು ಮುಟ್ಟುವುದಿಲ್ಲವೆಂದು ಶಪಥಮಾಡಿದ ಕೃಷ್ಣನನ್ನು ಆಯುಧ ಎತ್ತುವಂತೆ ಮಾಡಿದ ಪ್ರಭಾವವು ಭೀಷ್ಮರಿಗೆ ಸಲ್ಲತಕ್ಕುದು. ಭಕ್ತರ ಪ್ರತಿಜ್ಞೆಗಳನ್ನೂ ನೆರವೇರಿಸುವುದಕ್ಕೋಸ್ಕರ ತನ್ನ ಪ್ರತಿಜ್ಞಾಹಾನಿಯನ್ನೇ ಅಂಗೀಕರಿಸಿದ ಭಕ್ತಪ್ರಯೋಜನೈಕಪರನೆಂದು ಆಳ್ವಾರು ಸ್ತೋತ್ರಮಾಡುತ್ತಾರೆ. ಈ ದಿವ್ಯ ದೇಶದಲ್ಲಿ ದರ್ಶನವೀಯುತ್ತಿರುವ ಶ್ರೀ ತಿರುನಾರಾಯಣನು ಸುಚರಿತನ ಮಗುವಿನ ವಿಷಯದಲ್ಲಿ ತೋರಿದ ಪ್ರೀತ್ಯತಿಶಯವನ್ನು, ಸ್ಥಳಪುರಾಣವು ವಿವರಿಸಿದೆ. ಆ ಮಗುವು ತನ್ನ ಮುಂದೆ ನಿವೇದನಗೈದ ಭಿಕ್ಷಾನ್ನವನ್ನು ಪ್ರತ್ಯಕ್ಷವಾಗಿ ಅಂಗೀಕರಿಸಿದ ಪರಮ ಸುಲಭನೀತ! ಹಿಂದೆ ಇಲ್ಲಿ ಬಿಜಮಾಡಿಸಿದ್ದ ರಾಮಾನುಜಾಚಾರ್ಯರಿಗೆ ತನ್ನನ್ನು ಕೊಟ್ಟುಕೊಂಡು ಅವರ ಪುತ್ರನೆಂದು ಹೆಸರನ್ನು ಹೊಂದಿ "ಯತಿರಾಜ ಸಂಪತ್ಕುಮಾರ" ನೆಂದು ಈಗಲೂ ಹೆಮ್ಮೆ ಪಡುತ್ತಲೇ ಇದ್ದಾನೆ. ಇಂಥ ಸ್ವಾಮಿಯನ್ನು ಆಶ್ರಯಿಸುವುದರಲ್ಲಿ ಕಷ್ಟ ತಾನೇ ಏನು ?

"ದಂಡಕಾರಣ್ಯದಲ್ಲಿ ಋಷಿಗಳು ನನ್ನ ಬಳಿ ಬಂದು ಅವರ ಕಷ್ಟ ನಿಷ್ಠುರಗಳನ್ನು ಹೇಳಿಕೊಳ್ಳುವಷ್ಟಾಯಿತಲ್ಲಾ! ನಾನೇ ಮುಂಚಿತವಾಗಿ ಹೋಗಿ ಅವರನ್ನು ಸರಿಯಾಗಿ ರಕ್ಷಿಸಬೇಕಿತ್ತು" ಎಂದು ಶ್ರೀ ರಾಮನ ಎಂಟು ಗೇಣಿನ ದೇಹ ಒಂದು ಗೇಣಾಗಿ ಬಿಡುತ್ತದೆ! ಈ ಕತೆಯಿಂದ ನಮ್ಮಂತಹ ಪಾಪಿಗಳಿಗೆ ಅದೆಂಥ ಭರವಸೆ! ದೇವರೇ ತಾನು ಅಪರಾಧಿ ಎಂದು ಹೇಳಿಕೊಂಡಿದ್ದಾನಲ್ಲಾ! ಆತ ಸರ್ವಜ್ಞ, ಸರ್ವಶಕ್ತ. ಅಂತಹವನೇ ತಪ್ಪುಮಾಡಿದೆನೆಂದು ಹೇಳಿಕೊಳ್ಳುವಾಗ ಏನೂ ಅರಿಯದ ಏನೂ ಸಾಗದ ನಮ್ಮಂಥವರ ಪಾಡೇನು?

ರಾಮಾನುಜರಿಗೂ ಆಚಾರ್ಯರಾದ ತಿರುಕ್ಕೋಟ್ಟಿಯೂರ್‌ನಂಬಿಗಳು ತಮ್ಮ ಅಂತಿಮ ದೆಶೆಯಲ್ಲಿ ವಿಭೀಷಣನಿಗೆ ರಕ್ಷಣೆಯಿತ್ತಾಗ ಇದ್ದ ಶ್ರೀರಾಮನ ಮನಸ್ಸಿನ ನಿಲುವನ್ನು ಕುರಿತು ಚಿಂತಿಸುತ್ತಿದ್ದರಂತೆ. ಶತ್ರುಪಕ್ಷೀಯನಾದ ವಿಭೀಷಣನಿಗೆ ರಕ್ಷಣೆಕೊಟ್ಟದ್ದೇನೂ ಹೆಚ್ಚಲ್ಲವೆಂಬುದು ಕಪೋತೋಪಾಖ್ಯಾನವನ್ನು ಸ್ಮರಿಸಿಕೊಂಡ ರಾಮನ ಅತೃಪ್ತಿ. ಪಾರಿವಾಳದ ಹಕ್ಕಿಯೊಂದು, ತನ್ನ ಗೂಡಿನ ಬಳಿ ಬಂದು, ತನ್ನ ಭಾರ್ಯೆಯನ್ನು ಕೊಂದ ಬೇಡನೊಬ್ಬನು ಹೊತ್ತಿಸಿದ್ದ ಅಗ್ನಿಯಲ್ಲಿ ಬಿದ್ದು ಹಸಿದಿದ್ದ ಅವನಿಗೆ ಆಹಾರವಾಯಿತಲ್ಲಾ! ತಾನು ಆ ಕಪೋತಕ್ಕಿಂತಲೂ ಏನು ಹೆಚ್ಚು? ಆ ಬೇಡನು ಕಪೋತದ ವಿಷಯದಲ್ಲಿ ಅದ್ರಾಪರಾಧಿಯಾಗಿದ್ದಾನೆ. ಆ ಪಾರಿವಾಳದ ಬಗ್ಗೆ ಅವನಿಗೆ ಅನುಕೂಲಭಾವವು ಲೇಶವೂ ಇಲ್ಲ. ತಾನಿದ್ದ ಮರದ ನೆರಳಿಗೆ ಬಂದನೆಂದೇ ಅವನಿಗೆ ಕಪೋತವು ಉಪಕಾರಮಾಡುತ್ತದೆ. ಅದೂ ಎಂಥ ಉಪಕಾರ! ತನ್ನ ಪ್ರಾಣವನ್ನೇ ತ್ಯಾಗ ಮಾಡಿಬಿಡುತ್ತದೆ. ಧರ್ಮಾಧರ್ಮಗಳನ್ನೂ ಅರಿಯದ ಒಂದು ತಿರ್ಯಕ್ಕು ಹೀಗೆ ರಕ್ಷಣಮಾಡುವಾಗ ಧರ್ಮಶಾಸ್ತ್ರವೇತ್ತನಾಗಿ ಸೈನ್ಯಪರಿವಾರ ಸಮೇತನಾಗಿರುವ ರಾಮನು ಸೀತೆಗೆ ಅನುಕೂಲನಾಗಿ, ರಾವಣನಿಗೆ ಸದುಪದೇಶಮಾಡಿ, ಅವರಿಂದ ತಿರಸ್ಕೃತನಾಗಿ 'ರಕ್ಷಿಸು' ಎಂದು ಬಾಯಿಬಿಟ್ಟು ಕೇಳಿಕೊಂಡು ಬಂದ ವಿಭೀಷಣನನ್ನು ತನ್ನ ಸಂಗಡ ಸೇರಿಸಿಕೊಳ್ಳುವುದರಲ್ಲಿ ಏನು ತಾನೆ ವಿಶೇಷ! ಹೀಗೆ ಶರಣಾಗತ ರಕ್ಷಣೆಯಲ್ಲಿ

ತಾನು ಮಾಡಿದ್ದು ಏನೇನೂ ಸಾಲದೆಂದು ಶ್ರೀರಾಮನು ಬಗೆದಿರುವಾಗ ತಾವೇಕೆ ಹೆದರಬೇಕೆಂದು ನಿಶ್ಚಿಂತೆಯಾಗಿ ತಿರುಕ್ಕೋಟ್ಟಿಯೂರ್ ನಂಬಿಗಳು ಪ್ರಾಣಬಿಟ್ಟರಂತೆ.

ಆಶ್ರಿತರನ್ನು ಕಾಪಾಡುವುದರಲ್ಲಿ ಇಂಥ ತ್ವರೆಯನ್ನು ಉಂಟುಮಾಡಿರುವ ಭಗವಂತನ ಕಲ್ಯಾಣಗುಣಗಳನ್ನು ಸ್ಮರಿಸಿಕೊಂಡು ರಾಜರು ಧೈರ್ಯ, ವಿಶ್ವಾಸಗಳನ್ನು ಹೊಂದಿ ಅವನ ಕೈಂಕರ್ಯ ಬೇಡುತ್ತಾರೆ. ಅವರ ಈ ಪ್ರಾರ್ಥನೆಯನ್ನು ಶ್ರೀವೈಕುಂಠದಲ್ಲಿ ಮಾಡಬೇಕಾದ ನಿತ್ಯಕೈಂಕರ್ಯಕ್ಕೂ ಉಪಲಕ್ಷಣವಾಗಿ ತೆಗೆದುಕೊಳ್ಳಬಹುದು. ನಮ್ಮ ಸಂಪ್ರದಾಯದಲ್ಲಿ, ಮೋಕ್ಷದೆಶೆಯಲ್ಲಿ ಭಗವಂತನಿಗೆ ಮಾಡಬೇಕಾದ ಕೈಂಕರ್ಯವೇ ಪರಮಪುರುಷಾರ್ಥ. ಈ ಲೋಕದಲ್ಲಿ ಮಾಡುವ ಕೈಂಕರ್ಯವು, ಪ್ರಕೃತಿ ಸಂಬಂಧದಿಂದಲೂ, ಕಾಲಾಧಿಕ್ಯದಿಂದಲೂ ಅನೇಕ ವಿಧವಾಗಿ ನ್ಯೂನತೆಯನ್ನು ಹೊಂದಿಯೂ ವಿಘ್ನವನ್ನು ಹೊಂದಿಯೂ ಹೋಗಿಬಿಡುತ್ತದೆ. ಪರಮಪದದಲ್ಲಿ ಈ ತೆರದ ಕೊರತೆಗಳಿಲ್ಲದೆ ಕೈಂಕರ್ಯವು ಅವಿಚ್ಛಿನ್ನವಾಗಿ ನಡೆಯುವುದು. ನಿತ್ಯಮುಕ್ತರಿಗೆ ಪ್ರಕೃತಿ ಸಂಬಂಧವೂ ಇಲ್ಲ, ಕಾಲಾಧಿಕ್ಯವೂ ಇಲ್ಲ. ಹೀಗೆ ಪರಮಪುರುಷಾರ್ಥವಾಗಿಯೂ, ಪರಮಭೋಗ್ಯವಾಗಿಯೂ ಕೈಂಕರ್ಯವನ್ನು ಬೇಡಿಕೊಂಡು ಚಿಕ್ಕದೇವರಾಜರು ಈ ಗ್ರಂಥವನ್ನು ಪೂರೈಸಿದ್ದಾರೆ.

ಈ ಏಳು ದಿನಗಳಲ್ಲಿ ನಾವು ಅನುಭವಿಸಿರುವ ಈ ಮೂವತ್ತು ಬಿನ್ನಪಗಳ ಅರ್ಥವನ್ನು ಹೀಗೆ ಸಂಗ್ರಹಿಸಬಹುದು.



# ಏಳನೆಯ ದಿನದ ಉಪನ್ಯಾಸ

## ಬಿನ್ನಪಗಳು ೧—೩೦

ಮೊದಲ ಬಿನ್ನಪದಲ್ಲಿ ಶ್ರಿಯಃಪತಿಯಾದ ಸರ್ವೇಶ್ವರನು ಭಕ್ತಾನುಗ್ರಹಾರ್ಥವಾಗಿ ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚೆ ಎಂಬ ಐದು ರೂಪಗಳನ್ನೂ ಸ್ವೀಕರಿಸಿದ್ದಾನೆಂದೂ; ಎರಡನೆಯ ಬಿನ್ನಪದಲ್ಲಿ, ವೇದಾನ್ತದಲ್ಲಿ ಜಗತ್ಕಾರಣ ವಸ್ತುವನ್ನು ಸತ್, ಬ್ರಹ್ಮ, ಆತ್ಮ, ಮುಂತಾದ ಸಾಮಾನ್ಯ ಶಬ್ದಗಳಿಂದ ಹೇಳಿರುವುದು ಶ್ರೀಮನ್ನಾರಾಯಣನಲ್ಲೀ ಪರ್ಯವಸಾನವಾಗುವುದೆಂದೂ; ಮೂರು, ನಾಲ್ಕು, ಐದು ಈ ಬಿನ್ನಪಗಳಲ್ಲಿ ಒಂದು ವಸ್ತುವನ್ನು ಯಥಾವತ್ತಾಗಿ ತಿಳಿದುಕೊಳ್ಳಲು ಸಹಾಯಕವಾಗುವ ಪ್ರತ್ಯಕ್ಷ, ಅನುಮಾನ, ಲೌಕಿಕ ಶಬ್ದಗಳೆಂಬ ಪ್ರಮಾಣಗಳಿಂದ ಈಶ್ವರನನ್ನು ತಿಳಿಯಲಾಗದೆಂದೂ, ಆದರೆ ವೈದಿಕ ಶಬ್ದದಿಂದ ಪರಮಾತ್ಮನನ್ನು ಅಳತೆಗೆ ಮೀರಿದವನೆಂದೇ ತಿಳಿದುಕೊಳ್ಳಬಹುದೆಂದೂ; ಆರನೆಯ ಬಿನ್ನಪದಲ್ಲಿ, ಉಪನಿಷತ್ತುಗಳಲ್ಲಿ ದೇವರಿಗೆ ಗುಣ, ಜನ್ಮಗಳು ಉಂಟೆಂದೂ, ಇಲ್ಲವೆಂದೂ ಇವೇ ಮುಂತಾದ ಕೆಲವು ವಿರೋಧಗಳಂತೆ ತೋರುವ ವಾಕ್ಯಗಳಿಗೆ ಸರಿಯಾದ ಅರ್ಥಗಳನ್ನು ಮಾಡಿ ವಿರೋಧಪರಿಹಾರವನ್ನು ಮಾಡಿಯೂ; ಏಳನೆಯ ಬಿನ್ನಪದಲ್ಲಿ ಪ್ರಪಂಚವೆನ್ನಿಸುವ ಈ ಚೇತನಾಚೇತನ ಎರಡೂ ಭಗವಂತನ ಶರೀರವಾಗಿ ಸತ್ಯವೆಂದೂ; ಎಂಟನೆಯ ಬಿನ್ನಪದಲ್ಲಿ ಸ್ವಪ್ನಪದಾರ್ಥಗಳೂ ಜಾಗ್ರದ್ದಶೆಯಲ್ಲಿ ಕಾಣುವ ಪದಾರ್ಥಗಳಂತೆ ಸತ್ಯವೆಂಬುದು ಸಿದ್ಧಿಸುವುದೆಂದೂ; ಒಂಭತ್ತನೆಯ ಬಿನ್ನಪದಲ್ಲಿ ಭಗವಂತನು ಒಬ್ಬೊಬ್ಬರನ್ನು ಒಂದೊಂದು ವಿಧವಾಗಿ ಸೃಷ್ಟಿಸುವುದಕ್ಕೆ ಅವರವರ ಕರ್ಮವೇ ಕಾರಣವೆಂಬುದರಿಂದ ಅವನಿಗೆ ವೈಷಮ್ಯ, ನೈರ್ಘೃಣ್ಯಗಳು ತಟ್ಟವೆಂದೂ; ಹತ್ತನೆಯ ಬಿನ್ನಪದಲ್ಲಿ ಜಗತ್ತಿಗೆಲ್ಲಾ ಈಶ್ವರನೊಬ್ಬನೇ ಉಪಾದಾನ, ನಿಮಿತ್ತ, ಸಹಕಾರಿ ಕಾರಣನೆಂದೂ; ಹೇಳಿ, ಹೀಗೆ ಮೊದಲ ಹತ್ತು ಬಿನ್ನಪಗಳಲ್ಲಿ ಪರಮಾತ್ಮನ ಸ್ವರೂಪವನ್ನು ಚೆನ್ನಾಗಿ ತಿಳಿಸಿ, ಅಂಥವನನ್ನು ಹೊಂದುವ ಜೀವಾತ್ಮನ ಸ್ವರೂಪವನ್ನು

ಹನ್ನೊಂದನೆಯ ಬಿನ್ನಪದಲ್ಲಿ ವಿವರಿಸಿತು. ಬಿನ್ನಪ ಹನ್ನೆರಡರಿಂದ ಹದಿನೆಂಟರ ಪೂರ್ತ ಅಚಿತ್‌ತತ್ವಗಳ ಬಗ್ಗೆ ವಿವರಣೆಯನ್ನಿತ್ತು ಪಂಚ ಭೂತಗಳ ಸೃಷ್ಟಿಕ್ರಮ, ಪಂಚೀಕರಣಪ್ರಕ್ರಿಯೆ, ಅಂಡಸೃಷ್ಟಿ, ಅವು ಗಳಲ್ಲಿ ಪುಣ್ಯಪಾಪ ಫಲಗಳ ಭೋಗಸ್ಥಾನಗಳಾದ ಸ್ವರ್ಗನರಕಾದಿ ಲೋಕಗಳು, ಈ ಭೂಲೋಕದ ಪರಿಮಾಣ, ಇನ್ನೂ ಮುಂತಾದ ಅನೇಕ ವಿಷಯಗಳನ್ನು ಹೇಳಿ, ಹತ್ತೊಂಬತ್ತನೆಯ ಬಿನ್ನಪದಲ್ಲಿ ಮೋಕ್ಷವೇ ಮೇಲಾದ ಪುರುಷಾರ್ಥವೆಂದೂ; ಇಪ್ಪತ್ತನೆಯ ಬಿನ್ನಪದಲ್ಲಿ ವೇದ ಭಾಷೆಯು ಪ್ರೌಢವಾದುದರಿಂದ ಅದರ ಅರ್ಥ ಸರಿಯಾಗಿ ತಿಳಿಯಬೇಕಾ ದರೆ, ಉಪಬೃಂಹಣಗಳಾದ ಸ್ಮೃತಿ, ಇತಿಹಾಸ, ಪುರಾಣಗಳ ಸಹಾಯ ವು ಬೇಕೆಂದೂ, ಇಪ್ಪತ್ತೊಂದನೆಯ ಬಿನ್ನಪದಲ್ಲಿ ಪಾಂಚರಾತ್ರಾಗಮಕ್ಕೆ ವೇದದಷ್ಟೇ ಪ್ರಾಮಾಣ್ಯವುಂಟೆಂದೂ ಸ್ಥಾಪಿಸಿ; ಇಪ್ಪತ್ತೆರಡನೆಯ ಬಿನ್ನ ಪದಲ್ಲಿ ದೇವರ ಮತ್ತು ಆಚಾರ್ಯನ ಅನುಗ್ರಹದಿಂದ ವೈರಾಗ್ಯವು ಸುಲಭ ವೆಂದೂ ತಿಳಿಸಿ; ಇಪ್ಪತ್ತಮೂರರಿಂದ ಇಪ್ಪತ್ತಾರನೆಯ ಬಿನ್ನಪಗಳು ಪೂರ್ತ ನಿಷಿದ್ಧಕರ್ಮಗಳಂತೆಯೇ ಕಾಮ್ಯಕರ್ಮಗಳನ್ನೂ ಬಿಡಬೇಕೆಂದೂ, ಗುಣಗಳನ್ನು ಬಿಟ್ಟು ದೇವರಿಲ್ಲದಿರುವುದರಿಂದ "ಗುಣಕೃತದಾಸ್ಯ" ಪ್ರಾರ್ಥ ನೀಯವೆಂದೂ, ಸಕಲಫಲಪ್ರದನು ನಾರಾಯಣನೊಬ್ಬನೇ ಎಂದೂ, ಕಾಲ, ಕರ್ಮ, ದೇವತಾಂತರಗಳು ಫಲಪ್ರದಾನಶಕ್ತಿಯನ್ನು ಹೊಂದಿಲ್ಲ ವೆಂದೂ, ನಾರಾಯಣನೇ ಸರ್ವರಕ್ಷಕನೆಂದೂ ಹೇಳಿತು. ಇಪ್ಪತ್ತೇಳನೆಯ ಬಿನ್ನಪದಲ್ಲಿ ಮುಮುಕ್ಷು ಆದವನು ತನ್ನ ದೋಷವನ್ನು ಎಣಿಸಿ ಭಯಪ ಡದೆ ಭಗವದ್ಗುಣಗಳನ್ನು ಸ್ಮರಿಸಿ ಧೈರ್ಯವಾಗಿರಬೇಕೆಂದೂ ಇಪ್ಪತ್ತೆಂಟ ನೆಯ ಬಿನ್ನಪದಲ್ಲಿ ಪ್ರಪನ್ನನನ್ನು ಮಾಯೆಯ ಸಂಬಂಧದಿಂದ ಭಗವಂ ತನೇ ಬಿಡುಗಡೆಮಾಡುವನೆಂದೂ; ಇಪ್ಪತ್ತೊಂಬತ್ತನೆಯ ಬಿನ್ನಪದಲ್ಲಿ ಭಗವಂತನ ದಿವ್ಯಮಂಗಳ ವಿಗ್ರಹವು, ಲಕ್ಷ್ಮಿಗೆ ನಿವಾಸಸ್ಥಾನವಾಗಿ ಅವನ ಸ್ವರೂಪಗುಣಗಳಿಗೆ ಪ್ರಕಾಶಕವಾಗಿ ಅವನಿಗೂ ಅತಿಶಯಾವಹ ವಾಗಿರುವುದೆಂದೂ; ಕಡೆಯದಾದ ಮೂವತ್ತನೆಯ ಬಿನ್ನಪದಲ್ಲಿ ಭಗ ವತ್ ಕೈಂಕರ್ಯವೇ ಪರಮಪುರುಷಾರ್ಥವೆಂದೂ ಹೇಳಿ ಈ ಗ್ರಂಥವನ್ನು ಉಪಸಂಹಾರಮಾಡಿದ್ದಾರೆ.

ವಿಶಿಷ್ಟಾದ್ವೈತ ಮತದ ಪ್ರಕಾರ ತತ್ತ್ವಹಿತ ಪುರುಷಾರ್ಥಗಳು ಈ ಮೂವತ್ತು ಬಿನ್ನಪಗಳಲ್ಲಿಯೂ ಹೇಗೆ ಸೊಗಸಾಗಿ ಪ್ರದಿಪಾದಿಸಲ್ಪಟ್ಟಿರುವುವೆಂಬುದನ್ನು ಇಲ್ಲಿಯವರೆಗೂ ತಿಳಿದುಕೊಂಡೆವು. ಸದ್ಗುರುವಿನ ಕೃಪೆಯಿಂದ, ಆಳ್ವಾರ್ ಆಚಾರ್ಯರುಗಳ ಶ್ರೀ ಸೂಕ್ತಿಗಳೂ ಭಾವಬಂಧವೂ ಚಿಕ್ಕದೇವರಾಜರ ಎದೆಯಲ್ಲಿ ಊರಿ ಈ ಬಿನ್ನಪಗಳ ರೂಪದಲ್ಲಿ ಪ್ರವಹಿಸಿದೆ. ಈ ಮೂವತ್ತು ಬಿನ್ನಪಗಳನ್ನು ನೋಡಿದರೆ, ಒಂದು ವಿಧದಲ್ಲಿ "ತಿರುಪ್ಪಾವೈ" ಎನ್ನುವ ದಿವ್ಯಪ್ರಬಂಧದ ಮೂವತ್ತು ಪಾಶುರಗಳೂ ಜ್ಞಾಪಕಕ್ಕೆ ಬರುತ್ತವೆ. ತಿರುಪ್ಪಾವೈಯ ಪ್ರಾರಂಭದಲ್ಲಿ "ನಾರಾಯಣನೇ ನಮಕ್ಕೇ ಪಱೈತರುವಾ‌ಽ" ಎಂದು ನಾರಾಯಣನ ಪರತ್ವವನ್ನೂ ಭಕ್ತಾನುಗ್ರಹಪರತೆಯನ್ನೂ ಹೇಳಿದೆ. ಅಂತೆಯೇ ಈ ಗ್ರಂಥದ ಉಪಕ್ರಮದಲ್ಲಿ ಶ್ರೀಮನ್ನಾರಾಯಣನ ಪರತ್ವವನ್ನೂ, ಅವನು ಪರ ವ್ಯೂಹಾದಿ ರೂಪಗಳನ್ನೂ ಭಕ್ತಾನುಗ್ರಹಾರ್ಥವಾಗಿಯೇ ಸ್ವೀಕಾರಮಾಡಿದನೆಂದೂ ಪ್ರತಿಪಾದಿಸಿದೆ. ತಿರುಪ್ಪಾವೈಯ ಕೊನೆಯಲ್ಲಿ "ಕಱವೈಹಳ್‌ಪಿಽಶೆಽಱು" ಎನ್ನುವ ಹಾಡಿನಲ್ಲಿ ಪ್ರಪತ್ತಿಯೇ ಉಪಾಯವೆಂದೂ, "ಶಿತ್ತಂಶಿಱುಹಾಲೇ" ಎನ್ನುವ ಪಾಶುರದಲ್ಲಿ ಭಗವತ್ ಕೈಂಕರ್ಯವೇ ಪರಮಪುರುಷಾರ್ಥವೆಂದೂ ವಿವರಿಸಲ್ಪಟ್ಟಿದೆ. ಈ ಗ್ರಂಥದಲ್ಲಿಯೂ ಅದೇ ಪ್ರಪತ್ತಿಯೂ ಕೈಂಕರ್ಯವೂ, ಇವುಗಳೇ ಕೊನೆಯಲ್ಲಿ ಹೇಳಲ್ಪಟ್ಟಿರುವ ವಿಷಯಗಳು. ತಿರುಪ್ಪಾವೈಯಲ್ಲಿ ಸಾರವಾಗಿ ಹೇಳಲ್ಪಟ್ಟಿರುವುದು ಭಗವಂತನ ಕೃಪೆಯ ವಿಷಯವಾಗಿಯೇ. ರಾಜರು ಪ್ರಶಂಸೆಮಾಡಿ ನಮಗೆ ತೋರಿಸಿಕೊಡುವುದೂ ಆ ಕೃಪೆಯನ್ನೇ.

ಇಂಥ ಶ್ರೇಷ್ಠವಾದ ಗ್ರಂಥವನ್ನು ತಮ್ಮ ವಂಶಕ್ಕೇ ಸಹಜವಾದ ಭಕ್ತಿಯಿಂದ ತಮ್ಮ ಕುಲದೇವತೆಯೆನಿಸಿದ ತಿರುನಾರಾಯಣನ ಪಾದಪದ್ಮಗಳಲ್ಲಿ ಚಿಕ್ಕದೇವರಾಜರು ಸಮರ್ಪಿಸಿರುವುದು ತಮ್ಮ ಆತ್ಮಕ್ಷೇಮಕ್ಕೆ ಮಾತ್ರವೇ ಅಲ್ಲ, ತಮ್ಮ ನಾಡಿನ ಪ್ರಜೆಗಳೂ ಸದ್ಗತಿಯನ್ನು ಹೊಂದಬೇಕೆಂಬ ಉದಾರಭಾವದಿಂದ. ಈ ಗ್ರಂಥದ ಪೀಠಿಕೆಯಲ್ಲಿ, ರಾಜರು ತಮ್ಮ ಕರ್ತವ್ಯವನ್ನು ತಾವು ಅರಿತುಕೊಂಡ ಬಗೆಯನ್ನು ವಿವರಿಸಿದ್ದಾರೆ.

ಪ್ರಜೆಗಳಿಗೆ ಶತ್ರುಪೀಡಾದಿಗಳನ್ನು ನಿವಾರಿಸಿ, ದೈವಾನುಕೂಲ್ಯವನ್ನು ಸಂಪಾದಿಸಿ, ದುರ್ಭಿಕ್ಷಾದಿ ಕಷ್ಟಗಳನ್ನೂ ತೊಲಗಿಸಿ, ಅವರಿಗೆ ಐಹಿಕ ಕ್ಷೇಮವನ್ನು ಏರ್ಪಡಿಸಿಕೊಟ್ಟಮೇಲೂ, ರಾಜರು ತೃಪ್ತಿಹೊಂದಲಿಲ್ಲ. ಪ್ರಜೆಗಳ ಆತ್ಮ ಕ್ಷೇಮ ನಡೆಸಿಕೊಡುವುದೂ ತಮ್ಮ ಧರ್ಮವೆಂಬುದು ಅವರ ಮನಸ್ಸಿಗೆ ಬಂದಿದೆ. ಗಹನವಾದ ವೇದಾನ್ತತತ್ವದ ಸಾರವನ್ನು, ಅವುಗಳ ಗೌರವಕ್ಕೆ ಸ್ವಲ್ಪವೂ ಚ್ಯುತಿಬಾರದಂತೆಯೂ, ಪಾಮರರೂ ಸುಲಭವಾಗಿ ತಿಳಿದುಕೊಳ್ಳುವ ರೀತಿಯಲ್ಲಿ ತಮ್ಮ ದೇಶದ ಪ್ರಜೆಗಳ ತಾಯ್ನುಡಿಯಾದ ಕನ್ನಡದಲ್ಲಿ ವಿವರಣೆಮಾಡಿ, ಅಧಿಕಾರಿಭೇದವಿಲ್ಲದೆ, ಆತ್ಮ ಕ್ಷೇಮವನ್ನು ಆಸೆ ಪಡುವವರೆಲ್ಲರೂ ಅವಲಂಬಿಸಬಹುದಾದ ಉತ್ತಮ ಹಾಗೂ ಸುಲಭವಾದ 'ಪ್ರಪತ್ತಿಮಾರ್ಗ' ವನ್ನು ಇಲ್ಲಿ ತೋರಿಸಿಕೊಟ್ಟಿದ್ದಾರೆ. ರಾಜಸಂತತಿಯಲ್ಲಿ ಹುಟ್ಟಿಯೂ ಇವರಿಗೆ ರಾಜಭೋಗಗಳಲ್ಲಿ ಮನ ಹರಿಯದೆ ಸ್ವಾಮಿಯ ಆಳ್ತನದಲ್ಲೇ ಮನ ಹರಿದುದು ತಿರುನಾರಾಯಣನ ನಿರ್ಹೇತುಕ ಕೃಪೆಯಿಂದಲೇ.

ಈ ಸಪ್ತಾಹ ಸಮಾರಂಭದಲ್ಲಿ ನನ್ನನ್ನು ನಿಯೋಜಿಸಿದ ಶ್ರೀ ಆರ್. ತಿರುನಾರಣೈಯ್ಯಂಗಾರ್ಯ ಸ್ವಾಮಿಗಳನ್ನು ಸ್ತೋತ್ರಮಾಡುವ ಉದ್ದೇಶ್ಯ ನನಗಿಲ್ಲ. ಸಾತ್ವಿಕರೂ ರಸಿಕರೂ ಸೇರಿರುವ ಈ ತಿರುನಾರಾಯಣಪುರ ದಿವ್ಯದೇಶದ ಈ ಗೋಷ್ಠಿಯಲ್ಲಿ, ಭಗವದಾಚಾರ್ಯ ಸನ್ನಿಧಿಯಲ್ಲಿ ನಾನು ಕಲಿತ ಪಾಠವನ್ನು ಒಪ್ಪಿಸುವ ಭಾಗ್ಯವು ಅವರ ದಯೆಯಿಂದ ನನಗೆ ದೊರಕಿತು. "ದೈವಂಪುರುಷರೂಪೇಣ" ಎಂಬಂತೆ ತಿರುನಾರಾಯಣನೇ ನನಗೆ ಈ ತಿರುನಾರಾಯಣ ಮಹನೀಯರ ಮುಖಾಂತರ ಈ ಪ್ರಥಮ ಅಪೂರ್ವ ಸೇವಾಭಾಗ್ಯವನ್ನು ಈ ದಿವ್ಯದೇಶದಲ್ಲಿ ಕರುಣಿಸಿದನೆಂದು ಎಣಿಸುತ್ತೇನೆ.

# ಅನುಬಂಧ.

## ತ್ರಿವೃತ್ಕರಣಂ

| 1 | 2 | 3 |
|---|---|---|
| ಪೃಥ್ವೀ | ಅಪ್ | ತೇಜಸ್ಸು |
| ಪೃಥ್ವೀ $\frac{1}{2}$ | ಅಪ್ $\frac{1}{2}$ | ತೇಜಸ್ಸು $\frac{1}{2}$ |
| ಅಪ್ $\frac{1}{4}$ | ಪೃಥ್ವೀ $\frac{1}{4}$ | ಪೃಥ್ವೀ $\frac{1}{4}$ |
| ತೇಜಸ್ಸು $\frac{1}{4}$ | ತೇಜಸ್ಸು $\frac{1}{4}$ | ಅಪ್ $\frac{1}{4}$ |
| ಒಟ್ಟು 1 | ಒಟ್ಟು 1 | ಒಟ್ಟು 1 |

## ಪಂಚೀಕರಣಂ.

| | 1 | 2 | 3 | 4 | 5 |
|---|---|---|---|---|---|
| | ಪೃಥ್ವೀ | ಅಪ್ | ತೇಜಸ್ | ವಾಯು | ಆಕಾಶಂ |
| $\frac{1}{2}$ | ಪೃಥ್ವೀ | ಅಪ್ | ತೇಜಸ್ | ವಾಯು | ಆಕಾಶಂ |
| $\frac{1}{8}$ | ಅಪ್ | ಪೃಥ್ವೀ | ಪೃಥ್ವೀ | ಪೃಥ್ವೀ | ಪೃಥ್ವೀ |
| $\frac{1}{8}$ | ತೇಜಸ್ | ತೇಜಸ್ | ಅಪ್ | ಅಪ್ | ಅಪ್ |
| $\frac{1}{8}$ | ವಾಯು | ವಾಯು | ವಾಯು | ತೇಜಸ್ | ತೇಜಸ್ |
| $\frac{1}{8}$ | ಆಕಾಶಂ | ಆಕಾಶಂ | ಆಕಾಶಂ | ಆಕಾಶಂ | ವಾಯು |
| 1 | ಒಟ್ಟು 1 | ಒಟ್ಟು 1 | ಒಟ್ಟು 1 | ಒಟ್ಟು 1 | ಒಟ್ಟು 1 |

## ಸಪ್ತೀಕರಣಂ.

| | 1 | 2 | 3 | 4 | 5 | 6 | 7 |
|---|---|---|---|---|---|---|---|
| | ಪೃಥ್ವೀ | ಅಪ್ | ತೇಜಸ್ | ವಾಯು | ಆಕಾಶಂ | ಅಹಂಕಾರಂ | ಮಹತ್ ತತ್ವಂ |
| $\frac{1}{2}$ | ಪೃಥ್ವೀ | ಅಪ್ | ತೇಜಸ್ | ವಾಯು | ಆಕಾಶಂ | ಅಹಂಕಾರಂ | ಮಹತ್ ತತ್ವಂ |
| $\frac{1}{12}$ | ಅಪ್ | ಪೃಥ್ವೀ | ಪೃಥ್ವೀ | ಪೃಥ್ವೀ | ಪೃಥ್ವೀ | ಪೃಥ್ವೀ | ಪೃಥ್ವೀ |
| $\frac{1}{12}$ | ತೇಜಸ್ | ತೇಜಸ್ | ಅಪ್ | ಅಪ್ | ಅಪ್ | ಅಪ್ | ಅಪ್ |
| $\frac{1}{12}$ | ವಾಯು | ವಾಯು | ವಾಯು | ತೇಜಸ್ | ತೇಜಸ್ | ತೇಜಸ್ | ತೇಜಸ್ |
| $\frac{1}{1[illegible]}$ | ಆಕಾಶಂ | ಆಕಾಶಂ | ಆಕಾಶಂ | ಆಕಾಶಂ | ವಾಯು | ವಾಯು | ವಾಯು |
| $\frac{1}{12}$ | ಅಹಂಕಾರಂ | ಅಹಂಕಾರಂ | ಅಹಂಕಾರಂ | ಅಹಂಕಾರಂ | ಅಹಂಕಾರಂ | ಆಕಾಶಂ | ಆಕಾಶಂ |
| $\frac{1}{12}$ | ಮಹತ್ | ಮಹತ್ | ಮಹತ್ | ಮಹತ್ | ಮಹತ್ | ಮಹತ್ | ಅಹಂಕಾರಂ |
| 1 | ಒಟ್ಟು 1 | ಒಟ್ಟು 1 | ಒಟ್ಟು 1 | ಒಟ್ಟು 1 | ಒಟ್ಟು 1 | ಒಟ್ಟು 1 | ಒಟ್ಟು 1 |

ಮೂಲಪ್ರಕೃತಿ

| ಅವಿಭಕ್ತತಮಸ್ | ವಿಭಕ್ತತಮಸ್ | ಅಕ್ಷರಂ | ಅವ್ಯಕ್ತಂ |
|---|---|---|---|

ಇವುಗಳು ಸೂಕ್ಷ್ಮಾವಸ್ಥೆಗಳು

ಮಹಾನ್

ಅಹಂಕಾರ

| ಸಾತ್ವಿಕಂ | ರಾಜಸಂ | ತಾಮಸಂ |
|---|---|---|


ಸಾತ್ವಿಕಂ:

1. ದೇಹಂ
2. ಬಾಯಿ
3. ಕಣ್
4. ಮೂಗು
5. ಕಿವಿ
6. ವಾಕ್
7. ಕಾಲು
8. ಕೈ
9. ಪಾಯು
10. ಉಪಸ್ಥ
11. ಮನಸಿ

ತಾಮಸಂ:

| | |
|---|---|
| 1 ಶಬ್ದ ತನ್ಮಾತ್ರೆ | 1 ಆಕಾಶಂ |
| 2 ಸ್ಪರ್ಶ ತನ್ಮಾತ್ರೆ | 2 ವಾಯು |
| 3 ರೂಪ ತನ್ಮಾತ್ರೆ | 3 ತೇಜಸ್ |
| 4 ರಸ ತನ್ಮಾತ್ರೆ | 4 ಅಪ್ |
| 5 ಗಂಧ ತನ್ಮಾತ್ರೆ | 5 ಪೃಥ್ವೀ |

ಈ ರಾಜಸ ಅಹಂಕಾರವು ಸಾತ್ವಿಕ ತಾಮಸ ಅಹಂಕಾರಗಳು ಮಾಡುವ ಕಾರ್ಯಗಳಿಗೆ ಸಹಕಾರಿಯಾಗಿರುವುದು.



ಶ್ರೀ ವಿದ್ವಾನ್ ಅರೈಯರ್ ಶ್ರೀನಿವಾಸೈಯ್ಯಂಗಾರ್‌ಸ್ವಾಮಿ
ಈ ದಿವಸ ತಮಿಳ್ ಉಪನ್ಯಾಸದ ಕನ್ನಡ ಅನುವಾದಕರು.

